ಮಂಗಳೂರು
ಶನಿವಾರ, 25 ಏಪ್ರಿಲ್ 2026
ಸಂಪುಟ 48, ಸಂಚಿಕೆ 37 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಆಶ್ಲೇಷ

ದಿನದ ಮಾತು

ಅಸಮಾನತೆಯ ವಿರುದ್ಧ ಮಾಡುವ ಹೋರಾಟ ಶ್ರೇಷ್ಠವಾದುದು.
▲ ಸುಭಾಷ್‌ಚಂದ್ರ ಬೋಸ್

ಸಹಸ್ರಾರ ಮತ್ತು ಸೂರ್ಯ ರೇಖೆ

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ಬಂಗಾಳದಲ್ಲಿ ಜಂಗಲ್ ರಾಜ್ ಅಂತ್ಯದ ಆರಂಭ

• **ಕೋಲ್ಕತ್ತಾ:** ಮೊದಲ ಹಂತದ ಚುನಾವಣೆ ದಾಖಲಿಸಿದ ಮತದಾನ ಪ್ರಮಾಣ ಬದಲಾವಣೆಯ ಅಲೆಗಳಿಗೆ ಮೊಹರು ಹಾಕಿದೆ. ಟಿಎಂಸಿಯ ಮಹಾ ಜಂಗಲ್‌ರಾಜ್ ಅಂತ್ಯದ ಆರಂಭವನ್ನು ಸಾಂಕೇತಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.

• ಪುಟ ೨

ಕೃಷಿ ಬಲವರ್ಧನೆಗೆ ಆದ್ಯತೆ: ಸಿಎಂ ಸಿದ್ದರಾಮಯ್ಯ

• **ಬೆಂಗಳೂರು:** ಕೃಷಿ ಕ್ಷೇತ್ರದಲ್ಲಿನ ಹೊಸ ಬದಲಾವಣೆಗಳು ಪ್ರತಿ ರೈತರನ್ನೂ ತಲುಪಬೇಕು. ಕೃಷಿ ಲಾಭದಾಯಕಗೊಂಡರೆ ಯುವಜನತೆ ಕೃಷಿಯತ್ತ ಮುಖ ಮಾಡುತ್ತಾರೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

• ಪುಟ ೫

ಭಾರತ-ನ್ಯೂಜಿಲೆಂಡ್ ಶೀಘ್ರ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ

• ಪುಟ ೨

ಹಾಲ್ ಆಫ್ ಫೇಮ್‌ಗೆ ಜ.ದ್ವಿವೇದಿ ಸೇರ್ಪಡೆ

• ಪುಟ ೨

ಮೇ 20ರೊಳಗೆ ಸಂಪುಟ ವಿಸ್ತರಣೆ ವಿಶ್ವಾಸ: ಸಲೀಂ

• ಪುಟ ೫

ಇಂಜಿನಿಯರಿಂಗ್ ಶುಲ್ಕ ನಿರ್ಧರಿಸಿಲ್ಲ: ಸುಧಾಕರ್

• ಪುಟ ೫



₹100 ಸ್ವಾವಲಂಬಿ ಭಾರತದ ಇಂಧನ

• ಪುಟ ೨
ಸುದ್ದಿ ಸಮಗ್ರ

ಎಸ್‌ಸಿ ಎಡಗೈ, ಬಲಗೈಗೆ ಸಮ ಹಂಚಿಕೆ | ರಾಜ್ಯ ಸರ್ಕಾರ ನಿರ್ಧಾರ

5.25: 5.25: 4.5

• **ಬೆಂಗಳೂರು:** ದಶಕಗಳಿಂದ ಬಗೆಹರಿಯದೇ ಕಗ್ಗಂಟಾಗಿ ಉಳಿದಿದ್ದ ಪರಿಶಿಷ್ಟ ಜಾತಿ(ಎಸ್‌ಸಿ)ಯಲ್ಲಿನ ಒಳಮೀಸಲಾತಿ ವಿಚಾರವಾಗಿ ಶುಕ್ರವಾರ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರ್ಕಾರ ಮಹತ್ವದ ತೀರ್ಮಾನ ತೆಗೆದುಕೊಂಡಿದೆ.

ಪರಿಶಿಷ್ಟ ಜಾತಿಗಳಿಗೆ ಲಭ್ಯವಿರುವ ಶೇ.15 ಮೀಸಲಾತಿಯಲ್ಲಿ ದಲಿತ ಎಡಗೈ ಸಮುದಾಯ(ಗ್ರೂಪ್ ಎ)ಕ್ಕೆ ಶೇ.5.25, ದಲಿತ ಬಲಗೈ ಸಮುದಾಯ(ಗ್ರೂಪ್ ಬಿ)ಕ್ಕೆ ಶೇ.5.25 ಮತ್ತು ಇತರರಿಗೆ (ಗ್ರೂಪ್ ಸಿ) ಶೇ.4.5 ಒಳಮೀಸಲಾತಿ ನೀಡಲು ವಿಶೇಷ ಸಚಿವ ಸಂಪುಟದ ಸಭೆಯಲ್ಲಿ ಒಮ್ಮತದ ನಿರ್ಧಾರ ತೆಗೆದುಕೊಳ್ಳಲಾಗಿದೆ.



ಸಚಿವ ಸಂಪುಟ ಸಭೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು. ಈ ತೀರ್ಮಾನಕ್ಕೆ ಸಂಪುಟದ ಎಲ್ಲ ಸದಸ್ಯರೂ ಒಕ್ಕೊರಲಿಂದ ಒಪ್ಪಿಗೆ ನೀಡಿದ್ದಾರೆ. ನ್ಯಾಯಾಲಯದ ಆದೇಶದಂತೆ ಶೇ.50 ಮೀಸಲಾತಿಗೆ ಅನುಗುಣವಾಗಿ ಒಳಮೀಸಲಾತಿ ನಿಗದಿ ಮಾಡಲಾಗಿದೆ. ಶೇ.56 ಮೀಸಲಾತಿ ಮಾಡಬೇಕು ಎಂಬುದು ನಮ್ಮ ಸಂಕಲ್ಪವಾಗಿದೆ. ಆದರೆ, ಈ ವಿಚಾರ ನ್ಯಾಯಾಲಯದಲ್ಲಿ ಇರುವುದರಿಂದ, ಅದು ಇತ್ಯರ್ಥವಾಗುವವರೆಗೆ ಶೇ.6 ಅನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಲಾಗುವುದು. ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ಮುಂದಿನ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. ➡ಪುಟ ೪

ಎಲ್ಲ ದಲಿತ ಸಂಘಟನೆಗಳ ಸಹಿತ ಎಲ್ಲರಲ್ಲೂ ಚರ್ಚಿಸಿದ್ದೇವೆ. ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಒಮ್ಮತದಿಂದ ಈ ಐತಿಹಾಸಿಕ ತೀರ್ಮಾನ ತೆಗೆದುಕೊಳ್ಳಲಾಗಿದೆ. ಎಸ್‌ಸಿ ಮೀಸಲಾತಿ ರೋಸ್ಟರ್ ಬಿಂದುವಿಗಿಂತ ಕಡಿಮೆ ಇದ್ದರೆ ಅದನ್ನು ಎಸ್‌ಸಿ ಜನರಲ್ ಎಂದು ಪರಿಗಣಿಸಲಾಗುತ್ತದೆ. ಒಳಮೀಸಲಾತಿ ಅನ್ವಯವಾಗುವುದಿಲ್ಲ.
■ ಡಾ. ಎಚ್.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ



ಒಳಮೀಸಲಾತಿ ನಿರ್ಧಾರ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೆ ಸಂಪುಟ ಸದಸ್ಯರು ಹಾಗೂ ಪರಿಶಿಷ್ಟ ಜಾತಿಗಳ ನಾಯಕರು ಸನ್ಮಾನಿಸಿದರು.

ಹೊಸ ಮೀಸಲಾತಿ ಸೂತ್ರ

ಎಡಗೈ ಜಾತಿಗಳು	5.25%
ಬಲಗೈ ಜಾತಿಗಳು	5.25%
ಇತರೆ (ಅಲೆಮಾರಿ ಸೇರಿ)	4.5%
ಒಟ್ಟು ಎಸ್‌ಸಿ ಮೀಸಲಾತಿ	15%

ರಾಜ್ಯದಲ್ಲಿ ಒಳಮೀಸಲು ಸಂಬಂಧಿಸಿ ಏನೇನಾಗಿತ್ತು?

ಒಳಮೀಸಲಾತಿಗೆ ಹೋರಾಟ ನಡೆಯುತ್ತಿತ್ತು. ಈ ನಡುವೆ ಚಿತ್ರದುರ್ಗದಲ್ಲಿ ಡಾ. ಜಿ. ಪರಮೇಶ್ವರ ನೇತೃತ್ವದಲ್ಲಿ ಸಮಾವೇಶ ಮಾಡಲಾಗಿತ್ತು. ಅಲ್ಲಿ, ಒಳಮೀಸಲಾತಿ ಮಾಡಲು ಎಸ್‌ಸಿ ಸಮುದಾಯದ 101 ಜಾತಿಗಳು ಭಾಗಿಯಾಗಿ ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದವು. ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಒಳಮೀಸಲಾತಿ ಜಾರಿಯ ಭರವಸೆ ನೀಡಲಾಗಿತ್ತು. 2024ರಲ್ಲಿ ಸುಪ್ರೀಂ ಕೋರ್ಟ್ ವಿಭಾಗೀಯ ಪೀಠ ಒಳಮೀಸಲಾತಿ ಮಾಡಬಹುದೆಂದು ತೀರ್ಪು ನೀಡಿತ್ತು. ಇದಕ್ಕೆ ಸಂವಿಧಾನದ ವಿರೋಧವಿಲ್ಲ ಎಂದಿತ್ತು. ಬಳಿಕ ನ್ಯಾ. ನಾಗಮೋಹನ್ ದಾಸ್ ನೇತೃತ್ವದ ಏಕಸದಸ್ಯ ಆಯೋಗ ರಚನೆ ಮಾಡಿದ್ದೆವು. ಅವರು ನೀಡಿದ ವರದಿಯನ್ನು ಸಂಪುಟ ಅಂಗೀಕಾರ ಮಾಡಿತ್ತು. ➡ಪುಟ ೪

ನಮ್ಮದು ಸಾಮಾಜಿಕ ನ್ಯಾಯ ಪಾಲನೆ ಮಾಡುವ ಪಕ್ಷವಾಗಿದೆ. ಹಾಗಾಗಿ ಒಳ ಮೀಸಲಾತಿ ನಿರ್ಧಾರಕ್ಕೆ ಸಂಬಂಧಿಸಿದಂತೆ ಸ್ವಲ್ಪ ವಿಳಂಬ ಆಯಿತು. ಎಲ್ಲಾ ಸಚಿವರು ಒಮ್ಮತದಿಂದ ಒಪ್ಪಿಕೊಂಡಿದ್ದಾರೆ. ಆದ್ದರಿಂದ ದಲಿತ ಸಂಘಟನೆಗಳು ಕೂಡ ಒಪ್ಪಿಕೊಳ್ಳಲಿವೆ ಎಂಬ ವಿಶ್ವಾಸವಿದೆ.
■ ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಜ್ಯಸಭೆಯಲ್ಲಿ ಎಎಪಿಗೆ ದೊಡ್ಡ ಆಘಾತ

ಏಳು ಆಪ್ ಸಂಸದರು ಬಿಜೆಪಿ ಸೇರ್ಪಡೆ ಶೀಘ್ರ

ನಾನು ನನ್ನ ಜೀವನದ 15 ವರ್ಷಗಳನ್ನು ಎಎಪಿಗೆ ಸಮರ್ಪಿಸಿದ್ದೇನೆ. ಆದರೆ, ಈಗ ಪಕ್ಷ ತನ್ನ ಮೂಲ ಮೌಲ್ಯಗಳು ಮತ್ತು ಪ್ರಾಮಾಣಿಕ ರಾಜಕೀಯದಿಂದ ದೂರ ಸರಿದಿದೆ.
■ ರಾಘವ್ ಚಡ್ಡಾ



ಎಎಪಿ ಸಂಸದರಾದ ರಾಘವ್ ಚಡ್ಡಾ, ಸಂದೀಪ್ ಪಾಟೀಲ್, ಅಶೋಕ್ ಮಿತ್ತಲ್‌ರನ್ನು ಬಿಜೆಪಿಗೆ ಸ್ವಾಗತಿಸಿದ ಪಕ್ಷದ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್.

• **ಹೊಸದಿಲ್ಲಿ:** ರಾಜ್ಯಸಭೆಯಲ್ಲಿ ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ದೊಡ್ಡ ಆಘಾತ ಉಂಟಾಗಿದ್ದು, ರಾಘವ್ ಚಡ್ಡಾ ಸೇರಿದಂತೆ ಏಳು ಮಂದಿ ರಾಜ್ಯಸಭಾ ಸದಸ್ಯರು ಪಕ್ಷ ತೊರೆದು ಬಿಜೆಪಿಗೆ ಸೇರುವುದಾಗಿ ಘೋಷಿಸಿದ್ದಾರೆ. ರಾಜ್ಯಸಭೆಯಲ್ಲಿನ ಎಎಪಿಯ ಮೂರನೇ ಎರಡರಷ್ಟು ಸದಸ್ಯರು ಭಾರತದ ಸಂವಿಧಾನದ ನಿಯಮಗಳನ್ನು ಬಳಸಿಕೊಂಡು ಬಿಜೆಪಿಯೊಂದಿಗೆ ವಿಲೀನಗೊಳ್ಳಲು ನಿರ್ಧರಿಸಿದ್ದೇವೆ ಎಂದು ರಾಘವ್ ಚಡ್ಡಾ ಹೇಳಿದರು.

ದಿಲ್ಲಿಯಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ನನ್ನ ಜೀವನದ 15 ವರ್ಷಗಳನ್ನು ಎಎಪಿಗೆ ಸಮರ್ಪಿಸಿದ್ದೇನೆ. ಆದರೆ, ಈಗ ಪಕ್ಷ ತನ್ನ ಮೂಲ ಮೌಲ್ಯಗಳು ಮತ್ತು ಪ್ರಾಮಾಣಿಕ ರಾಜಕೀಯದಿಂದ ದೂರ ಸರಿದಿದೆ. ನಾನು ತಪ್ಪು ಪಕ್ಷದಲ್ಲಿರುವ ಸರಿಯಾದ ವ್ಯಕ್ತಿ ಎಂದು ನನಗೆ ಅನಿಸಿತು. ಆದ್ದರಿಂದ ಪಕ್ಷದಿಂದ ದೂರವಾಗಿ ಜನರಿಗೆ ಇನ್ನಷ್ಟು ಹತ್ತಿರವಾಗುವ ನಿರ್ಧಾರ ತೆಗೆದುಕೊಂಡಿದ್ದೇನೆ ಎಂದು ಹೇಳಿದರು.

ಭ್ರಷ್ಟಾಚಾರದ ವಿರುದ್ಧ ಹೋರಾಟದ ಭರವಸೆ ನೀಡಿ ಅಧಿಕಾರಕ್ಕೆ ಬಂದ ಎಎಪಿ, ಈಗ ಆ ದಾರಿಯಿಂದ ತಪ್ಪಿದೆ. ರಾಜ್ಯಸಭೆಯಲ್ಲಿ ಎಎಪಿಯ ಒಟ್ಟು 10 ಸಂಸದರಲ್ಲಿ ಮೂರನೇ ಎರಡರಷ್ಟು ಮಂದಿ ನಮ್ಮೊಂದಿಗಿದ್ದಾರೆ. ನಾವು ಈ ಬಗ್ಗೆ ರಾಜ್ಯಸಭಾ ಸಚಿವಾಲಯಕ್ಕೆ ಮಾಹಿತಿ ನೀಡಿದ್ದು, ಸಹಿ ಮಾಡಲಾದ ಪತ್ರಗಳು ಮತ್ತು ಅಗತ್ಯ ದಾಖಲೆಗಳನ್ನು ಸಭಾಪತಿಗೆ ಸಲ್ಲಿಸಿದ್ದೇವೆ ಎಂದರು. ➡ಪುಟ ೪

ಪಂಜಾಬ್‌ನಲ್ಲೂ ಆಪ್‌ಗೆ ಸಂಕಷ್ಟ!

ರಾಘವ್ ಚಡ್ಡಾ ಪಕ್ಷ ತೊರೆದಿರುವುದು ಆಮ್ ಆದ್ಮಿ ಪಕ್ಷಕ್ಕೆ ಪಂಜಾಬ್‌ನಲ್ಲಿ ದೊಡ್ಡ ಆಂತರಿಕ ಸಂಕಷ್ಟವನ್ನು ಉಂಟುಮಾಡಿದೆ. ರಾಜ್ಯಸಭಾ ಸಂಸದರ ಗುಂಪು ಕೂಡ ಹೊರನಡೆದಿರುವುದರಿಂದ, ಈ ಘಟನೆ ಪಕ್ಷ ಅಧಿಕಾರಕ್ಕೆ ಬಂದ ಬಳಿಕದ ಗಂಭೀರ ಸವಾಲಾಗಿ ಪರಿಣಮಿಸಿದೆ. ಈ ಬೆಳವಣಿಗೆಯು ಪಂಜಾಬ್ ವಿಧಾನಸಭೆಯಲ್ಲಿನ ಎಎಪಿಯ 92 ಶಾಸಕರ ಏಕತೆಯ ಮೇಲೆ ಪರಿಣಾಮ ಬೀರುತ್ತದೆಯೇ? ಎಂಬ ಪ್ರಶ್ನೆ ಹುಟ್ಟುಹಾಕಿದೆ. ಆದರೆ, ಸದ್ಯಕ್ಕೆ ಯಾವುದೇ ಶಾಸಕ ಎಎಪಿ ತೊರೆಯುತ್ತಿರುವುದಕ್ಕೆ ದೃಢವಾದ ಮಾಹಿತಿ ಲಭ್ಯವಾಗಿಲ್ಲ. ➡ಪುಟ ೪

ದೋಣಿ ವಿಹಾರ



ಪಶ್ಚಿಮ ಬಂಗಾಳದ ಹೂಗ್ಲಿ ನದಿಯಲ್ಲಿ ಶುಕ್ರವಾರ ದೋಣಿ ವಿಹಾರ ನಡೆಸಿದ ಪ್ರಧಾನಿ ನರೇಂದ್ರ ಮೋದಿ.

ಆರ್‌ಎಸ್‌ಎಸ್ ಕು ಕ್ಲುಕ್ಸ್ ಕ್ಲಾನ್ ಗುಂಪಲ್ಲ: ದತ್ತಾಜಿ ಹೇಳಿಕೆ

ಸಮಾಜದ ಶ್ರೇಯಸ್ಸಿಗೆ ಸಂಘದ ಸೇವೆ

• **ವಾಷಿಂಗ್ಟನ್:** ಆರ್‌ಎಸ್‌ಎಸ್ ಸಮಾಜದ ಶ್ರೇಯಸ್ಸಿಗಾಗಿ ಅಹರ್ನಿಶಿ ದುಡಿಯುವ ಅನುಶಾಸನಬದ್ಧ ಸಂಘ ವಿನಾ, ಅಮೆರಿಕದ ಬಿಳಿಯರ ಪ್ರಾಬಲ್ಯದ ದ್ವೇಷವಾದಿ ಕು ಕ್ಲುಕ್ಸ್ ಕ್ಲಾನ್ ಗುಂಪಲ್ಲ ಎಂದು ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದ್ದಾರೆ.

ಅಮೆರಿಕದಲ್ಲಿ ಭಾರತದ ಬಗ್ಗೆ ತಪ್ಪು ತಿಳಿವಳಿಕೆ ಇರುವ ರೀತಿ ಆರ್‌ಎಸ್‌ಎಸ್ ಬಗ್ಗೆಯೂ ತಪ್ಪುಕಲ್ಪನೆಗಳಿವೆ, ತಪ್ಪು ತಿಳಿವಳಿಕೆಗಳಿವೆ. ಅರಿತೋ ಅಥವಾ ಅರಿಯದೆಯೋ ನಿರ್ದಿಷ್ಟ ಕಾರ್ಯಸೂಚಿ ಭಾಗವಾಗಿ ಅಥವಾ ಇನ್ನಿತರ ರೀತಿಯಲ್ಲಿ ಆರೆಸ್ಸೆಸ್ ಬಗ್ಗೆ ದಶಕಗಳಿಂದ ಮಿಥ್ಯಾರೋಪಗಳನ್ನು, ತಪ್ಪು ವ್ಯಾಖ್ಯಾನಗಳನ್ನು ಸೃಜಿಸಲಾಗಿದೆ. ಆರೆಸ್ಸೆಸ್ ಹಿಂದು ಪರಮಾಧಿಕಾರವಾದಿ ಸಂಘ ಅಥವಾ ಇದೊಂದು ಕ್ರೈಸ್ತ ವಿರೋಧಿ, ಅಲ್ಪಸಂಖ್ಯಾತ ವಿರೋಧಿ ಮತ್ತು ಅಭಿವೃದ್ಧಿ ವಿರೋಧಿ ಹಾಗೂ ಆಧುನಿಕತೆ ವಿರೋಧಿ ಸಂಘವೆಂಬ ಮಿಥ್ಯೆಯನ್ನು ದಶಕಗಳಿಂದ ವ್ಯವಸ್ಥಿತವಾಗಿ ಪ್ರಸಾರಿಸಲಾಗಿದೆ ಎಂದು ಹೊಸಬಾಳೆ ಹೇಳಿದರು. ➡ಪುಟ ೪



ಯಾವುದೇ ರಾಷ್ಟ್ರದ ಮೇಲೆ ಹಿಂದುಗಳು ದಾಳಿ ಮಾಡಿಲ್ಲ

ಇನ್ನು ಹಿಂದುಗಳು ಯಾವುದೇ ದೇಶದ ಮೇಲೆ ದಂಡೆತ್ತಿಹೋದದ್ದಿಲ್ಲ ಅಥವಾ ದಾಳಿ ಮಾಡಿದ್ದೇ ಇಲ್ಲ, ಹಿಂದುಗಳು ಆಕ್ರಮಣಕೋರರಲ್ಲ ಎಂದು ಚರಿತ್ರೆಯಲ್ಲೇ ದಾಖಲಾಗಿದೆ. ➡ಪುಟ ೪

ಟ್ರಂಪ್ ಪೋಸ್ಟ್ ಅಜ್ಞಾನಪೂರಿತ

• **ಹೊಸದಿಲ್ಲಿ:** ಅಮೆರಿಕ ಅಧ್ಯಕ್ಷರ ಸಾಮಾಜಿಕ ಜಾಲತಾಣ ಪೋಸ್ಟ್ ಅಜ್ಞಾನಪೂರಿತ, ಕೀಳುಮಟ್ಟದ ಅಭಿರುಚಿ ಮತ್ತು ಅನುಚಿತ ವರ್ತನೆಯಾಗಿದ್ದು, ಇದು ಭಾರತ-ಅಮೆರಿಕ ಸಂಬಂಧವನ್ನು ಪ್ರತಿಬಿಂಬಿಸುವಂತದ್ದಲ್ಲ ಎಂದು ವಿದೇಶಾಂಗ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಖಂಡನೆ ವ್ಯಕ್ತಪಡಿಸಿದ್ದಾರೆ.

ಭಾರತ ಖಂಡನೆ, ಟ್ರಂಪ್ ಪೋಸ್ಟ್ ಸಂಬಂಧ ಪ್ರತಿಬಿಂಬಿಸುವದ್ದಲ್ಲ

ಭಾರತವನ್ನು ನರಕದ ಕೂಪವೆಂದು ಅವಹೇಳನಗೈದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸಾಮಾಜಿಕ ಜಾಲತಾಣ ಪೋಸ್ಟ್ ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದೆ. ಇದು ಟ್ರಂಪ್ ಅವರ ಅಜ್ಞಾನಪೂರಿತ ಮತ್ತು ಅನುಚಿತ ವರ್ತನೆಯಾಗಿದೆ. ಟ್ರಂಪ್ ಅವರ ಪೋಸ್ಟ್ ಸಹ ಭಾರತ-ಅಮೆರಿಕ ನಡುವಿನ ಪಾಲುದಾರಿಕೆ ಸಂಬಂಧವನ್ನು ಪ್ರತಿಬಿಂಬಿಸುವುದಿಲ್ಲ. ಯಾಕೆಂದರೆ ಭಾರತ-ಅಮೆರಿಕ ಪರಸ್ಪರ ಗೌರವಯುತ ಮತ್ತು ಪಾಲುದಾರಿಕೆ ಆಧಾರಿತ ಸಂಬಂಧವನ್ನು ಹೊಂದಿದೆ. ➡ಪುಟ ೪

ಭಾರತ ವಿಶ್ವಗುರು ಆಗುವುದು ಖಚಿತ

• **ನಾಗ್ಪುರ:** ಭಾರತ ವಿಶ್ವಗುರುವಾಗುವುದು ಖಚಿತ, ದೇಶದ ಭವಿಷ್ಯದ ಬಗ್ಗೆ ಯಾರೂ ಸಂದೇಹ ಹೊಂದಬಾರದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಅವರು ಹೇಳಿದ್ದಾರೆ.



ಭಾರತ ದುರ್ಗಾ ಮಂದಿರಕ್ಕೆ ಅಡಿಪಾಯ ಹಾಕಿದ ಬಳಿಕ ಮಾತನಾಡಿದ ಅವರು, ರಾಮ ಮಂದಿರ ನಿರ್ಮಾಣವಾಗುವುದೇ ಇಲ್ಲ ಎಂದು ಹಿಂದೆ ಅನೇಕರು ಸಂದೇಹ ವ್ಯಕ್ತಪಡಿಸಿದ್ದರು. ಆದರೆ ಅದು ಇಂದು ಎಲ್ಲರ ಕಣ್ಣ ಮುಂದೆ ನಿಂತಿದೆ. ಅದೇ ರೀತಿ ಭಾರತ ವಿಶ್ವಗುರುವಾಗುವುದೂ ಖಚಿತ ಎಂದು ಹೇಳಿದರು.

ಭಾರತ ವಿಶ್ವಗುರುವಾಗುವ ಕನಸು ನಿರಂತರ ಪ್ರಯತ್ನ ಮತ್ತು ಸಾಮೂಹಿಕ ಶಿಸ್ತುಗಳ ಮೂಲಕ ಸಾಕಾರಗೊಳ್ಳುತ್ತದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. ಈ ಬದಲಾವಣೆಯನ್ನು ಪ್ರಸ್ತುತ ತಲೆಮಾರಿನಲ್ಲೇ ಕಾಣಬಹುದು ಎಂದು ಹೇಳಿದರು. 'ದೇಶದ ಭವಿಷ್ಯದ ಬಗ್ಗೆ ಸಂದೇಹ ಬೇಡ. ಧೈರ್ಯದಿಂದ, ಸ್ವಾವಲಂಬನೆಯಿಂದ ಬದುಕಿ, ಈ ಮೌಲ್ಯಗಳನ್ನು ದೈನಂದಿನ ಜೀವನದಲ್ಲಿ ಅನುಸರಿಸಿ. ಭಾರತ ಬಲಶಾಲಿಯಾಗಿ, ವಿಶ್ವಕ್ಕೆ ಮಾರ್ಗದರ್ಶನ ನೀಡುತ್ತದೆ,' ಎಂದು ಭಾಗ್ವತ್ ಅಭಿಪ್ರಾಯ ವ್ಯಕ್ತಪಡಿಸಿದರು. ➡ಪುಟ ೪

ಶೀಘ್ರದಲ್ಲಿ ಅಮೆರಿಕ-ಇರಾನ್ ಶಾಂತಿ ಸಭೆ

ಪಾಕಿಸ್ತಾನಕ್ಕೆ ಇರಾನ್ ವಿದೇಶಾಂಗ ಸಚಿವ

ಇಸ್ಲಾಮಾಬಾದ್: ಅಮೆರಿಕ-ಇರಾನ್ ನಡುವಿನ ದ್ವಿತೀಯ ಹಂತದ ಶಾಂತಿ ಸಭೆಗೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ನೇತೃತ್ವದ ನಿಯೋಗವೊಂದು ಶುಕ್ರವಾರ ಪಾಕಿಸ್ತಾನಕ್ಕೆ ತೆರಳಿದೆ. ದ್ವಿಪಕ್ಷೀಯ ಮಾತುಕತೆ ಮತ್ತು ಪ್ರಾದೇಶಿಕ ಬೆಳವಣಿಗೆಗಳ ಕುರಿತು ಚರ್ಚಿಸಲು ಅರಾಘ್ಚಿ ಪಾಕ್‌ಗೆ ತೆರಳಿದ್ದಾರೆ ಎಂದು ಇರಾನ್ ಸರ್ಕಾರಿ ಸ್ವಾಮ್ಯದ ಐಆರ್‌ಎನ್‌ಎ ವರದಿ ಮಾಡಿದೆ.

ವಿದೇಶಾಂಗ ಸಚಿವ ಅರಾಘ್ಚಿ ಅವರು ಪಾಕ್ ಮಾತ್ರವಲ್ಲದೆ ಒಮನ್ ಮತ್ತು ರಷ್ಯಾ ಪ್ರವಾಸವನ್ನೂ ಮಾಡಲಿದ್ದಾರೆಂದು ಅದು ವರದಿ ಮಾಡಿದೆ. ಹಾರ್ಮುಜ್ ಬಂದ್ ಆಗಿರುವ ಕಾರಣದಿಂದ ಜಾಗತಿಕ ತೈಲ ಮತ್ತು ಅನಿಲ ಪೂರೈಕೆ ವ್ಯತ್ಯಯವಾಗಿರುವ, ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಅಸಮತೋಲನ ಉಂಟಾದ ಸಮಯದಲ್ಲಿ ಇರಾನ್ ವಿದೇಶಾಂಗ ಸಚಿವರ ಪ್ರವಾಸ ಬಹಳ ಮಹತ್ವ ಪಡೆದುಕೊಂಡಿದೆ. ಇದಲ್ಲದೆ ಇರಾನ್ ಮೇಲಿನ ಯುದ್ಧದಿಂದ ಸಾವಿರಾರು ಜನರು ಮೃತಪಟ್ಟಿದ್ದಾರೆ.

ಸಣ್ಣದೊಂದು ನಿಯೋಗದೊಂದಿಗೆ ಇರಾನ್ ವಿದೇಶಾಂಗ ಸಚಿವರು ಪಾಕಿಸ್ತಾನಕ್ಕೆ ಬರುತ್ತಿದ್ದಾರೆಂದು ಇಬ್ಬರು ಪಾಕ್ ಅಧಿಕಾರಿಗಳು ಅಮೆರಿಕದ ಅಸೋಸಿಯೇಟೆಡ್ ಪ್ರೆಸ್‌ಗೆ ಮಾಹಿತಿ ಕೊಟ್ಟಿದ್ದಾರೆ. ಅರಾಘ್ಚಿ ಅವರ ಪಾಕ್ ಪ್ರವಾಸದ ಬಗ್ಗೆ ಅಮೆರಿಕದ ಶ್ವೇತಭವನ ಸದ್ಯ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.



ಶಾಂತಿ ಸಭೆಗೆ ಪಾಕ್ ಪ್ರೋತ್ಸಾಹ?: ಶುಕ್ರವಾರ ಪಾಕಿಸ್ತಾನಿ ವಿದೇಶಾಂಗ ಸಚಿವ ಇಶಾಕ್ ದಾರ್ ಅವರಿಗೆ ಅರಾಘ್ಚಿ ದೂರವಾಣಿ ಕರೆ ಮಾಡಿದ್ದು, ಪ್ರಾದೇಶಿಕ ಅಭಿವೃದ್ಧಿ ಮತ್ತು ಕದನ ವಿರಾಮದ ಕುರಿತು ಮಾತುಕತೆ ನಡೆಸಿದ್ದಾರೆ ಎಂದು ಅರಾಘ್ಚಿ ಹೇಳಿದ್ದಾರೆ. ಇದಲ್ಲದೆ ಇಸ್ಲಾಮಾಬಾದ್‌ನಲ್ಲಿ ಅಮೆರಿಕ-ಇರಾನ್ ಶಾಂತಿ ಮಾತುಕತೆಗೆ ಬೇಕಾದ ರಾಜತಾಂತ್ರಿಕ ಪ್ರಯತ್ನಗಳ ಬಗ್ಗೆ ಚರ್ಚಿಸಿದ್ದಾಗಿ ಅರಾಘ್ಚಿ ಹೇಳಿದ್ದಾರೆ.

ಅರಾಘ್ಚಿ ಅವರೊಂದಿಗಿನ ಸಂಭಾಷಣೆ ವೇಳೆ, ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆ ಪುನಃಸ್ಥಾಪನೆ ಮತ್ತು ಅಮೆರಿಕದೊಂದಿಗಿನ ಮಾತುಕತೆಯ ಪ್ರಾಮುಖ್ಯತೆಯನ್ನು ಇಶಾಕ್ ದಾರ್ ಒತ್ತಿಹೇಳಿದ್ದಾರೆ ಎಂದು ಇರಾನ್ ವಿದೇಶಾಂಗ ಸಚಿವಾಲಯ ತಿಳಿಸಿದೆ.

ಯುದ್ಧದಲ್ಲಿ 5000ಕ್ಕೂ ಹೆಚ್ಚು ಸಾವು: ಮಧ್ಯಪ್ರಾಚ್ಯ ಯುದ್ಧದಿಂದ ಇರಾನ್‌ನಲ್ಲಿ 3,375 ಮತ್ತು ಲೆಬನಾನ್‌ನಲ್ಲಿ 2,290 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಇದಲ್ಲದೆ, ಇಸ್ರೇಲ್‌ನಲ್ಲಿ 23 ಜನ ಮತ್ತು ಗಲ್ಫ್ ರಾಷ್ಟ್ರಗಳಲ್ಲಿ ಡಜನ್‌ನಷ್ಟು ಜನರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ 15 ಇಸ್ರೇಲಿ ಸೈನಿಕರು ಮತ್ತು ಒಟ್ಟಾರೆ ಯುದ್ಧದಲ್ಲಿ 13 ಅಮೆರಿಕ ಸೈನಿಕರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ಪನಾಮ ಕಾಲುವೆ ದಾಟಲು 4 ದಶಲಕ್ಷ ಡಾಲರ್ ಶುಲ್ಕ!: ಹಾರ್ಮುಜ್ ಜಲಸಂಧಿ ಮುಚ್ಚಿರುವುದರಿಂದ ತೈಲ ವ್ಯಾಪಾರ ಸಂಸ್ಥೆಗಳು ತಮ್ಮ ಹಡಗುಗಳನ್ನು ಪನಾಮ ಕಾಲುವೆ ದಾಟಿಸಲು ಸುಮಾರು 4 ದಶಲಕ್ಷ ಡಾಲರ್ ಹಣ ವ್ಯಯಿಸುತ್ತಿವೆ ಎಂದು ಪನಾಮ ಕಾಲುವೆ ಆಡಳಿತವು ಹೇಳಿದೆ. ಅಲ್ಲದೆ, ಪನಾಮ ಕಾಲುವೆಯಲ್ಲಿ ಹಾದುಹೋಗುವ ಹಡಗುಗಳ ಸಂಖ್ಯೆಯೂ ಹೆಚ್ಚುತ್ತಿದೆ ಎಂದು ಅದು ತಿಳಿಸಿದೆ.

ಪ್ರೋಸ್ಟೇಟ್ ಕ್ಯಾನ್ಸರ್‌ನಿಂದ ನೆತನ್ಯಾಹು ಗುಣಮುಖ: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು 2024ರ ಡಿ.24ರಂದು ಪ್ರೋಸ್ಟೇಟ್ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೆಂದು ಏ.20ರಂದು ಬಿಡುಗಡೆಗೊಳಿಸಲಾದ ವಾರ್ಷಿಕ ಆರೋಗ್ಯ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಶಸ್ತ್ರಚಿಕಿತ್ಸೆಯ ಬಳಿಕ ನೆತನ್ಯಾಹು ಮೂತ್ರದ ಸೋಂಕಿನಿಂದ ಬಳಲುತ್ತಿದ್ದರು. ಅಲ್ಲದೆ, ಹೃದಯ ಸಮಸ್ಯೆ ಇದ್ದಿದ್ದರಿಂದ ಪೇಸ್‌ಮೇಕರ್ ಅಳವಡಿಸಲಾಗಿದೆ. ನೆತನ್ಯಾಹು ಚೇತರಿಸುತ್ತಿದ್ದಾರೆ ಎಂದು ತಿಳಿದುಬಂದಿದೆ.



ಜೋನ್ಸ್ ಕಾಯ್ದೆ ವಿನಾಯಿತಿ 90 ದಿನಗಳ ವಿಸ್ತರಣೆ

ಅಮೆರಿಕದ ಬಂದರುಗಳಲ್ಲಿ ವಿದೇಶಿ ತೈಲ ಮತ್ತು ಅನಿಲ ಹಡಗುಗಳ ಮೇಲೆ ನಿಷೇಧ ಹೇರಿದ್ದ ಜೋನ್ಸ್ ಕಾಯ್ದೆಯ ವಿನಾಯಿತಿಯನ್ನು 90 ದಿನಗಳವರೆಗೆ ವಿಸ್ತರಿಸಿದ್ದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಘೋಷಿಸಿದ್ದಾರೆ. ಜಾಗತಿಕ ತೈಲ ಬೆಲೆಯನ್ನು ಸಮತೋಲನಕ್ಕೆ ತರಬೇಕೆಂಬ ನಿಟ್ಟಿನಲ್ಲಿ ಟ್ರಂಪ್ ಮಾರ್ಚ್ ತಿಂಗಳಾರ್ಧ 60 ದಿನಗಳ ಜೋನ್ಸ್ ಕಾಯ್ದೆ ವಿನಾಯಿತಿ ಘೋಷಿಸಿದ್ದರು. ಇದರಿಂದ ಜಾಗತಿಕ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 3 ಡಾಲರ್‌ನಷ್ಟು ಕುಸಿದಿದ್ದು, 104 ಡಾಲರ್ ತಲುಪಿದೆ.

ಯುಎಸ್ ಹಸಿರು ನಿಶಾನೆ ತೋರಿಸಿದರೆ ಸರ್ವನಾಶ

ಅಮೆರಿಕ ಹಸಿರು ನಿಶಾನೆ ತೋರಿಸಿದರೆ ಇರಾನ್ ಮೇಲಿನ ಯುದ್ಧ ಪುನರಾರಂಭ ಮಾಡಲು ನಾವು ಸಿದ್ಧರಿದ್ದೇವೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಟ್ಜ್ ಹೇಳಿದ್ದಾರೆ. ಅಮೆರಿಕ ಹಸಿರು ನಿಶಾನೆ ತೋರಿಸಿದರೆ ಖಮೇನಿ ಸಾಮ್ರಾಜ್ಯವನ್ನು ಸರ್ವನಾಶ ಮಾಡುವುದಾಗಿ ಹೇಳಿದ್ದಾರೆ.



ಸುದ್ದಿ ಸಮಗ್ರ

ಇ100 ಸ್ವಾವಲಂಬಿ ಭಾರತದ ಇಂಧನ

ಇ100 ಬಳಕೆಯಿಂದ ಪೆಟ್ರೋಲ್ ಅವಲಂಬನೆ ಇಳಿಕೆ

ಇ100 ಜಾರಿಗೊಳಿಸಿದರೆ ಕಚ್ಚಾ ತೈಲ ಆಮದು ಇಳಿಕೆ

ಶೇ.100 ಎಥೆನಾಲ್ + ಶೇ.0 ಪೆಟ್ರೋಲ್ = ಇ100

ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆ ಇಂಧನ ಕ್ಷೇತ್ರದ ಮೇಲೆ ಸಂಪೂರ್ಣ ಗಮನವಿರುವ ಕಾರಣದಿಂದ ಭಾರತದ ವ್ಯವಹಾರ ಕ್ಷೇತ್ರದ ಮೇಲೆ ಯಾವುದೇ ದೊಡ್ಡ ಪರಿಣಾಮ ಬೀರಿಲ್ಲ. ಯಾಕೆಂದರೆ ಭಾರತ ಈಗಾಗಲೇ ಇ20 ಪೆಟ್ರೋಲ್ ಅನ್ನು ಸದ್ದಿಲ್ಲದೆ ಚಾಲ್ತಿಗೆ ತಂದಿದ್ದು, ಮುಂದಿನ ದಿನಗಳಲ್ಲಿ ಭಾರತ ಶೇ.100ರಷ್ಟು ಎಥೆನಾಲ್ ಮಿಶ್ರಿತ ಇಂಧನ ಬಳಕೆಯನ್ನು ಮಾಡಲಿದೆ. ಇದು ಪೆಟ್ರೋಲ್ ಮೇಲಿನ ಅವಲಂಬನೆ ಕಡಿಮೆಗೊಳಿಸಿ ದೇಶವನ್ನು ಇಂಧನ ಕ್ಷೇತ್ರದಲ್ಲಿ ಸ್ವಾವಲಂಬಿಯನ್ನಾಗಿ ಮಾಡಲಿದೆ. ಶೀಘ್ರದಲ್ಲಿ ಭಾರತ ಶೇ.100 ಎಥೆನಾಲ್ ಮಿಶ್ರಣದ ಇಂಧನವನ್ನು ಸಾಧಿಸಲಿದೆ ಎಂದು ಕೇಂದ್ರ ಇಂಧನ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ಭಾರತದ ಭವಿಷ್ಯದ ಇಂಧನ ಕುರಿತಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಶೀಘ್ರದಲ್ಲಿ ಶೇ.100 ಎಥೆನಾಲ್ ಮಿಶ್ರಣ

ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆ ನಾವು ಇಂದಿನ ದಿನ ಇಂಧನ ವ್ಯತ್ಯಯ ಅನುಭವಿಸುತ್ತಿದ್ದೇವೆ. ಹೀಗಾಗಿ ಇಂಧನ ಕ್ಷೇತ್ರದಲ್ಲಿ ನಾವು ಸ್ವಾವಲಂಬಿಯಾಗುವ ಅಗತ್ಯವಿದೆ. ಅತಿ ಶೀಘ್ರದಲ್ಲಿ ಭಾರತ ಶೇ.100 ಎಥೆನಾಲ್ ಮಿಶ್ರಣ ಸಾಧಿಸಲಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಇತ್ತೀಚೆಗೆ ನಡೆದ ಭಾರತೀಯ ಹಸಿರು ಇಂಧನ ಸಮಾವೇಶದಲ್ಲಿ ಹೇಳಿದ್ದರು.

- ಇ25, ಇ27, ಇ30, ಇ85, ಇ100 - ಇ20ನ ಮುಂದಿನ ಶ್ರೇಣಿಗಳು
- 1.21 ಲಕ್ಷ ಕೋಟಿ ರೂ. - ಮೋದಿ ಆಡಳಿತದ ಕಳೆದ 11 ವರ್ಷಗಳಿಂದ ಎಥೆನಾಲ್ ಸಂಗ್ರಹದಿಂದ ಕೃಷಿಕರಿಗಾದ ಆದಾಯ



ಬ್ರೆಜಿಲ್ ಮಾದರಿ?

1970ರಿಂದಲೇ ಬ್ರೆಜಿಲ್ ಸರ್ಕಾರ ಎಥೆನಾಲ್ ಮಿಶ್ರಿತ ಇಂಧನ ಬಳಕೆಯನ್ನು ಜಾರಿಗೆ ತಂದಿದ್ದು, ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನ ಹೊಂದಿರುವ ವಾಹನಗಳನ್ನೇ ತಯಾರಿಸಲು ಆಟೋಮೊಬೈಲ್ ಕಂಪನಿಗಳಿಗೆ ಉತ್ತೇಜನ ನೀಡಿತ್ತು. ಬ್ರೆಜಿಲ್‌ನ ಶೇ.90ರಷ್ಟು ವಾಹನಗಳು ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನ ಹೊಂದಿವೆ. ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನ ಹೊಂದಿರುವ ವಾಹನಗಳು ಹೈಡ್ರೇಟೆಡ್ ಎಥೆನಾಲ್, ಶುದ್ಧ ಪೆಟ್ರೋಲ್ ಅಥವಾ ಇವೆರಡರ ಮಿಶ್ರಣ ಬಳಸುವ ಸಾಮರ್ಥ್ಯ ಹೊಂದಿವೆ. ಆದರೆ ಸದ್ಯ ಬ್ರೆಜಿಲ್‌ನ ಎಥೆನಾಲ್-ಪೆಟ್ರೋಲ್ ಮಿಶ್ರಣ ಶೇ.25ರಿಂದ 27ರಷ್ಟು ಮಾತ್ರ ಎಥೆನಾಲ್ ಹೊಂದಿದೆ. ಹೀಗಾಗಿ ಎಥೆನಾಲ್ ಇಂಧನ ವಿಚಾರದಲ್ಲಿ ಬ್ರೆಜಿಲ್ ಅನುಭವ ಬಳಸಿಕೊಳ್ಳಲಿದ್ದು, ಬ್ರೆಜಿಲ್ ಕಾರ್ಯತಂತ್ರಗಳನ್ನು ಅನುಸರಿಸಲಿದೆ.



ಇ20 ಪೆಟ್ರೋಲ್ ಈಗಾಗಲೇ ಜಾರಿ

ದೇಶದಲ್ಲೆಡೆ ಇ20 ಪೆಟ್ರೋಲ್ ಪೂರೈಕೆಯನ್ನು ಕೇಂದ್ರ ಸರ್ಕಾರ ಕಡ್ಡಾಯವಾಗಿ ಜಾರಿಗೊಳಿಸಿದೆ. ಶೇ.80 ಪೆಟ್ರೋಲ್ ಮತ್ತು ಶೇ.20 ಎಥೆನಾಲ್ ಮಿಶ್ರಣವೇ ಇ20 ಪೆಟ್ರೋಲ್. ಎಥನಾಲ್, ಕಬ್ಬು ಅಥವಾ ಜೋಳ ಇತ್ಯಾದಿ ಸಸ್ಯಗಳಿಂದ ಸಂಗ್ರಹಿಸಲ್ಪಟ್ಟ ಇಂಧನ ಇದಾಗಿದೆ. ಎಥೆನಾಲ್ ಮಿಶ್ರಿತ ಪೆಟ್ರೋಲ್, ಕಾರ್ಬನ್ ಹೊರಸೂಸುವಿಕೆ ಪ್ರಮಾಣ ಮತ್ತು ಶುದ್ಧ ಪೆಟ್ರೋಲ್ ಅವಲಂಬನೆ ಕಡಿಮೆಗೊಳಿಸುತ್ತದೆ.

ದೇಶದಲ್ಲಿ ಫ್ಲೆಕ್ಸ್-ಫ್ಯುಯೆಲ್ ಕಾರುಗಳು ಸಿದ್ಧವಿವೆಯಾ?

ಪರಿಸರ ಹಿತಾಸಕ್ತಿಯಿಂದ ಎಥೆನಾಲ್-ಮಿಶ್ರಿತ ಇಂಧನವನ್ನು ಜಾರಿಗೊಳಿಸುವುದು ಉತ್ತಮ ನಿರ್ಧಾರವಾಗಿದೆ. ಆದರೆ ಸಂಪೂರ್ಣ ಎಥೆನಾಲ್ ಮಿಶ್ರಿತ ಇಂಧನವನ್ನು ಅನುಷ್ಠಾನಗೊಳಿಸುವುದು ಸವಾಲಿನ ಸಂಗತಿಯಾಗಿದೆ. ಇಂಡೋ-ರಷ್ಯಾ ಇಂಧನ ಕಂಪನಿ ನಯಾರ ಎನರ್ಜಿ ಪ್ರಕಾರ, ಇ20 ಪೆಟ್ರೋಲ್‌ನಲ್ಲಿ ಶೇ.20 ಎಥೆನಾಲ್ ಮತ್ತು ಶೇ.80 ಪೆಟ್ರೋಲ್ ಇದೆ. ಇದನ್ನು 2023ರಿಂದ ಅನುಷ್ಠಾನಕ್ಕೆ ತರಲಾಗಿದೆ. 2001ರ ನಂತರದ ವಾಹನಗಳು ಇ10 ಪೆಟ್ರೋಲ್ ಹೆಚ್ಚು ಬಳಸುತ್ತಿವೆ. ಇ20 ಪೆಟ್ರೋಲನ್ನು ಬಳಸುವುದರಿಂದ ಹಳೆಯ ವಾಹನಗಳ ಮೈಲೇಜ್ ಶೇ.5ರಿಂದ 15ರಷ್ಟು ಕಡಿಮೆ ಆಗುತ್ತವೆ. ಇನ್ನೊಂದೆಡೆ ಇ100 ಅನುಷ್ಠಾನಕ್ಕೆ ತರಲು ಭಾರತದಲ್ಲಿ ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನ ಅಳವಡಿಸಲ್ಪಟ್ಟ ಕಾರುಗಳು ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿಲ್ಲ. ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿರುವ ವಾಹನಗಳು ಶೇ.100 ಎಥೆನಾಲ್ ನಿರ್ವಹಿಸಲು ವಿನ್ಯಾಸಗೊಂಡಿಲ್ಲ. ಇ100 ಎಥೆನಾಲ್ ಬಳಕೆಗೆ ಭಾರತೀಯ ಕಾರು ಮಾರುಕಟ್ಟೆ ಇನ್ನೂ ಸಿದ್ಧವಾಗಿಲ್ಲ. ಪ್ರೀಮಿಯಂ ಕಾರುಗಳ ಉತ್ಪಾದನೆಗೆ ಹೆಸರುವಾಸಿ ಆಗಿರುವ ಟೊಯೊಟೊ ಅವರ ಇನೋವ ಹೈಕ್ರಾಸ್ ಫ್ಲೆಕ್ಸ್-ಫ್ಯುಯೆಲ್ ಹೈಬ್ರಿಡ್ ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಶೇ.85 ಎಥೆನಾಲ್ ಮತ್ತು ಪೆಟ್ರೋಲ್ ನಿರ್ವಹಣಾ ಸಾಮರ್ಥ್ಯದೊಂದಿಗೆ ವಿನ್ಯಾಸಗೊಂಡಿದೆ. ಆದರೂ ಈ ಕಾರಿನ ಬೆಲೆ 18.7ರಿಂದ 31.84 ಲಕ್ಷ ರೂ. ಆಗಿದ್ದು, ಸಾಮಾನ್ಯ ಜನತೆಗೆ ಕೈಗೆಟುಕುವ ಬೆಲೆಯಲ್ಲ. 2025ರಲ್ಲಿ ಕೇವಲ 8 ಫ್ಲೆಕ್ಸ್-ಫ್ಯುಯೆಲ್ ಕಾರುಗಳಷ್ಟೇ ದೇಶೀಯ ಕಾರು ಮಾರುಕಟ್ಟೆಯಲ್ಲಿ ಮಾರಾಟವಾಗಿವೆ. ಈ ತಂತ್ರಜ್ಞಾನ ದೇಶದಲ್ಲಿನ್ನೂ ಜನಪ್ರಿಯತೆ ಪಡೆದಿಲ್ಲ. ಟೊಯೊಟೊ ಬಿಟ್ಟರೆ ದೇಸಿ ಮಾರುಕಟ್ಟೆಯಲ್ಲಿ ಟಾಟಾ ಮೋಟರ್ಸ್, ಮಾರುತಿ ಸುಜುಕಿ ಮತ್ತು ಮಹೀಂದ್ರಾ ಕಂಪನಿಗಳು ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನದೊಂದಿಗೆ ವಿನ್ಯಾಸ ಮಾಡಲಾದ ಕಾರುಗಳನ್ನು ಪರಿಚಯಿಸಿವೆ. ಇವುಗಳ ಬೆಲೆ 5.65 ಲಕ್ಷದಿಂದ 10.6 ಲಕ್ಷ ರೂ. ಇವೆ.

ಆಮದು ಇಳಿಸಲು ಟರ್ಬೈನ್ ಮಿಶ್ರಣ?

ಕಚ್ಚಾ ತೈಲ ಆಮದು ಮಾಡುವುದನ್ನು ಕಡಿಮೆಗೊಳಿಸಲು ಇ100 ಇಂಧನ ಜಾರಿಗೆ ತರುವುದು, ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನದ ವಾಹನಗಳ ಬಳಕೆಗೆ ಉತ್ತೇಜನವನ್ನು ನೀಡುವುದಲ್ಲದೆ ಕೇಂದ್ರ ಸರ್ಕಾರ, ವಿಮಾನ (ಟರ್ಬೈನ್) ಇಂಧನವನ್ನು ಮಿಶ್ರಣ ಮಾಡುವ ಆಯ್ಕೆಯನ್ನೂ ಪರಿಗಣಿಸಿದೆ.

ಭಾರತದ ಎಥೆನಾಲ್ ಪಯಣ ತಡೆರಹಿತ

2014ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಅಧಿಕಾರ ಸ್ವೀಕರಿಸಿದ ಬಳಿಕ ಎಥನಾಲ್ ಮಿಶ್ರಿತ ಪೆಟ್ರೋಲ್ (ಇಬಿಪಿ) ಯೋಜನೆಗೆ ಹೆಚ್ಚಿನ ಉತ್ತೇಜನ ನೀಡಲಾಗಿದೆ. 2014ರಲ್ಲಿ ಶೇ.1.53 ಇದ್ದ ಎಥೆನಾಲ್ ಮಿಶ್ರಣ, 2022ರ ವೇಳೆಗೆ ಎಥೆನಾಲ್ ಮಿಶ್ರಣ ಶೇ.10 ತಲುಪಿತ್ತು. 2030ರ ವೇಳೆಗೆ ಶೇ.20 ಎಥೆನಾಲ್ ಮಿಶ್ರಣ ಗುರಿ ಇಟ್ಟಿದ್ದ ಕೇಂದ್ರ ಸರ್ಕಾರ 2027ರೊಳಗೆ ಗುರಿ ಸಾಧಿಸುವ ಪ್ರಯತ್ನದಲ್ಲಿದೆ. ಇ20 ಜಾರಿಗೆ ತಂದಿರುವುದರಿಂದ ಹಸಿರುಮನೆ ಅನಿಲ ಹೊರಸೂಸುವಿಕೆ ಇಳಿಕೆ, ವಾಯು ಗುಣಮಟ್ಟ ಸುಧಾರಣೆ, ಇಂಜಿನ್ ಕಾರ್ಯಕ್ಷಮತೆ ವಿಸ್ತರಣೆ ಇತ್ಯಾದಿ ಧನಾತ್ಮಕ ಪರಿಣಾಮಗಳನ್ನು ಬೀರಲಿದೆ. ವಿದೇಶಿ ವಿನಿಮಯ ಉಳಿತಾಯವು 1.4 ಲಕ್ಷ ಕೋಟಿ ರೂ. ದಾಟಿದೆ.

ಕಿರುಸುದ್ದಿ

ಪೇಟಿಎಂ ಬ್ಯಾಂಕ್ ಪರವಾನಗಿ ರದ್ದು

ಹೊಸದಿಲ್ಲಿ: ಮಾನದಂಡಗಳನ್ನು ಪಾಲಿಸದ ಕಾರಣ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ನೀಡಲಾದ ಬ್ಯಾಂಕಿಂಗ್ ಪರವಾನಗಿಯನ್ನು ರದ್ದುಗೊಳಿಸುವುದಾಗಿ ಆರ್‌ಬಿಐ ಶುಕ್ರವಾರ ಘೋಷಿಸಿದೆ. ಬ್ಯಾಂಕಿನ ವ್ಯವಹಾರಗಳನ್ನು ಅದರ ಠೇವಣಿದಾರರ ಹಿತಾಸಕ್ತಿಗೆ ಹಾನಿಕರ ರೀತಿಯಲ್ಲಿ ನಡೆಸಲಾಗಿದೆ ಎಂದು ಹೇಳಿದೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈ ಬ್ಯಾಂಕ್ ಅನ್ನು ಮುಚ್ಚಲು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಿದೆ.

ಸಿಇಸಿ ಪದಚ್ಯುತಿಗೆ ಪ್ರತಿಪಕ್ಷಗಳ ನೋಟಿಸ್

ಹೊಸದಿಲ್ಲಿ: ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಿಗೊಳಿಸಲು ಪ್ರತಿಪಕ್ಷಗಳು ರಾಜ್ಯಸಭೆಯಲ್ಲಿ ಹೊಸ ನೋಟಿಸ್ ಸಲ್ಲಿಸಿವೆ. ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನ ವಿಧಾನಸಭಾ ಚುನಾವಣೆಗಳಿಗೆ ಮುಂಚಿತವಾಗಿ ಪ್ರಧಾನಿ ನರೇಂದ್ರ ಮೋದಿಯವರ ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣದ ವಿರುದ್ಧದ ದೂರುಗಳ ಮೇಲೆ ಚುನಾವಣಾ ಆಯೋಗವು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಪ್ರತಿಪಕ್ಷಗಳು ಆರೋಪಿಸಿವೆ.

ಅಂಗ, ಬಂಗ, ಕಳಿಂಗದಲ್ಲಿ ಬಿಜೆಪಿ ಆಡಳಿತ: ಅಮಿತ್

ಕೋಲ್ಕತ್ತಾ: ಇಂದಿನ ಪೂರ್ವ ಭಾರತವನ್ನು ಆಳಿದ ಪ್ರಾಚೀನ ರಾಜ್ಯಗಳಾದ ಅಂಗ, ಬಂಗ ಮತ್ತು ಕಳಿಂಗ ಮುಂದಿನ ತಿಂಗಳು ಬಿಜೆಪಿ ಸರ್ಕಾರಗಳನ್ನು ಹೊಂದಿರುತ್ತವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ ಜನರು ಉತ್ಸಾಹದಿಂದ ಮತ ಚಲಾಯಿಸಿದ್ದಾರೆ ಎಂದು ಅಮಿತ್ ಶಾ ಸಂತಸ ವ್ಯಕ್ತಪಡಿಸಿದ್ದಾರೆ. ಕೋಲ್ಕತ್ತಾದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಶಾ, ಗುರುವಾರ ಮೊದಲ ಹಂತದ ಚುನಾವಣೆಯಲ್ಲಿ 152 ಸ್ಥಾನಗಳಲ್ಲಿ ಬಿಜೆಪಿ 110ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ಹೇಳಿದರು. ಬಂಗಾಳದ ಜನರು ಮೊದಲ ಹಂತದಲ್ಲಿ ಎಲ್ಲಾ ದಾಖಲೆಗಳನ್ನು ಮುರಿದಿದ್ದಾರೆ. ಬದಲಾವಣೆಗೆ ಉತ್ಸಾಹದಿಂದ ಮತ ಚಲಾಯಿಸಿದ್ದಾರೆ. ಮೊದಲ ಹಂತದ ಚುನಾವಣೆಯಲ್ಲಿ ಯಾವುದೇ ಸಾವು ಸಂಭವಿಸದಂತೆ ನೋಡಿಕೊಂಡಿದ್ದಕ್ಕಾಗಿ ನಾನು ಚುನಾವಣಾ ಆಯೋಗ ಮತ್ತು ಭದ್ರತಾ ಪಡೆಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದಿದ್ದಾರೆ. 2016ರ ವಿಧಾನಸಭಾ ಚುನಾವಣೆಯಲ್ಲಿ 1,278 ಜನರು ಮತ್ತು 2021ರಲ್ಲಿ 1,681 ಜನರು ಗಾಯಗೊಂಡಿದ್ದಾರೆ ಎಂದು ಹೇಳಿದರು. ಟಿಎಂಸಿಯ ನಿರ್ಗಮನ ಸನ್ನಿಹಿತವಾಗಿದೆ ಎಂದು ಹೇಳಿಕೊಂಡ ಶಾ, ರಾಜ್ಯದಲ್ಲಿ ಬಿಜೆಪಿ ಸಂಪೂರ್ಣ ಬಹುಮತದೊಂದಿಗೆ ಸರ್ಕಾರ ರಚಿಸುತ್ತದೆ ಎಂದು ಹೇಳಿದರು. ನಾನು ಈ ಬಾರಿ ಸುನಾಮಿಯನ್ನು ನೋಡುತ್ತಿದ್ದೇನೆ, ಸ್ಥಾನಗಳ ಸಂಖ್ಯೆ ಮತ್ತು ಗೆಲುವಿನ ಅಂತರವು ತುಂಬಾ ಹೆಚ್ಚಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ ಎಂದು ಹೇಳಿದರು.



ಹಾಲ್ ಆಫ್ ಫೇಮ್‌ಗೆ ಜ.ದ್ವಿವೇದಿ ಸೇರ್ಪಡೆ

ಹೊಸದಿಲ್ಲಿ: ಸೇನಾ ಮುಖ್ಯಸ್ಥ (ಸಿಒಎಎಸ್) ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿಯನ್ನು ಪೆನ್ಸಿಲ್ವೇನಿಯಾದಲ್ಲಿರುವ ಯುಎಸ್ ಆರ್ಮಿ ವಾರ್ ಕಾಲೇಜಿನ ಇಂಟರ್‌ನ್ಯಾಷನಲ್ ಹಾಲ್ ಆಫ್ ಫೇಮ್‌ಗೆ ಸೇರ್ಪಡೆ ಮಾಡಿಕೊಳ್ಳಲಾಗಿದೆ ಎಂದು ಭಾರತೀಯ ಸೇನೆ ಶುಕ್ರವಾರ ತಿಳಿಸಿದೆ. ಇದರೊಂದಿಗೆ, ಜನರಲ್ ವಿ. ಕೆ. ಸಿಂಗ್ ಮತ್ತು ಜನರಲ್ ಬಿಕ್ರಮ್ ಸಿಂಗ್ ನಂತರ ಈ ಗೌರವವನ್ನು ಪಡೆದ ಮೂರನೇ ಸಿಒಎಎಸ್ ಆಗಿದ್ದಾರೆ. ಅಮೆರಿಕಕ್ಕೆ ಭೇಟಿ ನೀಡಿದ ಜನರಲ್ ದ್ವಿವೇದಿ ಅವರು ಕಾರ್ಲಿಸ್ಲೆ ಬ್ಯಾರಕ್‌ನಲ್ಲಿರುವ ಆರ್ಮಿ ವಾರ್ ಕಾಲೇಜಿನಲ್ಲಿ (ಎಡಬ್ಲ್ಯೂಸಿ) ಈ ಗೌರವವನ್ನು ಪಡೆದ ನಂತರ ನಾಯಕತ್ವ, ವೃತ್ತಿಪರ ಮಿಲಿಟರಿ ಶಿಕ್ಷಣ ಮತ್ತು ಭದ್ರತಾ ಡೈನಾಮಿಕ್ಸ್ ಅನ್ನು ಅಭಿವೃದ್ಧಿಪಡಿಸುವ ಕುರಿತು ಸಭೆಯನ್ನುದ್ದೇಶಿಸಿ ಮಾತನಾಡಿದರು ಎಂದು ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ಭಾರತೀಯ ಸೇನೆಯು ಹೇಳಿದೆ. ಯುಎಸ್ ಎಡಬ್ಲ್ಯೂಸಿ ಡಿಸ್ಟಿಂಗ್ವಿಶ್ಡ್ ಫೆಲೋ, ಪ್ರತಿಷ್ಠಿತ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿದ್ದು, ಪ್ರಮುಖ ಸೌಲಭ್ಯಗಳಿಗೆ ಭೇಟಿ ನೀಡಿ, ಪ್ಯಾನೆಲ್ ಚರ್ಚೆಗಳು, ವಿದ್ವಾಂಸರ ಕಾರ್ಯಕ್ರಮದ ಮುಂದುವರಿದ ಅಧ್ಯಯನ ಯೋಜನೆಗಳನ್ನು ಪರಿಶೀಲಿಸುವುದು ಮತ್ತು ಸಂಸ್ಥೆಯ ಪ್ರತಿಷ್ಠಿತ ಸದಸ್ಯರೊಂದಿಗೆ ಸಂವಾದ ನಡೆಸುವುದು ಸೇರಿದಂತೆ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ ಎಂದು ಸೇನೆ ಪೋಸ್ಟ್ ಮಾಡಿದೆ.



ಟಿಸಿಎಸ್: ಆಕರ್ಷಕವಾಗಿ ಕಾಣಲು ಜಿಮ್‌ಗೆ ಹೋಗು

ನಾಸಿಕ್ : ಟಾಟಾ ಕನ್ಸಲ್ಟೆನ್ಸಿಯ ನಾಸಿಕ್ ಘಟಕದಲ್ಲಿ ಬಲವಂತದ ಮತಾಂತರ ಪ್ರಕರಣದ ತನಿಖೆ ನಡೆದಿರುವಂತೆಯೇ ಇದೇ ತೆರನಾದ ಇನ್ನೊಂದು ಪ್ರಕರಣ ಬಯಲಾಗಿದೆ. ಈಗಾಗಲೆ ಬಂಧಿತ ಆರೋಪಿಗಳ ಪೈಕಿ ಶಾರುಖ್ ಖುರೇಶಿ ಮತ್ತು ರಝಾ ಮೆಮನ್ ತನಗೆ ಲೈಂಗಿಕ ಕಿರುಕುಳ, ಮಾನಸಿಕ ಚಿತ್ರಹಿಂಸೆ ನೀಡಿದ್ದಾರೆಂದು ಮಹಿಳಾ ಉದ್ಯೋಗಿಯೋರ್ವರು ತಮ್ಮ ದೂರಿನಲ್ಲಿ ಆರೋಪಿಸಿದ್ದಾರೆ. ಈ ವರ್ಷ ಜನವರಿಯಲ್ಲಿ ಖುರೇಶಿ ನನ್ನನ್ನು ಆತನ ಡೆಸ್ಕ್‌ಗೆ ಕರೆಸಿಕೊಂಡು ನನ್ನ ವೈಯಕ್ತಿಕ ಬದುಕಿನ ಬಗ್ಗೆ ವಿಚಾರಿಸಿದ್ದ. ನಿನಗೆ ಬಾಯ್‌ಫ್ರೆಂಡ್ ಇದ್ದಾನಾ ಅಥವಾ ಮಾಜಿ ಬಾಯ್ ಫ್ರೆಂಡ್ ಇದ್ದಾರೋ ಎಂದು ದುರುಗುಟ್ಟಿಕೊಂಡು ಪ್ರಶ್ನಿಸಿದ್ದ. ಆತನ ಪ್ರಶ್ನೆಯಿಂದ ತನಗೆ ಮಾನಸಿಕವಾಗಿ ತೀರಾ ಹಿಂಸೆಯಾಗಿತ್ತು. ನಂತರ ಒಂದು ವಾರದ ಬಳಿಕ ಆರೋಪಿಗಳಾದ ಖುರೇಶಿ ಮತ್ತು ಮೆಮನ್ ಇಬ್ಬರೂ ಕೆಲಸದ ನೆಪದಲ್ಲಿ ನನ್ನನ್ನು ಬರಹೇಳಿ, ತನ್ನ ಸ್ವರೂಪ ಬಗ್ಗೆ ಅಸಂಬದ್ಧವಾಗಿ ಕಮೆಂಟ್ ಮಾಡಿದ್ದರು. ನೀನು ಜಿಮ್‌ಗೆ ಹೋದಲ್ಲಿ ಆಕರ್ಷಕವಾಗುತ್ತಿ ಎಂದು ಅಸಹ್ಯವಾಗಿ ಸಲಹೆ ನೀಡಿದ್ದರೆಂದು ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.



ನೀನು ತೀರಾ ತೆಳ್ಳಗಿದ್ದಿ. ಜಿಮ್‌ಗೆ ಹೋದಲ್ಲಿ ಶಾರೀರಿಕವಾಗಿ ಆಕರ್ಷಕಳಾಗುತ್ತಿ ಎಂದು ಮೆಮನ್ ತನಗೆ ಸಲಹೆ ಮಾಡಿದ್ದ. ತನ್ನ ಸಂಬಂಧಗಳ ಬಗ್ಗೆ ವಿಚಾರಿಸಿ, ಇಲಾಖೆಯಲ್ಲಿ ಯಾರಾದರು ನಿನ್ನನ್ನು ಇಷ್ಟಪಟ್ಟಿದ್ದಾರೋ ಎಂದು ಕೂಡ ಕೇಳಿದ್ದ. ಹಬ್ಬದ ದಿನ ಹೊಸ ಉಡುಗೆ ಧರಿಸಿ ಹೋದಾಗ ಆತನ ವರ್ತನೆ ಮತ್ತೂ ವಿಚಿತ್ರವಾಗಿತ್ತು ಎಂದು ಆರೋಪಿಸಿದ್ದಾರೆ.

ಭಾರತ-ನ್ಯೂಜಿಲೆಂಡ್ ಶೀಘ್ರ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ

ಹೊಸದಿಲ್ಲಿ: ಭಾರತ ಮತ್ತು ನ್ಯೂಜಿಲೆಂಡ್ ಮುಂದಿನ ಸೋಮವಾರ (ಏ.27ರಂದು) ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸಹಿ ಹಾಕುತ್ತವೆ ಎಂದು ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಶುಕ್ರವಾರ ಖಚಿತಪಡಿಸಿದ್ದಾರೆ. ಈ ಒಪ್ಪಂದವು ದೇಶೀಯ ರಫ್ತುದಾರರ ಸರಕುಗಳಿಗೆ ದ್ವೀಪ ರಾಷ್ಟ್ರದ ಮಾರುಕಟ್ಟೆಗೆ ಸುಂಕ ರಹಿತ ಪ್ರವೇಶವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಮುಂದಿನ 15 ವರ್ಷಗಳಲ್ಲಿ 20 ಶತಕೋಟಿ ಡಾಲರ್ ಹೂಡಿಕೆಯನ್ನು ತರುತ್ತದೆ. ನಾವು ಸೋಮವಾರ ಭಾರತದೊಂದಿಗೆ ನಮ್ಮ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕುತ್ತೇವೆ ಎಂದು ಲಕ್ಸನ್ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು 5 ಶತಕೋಟಿ ಡಾಲರ್‌ಗೆ ದ್ವಿಗುಣಗೊಳಿಸುವ ಗುರಿ ಹೊಂದಿರುವ ವ್ಯಾಪಾರ ಒಪ್ಪಂದದ ಮಾತುಕತೆಗಳ ಮುಕ್ತಾಯವನ್ನು ಉಭಯ ದೇಶಗಳು ಕಳೆದ ವರ್ಷ ಡಿಸೆಂಬರ್‌ನಲ್ಲಿ ಘೋಷಿಸಿದವು.

ಪವಿತ್ರ ಜಲ ಸಮಗ್ರ ನಾಗರೀಕತೆಯ ಕಾಲಾತೀತ ಸ್ಫೂರ್ತಿಯಿಂದ ಸಂಪನ್ನ

ಹೂಗ್ಲಿ ನದಿಯಲ್ಲಿ ಮೋದಿ ದೋಣಿ ವಿಹಾರ

ಕೋಲ್ಕತ್ತಾ: ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಇಲ್ಲಿನ ಹೂಗ್ಲಿ ನದಿಯಲ್ಲಿ ದೋಣಿ ವಿಹಾರ ನಡೆಸಿದರು. ಹೂಗ್ಲಿ ನದಿಯ ಪವಿತ್ರ ಜಲವು ಸಮಗ್ರ ನಾಗರೀಕತೆಯ ಕಾಲಾತೀತ ಸ್ಫೂರ್ತಿಯಿಂದ ಸಂಪನ್ನಗೊಂಡಿದೆ ಎಂದು ಪ್ರಧಾನಿ ಹೇಳಿದ್ದಾರೆ. ಪಶ್ಚಿಮ ಬಂಗಾಳದ ಅಭಿವೃದ್ಧಿ ಮತ್ತು ಶ್ರೇಷ್ಠ ಬಂಗಾಳಿಯರ ಸಂಪನ್ನತೆಗೆ ತಾನು ಕಟಿಬದ್ಧನಿರುವುದಾಗಿ ಭರವಸೆ ನೀಡಿದ್ದಾರೆ.

ಹೂಗ್ಲಿ ನದಿಯಲ್ಲಿ ತಮ್ಮ ದೋಣಿ ವಿಹಾರದ ಕೆಲವು ಫೋಟೋಗಳನ್ನು ಪ್ರಧಾನಿ ಮೋದಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. ಫೋಟೋದಲ್ಲಿ ಪ್ರಧಾನಿಯವರು ಕ್ಯಾಮರಾವನ್ನು ಕೈಯ್ಯಲ್ಲಿ ಹಿಡಿದುಕೊಂಡು ಮರದ ದೋಣಿಯಲ್ಲಿ ಕುಳಿತಿರುವ ದೃಶ್ಯವಿದೆ. ದಂತಕಥೆ ಹೌರಾ ಸೇತುವೆ ಮತ್ತು ವಿದ್ಯಾಸಾಗರ ಸೇತುಗಳು ಹಿನ್ನೆಲೆಯಲ್ಲಿವೆ. ಈ ಮಹಾನ್ ನದಿಯ ಫೋಟೋ ತೆಗೆಯಲು ಶ್ರಮಿಸಿದೆ, ಏಕಕಾಲಕ್ಕೆ ವಿದ್ಯಾಸಾಗರ ಸೇತು ಮತ್ತು ಹೌರಾ ಸೇತುವೆಗಳ ಚಿತ್ತಾಕರ್ಷಕ ದೃಶ್ಯವನ್ನೂ ಸೆರೆಹಿಡಿದಿರುವೆ ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ಪ್ರತೀ ಬಂಗಾಳಿಗಳ ಪಾಲಿಗೆ ಗಂಗಾ ನದಿ ಅತ್ಯಂತ ಪವಿತ್ರ ಮತ್ತು ವಿಶೇಷವಾದುದು ಎಂದು ಪ್ರಧಾನಿ ಹೇಳಿದ್ದಾರೆ. ಗಂಗೆಯು ಬಂಗಾಳದ ಆತ್ಮದಿಂದಾಗಿ ಹರಿಯುತ್ತೆ ಎಂದು ಜನರು ಹೇಳಬಹುದು. ಗಂಗೆಯ ಪವಿತ್ರ ಜಲವು ಇಡೀ ನಾಗರೀಕತೆಯ ಕಾಲಾತೀತ ಸ್ಫೂರ್ತಿಯನ್ನು ಒಳಗೊಂಡಿದೆ. ಶುಕ್ರವಾರ ಮುಂಜಾನೆ ಕೋಲ್ಕತ್ತಾದಲ್ಲಿ ಹೂಗ್ಲೀ ನದೀ ತೀರದಲ್ಲಿ ತಾನು ಕೆಲ ಹೊತ್ತು ಕಳೆದೆ. ಗಂಗಾಮಾತೆಗೆ ನನ್ನ ಕೃತಜ್ಞತೆ ಸಲ್ಲಿಸಲು ಇದೊಂದು ಅಪೂರ್ವ ಅವಕಾಶವಾಯಿತು. ನಾವಿಕರನ್ನು ಭೇಟಿಯಾಗಲು ತನಗೆ ಸದವಕಾಶ ದೊರೆಯಿತು. ಅವರ ಕಠಿಣ ಪರಿಶ್ರಮ ಪ್ರಶಂಸಾರ್ಹ. ಜತೆಗೆ ಮುಂಜಾನೆಯ ವಾಕರ್‌ಗಳೂ ಪ್ರವಾಸ ಸಂದರ್ಭ ಕಾಣಸಿಕ್ಕರು.

ಗುರುವಾರ ಮುಂಜಾನೆ ಹೌರಾದಿಂದ ಕೋಲ್ಕತ್ತಾವರೆಗೆ ರೋಡ್‌ಶೋ ನಡೆಸಿದ ನಂತರದಲ್ಲಿ ರಾತ್ರಿ ಇಲ್ಲಿನ ಲೋಕಭವನದಲ್ಲಿ ಪ್ರಧಾನಿ ಮೋದಿ ವಾಸ್ತವ್ಯ ಹೂಡಿದರೆಂದು ಬಿಜೆಪಿ ಮೂಲಗಳು ತಿಳಿಸಿವೆ. ಶುಕ್ರವಾರ ಮುಂಜಾನೆ ದೋಣಿ ವಿಹಾರಕ್ಕಾಗಿ ನೇರ ಪ್ರಿನ್ಸೆಪ್ ಘಾಟ್‌ಗೆ ಪ್ರಧಾನಿ ಮೋದಿ ತೆರಳಿದ್ದರು. ಗುರುವಾರ ಸಂಜೆ ಹೌರಾದಿಂದ ಕೋಲ್ಕತ್ತಾವರೆಗಿನ ಸುದೀರ್ಘ ರೋಡ್‌ಶೋ ಸಂದರ್ಭ ತಾನು ಹೌರಾ ಸೇತುವೆಯಲ್ಲಿದ್ದೆ. ಆದರೆ ಇಂದು ಮುಂಜಾನೆ ತಾನು ಹೂಗ್ಲಿ ನದಿಯಿಂದ ಈ ಸೇತುವೆಯನ್ನು ವೀಕ್ಷಿಸಿದೆ. ಪ.ಬಂಗಾಳದ ಸಂಪನ್ನತೆ ಮತ್ತು ಬಂಗಾಳಿ ಜನರ ಕಲ್ಯಾಣಕ್ಕಾಗಿ ಪರಿಶ್ರಮಿಸುವ ಸಂಕಲ್ಪವನ್ನು ಹೂಗ್ಲಿ ನದಿಯಲ್ಲಿ ವಿಹಾರದಲ್ಲಿರುವಾಗಲೆ ನಾವು ಪುನರುಚ್ಚರಿಸಿದೆವು ಎಂದು ಮೋದಿ ಪೋಸ್ಟ್‌ನಲ್ಲಿ ಬಣ್ಣಿಸಿದ್ದಾರೆ.

ಸೌಹಾರ್ದಯುತವಾಗಿ ಒಟ್ಟಿಗೆ ಬದುಕಬೇಕು ಎಂದ ಮೋದಿ

ದೋಣಿ ಮಾಲೀಕ ಇಫ್ತಿಖರ್ ಸಂತಸ

ದೋಣಿ ಮಾಲೀಕರಲ್ಲಿ ಒಬ್ಬರಾದ ಮೊಹಮ್ಮದ್ ಇಫ್ತಿಖರ್ ಅಹ್ಮದ್ ಅವರು ಮೋದಿಯೊಂದಿಗೆ ಪ್ರಯಾಣಿಸಿ ಸಂತಸ ಹಂಚಿಕೊಂಡಿದ್ದಾರೆ. ತಮ್ಮ ಪ್ರಯಾಣದ ವೇಳೆ ಮೋದಿಯವರು ನಾವೆಲ್ಲರೂ ಸೌಹಾರ್ದಯುತವಾಗಿ ಒಟ್ಟಿಗೆ ಬದುಕಬೇಕು ಎಂದು ಹೇಳಿದ್ದಾರೆ ಎಂದು ಮಾಧ್ಯಮದ ಜತೆ ಇಫ್ತಿಖರ್ ಹಂಚಿಕೊಂಡಿದ್ದಾರೆ. ಮತ್ತೋರ್ವ ದೋಣಿಗಾರ ಗೌರಾಂಗೋ ಬಿಸ್ವಾಸ್ ಕೂಡ ಈ ಭೇಟಿ ಬಗ್ಗೆ ಸಂತಸ ವ್ಯಕ್ತಪಡಿಸಿದ್ದು, ದೋಣಿ ವಿಹಾರ ಮುಗಿದ ಮೇಲೆ, ಪ್ರಧಾನಿ ಮೋದಿಯವರು ತಮ್ಮನ್ನು ಅಪ್ಪಿಕೊಂಡರು ಎಂದು ಬಿಸ್ವಾಸ್ ಹೇಳಿದ್ದಾರೆ. ಈ ಸವಾರಿಗಾಗಿ ಮೋದಿ 1,000 ರೂ.ಗಳನ್ನು ಪಾವತಿಸಿದ್ದಾರೆ ಎಂದು ಅವರು ಉಲ್ಲೇಖಿಸಿದ್ದಾರೆ.

ವಿಜಯ ಪತಾಕೆ ಅರಳಿಸಬೇಕೆಂದು ಪ್ರಧಾನಿ ಮೋದಿ ಕರೆ

ಜಂಗಲ್‌ರಾಜ್ ಅಂತ್ಯದ ಆರಂಭ

ಕೋಲ್ಕತ್ತಾ: ಮೊದಲ ಹಂತದ ಚುನಾವಣೆ ದಾಖಲಿಸಿದ ಮತದಾನ ಪ್ರಮಾಣ ಬದಲಾವಣೆಯ ಅಲೆಗಳಿಗೆ ಮೊಹರು ಹಾಕಿದೆ. ಟಿಎಂಸಿಯ ಮಹಾ ಜಂಗಲ್‌ರಾಜ್ ಅಂತ್ಯದ ಆರಂಭವನ್ನು ಸಾಂಕೇತಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಟಿಎಂಸಿಯ ನಿರಂಕುಶಪ್ರಭುತ್ವದ ಅಂತ್ಯಗೊಳಿಸಿ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆ ತರುವಂತೆ ಬಿಜೆಪಿ ನೀಡಿದ ಕರೆಗೆ ಸ್ಪಂದನೆ ರೂಪದಲ್ಲಿ, ರಾಜ್ಯದಲ್ಲಿ ಅತ್ಯಧಿಕ ಮತದಾನ ದಾಖಲಾಗಿದೆ ಎಂದು ಪ್ರಧಾನಿ ಮೋದಿ ಖುಷಿ ವ್ಯಕ್ತಪಡಿಸಿದರು. ಉತ್ತರ 24ಪರಗಣ ಜಿಲ್ಲೆಯ ಡಮ್ ಡಮ್ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಪಾಣಿಹತಿಯಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು. ರಾಜ್ಯದ 3.60ಕೋಟಿ ಮತದಾರರ ಪೈಕಿ ಶೇ.93ರಷ್ಟು ಮತದಾರರು ಗುರುವಾರ ನಡೆದ ಮೊದಲ ಹಂತದ ಚುನಾವಣೆಯಲ್ಲಿ ಮತದಾನ ಮಾಡಿದ್ದಾರೆ. ಗುರುವಾರದ ಮತದಾನ ಸಂದರ್ಭ ಮತದಾರರು ಬಿಜೆಪಿ ಪರ ವ್ಯಕ್ತಪಡಿಸಿದ ಬೆಂಬಲವು ಪಕ್ಷದ ವಿಜಯಕ್ಕೆ ಶಂಖನಾದವಾಗಿದೆ ಎಂದು ಪ್ರಧಾನಿ ಬಣ್ಣಿಸಿದರು. ಆಳುವ ಟಿಎಂಸಿಯು ಪುಡಿಗಟ್ಟಿದ್ದ ಪ್ರಜಾಸತ್ತೆಯ ಮಂದಿರವನ್ನು ಮೊದಲ ಹಂತದ ಚುನಾವಣೆಯಲ್ಲಿ ಮತದಾರರು ಪುನರ್ ನಿರ್ಮಿಸಿದ್ದಾರೆ. ಇನ್ನೀಗ ದ್ವಿತೀಯ ಹಂತದ ಮತದಾನದಲ್ಲಿ ಪ್ರಜಾಸತ್ತೆಯ ಈ ದೇಗುಲದ ಮೇಲೆ ನೀವು ವಿಜಯ ಪತಾಕೆಯನ್ನು ಅರಳಿಸಬೇಕೆಂದು ಮತದಾರರಿಗೆ ಪ್ರಧಾನಿ ಮೋದಿ ಕರೆಯಿತ್ತರು. ಗುರುವಾರದ ಮತದಾನ ಕಂಡು ಟಿಎಂಸಿಗೆ ಗರ ಬಡಿದಿದೆ. ಹಾಗಾಗೆ ಆಳುವ ಪಕ್ಷ ಮತದಾರರು ಮತ್ತು ಬಿಜೆಪಿ ಕಾರ್ಯಕರ್ತರನ್ನು ಬೆದರಿಸಿ ಬಗ್ಗುಬಡಿಯಲು ತನ್ನ ಗೂಂಡಾಗಳನ್ನು ಛೂ ಬಿಟ್ಟಿದೆ .

ಗೂಂಡಾಗಳ ರಕ್ಷಿಸೋರೇ ಇಲ್ಲ: ಆಳುವ ಸರಕಾರ ಬಿದ್ದೇ ಹೋಗಲಿದೆ ಎಂಬುದನ್ನು ಮೊದಲ ಹಂತದ ಮತದಾನ ಪ್ರಮಾಣವೇ ಸಾಬೀತುಪಡಿಸಿದೆ ಎಂದು ಪ್ರಧಾನಿ ಮೋದಿ ಟಿಎಂಸಿಯನ್ನು ಕಟುವಾಗಿ ತರಾಟೆಗೆತ್ತಿಕೊಂಡರು. ಮೇ 4ರಂದು ಫಲಿತಾಂಶ ಪ್ರಕಟವಾದ ನಂತರ ಟಿಎಂಸಿ ಗೂಂಡಾಗಳು ಎಲ್ಲೂ ಅಡಗಿಕೂರುವಂತಿಲ್ಲ. ಯಾರೂ ಅವರನ್ನು ರಕ್ಷಿಸಲಾರರು. ಬದಲಾವಣೆ ಅಗತ್ಯ, ಬಿಜೆಪಿ ಸರಕಾರ ನಮಗೆ ಬೇಕೆಂದು ಇಡೀ ಬಂಗಾಳಕ್ಕೆ ಬಂಗಾಳ ಕೂಗಿ ಹೇಳುತ್ತಿದೆ ಎಂದು ಮೋದಿ ಹೇಳಿದರು.

ಕಿರುಸುದ್ದಿ

ಡಾ.ದಿವ್ಯಾ ದಿಲೇಶ್ ಶೆಟ್ಟಿಗೆ ಪಿಹೆಚ್‌ಡಿ ಪದವಿ



ಉಡುಪಿ: ಇಲ್ಲಿನ ಎಮ್ಐಟಿ (ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಪ್ರಾಧ್ಯಾಪಕಿ ಡಾ.ದಿವ್ಯಾ ದಿಲೇಶ್ ಶೆಟ್ಟಿಯವರು ಮಣಿಪಾಲದ ಮಾಹೆ ವಿಶ್ವವಿದ್ಯಾಲಯದಿಂದ ಡಾ.ಚಂದ್ರಕಾಂತ್ ಕಣಿಯವರ ಮಾರ್ಗದರ್ಶನದಲ್ಲಿ 'ಥರ್ಮಲ್ ಮ್ಯಾನೇಜ್ಮೆಂಟ್ ಸಿಸ್ಟಮ್ ಫಾರ್ ಲೀಥಿಯಮ್ ಬ್ಯಾಟರಿ ಮಾಡ್ಯುಲ್' ವಿಷಯದ ಬಗ್ಗೆ ಮಂಡಿಸಿದ ಮಹಾಪ್ರಬಂಧಕ್ಕೆ ಪಿಹೆಚ್‌ಡಿ ಪದವಿ ಲಭಿಸಿದೆ. ಇವರು ಬಿಜೆಪಿ ಜಿಲ್ಲಾ ಪ್ರಕೋಷ್ಠಗಳ ಜಿಲ್ಲಾ ಸಂಯೋಜಕ ದಿಲೇಶ್ ಶೆಟ್ಟಿ ಬೆಳ್ಳಂಪಳ್ಳಿಯವರ ಪತ್ನಿ.

ಎಸ್ಸೆಸ್ಸೆಲ್ಸಿ ಪರೀಕ್ಷೆ: ಸಾನ್ವಿ ಎಸ್.ಗೆ 593 ಅಂಕ



ಕುಂದಾಪುರ: ಕುಂದಾಪುರದ ಹೋಲಿ ರೋಜರಿ ಆಂಗ್ಲ ಮಾಧ್ಯಮ ಪ್ರೌಢ ಶಾಲೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸತತ 9ನೇ ವರ್ಷವೂ ಶೇ. 100 ಫಲಿತಾಂಶ ದಾಖಲಿಸಿದೆ. ಒಟ್ಟು 46 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 17 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ, 25 ವಿದ್ಯಾರ್ಥಿಗಳು ಪ್ರಥಮ ದರ್ಜೆ, 4 ವಿದ್ಯಾರ್ಥಿಗಳು ದ್ವಿತೀಯ ದರ್ಜೆ ಪಡೆದಿದ್ದಾರೆ. ಸಾನ್ವಿ ಎಸ್. 593 ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ, ಸುಜನ್ 582 ಅಂಕ ಗಳಿಸಿ ಶಾಲೆಗೆ ದ್ವಿತೀಯ ಸ್ಥಾನವನ್ನು ಹಾಗೂ ಸಾತ್ವಿಕ್ ಎಸ್. ಪೂಜಾರಿ 572 ಅಂಕ ಗಳಿಸಿ ಮೂರನೇ ಸ್ಥಾನವನ್ನು ಪಡೆದಿದ್ದಾರೆ.

ಪ್ರತಿಭಾ ಕಾರಂಜಿ: ಸಂಸ್ಕೃತ ಭಾಷಣ ಸ್ಪರ್ಧೆಯಲ್ಲಿ ಸಾಯಿಶ್ರೀ ಪ್ರಥಮ



ಕುಂದಾಪುರ: ಕರ್ನಾಟಕ ಸರ್ಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಉಡುಪಿ ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಉಡುಪಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಕಾರ್ಕಳ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು, ಹೆಬ್ರಿ ಇವರ ಸಹಯೋಗದಲ್ಲಿ ನಡೆದ ಉಡುಪಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯ ಪ್ರೌಢಶಾಲಾ ವಿಭಾಗದ (8–12ನೇ ತರಗತಿ) ಸಂಸ್ಕೃತ ಭಾಷಣ ಸ್ಪರ್ಧೆಯಲ್ಲಿ ಕುಂದಾಪುರ ಸುಣ್ಣಾರಿಯ ಎಕ್ಸಲೆಂಟ್ ಪದವಿ ಪೂರ್ವ ಕಾಲೇಜು, ಪ್ರಥಮ ಪಿಯುಸಿ ವಿದ್ಯಾರ್ಥಿನಿ ಸಾಯಿಶ್ರೀ ಪ್ರಥಮ ಸ್ಥಾನಗಳಿಸುವುದರ ಮೂಲಕ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ.

ದಕ್ಷಿಣ ಕನ್ನಡ, ಉಡುಪಿ ಜಿಲ್ಲಾಡಳಿತದಿಂದ ವರನಟ ಡಾ. ರಾಜ್‌ಕುಮಾರ್ 97ನೇ ಜನ್ಮ ದಿನಾಚರಣೆ

ಸರಳತೆ, ಆದರ್ಶ ವ್ಯಕ್ತಿತ್ವ ಯುವಜನತೆಗೆ ಪ್ರೇರಕ



ಮಂಗಳೂರು: ವರನಟ, ನಟ ಸಾರ್ವಭೌಮ ಎಂದೇ ಬಿರುದು ಪಡೆದ ಡಾ.ರಾಜ್‌ಕುಮಾರ್ ಅವರ ಸರಳ ವ್ಯಕ್ತಿತ್ವ ಯುವಜನತೆಗೆ ಮಾದರಿ. ಇಂದಿನ ಯುವಜನತೆ ಅವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ. ಗಫೂರ್ ಹೇಳಿದರು.

ಅವರು ಶುಕ್ರವಾರ ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಸ್ನಾತಕೋತ್ತರ ವಾಣಿಜ್ಯ ವಿಭಾಗ ಆಶ್ರಯದಲ್ಲಿ ವಿಶ್ವವಿದ್ಯಾನಿಲಯ ಕಾಲೇಜಿನಲ್ಲಿ ನಡೆದ ಡಾ.ರಾಜ್‌ಕುಮಾರ್ ಅವರ 97ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಜ್‌ಕುಮಾರ್ ಅವರು ಸರಳತೆ ಮತ್ತು ಉತ್ತಮ ಮೌಲ್ಯಗಳನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡಿದ್ದರು. ಕನ್ನಡ ಚಲನಚಿತ್ರ ರಂಗದಲ್ಲಿ ವಿಶೇಷವಾಗಿ ಗುರುತಿಸಿಕೊಂಡಿದ್ದ ಡಾ.ರಾಜ್‌ಕುಮಾರ್ ಅವರ ಜನ್ಮ ದಿನವನ್ನು ಸರಕಾರ ಆಚರಿಸುತ್ತಿರುವುದು ಶ್ಲಾಘನೀಯ. ಯುವಜನತೆ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉತ್ತಮ ಆದರ್ಶಗಳೊಂದಿಗೆ ಮುನ್ನಡೆದರೆ ಉತ್ತಮ ಪ್ರಜೆಗಳಾಗಿ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ಅವರು ಹೇಳಿದರು.

ಹಿರಿಯ ಪತ್ರಕರ್ತ ಪಿ.ಬಿ. ಹರೀಶ್ ರೈ ಉಪನ್ಯಾಸ ನೀಡಿ, ಡಾ.ರಾಜ್‌ಕುಮಾರ್ ಅವರು ಕನ್ನಡ ನಾಡು ನುಡಿಯ ಬಗ್ಗೆ ಅಪಾರ ಗೌರವ ಹೊಂದಿದ್ದ ಮಹಾನ್ ನಾಯಕ. ಅಭಿಮಾನಿಗಳು ತಮ್ಮ ಆದರ್ಶಗಳನ್ನು ಹಿಂಬಾಲಿಸುವ ಕಾರಣದಿಂದ ತಾವು ನಟಿಸಿದ ಸಿನಿಮಾಗಳಲ್ಲಿ ಧೂಮಪಾನ, ಮದ್ಯಪಾನದ ದೃಶ್ಯಗಳಲ್ಲಿ ಅಭಿನಯಿಸಲಿಲ್ಲ. ಚಲನಚಿತ್ರದಲ್ಲಿ ಮಾತ್ರವಲ್ಲದೆ ಅವರು ನಿಜ ಜೀವನದಲ್ಲಿಯೂ ನಾಯಕರಾಗಿದ್ದು, ಅಭಿನಯವನ್ನು ನಿಜ ಜೀವನದಲ್ಲಿಯೂ ತೋರಿಸಿದವರು ಎಂದು ಹೇಳಿದರು.

ಅಭಿನಯದ ಜೊತೆಗೆ ಅವರ ಗಾಯನವೂ ಚಲನಚಿತ್ರ ರಂಗದಲ್ಲಿ ಛಾಪು ಮೂಡಿಸಿದ್ದವು. ಅವರ ಚಲನಚಿತ್ರಗಳು ಮನರಂಜನೆ ಮಾತ್ರವಲ್ಲದೆ ಜೀವನದ ಉತ್ತಮ ಮೌಲ್ಯಗಳನ್ನು ತಿಳಿಸುತ್ತಿದ್ದವು. ಅವರಿಗೆ ರಾಜಕೀಯ ಅವಕಾಶಗಳು ಒದಗಿ ಬಂದರೂ ಅದನ್ನು ತೊರೆದು, ಕನ್ನಡ ಚಲನಚಿತ್ರರಂಗದಲ್ಲಿಯೇ ವಿಶೇಷವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಗೋಕಾಕ್ ಚಳುವಳಿಯಂತಹ ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಹೋರಾಟಗಳಲ್ಲಿ ಮುಂಚೂಣಿಯಲ್ಲಿ ಭಾಗವಹಿಸಿ, ಕನ್ನಡದ ಅಸ್ಮಿತೆ ಎತ್ತಿ ಹಿಡಿದವರಲ್ಲಿ ಡಾ.ರಾಜ್‌ಕುಮಾರ್ ಅವರು ಒಬ್ಬರಾಗಿದ್ದರು ಎಂದರು.

ವಿಶ್ವವಿದ್ಯಾನಿಲಯ ಕಾಲೇಜಿನ ಪ್ರಾಂಶುಪಾಲ ಪ್ರೊ. ಗಣಪತಿ ಗೌಡ ಎನ್. ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಅಲ್ವಾರಿಸ್ ಉಪಸ್ಥಿತರಿದ್ದರು.

ವಿಶ್ವವಿದ್ಯಾನಿಲಯ ಕಾಲೇಜಿನ ಸ್ನಾತಕೋತ್ತರ ವಾಣಿಜ್ಯ ವಿಭಾಗದ ಸಲಹೆಗಾರ ಡಾ. ಅಬೂಬಕ್ಕರ್ ಸಿದ್ದಿಕ್ ಸ್ವಾಗತಿಸಿ, ಜಿಲ್ಲಾ ವಾರ್ತಾಧಿಕಾರಿ ಬಿ.ಎ. ಖಾದರ್ ಶಾ ವಂದಿಸಿದರು. ಸ್ನಾತಕೋತ್ತರ ವಾಣಿಜ್ಯ ಉಪನ್ಯಾಸಕ ಡಾ. ವೆಂಕಟೇಶ್ ನಾಯಕ್ ನಿರೂಪಿಸಿದರು.

ಜೀವನದ ಮೌಲ್ಯಗಳು ಸಾಧನೆಗಳಿಗೆ ಪೂರಕ



ಉಡುಪಿ: ಕನ್ನಡದ ವರನಟ ಡಾ.ರಾಜ್‌ಕುಮಾರ್ ಜಯಂತಿ ಒಂದು ಅಪರೂಪದ ಕಾರ್ಯಕ್ರಮ. ಒಬ್ಬ ಚಿತ್ರ ನಟನ ಜಯಂತಿ ಕಾರ್ಯಕ್ರಮವನ್ನು ಆಚರಿಸುವುದು ದೇಶದಲ್ಲೇ ಅತ್ಯಂತ ಅಪೂರ್ವವಾಗಿದೆ. ರಾಜ್‌ಕುಮಾರ್ ಅವರು ಕೇವಲ ನಟ ಮಾತ್ರವಲ್ಲ, ಅವರೊಬ್ಬ ಸರಳ-ಸಜ್ಜನ ವ್ಯಕ್ತಿ. ಸರಳತೆಯಿಂದ ಅವರು ಬದುಕಿದ ರೀತಿ ಅನುಕರಣೆ ಮಾಡುವುದು ಯೋಗ್ಯ. ಒಬ್ಬ ನಟನಾಗಿ ಸಮಾಜಕ್ಕೆ ಕೊಡುಗೆ ನೀಡಬಹುದು ಎಂದು ತೋರಿಸಿಕೊಟ್ಟ ಅವರ ಮಾನವೀಯ ಮೌಲ್ಯಗಳು ಜನರಿಗೆ ತಿಳಿಯಬೇಕು ಎನ್ನುವ ನಿಟ್ಟಿನಲ್ಲಿ ಜಯಂತಿ ಕಾರ್ಯಕ್ರಮ ನಡೆಸುತ್ತಿರುವುದು ಅರ್ಥಪೂರ್ಣ ಎಂದು ಶಾಸಕ ಯಶ್‌ಪಾಲ್ ಸುವರ್ಣ ಹೇಳಿದರು.

ಬ್ರಹ್ಮಗಿರಿಯ ರೆಡ್‌ಕ್ರಾಸ್ ಸಭಾಂಗಣದಲ್ಲಿ ನಡೆದ ವರನಟ ಡಾ.ರಾಜ್‌ಕುಮಾರ್ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅದ್ಭುತ ನಾಯಕರಾಗಿದ್ದ ಅವರ ಕಂಠಸಿರಿಯು ಆಕರ್ಷಣೀಯ ಅಂಥದ್ದು. ಚಲನ ಚಿತ್ರಗಳಲ್ಲಿ ಅಮೋಘ ನಟನಾ ಸಾಮರ್ಥ್ಯವನ್ನುಮೆಲ್ಲರಿಗೂ ತೋರಿಸಿದ ಅವರು ನಿಜ ಜೀವನದಲ್ಲಿನ ನಾವೆಲ್ಲರೂ ಅನುಸರಿಸುವ ರೀತಿ ವ್ಯವಹರಿಸಬೇಕು ಎನ್ನುವುದನ್ನೂ ತೋರಿಸಿಕೊಟ್ಟಿದ್ದಾರೆ. ಯುವಜನತೆ ಡಾ.ರಾಜ್ ಬಗ್ಗೆ ತಿಳಿದುಕೊಂಡು ಅವರ ಆಚಾರ-ವಿಚಾರಗಳನ್ನು ಮತ್ತು ಅವರ ಜೀವನದ ಮೌಲ್ಯಗಳನ್ನು ತಮ್ಮ ಜೀವನದಲ್ಲಿಯೂ ಅಳವಡಿಸಿಕೊಂಡು ಸಾಧನೆ ಮಾಡಬೇಕು ಎಂದರು.

ಭಾರತೀಯ ರೆಡ್‌ಕ್ರಾಸ್ ರಾಜ್ಯ ಸಭಾಪತಿ ಬಸರೂರು ರಾಜೀವ್ ಶೆಟ್ಟಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಚಲನಚಿತ್ರ ಕಲಾವಿದೆ ಪ್ರತಿಮಾ ನಾಯಕ್ ಡಾ.ರಾಜ್‌ಕುಮಾರ್ ಅವರ ಜೀವನ ಮತ್ತು ನಟನೆ ಕುರಿತು ಉಪನ್ಯಾಸ ನೀಡಿದರು.

ಜಿಲ್ಲಾ ವಾರ್ತಾಧಿಕಾರಿ ಮಂಜುನಾಥ್ ಬಿ. ಪ್ರಾಸ್ತಾವಿಕವಾಗಿ ಮಾತನಾಡಿ, ಡಾ.ರಾಜ್‌ಕುಮಾರ್ ಕನ್ನಡ ಏಕೀಕರಣ ಚಳುವಳಿಯ ನೇತಾರನಾಗಿದ್ದು, ರಾಷ್ಟ್ರದ ಅತ್ಯುನ್ನತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯಿಂದ ಮೊದಲ್ಗೊಂಡು ಹಲವು ಪ್ರಶಸ್ತಿಗಳನ್ನು ಪಡೆದು ಕನ್ನಡ ಸಾಹಿತ್ಯ ಪರಿಷತ್ತಿಗೆ ದೇಣಿಗೆ ನೀಡಿ ತಮ್ಮ ಕನ್ನಡ ಪ್ರೇಮವನ್ನು ಜಗಜ್ಜಾಹೀರು ಮಾಡಿದ್ದಾರೆ. ಸಂತ್ರಸ್ತರ ನಿಧಿಗೆ, ಆಸ್ಪತ್ರೆಗಳ ಮತ್ತು ಸಾಮಾಜಿಕ ಕಾರ್ಯಗಳಿಗೆ ಸಹಾಯಾರ್ಥವಾಗಿ ಕಾರ್ಯಕ್ರಮಗಳನ್ನು ನಡೆಸಿಕೊಡುವುದರೊಂದಿಗೆ ಆರ್ಥಿಕ ಸಹಾಯ ಮಾಡಿದ್ದಾರೆ. ಅವರ ಭಾಷಾ ಶುದ್ಧತೆ, ಜೀವನದ ಮೌಲ್ಯಗಳು, ಹಿರಿಯರಿಗೆ ನೀಡುತ್ತಿದ್ದ ಗೌರವ ಮತ್ತು ಪರೋಪಕಾರ ಪ್ರವೃತ್ತಿ ಎಲ್ಲವೂ ಅನುಕರಣೀಯ ಎಂದರು.

ಡಾ.ಜಿ.ಶಂಕರ್ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರಾದ ದಿಶಾ ಮತ್ತು ದಿಯಾ ಡಾ.ರಾಜ್‌ಕುಮಾರ್ ಅವರ ಚಿತ್ರಗೀತೆಗಳನ್ನು ಹಾಡಿದರು.

ಕಾರ್ಯಕ್ರಮದಲ್ಲಿ ಲಯನ್ಸ್ ಮಿಡ್ ಟೌನ್ ಅಧ್ಯಕ್ಷ ಪುರುಷೋತ್ತಮ್ ನಾಯಕ್, ಡಾ.ಜಿ. ಶಂಕರ್ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ನಿಕೇತನ, ವಾರ್ತಾ ಇಲಾಖೆಯ ಸಿಬ್ಬಂದಿಗಳು, ರೆಡ್‌ಕ್ರಾಸ್ ಹಾಗೂ ಡಿ.ಡಿ.ಆರ್.ಸಿ. ಸಿಬ್ಬಂದಿಗಳು, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಮಹಿಳಾ ಮೀಸಲಾತಿ ಜಾರಿಗೆ ವಿರೋಧ ಖಂಡನೀಯ

ಮಂಗಳೂರು: ಮಹಿಳಾ ಮೀಸಲಾತಿ ಜಾರಿಗೆ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳು ತಡೆ ಒಡ್ಡಿರುವುದು ಖಂಡನೀಯ ಎಂದು ಜೆಡಿಎಸ್ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಜಾಕೆ ಮಾಧವ ಗೌಡ ಹೇಳಿದರು.

ಮಹಿಳಾ ಮೀಸಲಾತಿ ಜಾರಿ ವಿಚಾರದಲ್ಲಿ ಲೋಕಸಭೆಯಲ್ಲಿ ನಡೆದ ವಿದ್ಯಮಾನಗಳು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿದೆ. ದೇಶದ ಮಹಿಳೆಯರಿಗೆ ಹಕ್ಕು ನೀಡುವ ವಿಚಾರದಲ್ಲಿ ರಾಜಕೀಯ ಬದಿಗಿಟ್ಟು ಬೆಂಬಲಿಸಬೇಕಾದ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳು ಕ್ಷುಲ್ಲಕ ಕಾರಣ ನೀಡಿ ಅಡ್ಡಿಪಡಿಸುತ್ತಿರುವುದು ಅವರ ಮಹಿಳಾ ವಿರೋಧಿ ನೀತಿಯನ್ನು ತೋರಿಸುತ್ತದೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

ಕೇಂದ್ರದ ಎನ್‌ಡಿಎ ಸರಕಾರ ಮಹಿಳಾ ಮೀಸಲಾತಿಯನ್ನು ಕೇವಲ ಘೋಷಣೆಯಾಗಿ ಉಳಿಸದೇ ಅದನ್ನು ಕಾನೂನುಬದ್ಧಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಅಧಿಕಾರದಲ್ಲಿದ್ದಾಗ ಮಹಿಳಾ ಮೀಸಲಾತಿಯನ್ನು ಕಡೆಗಣಿಸಿದ ಕಾಂಗ್ರೆಸ್, ಈಗ ಮಸೂದೆ ಜಾರಿಗೆ ಬರುವ ಹಂತದಲ್ಲಿ ವಿವಿಧ ನೆಪವೊಡ್ಡಿ ಕಾಲಹರಣ ಮಾಡುತ್ತಿದೆ. ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಮಹಿಳೆಯರಿಗೆ ಸಂಸತ್‌ನಲ್ಲಿ ಶೇ.33ರಷ್ಟು ಮೀಸಲಾತಿ ನೀಡಬೇಕಿದೆ. ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ನೀಡಬೇಕು, ಮುಂದಿನ 25 ವರ್ಷಗಳನ್ನು ಗಮನದಲ್ಲಿರಿಸಿ ಸಂಸತ್‌ನ ಸದಸ್ಯ ಬಲ ಹೆಚ್ಚಿಸಬೇಕಿದೆ. ಈ ನಿಟ್ಟಿನಲ್ಲಿ ಮಹಿಳಾ ಮೀಸಲಾತಿ ಜಾರಿಗೊಳ್ಳುವರೆಗೆ ಜೆಡಿಎಸ್ ಹೋರಾಟ ನಡೆಸಲಿದೆ ಎಂದರು.

ಎಸ್ಸೆಸ್ಸೆಲ್ಸಿ ಫಲಿತಾಂಶ: ಬಾಲವಿಕಾಸ ಆಂಗ್ಲ ಮಾಧ್ಯಮ ಶಾಲೆಯ ಸಾಧನೆ



ಮಂಗಳೂರು: ಮಾಣಿ ಪೆರಾಜೆ ವಿದ್ಯಾನಗರದ ಬಾಲವಿಕಾಸ ಆಂಗ್ಲ ಮಾಧ್ಯಮಶಾಲೆಎಸ್ಸೆಸ್ಸೆಲ್ಸಿಪರೀಕ್ಷೆಯಲ್ಲಿ ಶೇ. 100 ಫಲಿತಾಂಶವನ್ನು ದಾಖಲು ಮಾಡಿದೆ. 620 ಅಂಕಗಳನ್ನು ಪಡೆದ ಪೂರ್ವಿ ಎ. ಭಾರದ್ವಜ್ ಬಂಟ್ವಾಳ ತಾಲೂಕಿಗೆ ಪ್ರಥಮ ರ್‍ಯಾಂಕ್, ರಾಜ್ಯಕ್ಕೆ 6 ನೇ ರ್‍ಯಾಂಕ್ ಪಡೆದಿದ್ದಾನೆ.

2025–26 ನೇ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಮಾಣಿ – ಪೆರಾಜೆಯ ಬಾಲವಿಕಾಸ ಆಂಗ್ಲ ಮಾಧ್ಯಮ ಶಾಲೆಯ ಒಟ್ಟು 79 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಇವರಲ್ಲಿ 48 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಹಾಗೂ ಉಳಿದ ಎಲ್ಲಾ ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗುವ ಮೂಲಕ ಶೇ.100 ಗುಣಮಟ್ಟದ ಫಲಿತಾಂಶವನ್ನು ದಾಖಲಿಸಿದ್ದಾರೆ. ಪೂರ್ವಿ ಎ. ಭಾರದ್ವಜ್ –620 (99.2%) ಪ್ರಥಮ ಸ್ಥಾನ, ಸಂಜನಾ ಎಸ್. ಭಟ್ –614 (98.24%) ದ್ವಿತೀಯ ಸ್ಥಾನ ಹಾಗೂ ಅಂಶಿಕ ಎಸ್. ಕೆ. 613 (98.08) ತೃತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಗಂಗೊಳ್ಳಿ ಅಂಜುಮನ್ ಆಂಗ್ಲ ಮಾಧ್ಯಮ ಶಾಲೆ: ಶೇ.100



ಕುಂದಾಪುರ: 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ–1 ರಲ್ಲಿ ಗಂಗೊಳ್ಳಿಯ ಅಂಜುಮನ್ ಆಂಗ್ಲ ಮಾಧ್ಯಮ ಪ್ರೌಢಶಾಲೆ ಶೇ.100 ಫಲಿತಾಂಶ ದಾಖಲಿಸಿದೆ. ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಪೈಕಿ 3 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ 24 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಮತ್ತು 5 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಮೊಹಮ್ಮದ್ ರಾಝಿಕ್ 593 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದರೆ, ಫಾತಿಮಾ ನಸ್ವೀಫಾ 567 ಮತ್ತು ಫಾತಿಮಾ ಇಕ್ರಾ 532 ಅಂಕಗಳನ್ನು ಪಡೆದು ಶಾಲೆಗೆ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿದ್ದಾರೆ.

ಏಪ್ರಿಲ್, ಮೇನಲ್ಲಿ ನೀರು ಪೂರೈಕೆ ಕಡಿಮೆ | ಮಳೆಗಾಲದಲ್ಲಿ ಕೃತಕ ನೆರೆ ಆತಂಕ

ಡೊಂಗರಕೇರಿ: ಪ್ರೆಶರ್ ಕೊರತೆಯಿಂದ ನೀರಿನ ಸಮಸ್ಯೆ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ದೇವಸ್ಥಾನಗಳು, ಶಾಲಾ ಕಾಲೇಜುಗಳು ಅಧಿಕ ಸಂಖ್ಯೆಯಲ್ಲಿರುವ ಡೊಂಗರಕೇರಿ ವಾರ್ಡ್‌ನ ಅಲ್ಲಲ್ಲಿ ಪ್ರತಿ ವರ್ಷ ಏಪ್ರಿಲ್, ಮೇ ತಿಂಗಳಿನಲ್ಲಿ ನೀರಿನ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಈ ಬಾರಿಯೂ ಕಳೆದ ಒಂದು ತಿಂಗಳಿನಿಂದ ವಾರ್ಡ್‌ನ ಕೆಲವೆಡೆ ನೀರಿನ ಕೊರತೆ ಉಂಟಾಗಿದೆ.

ನ್ಯೂಚಿತ್ರಾ ಟಾಕೀಸ್‌ನಿಂದ ದುರ್ಗಾಮಹಲ್ ವರೆಗೆ, ನವಭಾರತ ವೃತ್ತ, ಶಾರದಾ ವಿದ್ಯಾಲಯ ರಸ್ತೆಯಲ್ಲಿ ಶಾರದಾ ವಿದ್ಯಾಲಯ ಭಾಗ, ಡೊಂಗರಕೇರಿ ದೇವಸ್ಥಾನದಿಂದ ಪ್ರಗತಿ ಬ್ರಿಡ್ಜ್ ವರೆಗೆ ಒಂದು ಭಾಗ, ಭೋಜರಾಜ ಲೇನ್ ಎರಡು ಬದಿ, ಹನುಮಾನ್ ಟಿಂಬರ್ ರೋಡ್, ಕಂಬಳ ಕ್ರಾಸ್ ರೋಡ್, ಕುದ್ರೋಳಿ ಓಲ್ಡ್ ಗೇಟ್ ರೋಡ್, ಮಂಡಿ ಬ್ರಿಡ್ಜ್ ಒಂದು ಭಾಗ, ಮಹಾಮಾಯಿ ಟೆಂಪಲ್ ರಸ್ತೆಯ ಒಂದು ಭಾಗದಲ್ಲಿ ವ್ಯಾಪಿಸಿರುವ ಡೊಂಗರಕೇರಿ ವಾರ್ಡ್ ನಲ್ಲಿ ಪ್ರೆಶರ್ ಕೊರತೆಯಿಂದ ಜನತೆ ಅಗತ್ಯ ಇರುವಷ್ಟು ನೀರು ಸಂಗ್ರಹಿಸಿಟ್ಟುಕೊಳ್ಳಲು ಸಾಧ್ಯವಾಗುತ್ತಿಲ್ಲ. ವಾರ್ಡ್‌ನ ಓಲ್ಡ್ ಗೇಟ್ ರೋಡ್, ಅಳಕೆ ನಾಗಬ್ರಹ್ಮ ದೇವಸ್ಥಾನ ಪ್ರದೇಶ, ವಾದಿರಾಜ ನಗರ, ಮಂಡಿ ಬ್ರಿಡ್ಜ್ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿದೆ.

ಈ ವಾರ್ಡ್‌ಗೆ ಬೆಂದೂರುವೆಲ್ ಟ್ಯಾಂಕ್‌ನಿಂದ ಮಧ್ಯರಾತ್ರಿ 2ರಿಂದ ಬೆಳಗ್ಗೆ 9ರವರೆಗೆ ಹಾಗೂ ಸಂಜೆ 4.30ರಿಂದ 5.30–8ರ ನಡುವೆ ನೀರು ಪೂರೈಕೆಯಾಗುತ್ತದೆ. ವರ್ಷದ ಹಿಂದೆ ಬೆಳಗ್ಗೆ 11ರವರೆಗೂ ನೀರು ಬರುತ್ತಿತ್ತು. ಈಗ ಬೆಳಗ್ಗೆ 8.30– 9ಗಂಟೆಯೊಳಗೆ ನೀರು ಬಂದ್ ಆಗುತ್ತಿದೆ. ಪೈಪ್‌ಲೈನ್ ದುರಸ್ತಿಗಾಗಿ, ತುಂಬೆಯಿಂದ ನೀರು ಸ್ಥಗಿತಗೊಂಡಾಗ ಒಂದೆರಡು ದಿನ ನೀರು ಬಂದ್ ಆದರೆ ಮುಂದಿನ ಒಂದು ವಾರಗಳ ಕಾಲ ಈ ವಾರ್ಡ್‌ಗೆ ನೀರು ಪೂರೈಕೆ ನಿಲ್ಲುತ್ತದೆ.

'ನಮಗೆ ಪ್ರತಿದಿನ ಸುಮಾರು 8 ಗಂಟೆಗಳ ಕಾಲ ನೀರು ಪೂರೈಕೆಯಾಗುತ್ತದೆ ಎಂಬುದೇನೊ ನಿಜ. ಆದರೆ, ಪ್ರೆಶರ್ ಕಡಿಮೆ. ಇದರಿಂದಾಗಿ ನಮಗೆ ಅಗತ್ಯ ಇರುವಷ್ಟು ನೀರು ಬರುತ್ತಿಲ್ಲ. ಕಳೆದ ಒಂದು ತಿಂಗಳಿನಿಂದ ನೀರಿನ ಸಮಸ್ಯೆ ಅಧಿಕವಾಗಿದೆ' ಎಂದು ಸ್ಥಳೀಯರು ಅಳಲು ತೋಡಿಕೊಂಡಿದ್ದಾರೆ.

ನಮ್ಮ ವಾರ್ಡ್‌ಗೆ ಟ್ಯಾಂಕರ್ ಮೂಲಕ ನೀರು ಬರುವುದೇ ಇಲ್ಲ. ಅಗತ್ಯ ಇರುವವರು ಟ್ಯಾಂಕರ್ ಮೂಲಕ ನೀರು ನೀಡಿ ಎಂದು ಮಹಾನಗರ ಪಾಲಿಕೆಗೆ ವಿನಂತಿಸಿದರೆ, ಟ್ಯಾಂಕರ್ ಇಲ್ಲ ಎಂಬ ಉತ್ತರ ದೊರೆಯುತ್ತಿದೆ ಎನ್ನುತ್ತಾರೆ ಸ್ಥಳೀಯರು. ಫ್ಲ್ಯಾಟ್ ಸಹಿತ ಅಗತ್ಯ ಇರುವವರು ಖಾಸಗಿ ಟ್ಯಾಂಕರ್ ಮೂಲಕ ನೀರು ತರಿಸಿಕೊಳ್ಳುತ್ತಿದ್ದಾರೆ. ಈ ವಾರ್ಡ್‌ನಲ್ಲಿ ಸಾರ್ವಜನಿಕ ಬೋರ್ ವೆಲ್, ಬಾವಿಗಳು ಇಲ್ಲ. ಕೆಲ ಮನೆಗಳಲ್ಲಿ ಬಾವಿಗಳಿವೆ. ಆದರೆ, ಕೂಳೂರು ಫೆರಿ ಕ್ರಾಸ್ ರೋಡ್, ನಾಗಬ್ರಹ್ಮ ದೇವಸ್ಥಾನ ಪರಿಸರ, ಹಳೆ ಗೇಟು ರಸ್ತೆ ಮುಂತಾದ ಕಡೆಗಳಲ್ಲಿ ಡ್ರೈನೇಜ್ ಕೊಳಚೆ ಸೋರಿಕೆಯಾಗಿ ಬಾವಿ ನೀರು ಕಲುಷಿತಗೊಂಡಿದೆ.

ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಲ್‌ಬಾಗ್



ಅಳಕೆ ರಾಜಕಾಲುವೆಯಲ್ಲಿ ಒಳಚರಂಡಿ ನೀರು ಹರಿಯುತ್ತಿದ್ದು, ಹೂಳು ತುಂಬಿಕೊಂಡಿದೆ

ಭೋಜರಾವ್ ಲೇನ್, ಪ್ರಗತಿ ಸರ್ವಿಸ್ ಸ್ಟೇಶನ್ ಬಳಿ ಹಾಗೂ ಡೊಂಗರಕೇರಿ ವಾರ್ಡ್‌ನ ಬಹುತೇಕ ಕಡೆ ಮಳೆಗಾಲದಲ್ಲಿ ಕೃತಕ ನೆರೆ ಸೃಷ್ಟಿಯಾಗಿ ಜನತೆ ಭಾರಿ ತೊಂದರೆ ಅನುಭವಿಸುತ್ತಿದ್ದಾರೆ. ಮೂರ್‍ನಾಲ್ಕು ಗಂಟೆಗಳ ಕಾಲ ನಿರಂತರ ಮಳೆಯಾದರೆ ಮನೆಗೆ ನೀರು ನುಗ್ಗಿ ಇಲ್ಲಿನ ಜನತೆ ಇಡೀ ರಾತ್ರಿ ಜಾಗರಣೆ ಮಾಡುವಂತಾಗುತ್ತದೆ. ರಾಜಕಾಲುವೆಗಳಲ್ಲಿ ಸಮರ್ಪಕವಾಗಿ ಹೂಳೆತ್ತದೇ ಇರುವುದು ಕೃತಕ ನೆರೆಗೆ ಪ್ರಮುಖ ಕಾರಣ. ಈ ಬಾರಿ ಇದುವರೆಗೆ ಹೂಳೆತ್ತುವ ಕೆಲಸ ಆಗಿಲ್ಲ. ಮನಪಾ ಅಧಿಕಾರಿಗಳು ಇನ್ನಾದರೂ ರಾಜ ಕಾಲುವೆಗಳ ಹೂಳು ತೆಗೆಸಬೇಕು. ಈ ಬಾರಿ ಮಳೆಗಾಲದಲ್ಲಿ ಕೃತಕ ನೆರೆ ಸೃಷ್ಟಿಯಾಗದಂತೆ ಕ್ರಮ ಕೈಗೊಳ್ಳಬೇಕು.



■ ಶ್ರೀಕಾಂತ್ ಡಿ. ಶೆಣೈ, ಸ್ಥಳೀಯ ನಿವಾಸಿ

ಡೊಂಗರಕೇರಿ ವಾರ್ಡ್‌ನಲ್ಲಿ ಏಪ್ರಿಲ್, ಮೇ ತಿಂಗಳಿನಲ್ಲಿ ನೀರಿನ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ನೀರು ಪೂರೈಕೆ ಪೈಪ್‌ಲೈನ್‌ನಲ್ಲಿ ಪ್ರೆಶರ್ ಕೊರತೆಯಿಂದ ಜನರಿಗೆ ಅಗತ್ಯ ಇರುವಷ್ಟು ನೀರು ಲಭ್ಯವಾಗುತ್ತಿಲ್ಲ. ಕಳೆದ ಒಂದು ವರ್ಷದಿಂದ ನೀರು ಪೂರೈಕೆಯ ಅವಧಿಯನ್ನೂ ಕಡಿತಗೊಳಿಸಲಾಗಿದೆ. ಈ ಬಾರಿ ಇದುವರೆಗೆ ರಾಜಕಾಲುವೆಗಳ ಹೂಳು ತೆಗೆದಿಲ್ಲ. ಇದರಿಂದಾಗಿ ಇಲ್ಲಿನ ಜನತೆ ಈ ಮಳೆಗಾಲದಲ್ಲಿ ಕೃತಕ ನೆರೆಗೆ ಭಾರಿ ಸಂಕಷ್ಟ ಎದುರಿಸಬೇಕಾದೀತು. ಕೊನೆಯ ಕ್ಷಣಕ್ಕೆ ರಾಜ ಕಾಲುವೆ ಹೂಳೆತ್ತಲು ಆರಂಭಿಸಿದರೆ ಅರ್ಧಂ ಬರ್ಧ ಕೆಲಸ ನಡೆಸಲಾಗುತ್ತದೆ. ನಮ್ಮ ಅವಧಿಯಲ್ಲಿ ಕೃತಕ ನೆರೆ ತಡೆಗೆ ರಾಜಕಾಲುವೆಗಳಿಗೆ ಸುಮಾರು ನಾಲ್ಕು ಕೋಟಿ ರೂ. ವೆಚ್ಚದಲ್ಲಿ ಶಾಸಕರ ಸಹಕಾರದಿಂದ ತಡೆಗೋಡೆ ನಿರ್ಮಿಸಲಾಗಿದೆ. ವಾರ್ಡ್‌ನಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ನಡೆಸಲಾಗಿದೆ. ಡೊಂಗರಕೇರಿ ವೆಂಕಟರಮಣ ದೇವಸ್ಥಾನ ಮುಂಭಾಗದ ರಸ್ತೆ, ಮಹಮ್ಮಾಯಿ ದೇವಸ್ಥಾನ ರಸ್ತೆ, ಕುದ್ರೋಳಿ ದೇವಸ್ಥಾನ ರಸ್ತೆಯನ್ನು ಅಗಲೀಕರಣಗೊಳಿಸಿ ಕಾಂಕ್ರೀಟ್ ಅಳವಡಿಸಲಾಗಿದೆ. ಶಾರದಾ ವಿದ್ಯಾಲಯ ರಸ್ತೆ, ಕಲಾಕುಂಜ ರಸ್ತೆ, ಭೋಜರಾವ್ ಲೇನ್‌ನಲ್ಲಿ ರಸ್ತೆ ಕಾಂಕ್ರೀಟಿಕರಣ ನಡೆಸಲಾಗಿದೆ. ಅಳಕೆ ವೆಟ್‌ವೆಲ್ ಅಭಿವೃದ್ಧಿಪಡಿಸಲಾಗಿದ್ದು, 3 ಹೊಸ ಪಂಪ್ ಅಳವಡಿಸಲಾಗಿದೆ.



■ ಜಯಶ್ರೀ ಕುಡ್ವ, ಡೊಂಗರಕೇರಿ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್

ಮುಂದಿನ ವಾರ್ಡ್ –43
ಕುದ್ರೋಳಿ ಪರಿಸರದ ಸ್ಥಿತಿಗತಿ

ರಾಜಕಾಲುವೆಯಲ್ಲಿ ಡ್ರೈನೇಜ್ ನೀರು ಹರಿಯುತ್ತಿದೆ

ಡೊಂಗರಕೇರಿ ವಾರ್ಡ್‌ನಲ್ಲಿ ಒಟ್ಟು ಸುಮಾರು 4.50 ಕಿ.ಮೀ. ಉದ್ದಕ್ಕೆ ರಾಜ ಕಾಲುವೆ ಇದೆ. ಪ್ರಗತಿ ಬ್ರಿಡ್ಜ್‌ನಿಂದ ಮಂಡಿ ಬ್ರಿಡ್ಜ್‌ವರೆಗೆ, ಮಹಮ್ಮಾಯಿ ದೇವಸ್ಥಾನ ಬಳಿಯಿಂದ ಅಳಕೆ ಪ್ರಗತಿ ಬ್ರಿಡ್ಜ್–ವರೆಗೆ, ಮಣ್ಣಗುಡ್ಡೆ ಕಡೆಯಿಂದ ಕಂಬಳ ಕ್ರಾಸ್ ರೋಡ್ ಆಗಿ ಕುದ್ರೋಳಿ ಮೂಲಕ ಹೀಗೆ ಮೂರು ರಾಜಕಾಲುವೆ ಹರಿಯುತ್ತಿದೆ. ಬೇರೆ ಬೇರೆ ವಾರ್ಡ್‌ಗಳಿಂದ ಬರುವ ಈ ರಾಜಕಾಲುವೆಯಲ್ಲಿ ಡ್ರೈನೇಜ್ ನೀರು ಹರಿಯುತ್ತಿದ್ದು, ಡೊಂಗರಕೇರಿ ವಾರ್ಡ್‌ನ ಜನತೆ ಸಮಸ್ಯೆ ಅನುಭವಿಸುವಂತಾಗಿದೆ. ವರ್ಷವಿಡೀ ಇಲ್ಲಿನ ಬಹುತೇಕ ತೋಡುಗಳಲ್ಲಿ ಕೊಳಚೆ ನೀರು ಹರಿಯುತ್ತದೆ. ಕೆಲವೆಡೆ ಶೇಖರಣೆಯಾಗಿದೆ. ರಾಜಕಾಲುವೆಯಲ್ಲಿ ಡ್ರೈನೇಜ್ ನೀರು ಹರಿಯುವ ಕಾರಣ ಸುತ್ತಲಿನ ಪ್ರದೇಶ ವಾಸನೆಯುಕ್ತವಾಗಿದ್ದು, ಹಲವಾರು ವರ್ಷದ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಕೃತಕ ನೆರೆ ಇಲ್ಲಿ ಸಾಮಾನ್ಯ

ಮಳೆಗಾಲ ಬಂತೆಂದರೆ ಡೊಂಗರಕೇರಿ ವಾರ್ಡ್‌ನ ಜನತೆಗೆ ಕೃತಕ ನೆರೆಯ ಆತಂಕ ಶುರುವಾಗುತ್ತದೆ. ಇಲ್ಲಿನ ಭೋಜರಾವ್ ಲೇನ್, ಕುದ್ರೋಳಿ ಓಲ್ಡ್ ಗೇಟ್, ಡ್ಯಾನಿಷ್ ಅಪಾರ್ಟ್‌ಮೆಂಟ್, ಕಂಬ್ಳ ಕ್ರಾಸ್ ಮತ್ತು ನ್ಯೂ ಫೀಲ್ಡ್ ರೋಡ್ ಪ್ರದೇಶಗಳಲ್ಲಿ ಕೃತಕ ನೆರೆಯಿಂದ ಪ್ರತಿವರ್ಷ ಮನೆಗಳಿಗೆ ಮಳೆನೀರು ನುಗ್ಗುತ್ತದೆ. ನೂರಕ್ಕೂ ಅಧಿಕ ಮನೆಗಳು ಮಳೆನೀರಿನಿಂದ ಆವೃತವಾಗುತ್ತವೆ. ಮಹಮ್ಮಾಯಿ ದೇವಸ್ಥಾನ ರಸ್ತೆಯಲ್ಲೂ ಕೆಲವೊಮ್ಮೆ ಕೃತಕ ನೆರೆ ಉಂಟಾಗುತ್ತದೆ ಜೋರು ಮಳೆ ಬಂದಾಗ ಭೋಜ ರಾವ್ ಲೇನ್‌ನ ಗುಜರಾತಿ ಶಾಲೆ ಬಳಿ ನೆರೆ ಕಟ್ಟಿಟ್ಟ ಬುತ್ತಿ. ಭಾರಿ ಮಳೆ ಬಂದಾಗ, ರಾಜಕಾಲುವೆಯ ನೀರನು ಸಮುದ್ರ ಸ್ವೀಕರಿಸದ ಸಂದರ್ಭ ಇಲ್ಲಿ ಕೃತಕ ನೆರೆ ಸೃಷ್ಟಿಯಾಗುತ್ತದೆ. ಸಮರ್ಪಕ ವಾಗಿ ರಾಜಕಾಲುವೆ ಹೂಳೆತ್ತದ ಕಾರಣ ಸಮಸ್ಯೆ ಉಲ್ಬಣವಾಗುತ್ತಿದೆ.

ಏರಿಕೆಯಾಗುತ್ತಿರುವ ತಾಪಮಾನ

ಈ ಬಾರಿಯೂ ವಿಮೆ ಕೈ ಕೊಟ್ಟರೇ ದೇವರೇ ಗತಿ

ಮಿಥುನ್ ಕರ್ಲಪ್ಪಾಡಿ





ಸುಳ್ಯ: ಬೇಸಿಗೆಯಲ್ಲಿ ಸಾಮಾನ್ಯವಾಗಿ ಬಿಸಿಲಿನ ತಾಪಮಾನ ಪ್ರತಿ ವರ್ಷವು ಏರಿಕೆಯಾಗುತ್ತಿದ್ದು, ಸುಳ್ಯ ತಾಲೂಕಿನ ರೈತರ ಪಾಡು ಇದೀಗ ಹೇಳ ತೀರದಾಗಿದೆ.

ಕಳೆದ ಬಾರಿ ಮಳೆ ಜೊತೆಗೆ ತಾಪಮಾನವು ಹೆಚ್ಚಾಗಿ ಅಲ್ಪ ಸ್ವಲ್ಪ ಪ್ರಮಾಣದಲ್ಲಿದ್ದ ಬೆಳೆಯೂ ನೆಲಕಚ್ಚಿ ರೈತರು ಪ್ರತಿಭಟನೆ ನಡೆಸಿದ್ದರು. ಇದಕ್ಕೆ ಕೃಷಿಕರು ಅಲ್ಪ ಪ್ರಮಾಣದ ಪರಿಹಾರ ಪಡೆದುಕೊಂಡು ತೃಪ್ತರಾಗಿದ್ದರು. ಆದರೆ, ಈ ಬಾರಿಯು ಹವಮಾನ ವೈಪರೀತ್ಯ ಈಗಾಗಲೇ ಕಾಣಿಸುತ್ತಿದ್ದು ಬಿಸಿಲು ಹೆಚ್ಚಾಗಿದ್ದು ತಾಲೂಕಿನಲ್ಲಿ ಅಡಿಕೆ ಹಿಂಗಾರ ಒಡೆದು ನಳ್ಳಿಗಳು ಗೊನೆಯಿಂದ ರಟ್ಟುತ್ತಿದ್ದು ಮದ್ದು ಅಥವಾ ಸಿಂಪಡಣೆಯಲ್ಲಿ ನಿಯಂತ್ರಣಗಳು ಕಾಣಿಸುತ್ತಿಲ್ಲ. ಇದರ ಮಧ್ಯೆ ಬಹುತೇಕ ರೈತರು ತಮ್ಮ ಜೀವನ ಆಶ್ರಯಕ್ಕೆ ರಬ್ಬರ್ ಮೊರೆ ಹೋಗಿದ್ದು ಅದು ಬಿಸಿಲ ತಾಪಮಾನಕ್ಕೆ ಹಾಲು ಇಳುವರಿಯು ಕಡಿಮೆಯಾಗಿದೆ. ಜೊತೆಗೆ ಇದೀಗ ತೋಟಗಳಿಗೆ ನೀರು ಉಣಿಸಿದರೂ ನೀರು ಸಾಕಾಗದೇ ಕಾಳುಮೆಣಸು ಬಳ್ಳಿಗಳು ಸಾಯುತ್ತಿದೆ. ಕೊಕ್ಕೊ ಸೇರಿದಂತೆ ಉಪ ಬೆಳೆಗಳು ರೈತನ ಕೈ ಹಿಡಿಯುತ್ತಿಲ್ಲ.

ಒಟ್ಟಾರೆಯಾಗಿ ಹವಾಮಾನ ವೈಪರೀತ್ಯದಿಂದ ರೈತರು ಅನುಭವಿಸುತ್ತಿರುವ ಸಮಸ್ಯೆಗಳನ್ನು ಮನಗಂಡು ಕೇಂದ್ರ ಸರಕಾರ ವಿಮೆ ಯೋಜನೆಯನ್ನು ಜಾರಿಗೆ ತಂದಿದ್ದು ಕಳೆದ ಬಾರಿ ಮಳೆ ಮಾಪನ ಯಂತ್ರಗಳು ಸರಿಯಾಗಿ ಕಾರ್ಯ ನಿರ್ವಹಿಸದೆ ಪರಿಹಾರದಲ್ಲೂ ವ್ಯತ್ಯಯವಾಗಿ ಕಳೆದ ಕೆಲ ದಿನಗಳ ಹಿಂದೆ ರೈತರು ಸುಳ್ಯ ಕ್ಷೇತ್ರದ ಕಡಬ ತಾಲೂಕಿನಲ್ಲಿ ಪ್ರತಿಭಟನೆಯನ್ನು ನಡೆಸಲಾಗಿತ್ತು. ಜೊತೆಗೆ ಕಳೆದ ಸಾಲಿನ ಪರಿಹಾರ ಪೂರ್ಣ ಪ್ರಮಾಣದಲ್ಲಿ ಸಿಗದೇ ಇದ್ದು ಈ ಬಾರಿ ಈಗಲೇ ಬೆಳೆಗಳು ಕೈ ಕೊಡುವ ಎಲ್ಲಾ ಲಕ್ಷಣಗಳು ಗೋಚರಿಸುತ್ತಿದೆ.

ರೈತರಿಗೆ ಕಂಟಕವಾದ ರೋಗ ಭಾಧೆಗಳು: ತಾಲೂಕಿನ ನಾನಾ ಭಾಗಗಳಲ್ಲಿ ಹಳದಿ ರೋಗ ಬಾಧಿಸಿ ಅಡಿಕೆ ಕೃಷಿ ನಾಶವಾದರೆ ಇತ್ತ ಎಲೆಚುಕ್ಕಿ ಎನ್ನುವ ಇನ್ನೊಂದು ಮಹಾಮಾರಿ ಒಕ್ಕರಿಸಿ ಅಡಿಕೆ ಮರಗಳು ಸಾಯುತ್ತಿದೆ. ಜೊತೆಗೆ ಒಂದು ಪ್ರತ್ಯೇಕ ಬಗೆಯ ಕೀಟದ ಕಾರಣಕ್ಕೆ ಚಿರಿಗಳು ಕರಟಿ ಮರಗಳು ಸಾವನ್ನಪ್ಪುತ್ತಿದ್ದು ತಾಲೂಕಿನ ರೈತ ಇದೀಗ ತಲೆ ಮೇಲೆ ಕೈ ಹೊತ್ತು ಕುಳಿತುಕೊಳ್ಳುವಂತಾಗಿದೆ. ಈ ಬಾರಿಯಾದರೂ ಸರಕಾರ ಸರಿಯಾದ ಕ್ರಮದಲ್ಲಿ ಮಳೆ ಮಾಪನ ಮತ್ತು ತಾಪಮಾನ ಪರಿಶೀಲನೆ ನಡೆಸಿ ರೈತರಿಗೆ ಸರಿಯಾದ ರೀತಿಯಲ್ಲಿ ಪರಿಹಾರ ಸಿಗುವಂತೆ ಮಾಡಲಿ ಎಂಬುದು ಕೃಷಿಕರ ಆಗ್ರಹ.

ಫಸಲಿನಲ್ಲಿ ಇಳಿಕೆ

ಈ ಬಾರಿಯು ತಾಪಮಾನ ಹೆಚ್ಚಾಗಿ ಹಿಂಗಾರಗಳು ಕರಟಿ ಹೋಗುತ್ತಿದ್ದು, ಬೆಂಕಿಯಂತಹ ಸೆಕೆಗೆ ಕೃಷಿಗಳು ಸಂಪೂರ್ಣ ನಾಶವಾಗುವ ಲಕ್ಷಣಗಳು ಗೋಚರಿಸುತ್ತಿವೆ. ಜೊತೆಗೆ ಅಡಿಕೆ ಮರಗಳು ಬಿಸಿಲಿಗೆ ಹಳದಿ ಬಣ್ಣಕ್ಕೆ ತಿರುಗುತ್ತಿದ್ದು ಈ ಬಾರಿಯೂ ಉತ್ತಮ ಫಸಲು ನಿರೀಕ್ಷೆಯು ಗಗನ ಕುಸುಮವಾಗಲಿದೆಯೋ ಎನ್ನುವ ಸಂಶಯ ಮೂಡುತ್ತಿದೆ

■ ಸದಾನಂದ, ಕೃಷಿಕ

ಏಳು ಆಪ್ ಸಂಸದರ ಬಿಜೆಪಿ ಸೇರ್ಪಡೆ ಶೀಘ್ರ

ಪುಟ ೧➡ಈ ಸಂದರ್ಭದಲ್ಲಿ ಸಂದೀಪ್ ಪಾಠಕ್ ಮತ್ತು ಅಶೋಕ್ ಮಿತ್ತಲ್ ಸಹ ಉಪಸ್ಥಿತರಿದ್ದರು. ಇನ್ನು ಹರ್ಭಜನ್ ಸಿಂಗ್, ರಾಜಿಂದರ್ ಗುಪ್ತಾ, ವಿಕ್ರಮ್ ಸಾಹ್ನಿ ಮತ್ತು ಸ್ವಾತಿ ಮಲಿವಾಲ್ ಕೂಡ ಈ ನಿರ್ಧಾರಕ್ಕೆ ಬೆಂಬಲ ನೀಡಿದ್ದಾರೆ ಎಂದು ತಿಳಿಸಿದರು. ನಾನು ಪಕ್ಷದ ಕೆಲವು ಚಟುವಟಿಕೆಗಳಲ್ಲಿ ಭಾಗಿಯಾಗಲು ಇಚ್ಛಿಸಲಿಲ್ಲ. ಅವುಗಳಲ್ಲಿ ಭಾಗವಹಿಸದ ಕಾರಣ ನಾನು ಅವರ ವಿಶ್ವಾಸಕ್ಕೆ ಅರ್ಹನಾಗಲಿಲ್ಲ. ನಮ್ಮ ಮುಂದೆ ಎರಡು ಆಯ್ಕೆಗಳು ಇದ್ದವು? ಒಂದು ರಾಜಕೀಯ ಮತ್ತು ಕಳೆದ 15-16 ವರ್ಷಗಳಲ್ಲಿ ಮಾಡಿದ ಸಾರ್ವಜನಿಕ ಸೇವೆಯನ್ನು ತ್ಯಜಿಸುವುದು; ಇನ್ನೊಂದು ಸಕಾರಾತ್ಮಕ ರಾಜಕೀಯದ ಮೂಲಕ ಮುಂದುವರಿಯುವುದು. ನಾವು ಎರಡನೇ ಆಯ್ಕೆಯನ್ನು ಆರಿಸಿಕೊಂಡಿದ್ದೇವೆ ಎಂದು ಚಡ್ಡಾ ಸ್ಪಷ್ಟಪಡಿಸಿದರು. ಸಂದೀಪ್ ಪಾಠಕ್ ಮಾತನಾಡಿ, ನಾನು 10 ವರ್ಷಗಳಿಂದ ಈ ಪಕ್ಷದ ಜತೆ ಇದ್ದೆ. ಇಂತಹ ಪರಿಸ್ಥಿತಿ ಬರುತ್ತದೆ ಎಂದು ನಾನು ಎಂದಿಗೂ ಭಾವಿಸಿರಲಿಲ್ಲ. ಆದರೆ ಇಂದು ನಾನು ಎಎಪಿಗೆ ವಿದಾಯ ಹೇಳುತ್ತಿದ್ದೇನೆ ಎಂದರು. ಇತ್ತೀಚೆಗೆ ರಾಜ್ಯಸಭೆಯಲ್ಲಿ ಎಎಪಿ ಉಪನಾಯಕ ಸ್ಥಾನದಿಂದ ಚಡ್ಡಾರನ್ನು ತೆಗೆದುಹಾಕಲಾಗಿತ್ತು ಮತ್ತು ಅವರ ಬದಲು ಅಶೋಕ್ ಮಿತ್ತಲ್ ನೇಮಕಗೊಂಡಿದ್ದರು.

ಪಂಜಾಬ್‌ನಲ್ಲೂ ಆಪ್‌ಗೆ ಸಂಕಷ್ಟ!

ಪುಟ ೧➡ರಾಜ್ಯಸಭಾ ಸದಸ್ಯರಿಗಿಂತ ಭಿನ್ನವಾಗಿ, ಪಂಜಾಬ್‌ನ ಶಾಸಕರು ಮುಖ್ಯಮಂತ್ರಿ ಭಗವಂತ್ ಮಾನ್ ನೇತೃತ್ವದ ಸರ್ಕಾರದೊಂದಿಗೆ ನೇರವಾಗಿ ಸಂಬಂಧ ಹೊಂದಿದ್ದಾರೆ. ಅವರ ರಾಜಕೀಯ ಭವಿಷ್ಯವೂ ಸರ್ಕಾರದ ಸ್ಥಿರತೆಯ ಮೇಲೆ ಅವಲಂಬಿತವಾಗಿರುವುದರಿಂದ, ತಕ್ಷಣದ ಬಂಡಾಯ ಸಂಭವಿಸುವ ಸಾಧ್ಯತೆ ಕಡಿಮೆ ಎಂದು ಅಂದಾಜಿಸಲಾಗಿದೆ.

ದೇಶದ ವಿವಿಧೆಡೆ ಏಕಕಾಲಕ್ಕೆ ಇಡಿ ದಾಳಿ | ತನಿಖೆ ಚುರುಕು

ಹಣ ಅಕ್ರಮ ವರ್ಗಾವಣೆ ಜಾಲ ಪತ್ತೆ

ಬೆಂಗಳೂರು: ಆರ್ಥಿಕ ನಿಯಮಗಳನ್ನು ಗಾಳಿಗೆ ತೂರಿ ವಿದೇಶಿ ಡೆಬಿಟ್ ಕಾರ್ಡ್‌ಗಳ ಮೂಲಕ ಕೋಟ್ಯಂತರ ರೂ. ಹಣವನ್ನು ಅಕ್ರಮವಾಗಿ ದೇಶಕ್ಕೆ ವರ್ಗಾಯಿಸುತ್ತಿದ್ದ ಬೃಹತ್ ಜಾಲವೊಂದನ್ನು ಜಾರಿ ನಿರ್ದೇಶನಾಲಯ (ಇ.ಡಿ.) ಪತ್ತೆಹಚ್ಚಿದೆ. ಈ ಸಂಬಂಧ ಫೆಮಾ ಕಾಯ್ದೆಯಡಿ ದೇಶದ ವಿವಿಧೆಡೆ ಏಕಕಾಲಕ್ಕೆ ದಾಳಿ ನಡೆಸಲಾಗಿದ್ದು, ತನಿಖೆ ಚುರುಕುಗೊಂಡಿದೆ.

ದಿ ತಿಮೋತಿ ಇನಿಶಿಯೇಟಿವ್ ಎಂಬ ಸಂಸ್ಥೆಯು ಎಫ್‌ಸಿಆರ್‌ಎ ಅಡಿಯಲ್ಲಿ ನೋಂದಣಿಯಾಗದೆ ಅಕ್ರಮವಾಗಿ ಹಣಕಾಸು ಚಟುವಟಿಕೆ ನಡೆಸುತ್ತಿರುವ ಬಗ್ಗೆ ಇಡಿಗೆ ಮಾಹಿತಿ ಲಭ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಏ.18 ಮತ್ತು 19ರಂದು ದೇಶದ ಆರು ಪ್ರಮುಖ ಸ್ಥಳಗಳಲ್ಲಿ ಅಧಿಕಾರಿಗಳು ಶೋಧ ಕಾರ್ಯ ನಡೆಸಿದ್ದಾರೆ.

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸಿಕ್ಕಿಬಿದ್ದ ವ್ಯಕ್ತಿ: ಮಿಕಾ ಮಾರ್ಕ್ ಎಂಬಾತ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿದೇಶಿ ಡೆಬಿಟ್ ಕಾರ್ಡ್‌ಗಳೊಂದಿಗೆ ಸಿಕ್ಕಿಬಿದ್ದಿದ್ದಾನೆ. ಈತನ ಬಳಿ ಇದ್ದ 24 ವಿದೇಶಿ ಡೆಬಿಟ್ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇವನು ಈ ಅಕ್ರಮ ಜಾಲದ ಪ್ರಮುಖ ಕೊಂಡಿಯಾಗಿದ್ದಾನೆ ಎಂದು ಶಂಕಿಸಲಾಗಿದೆ.

ಕಾರ್ಯಾಚರಣೆಯ ವಿಧಾನ: ಅಮೆರಿಕದ ಟ್ರೂಸ್ಟ್ ಬ್ಯಾಂಕ್‌ಗೆ ಸೇರಿದ ಡೆಬಿಟ್ ಕಾರ್ಡ್‌ಗಳನ್ನು ಭಾರತಕ್ಕೆ ತಂದು, ಅವುಗಳ ಮೂಲಕ ವಿವಿಧ ರಾಜ್ಯಗಳ ಎಟಿಎಂಗಳಿಂದ ನಿರಂತರವಾಗಿ ನಗದು ವಿತ್‌ಡ್ರಾ ಮಾಡಲಾಗುತ್ತಿತ್ತು. ಈ ಹಣವನ್ನು ಟಿಟಿಐ ಸಂಸ್ಥೆಯ ಚಟುವಟಿಕೆಗಳಿಗೆ ಬಳಸಲಾಗುತ್ತಿತ್ತು. ವಿಶೇಷವಾಗಿ ನಕ್ಸಲ್ ಪೀಡಿತ ಪ್ರದೇಶಗಳಾದ ಛತ್ತೀಸ್‌ಗಢದ ಬಸ್ತಾರ್ ಮತ್ತು ಧಮ್ತಾರಿ ಭಾಗಗಳಲ್ಲಿ ಸುಮಾರು 6.5 ಕೋಟಿ ರೂ.ಗಳನ್ನು ಈ ಕಾರ್ಡ್‌ಗಳ ಮೂಲಕವೇ ಪಡೆಯಲಾಗಿದೆ ಎಂಬುದು ಆತಂಕಕಾರಿ ವಿಚಾರವಾಗಿದೆ.

ಬೃಹತ್ ಮೊತ್ತದ ಅವ್ಯವಹಾರ: ನವೆಂಬರ್ 2025 ರಿಂದ ಏ.2026ರ ವರೆಗಿನ ಅಲ್ಪ ಅವಧಿಯಲ್ಲಿ ಸುಮಾರು 95 ಕೋಟಿ ರೂ. ಗಳನ್ನು ಇದೇ ರೀತಿ ಭಾರತಕ್ಕೆ ಅಕ್ರಮವಾಗಿ ರವಾನಿಸಲಾಗಿದೆ ಎಂದು ಇ.ಡಿ. ಅಂದಾಜಿಸಿದೆ. ಈ ಇಡೀ ಪ್ರಕ್ರಿಯೆಯನ್ನು ವಿದೇಶದಿಂದ ನಿಯಂತ್ರಿಸಲಾಗುವ ಆನ್‌ಲೈನ್ ಬಿಲ್ಲಿಂಗ್ ಪ್ಲಾಟ್ ಫಾರ್ಮ್ ಮೂಲಕ ನಿರ್ವಹಿಸಲಾಗುತ್ತಿತ್ತು. ದಾಳಿಯಲ್ಲಿ ಇಡಿ ಅಧಿಕಾರಿಗಳು ಒಟ್ಟು 25 ವಿದೇಶಿ ಡೆಬಿಟ್ ಕಾರ್ಡ್‌ಗಳು, 40 ಲಕ್ಷ ರೂ. ನಗದು ಮತ್ತು ಹತ್ತಾರು ಡಿಜಿಟಲ್ ಪುರಾವೆಗಳನ್ನು ವಶಪಡಿಸಿಕೊಂಡಿದ್ದಾರೆ.

ಸಂಘರ್ಷ ತಡೆಗೆ ಕ್ರಮ: ಖಂಡ್ರೆ



ಬೆಂಗಳೂರು: ಹೊಸತನಕ್ಕೆ ಒಗ್ಗಿಕೊಂಡಾಗ ಮಾತ್ರ ಸಮಸ್ಯೆಗಳಿಗೆ ಪರಿಹಾರ ದೊರಕಲು ಸಾಧ್ಯ. ಅರಣ್ಯ ಅಧಿಕಾರಿಗಳು ಕೂಡ ಮಾನವ-ವನ್ಯಜೀವಿ ಸಂಘರ್ಷಕ್ಕೆ ವಿನೂತನ ಮಾರ್ಗೋಪಾಯ ಸಂಶೋಧಿಸಬೇಕು ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.

ಅರಣ್ಯ ಭವನದಲ್ಲಿ ನಡೆದ 2 ದಿನಗಳ ಕೆಡಿಪಿ ಮತ್ತು ಎಂ.ಎಂ.ಆರ್. ಸಭೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಇ-ಗಸ್ತು ಮತ್ತು ಅತ್ಯಾಧುನಿಕ ಉಪಕರಣಗಳ ಬಳಕೆಯಿಂದ ಮಾನವ ವನ್ಯಜೀವಿ ಸಂಘರ್ಷ ತಡೆಗಟ್ಟಬಹುದಾಗಿದೆ. ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಮತ್ತು ಅಭಿವೃದ್ಧಿಪಡಿಸಲು ಸೂಚಿಸಿದರು.

ಅರಣ್ಯ ಪ್ರದೇಶದಲ್ಲಿ ಮರಗಳನ್ನು ಅಕ್ರಮವಾಗಿ ಕಡಿಯುವುದು, ವನ್ಯಜೀವಿಗಳ ಅಸಹಜ ಸಾವು, ಕಳ್ಳಬೇಟೆ, ಅರಣ್ಯ ಒತ್ತುವರಿ, ಮಾನವ-ವನ್ಯಜೀವಿ ಸಂಘರ್ಷ ಇದು ಮುಖ್ಯವಾಗಿ ನಮ್ಮ ಮುಂದಿರುವ ಸವಾಲು. ಪ್ರತಿಯೊಂದು ಜೀವವೂ ಅಮೂಲ್ಯವಾಗಿದ್ದು, ವನ್ಯಜೀವಿಗಳಿಂದ ಯಾವುದೇ ಸಾವು ಸಂಭವಿಸದಂತೆ ಶಾಶ್ವತ ಪರಿಹಾರ ಒದಗಿಸಲು ಕಾಡಿನೊಂದಿಗೆ ಹೆಚ್ಚು ಒಡನಾಟ ಹೊಂದಿರುವ ನೀವೆಲ್ಲರೂ ಶ್ರಮಿಸಬೇಕು. ಯಾವ ಪ್ರದೇಶದಲ್ಲಿ ಹೆಚ್ಚಿನ ವನ್ಯಜೀವಿ ಸಂಘರ್ಷವಿದೆ? ಈ ಸಂಘರ್ಷಕ್ಕೆ ಕಾರಣವೇನು? ಅದನ್ನು ಪರಿಹರಿಸಲು ಏನು ಮಾಡಬೇಕು? ಎಂಬ ಬಗ್ಗೆ ಅಧಿಕಾರಿಗಳು ತಜ್ಞರೊಂದಿಗೆ ಸಮಾಲೋಚಿಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕು ಎಂದರು.

ಅರಣ್ಯ ಸಿಬ್ಬಂದಿ ಕಾಡಿನಂಚಿನ ಜನರೊಂದಿಗೆ ಸೌಹಾರ್ದತೆ ಹೆಚ್ಚಿಸಿಕೊಳ್ಳಬೇಕು. ವಿವಿಧ ಪ್ರತಿಷ್ಠಾನಗಳಿಗೆ ಸಫಾರಿಯಿಂದ ಬರುವ ಹಣದಿಂದ ಕಾಡಿನಂಚಿನಲ್ಲಿ ಜನಸಂಪರ್ಕ ಸಭೆ ನಡೆಸಬೇಕು, ಸೌಕರ್ಯ ಒದಗಿಸಬೇಕು. ಸರ್ಕಾರ ಕೈಗೊಳ್ಳುವ ಕಾರ್ಯಕ್ರಮಗಳನ್ನು, ಆದೇಶಗಳನ್ನು ಅನುಷ್ಠಾನಗೊಳಿಸಬೇಕು ಎಂದು ಹೇಳಿದರು.

ಇದೇ ವೇಳೆ ಅರಣ್ಯ ಇಲಾಖೆಯ ವಿವಿಧ ವೃತ್ತಗಳ ಸಿಬ್ಬಂದಿ ಛಾಯಾಚಿತ್ರ ತೆಗೆದು, ಸಂಶೋಧನೆಯ ಮೂಲಕ ಹೊರ ತಂದಿರುವ ಹಲವು ಕೃತಿಗಳನ್ನು ಈಶ್ವರ ಖಂಡ್ರೆ ಬಿಡುಗಡೆ ಮಾಡಿದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಕೇವಲ ವೈಯಕ್ತಿಕ ಸುಖಕ್ಕಾಗಿ ಪ್ರಾರ್ಥಿಸುವ ಬದಲು ಸಮಾಜದ, ದೇಶದ ಪರವಾಗಿ ಪ್ರಾರ್ಥಿಸೋಣ – ಡಾ. ವೀರೇಂದ್ರ ಹೆಗ್ಗಡೆ
– ಹಾಗಂತ ಹೇಳಿದಂತೆ ಮಾಡುವ ಏಕೈಕ ದೇಶ ನಮ್ಮ ಹೆಮ್ಮೆಯ ಭಾರತ. ಲೋಕಾಃ ಸಮಸ್ತಾ ಸುಖಿನೋ ಭವಂತು ಆದರೆ ಆದೇ ತಾನೇ?

ದಿನ ಭವಿಷ್ಯ

ಮೇಷ
ಮಾಮೂಲಾಗಿ ದಿನ ಆರಂಭಗೊಂಡರೂ ಬಳಿಕ ಮಹತ್ವದ ಬೆಳವಣಿಗೆ ಉಂಟಾಗಲಿದೆ. ಸಮಾರಂಭದಲ್ಲಿ ಭಾಗಿ. ಬಂಧುಮಿತ್ರರ ಭೇಟಿ.

ವೃಷಭ
ಜವಾಬ್ದಾರಿ ಹೆಚ್ಚಳ. ಇಷ್ಟವಿಲ್ಲದಿದ್ದರೂ ಕೆಲಸ ಮಾಡಲೇ ಬೇಕು. ಆತ್ಮೀಯರ ಜತೆ ಭಾವನೆ ಹಂಚಿಕೊಳ್ಳಲು ಬಯಸುವಿರಿ.

ಮಿಥುನ
ನಿಮಗೆ ಸಂಬಂಧಿಸಿ ಮುಖ್ಯ ಬೆಳವಣಿಗೆ ಸಂಭವಿಸಬಹುದು. ಆ ಬಗ್ಗೆ ಎಚ್ಚರದಿಂದಿರಿ. ಆರೋಗ್ಯ ಕಾಳಜಿ ವಹಿಸಿ. ಕೌಟುಂಬಿಕ ಸಹಕಾರ.

ಕಟಕ
ಆಪ್ತರ ಭೇಟಿಯು ನಿಮ್ಮ ದಿನದ ಸಂತೋಷ ಹೆಚ್ಚಿಸಲಿದೆ. ಆರ್ಥಿಕ ಅಭಿವೃದ್ಧಿ. ನಿಮ್ಮ ಕಾರ್ಯದಲ್ಲಿ ತೃಪ್ತಿಕರ ಫಲಿತಾಂಶ ಕಾಣುವಿರಿ.

ಸಿಂಹ
ವೃತ್ತಿಯಲ್ಲಿ ಒತ್ತಡ. ಸಹನೆಯ ವರ್ತನೆ ಮುಖ್ಯ. ಆರ್ಥಿಕ ಲಾಭ. ಆರೋಗ್ಯ ಸಮಸ್ಯೆ ಕಾಡಬಹುದು. ಮಿತಾಹಾರ ಒಳಿತು.

ಕನ್ಯಾ
ಒತ್ತಡ ತುಂಬಿದ ದಿನ. ಕಾಲಮಿತಿಯಲ್ಲಿ ಕೆಲಸ ಪೂರ್ಣಗೊಳಿಸಬೇಕು. ಆಪ್ತರ ಜತೆಗಿನ ಭಿನ್ನಮತ ನಿವಾರಿಸಿಕೊಳ್ಳಿ. ದೈಹಿಕ ಆಲಸ್ಯ ಕಾಡಬಹುದು.

ತುಲಾ
ತೃಪ್ತಿ ತರುವ ದಿನ. ಅದಕ್ಕೆ ಕಾರಣ ನಿಮ್ಮ ಮುಖ್ಯ ಉದ್ದೇಶ ಸಾಧನೆ. ಆರ್ಥಿಕ ಅಭಿವೃದ್ಧಿ. ವಿರೋಧಿಗಳು ಮೌನ. ಆಪ್ತರಿಂದ ಸಹಕಾರ.

ವೃಶ್ಚಿಕ
ಸಣ್ಣ ವಿಷಯ ಕೆಲವೊಮ್ಮೆ ಕಡೆಗಣಿಸ ಬಾರದು. ಗಂಭೀರ ಪರಿಣಾಮ ಸಂಭವ. ಭಾವನಾತ್ಮಕ ಏರುಪೇರು ಅನುಭವಿಸುವಿರಿ.

ಧನು
ನಿಮ್ಮ ಸತತ ಪ್ರಯತ್ನದಿಂದ ಉದ್ದೇಶ ಸಾಧನೆ. ಧನ ಪ್ರಾಪ್ತಿ. ಅನಿರೀಕ್ಷಿತ ಲಾಭ ಖುಷಿ ತರಲಿದೆ. ಕೌಟುಂಬಿಕ ಅಸಹಕಾರ ನಿವಾರಣೆ.

ಮಕರ
ಊಹಾಪೋಹಕ್ಕೆ ಬೆಲೆ ಕೊಡಬೇಡಿ. ವಸ್ತುಸ್ಥಿತಿ ಅರಿತು ವ್ಯವಹರಿಸಿ. ಕೆಲವರ ವಿರೋಧ ಬೇಡ. ಹೊಂದಿಕೊಂಡು ಬಾಳಿ.

ಕುಂಭ
ಸವಾಲಿನ ದಿನ. ಏಳು-ಬೀಳು ಎರಡನ್ನೂ ಎದುರಿಸುವಿರಿ. ಆಪ್ತರ ಜತೆ ಭಾವನೆ ಹಂಚಿಕೊಂಡು ಸಮಾಧಾನ ಪಡೆಯುವಿರಿ.

ಮೀನ
ಎಲ್ಲರ ದೃಷ್ಟಿ ನಿಮ್ಮ ಮೇಲೆ. ನಿಮ್ಮ ಸೋಲನ್ನೆ ಕೆಲವರು ಬಯಸುವರು. ಅವರಿಗೆ ಅಂತಹ ಸಂತೋಷ ನೀಡಬೇಡಿ. ಸಂಬಂಧದಲ್ಲಿ ಒಡಕು.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 1,5,8,2

ಒಳಮೀಸಲಾತಿ ಹಂಚಿಕೆಯಲ್ಲಿ ಸರ್ಕಾರದ ನಡೆ ಖಂಡನೀಯ: ವಿಪಕ್ಷ ನಾಯಕ

ಪಲಾಯನ ಸೂತ್ರ: ಅಶೋಕ



ಬೆಂಗಳೂರು: ಒಳಮೀಸಲಾತಿಯನ್ನು ಹಂಚಿಕೆ ಮಾಡುವುದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಸ್ಕೇಪ್ ಸೂತ್ರ ಅನುಸರಿಸಿದ್ದಾರೆ. ಇದರಿಂದ ಯಾವುದೇ ಸಮುದಾಯಕ್ಕೆ ಪ್ರಯೋಜನ ಸಿಗುವುದಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಒಳಮೀಸಲಾತಿಯನ್ನು ಹಂಚಿಕೆ ಮಾಡುವುದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಫಲರಾಗಿದ್ದಾರೆ. ಒಂದು ಕಡೆ ಯುವಜನರು ಸರ್ಕಾರಿ ನೌಕರಿಗಾಗಿ ಹೋರಾಟ ಮಾಡುತ್ತಿದ್ದರೆ, ಮತ್ತೊಂದೆಡೆ ಪರಿಶಿಷ್ಟ ಸಮುದಾಯದವರು ಒಳಮೀಸಲಾತಿಗಾಗಿ ಹೋರಾಟ ಮಾಡುತ್ತಿದ್ದಾರೆ. ಇವೆರಡರಿಂದ ತಪ್ಪಿಸಿಕೊಳ್ಳಲು ಕಾಂಗ್ರೆಸ್ ಸರ್ಕಾರ ಈ ನಾಟಕವಾಡುತ್ತಿದೆ.

ಬಿಜೆಪಿ ಸರ್ಕಾರವಿದ್ದಾಗ ಶೇ. 17 ಮೀಸಲು ನೀಡಿತ್ತು. ನ್ಯಾಯಾಲಯಕ್ಕೆ ಈ ಬಗ್ಗೆ ಮನವರಿಕೆ ಮಾಡಬೇಕಿತ್ತು. ಇದರ ಬದಲು ಸರ್ಕಾರ ಎಸ್ಕೇಪ್ ಸೂತ್ರ ಅನುಸರಿಸಿದ್ದು, ಇದರಿಂದ ಪರಿಶಿಷ್ಟ ಸಮುದಾಯಕ್ಕೆ ನಿಜವಾದ ಪ್ರಯೋಜನ ದೊರೆತಿಲ್ಲ ಎಂದರು.

ಬಿಜೆಪಿ ನೀಡಿದ್ದ ಶೇ. 17 ಮೀಸಲನ್ನು ಶೇ. 15ಕ್ಕೆ ಇಳಿಸಿದ್ದು ಏಕೆ? ಇದನ್ನು ಕೋರ್ಟ್‌ನಲ್ಲಿ ಪ್ರಶ್ನಿಸುವ ಬದಲು ಕಡಿಮೆ ಮಾಡಿರುವುದರಿಂದ ಎಲ್ಲರಿಗೂ ಮೀಸಲಿನಲ್ಲಿ ಅನ್ಯಾಯವಾಗುತ್ತದೆ. ಸರ್ಕಾರ 52 ಜಾತಿಗಳು ಸೇರಿದಂತೆ ಯಾವುದೇ ಜಾತಿ ಸಮುದಾಯಗಳನ್ನು ಕರೆದು ಚರ್ಚೆ ಮಾಡಿಲ್ಲ. ಎಲ್ಲ ಸಮುದಾಯದ ಮುಖಂಡರು ಹಾಗೂ ಸ್ವಾಮೀಜಿಗಳ ಅಭಿಪ್ರಾಯ ಪಡೆದು ಈ ತೀರ್ಮಾನ ಕೈಗೊಳ್ಳಬೇಕಿತ್ತು ಎಂದು ಅಭಿಪ್ರಾಯಪಟ್ಟರು.

ಸರ್ಕಾರ ವಿಷಬೀಜ ಬಿತ್ತುತ್ತಿದೆ: ಕಾರಜೋಳ ಆರೋಪ



ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ದಲಿತರಿಗೆ ಒಳಮೀಸಲಾತಿ ನೀಡುವ ಬದಲು ಗೊಂದಲ ಸೃಷ್ಟಿಸಿ ವಿಷಬೀಜ ಬಿತ್ತಿ ಬೀದಿಯಲ್ಲಿ ನಿಂತು ಬಡಿದಾಡುವಂತೆ ಮಾಡಿದೆ. ನಮಗೆ ಜನ ಇವರನ್ನು ಕ್ಷಮಿಸುವುದಿಲ್ಲ ಎಂದು ಸಂಸದ ಗೋವಿಂದ ಕಾರಜೋಳ ಆರೋಪಿಸಿದ್ದಾರೆ. ರಾಜ್ಯ ಬಿಜೆಪಿ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಅಹಿಂದ ನಾಯಕ ಎನಿಸಿಕೊಳ್ಳಲು ಯೋಗ್ಯತೆ ಇಲ್ಲ. ದಲಿತ ಸಮುದಾಯಗಳಿಗೆ ಅವರು ದೊಡ್ಡ ಮೋಸ ಮಾಡಿದ್ದಾರೆ. ಮೂರುವರ್ಷ ಕಾಂಗ್ರೆಸ್ ರಾಜ್ಯದಲ್ಲಿ ಒಳಮೀಸಲಾತಿಗಾಗಿ ಹೋರಾಟ ನಡೆಯುತ್ತಿತ್ತು. ಜನಸಂಖ್ಯೆಗೆ ಅನುಗುಣವಾಗಿ ಎಸ್ಸಿ ಮತ್ತು ಎಸ್ಟಿ ಮೀಸಲಾತಿ ಹೆಚ್ಚಳ ಆಗಬೇಕೆಂಬ ಬೇಡಿಕೆಯಿದೆ. ಆದರೆ, ಇದನ್ನು ಲೆಕ್ಕಿಸದ ಕಾಂಗ್ರೆಸ್ ಸರ್ಕಾರ ಕೋರ್ಟ್ ಆದೇಶವನ್ನೇ ಬದಲಿಸಿ ಸರಿಯಾಗಿ ಮೀಸಲಾತಿ ಅನುಷ್ಠಾನ ಮಾಡಲಿಲ್ಲ ಎಂದರು. ಮೀಸಲಾತಿ ವಿಷಯದಲ್ಲಿ ಜಾತಿಗಳ ಮಧ್ಯೆ ಜಗಳ ಹಚ್ಚಲಾಗಿದೆ. ಕೋರ್ಟ್ ಆದೇಶ ಮಾರ್ಪಾಡು ಮಾಡಿ ಕಡಿಮೆ ಮೀಸಲಾತಿ ನೀಡುವ ನಿಮ್ಮನ್ನು ಅಹಿಂದ ನಾಯಕ ಎಂದು ಒಪ್ಪಿಕೊಳ್ಳಬೇಕಾ? ಒಳಮೀಸಲಾತಿಗಾಗಿ ರಾಜ್ಯದಲ್ಲಿ ಹೋರಾಟ ತೀವ್ರಗೊಂಡಾಗ ನ್ಯಾ. ನಾಗಮೋಹನ್ ದಾಸ್ ಆಯೋಗವನ್ನು ಕಾಂಗ್ರೆಸ್ ಸರ್ಕಾರ ನೇಮಿಸಿತ್ತು. ನ್ಯಾ. ನಾಗಮೋಹನ್ ದಾಸ್ ಅವರ ವರದಿ ತರಿಸಿಕೊಂಡಿತ್ತು. ಬಿಜೆಪಿ ಸರ್ಕಾರವಿದ್ದಾಗ ದಲಿತರ ಹೋರಾಟಕ್ಕೆ ಮನ್ನಣೆ ನೀಡಿ ಬಸವರಾಜ ಬೊಮ್ಮಾಯಿ ಅವರು ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿಗೆ ಶೇ.15ರಿಂದ 17, ಎಸ್‌ಟಿಗೆ ಶೇ.3 ರಿಂದ 7ಕ್ಕೇರಿಸಿದ್ದರು. ಸಾಮಾಜಿಕ ನ್ಯಾಯದ ಅಡಿಯಲ್ಲಿ ನಾಲ್ಕು ವರ್ಗೀಕರಣ ಮಾಡಿದರು ಎಂದು ವಿವರಿಸಿದರು.

₹20 ಲಕ್ಷ ಲಂಚದ ಬೇಡಿಕೆ: ರಮೇಶ್

ಬೆಂಗಳೂರು: ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯೂಎಂಎಲ್)ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಕರೀಗೌಡ ನೇರಿದಂತೆ ಕೆಲವು ಅಧಿಕಾರಿಗಳ ಮೇಲೆ ಸಾಲು ಸಾಲು ಆರೋಪ ಕೇಳಿಬಂದಿದೆ.

ಸರ್ಕಾರದ ಆದೇಶದಂತೆ ವರ್ಗಾವಣೆಗೊಂಡರೂ 27 ಮಂದಿ ಪರಿಸರ ಅಭಿಯಂತರರು ಕಾನೂನು ಬಾಹಿರವಾಗಿ ಸಂಸ್ಥೆಯಲ್ಲೇ ಉಳಿಸಿಕೊಳ್ಳಲು ತಲಾ 20 ಲಕ್ಷ ರೂ.ಗಳ ಲಂಚದ ಬೇಡಿಕೆ ಇಟ್ಟಿದ್ದಾರೆ ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಗಂಭೀರ ಆರೋಪ ಮಾಡಿದ್ದಾರೆ. ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ಕಳೆದ 6-7 ವರ್ಷಗಳಿಂದ ಅಂಟಿಕೊಂಡಿದ್ದ 3 ಮಂದಿ ಕಾರ್ಯಪಾಲಕ ಅಭಿಯಂತರರು ಮತ್ತು 24 ಮಂದಿ ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಏ.13ರಂದು ರಾಜ್ಯ ಸರ್ಕಾರವು ಸಾಮೂಹಿಕವಾಗಿ ವರ್ಗಾವಣೆ ಮಾಡಿ ಆದೇಶ ಹೊರಡಿಸಿತ್ತು. ಸರ್ಕಾರದ ಈ ಕ್ರಮವು ಕಾನೂನುಬದ್ಧವಾಗಿದ್ದರೂ, ಇದನ್ನು ತಡೆಹಿಡಿಯಲು ಸಂಸ್ಥೆಯ ಒಳಗೇ ಬೃಹತ್ ಸಂಚು ರೂಪಿಸಲಾಗಿದೆ ಎಂದು ರಮೇಶ್ ದೂರಿದ್ದಾರೆ.

ಕೋರ್ಟ್ ಮೆಟ್ಟಿಲೇರಿದ ಗುತ್ತಿಗೆದಾರ

ಬೆಂಗಳೂರಿನ ಘನತ್ಯಾಜ್ಯ ನಿರ್ವಹಣಾ ಟೆಂಡರ್ ಪ್ರಕ್ರಿಯೆಯಲ್ಲಿ ಭಾರೀ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಕೇಳಿಬಂದಿದ್ದು, ಈ ಸಂಬಂಧ ಗುತ್ತಿಗೆದಾರ ಎಸ್.ಎನ್.ಬಾಲಸುಬ್ರಮಣ್ಯಂ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಎಸ್‌ಡಬ್ಲ್ಯೂಎಂಎಲ್) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಕರೀಗೌಡ ಅವರು ತಮಗೆ ಹಾಗೂ ಸರ್ಕಾರದ ಮೇಲಧಿಕಾರಿಗಳ ಪರವಾಗಿ ಶೇ. 15ರಷ್ಟು ಕಮಿಷನ್ ನೀಡುವಂತೆ ಒತ್ತಾಯಿಸಿದ್ದಾರೆ. ಈ ಸಂಬಂಧ ಎಫ್‌ಐಆರ್ ದಾಖಲಿಸಿ ಎಸ್‌ಐಟಿ ತನಿಖೆಗೆ ನಿರ್ದೇಶಿಸಬೇಕೆಂದು ಕೋರಿ ಬಾಲಸುಬ್ರಮಣ್ಯಂ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯನ್ನು ಹೈಕೋರ್ಟ್‌ನ ಏಕಸದಸ್ಯ ಪೀಠ ವಿಚಾರಣೆ ನಡೆಸುತ್ತಿದೆ.

ಸಿಇಟಿ ವೇಳೆ 5 ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣ

3 ಮೇಲ್ವಿಚಾರಕರ ಅಮಾನತು

ಬೆಂಗಳೂರು: ಇಲ್ಲಿನ ಮಡಿವಾಳದ ಕೃಪಾನಿಧಿ ಕಾಲೇಜಿನಲ್ಲಿ ಕೆಸಿಇಟಿ (ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ) ವೇಳೆ ಐವರು ವಿದ್ಯಾರ್ಥಿಗಳಿಗೆ ಜನಿವಾರ ತೆಗೆಯುವಂತೆ ಒತ್ತಾಯಿಸಿದ ನಂತರ ವಿವಾದ ಭುಗಿಲೆದ್ದಿದ್ದು, ಈ ಸಂಬಂಧ ಮೂವರು ಪರೀಕ್ಷಾ ಮೇಲ್ವಿಚಾರಕರನ್ನು ಅಮಾನತು ಮಾಡಲಾಗಿದೆ ಎಂದು ಕಾಲೇಜಿನ ಆಡಳಿತ ಮಂಡಳಿ ತಿಳಿಸಿದೆ.



ಮಡಿವಾಳದ ಕೃಪಾನಿಧಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಸಿಇಟಿ ಬರೆಯಲು ಬಂದಿದ್ದ ವಿದ್ಯಾರ್ಥಿಗಳಿಗೆ ಅಲ್ಲಿನ ಸಿಬ್ಬಂದಿ ಜನಿವಾರವನ್ನು ಬಲವಂತವಾಗಿ ತೆಗೆಸಿದ್ದರು ಎಂಬ ಗಂಭೀರ ಆರೋಪ ಕೇಳಿಬಂದಿದೆ. ವಿದ್ಯಾರ್ಥಿಗಳಿಗೆ ಜನಿವಾರ ತೆಗೆಯುವಂತೆ ಹೇಳಿದ್ದು ಮಾತ್ರವಲ್ಲದೇ ಜನಿವಾರ ತೆಗೆಯಲು ಒಪ್ಪದ ವಿದ್ಯಾರ್ಥಿಗೆ ಮನೆಗೆ ವಾಪಸ್ ಕಳುಹಿಸುತ್ತೇವೆ, ಪರೀಕ್ಷೆ ಬರೆಯಲು ಬಿಡಲ್ಲ ಎಂದು ಸಿಬ್ಬಂದಿ ಧಮ್ಕಿ ಹಾಕಿದ ಆರೋಪ ಕೂಡ ಕೇಳಿಬಂದಿದೆ. ಇದೀಗ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪರೀಕ್ಷಾ ಮೇಲ್ವಿಚಾರಕರಾದ ಸುಧಾಕರ್ ಡಿ., ಸರಿತಾ ಆರ್., ಗಿರಿಜಮ್ಮ ಎಂಬುವರನ್ನು ಅಮಾನತು ಮಾಡಲಾಗಿದೆ.

ತನಿಖಾ ಸಮಿತಿ ರಚನೆ

ಬೆಂಗಳೂರು: ಕೃಪಾನಿಧಿ ಪಿಯು ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ನಡೆದ ಜನಿವಾರ ಬಿಚ್ಚಿಸಿದ ಘಟನೆಗೆ ಸಂಬಂಧಿಸಿದಂತೆ ಸಮಗ್ರ ವಿಚಾರಣೆ ನಡೆಸಲು ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ತನಿಖಾ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಘಟನೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಬೆಂಗಳೂರು ನಗರ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಾಲ್ವರು ಅಧಿಕಾರಿಗಳ ವಿಶೇಷ ತನಿಖಾ ತಂಡ ರಚಿಸಲಾಗಿದೆ.

ಪ್ರಕರಣ ದಾಖಲು

ಕೆಸಿಇಟಿ ಬರೆಯಲು ಬಂದಿದ್ದ ವಿದ್ಯಾರ್ಥಿಯ ಜನಿವಾರವನ್ನು ಬಲವಂತವಾಗಿ ತೆಗೆಸಿದ ಆರೋಪದ ಮೇಲೆ ನಗರದ ಕೃಪಾನಿಧಿ ಕಾಲೇಜಿನ ಸಿಬ್ಬಂದಿ ವಿರುದ್ಧ ಮಡಿವಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮಡಿವಾಳ ಠಾಣಾ ಸರಹದ್ದಿನಲ್ಲಿರುವ ಕೃಪಾನಿಧಿ ಕಾಲೇಜಿನಲ್ಲಿ ಕೆಸಿಇಟಿ ಭೌತಶಾಸ್ತ್ರ ಪರೀಕ್ಷೆ ನಡೆಯುತ್ತಿತ್ತು. ಈ ವೇಳೆ ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿಯನ್ನು ಕಾಲೇಜಿನ ಪ್ರವೇಶ ದ್ವಾರದಲ್ಲಿ ತಪಾಸಣೆ ನಡೆಸುತ್ತಿದ್ದ ಸಿಬ್ಬಂದಿ, ಆತ ಧರಿಸಿದ್ದ ಜನಿವಾರವನ್ನು ತೆಗೆದುಹಾಕುವಂತೆ ಸೂಚಿಸಿದ್ದಾರೆ. ಇದು ನಮ್ಮ ಧಾರ್ಮಿಕ ಭಾವನೆಗೆ ಧಕ್ಕೆ ತಂದಿದೆ ಎಂದು ವಿದ್ಯಾರ್ಥಿಯ ಪೋಷಕರು ಆರೋಪಿಸಿದ್ದಾರೆ. ಈ ಕುರಿತು ವಿದ್ಯಾರ್ಥಿಯ ಪೋಷಕರು ನೀಡಿದ ದೂರಿನನ್ವಯ ಮಡಿವಾಳ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಪರೀಕ್ಷಾ ತಪಾಸಣಾ ಕರ್ತವ್ಯದಲ್ಲಿದ್ದ ಕಾಲೇಜಿನ ಮೂವರು ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಪರೀಕ್ಷಾ ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ಅಗತ್ಯವಿದ್ದರೂ, ಧಾರ್ಮಿಕ ಸಂಕೇತಗಳನ್ನು ತೆಗೆಸುವ ಮೂಲಕ ವಿವಾದ ಸೃಷ್ಟಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಸದ್ಯ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

5.25: 5.25: 4.5

ಪುಟ ೧➡**ರೋಸ್ಟರ್ ಬಿಂದು ಗೊಂದಲ ಪರಿಹಾರ:** ರೋಸ್ಟರ್ ಬಿಂದು ಗೊಂದಲವನ್ನು ಸರಿಪಡಿಸಲು ಎಲ್ಲರಿಗೂ ಒಪ್ಪಿತವಾಗುವ ತೀರ್ಮಾನ ಕೈಕೊಂಡಿದ್ದೇವೆ. ಆ ಪ್ರಕಾರ, ಕಡಿಮೆ ಸಂಖ್ಯೆಯ ಹುದ್ದೆಗಳಿದ್ದಾಗ ಅವುಗಳನ್ನು ಎಸ್‌ಸಿ ಜನರಲ್ ಎಂದು ಮಾಡಲಾಗುವುದು. ಆ ಹುದ್ದೆಗೆ ಎ, ಬಿ, ಸಿ ವರ್ಗದವರು ಸ್ಪರ್ಧಿಸಬಹುದು. ಅಲ್ಲದೇ ಸಿ ವರ್ಗದ ಹುದ್ದೆಗಳಲ್ಲಿ ಶೇ.20ರಷ್ಟು ಹುದ್ದೆಗಳನ್ನು 59 ಅಲೆಮಾರಿ ಜಾತಿಗಳಿಗೆ ಮೀಸಲಾಗಿ ಇಡಲಾಗುವುದು ಎಂದು ಸಿದ್ದರಾಮಯ್ಯ ವಿವರಿಸಿದರು.

ಒಳಮೀಸಲಾತಿ ವಿಚಾರ ತೀರ್ಮಾನ ಆಗಿರುವುದರಿಂದ ವಿವಿಧ ಇಲಾಖೆಗಳ 56,432 ಹುದ್ದೆಗಳ ಭರ್ತಿಗೆ ಈ ಹಿಂದೆ ಹೊರಡಿಸಿರುವ ಅಧಿಸೂಚನೆಯನ್ನು ಹಿಂಪಡೆದು ತಕ್ಷಣ ಹೊಸದಾಗಿ ಅಧಿಸೂಚನೆ ಹೊರಡಿಸಲಾಗುವುದು. ಉಳಿದ ಹುದ್ದೆಗಳನ್ನು ಹಂತ-ಹಂತವಾಗಿ ಪ್ರತಿ ವರ್ಷ ಭರ್ತಿ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಶೇ.24 ಮೀಸಲಾತಿ ಕಲ್ಪಿಸಲು ಸರ್ಕಾರ ಬದ್ಧ: ನಮ್ಮ ಸರ್ಕಾರವು ಶೇ.24 ಮೀಸಲಾತಿಗೆ ಅಂದರೆ ಪರಿಶಿಷ್ಟ ಜಾತಿ ಶೇ.17 ಮತ್ತು ಪರಿಶಿಷ್ಟ ಪಂಗಡ ಶೇ.7 ತೀರ್ಮಾನಕ್ಕೆ ಬದ್ಧವಾಗಿದೆ. ಭವಿಷ್ಯದಲ್ಲಿ ಶೇ.17ರಷ್ಟು ಮೀಸಲಾತಿ ಕಲ್ಪಿಸಬಹುದು ಎಂದು ಕೋರ್ಟ್ ತೀರ್ಪು ಸರ್ಕಾರದ ಪರವಾಗಿ ಬಂದಲ್ಲಿ ಈ ಹಿಂದೆ ಸಚಿವ ಸಂಪುಟದಲ್ಲಿ ತೆಗೆದುಕೊಂಡಿರುವ 6:6:5 ಮೀಸಲಾತಿ ತೀರ್ಮಾನದಂತೆ ಶೇ.6ನ್ನು ಬ್ಯಾಕ್‌ಲಾಗ್ ಎಂದು ತೀರ್ಮಾನಿಸಲಾಗುವುದು ಎಂದರು.

ಒಳಮೀಸಲಾತಿ ಸಂಬಂಧಿಸಿ ಏನೇನಾಗಿತ್ತು?

ಪುಟ ೧➡ಅದರಲ್ಲಿ 6:5:4:1:1 ಹಂಚಿಕೆ ಮಾಡಲಾಗಿತ್ತು. ಆದರೆ, ಸಂಪುಟದಲ್ಲಿ ಎಡಗೈ ಸಮುದಾಯಗಳಿಗೆ ಶೇ.6, ಬಲಗೈ ಸಮುದಾಯಗಳಿಗೆ ಶೇ.6 ಹಾಗೂ ಇತರೆ ಶೇ.5 ಹಂಚಿಕೆ ಮಾಡಿದ್ದೆವು. ಬಳಿಕ ಕಾನೂನು ಮಾಡಲಾಗಿತ್ತು. ಆದರೆ, ರೋಸ್ಟರ್ ಬಿಂದುವಿನಲ್ಲಿ ಗೊಂದಲ ನಿರ್ಮಾಣವಾಗಿ ಅಲೆಮಾರಿ ಸಮುದಾಯ ನ್ಯಾಯಾಲಯದ ಮೆಟ್ಟಿಲೇರಿತ್ತು. ನಾಗಮೋಹನ್ ದಾಸ್ ಆಯೋಗವು ಎಸ್‌ಸಿ-ಎಸ್‌ಟಿ ಮೀಸಲಾತಿ ಪ್ರಮಾಣ ಶೇ.24 ನೀಡಿತ್ತು. ಹೀಗಾಗಿ ಮೀಸಲಾತಿ ಪ್ರಮಾಣ ಶೇ.56 ಕ್ಕೇರಿಕೆ ಆಗಿತ್ತು. ಹೀಗಾಗಿ, ಶೇ.50 ಮಿತಿ ಮೀರಬಾರದು ಎಂದು ನ್ಯಾಯಾಲಯ ಆದೇಶ ನೀಡಿತ್ತು. ಇಂದಿರಾ ಸಹಾನಿ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಹೈಕೋರ್ಟ್ ಪುನರುಚ್ಚಾರ ಮಾಡಿತ್ತು ಎಂದು ಸಿದ್ದರಾಮಯ್ಯ ವಿವರಿಸಿದರು. ಒಳ ಮೀಸಲಾತಿಗೆ ಸಂಬಂಧಿಸಿದಂತೆ ತಾಂತ್ರಿಕ ಸಮಿತಿ ಮಾಡಬೇಕೆಂದು ಕಳೆದ ಸಂಪುಟ ಸಭೆಯಲ್ಲಿ ತೀರ್ಮಾನ ಆಗಿತ್ತು. ಆ ಸಮಿತಿ ಶುಕ್ರವಾರ ವರದಿ ನೀಡಿದೆ. ಅದರಲ್ಲಿ ಶೇ.15 ಪ್ರಮಾಣದಂತೆ ದಲಿತ ಎಡಗೈ ಸಮುದಾಯಕ್ಕೆ ಶೇ.5.3, ಎಡಗೈ ಸಮುದಾಯಕ್ಕೆ ಶೇ.5.3 ಹಾಗೂ ಶೇ.4.4 ಹಂಚಿಕೆ ಮಾಡುವಂತೆ ತಿಳಿಸಿತ್ತು. ಆದರೆ, ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆದ ಬಳಿಕ ಮೀಸಲಾತಿ ಪ್ರಮಾಣವನ್ನು 5.25: 5.25: 4.5 ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು.



> ಯಾರಿಗೂ ಅನ್ಯಾಯವಾಗದಂತೆ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ರೋಸ್ಟರ್ ಬಿಂದು ಬಗ್ಗೆ ವಿಶೇಷವಾಗಿ ಸಿ ಗುಂಪಿನವರಿಗೆ ಆತಂಕವಿತ್ತು. ಇದೀಗ ಎ, ಬಿ, ಸಿ ಯಾರಿಗೂ ಅನ್ಯಾಯವಾಗದಂತೆ ಅದರಲ್ಲೂ ಸಿ ಗುಂಪಿನವರಿಗೆ ಶೇ.20 ಮೀಸಲಾತಿ ನೀಡಲಾಗಿದೆ. ಬಿಜೆಪಿ ಎಸ್‌ಸಿಗೆ ಶೇ.17 ಮೀಸಲಾತಿ ಇದ್ದಾಗಲೂ ಇತರರಿಗೆ ಶೇ.4.5 ಒಳ ಮೀಸಲು ನೀಡಿತ್ತು. ಕಾಂಗ್ರೆಸ್ ಸರ್ಕಾರ ಶೇ.15ರಲ್ಲೂ ಶೇ.4.5 ಒಳ ಮೀಸಲು ಕೊಟ್ಟಿದೆ.
>
> ■ **ಶಿವರಾಜ್ ತಂಗಡಗಿ,** ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

ಈ ಸಂದರ್ಭದಲ್ಲಿ ಹಿರಿಯ ಸಚಿವರಾದ ಎಚ್.ಕೆ.ಪಾಟೀಲ್, ಡಾ.ಜಿ.ಪರಮೇಶ್ವರ, ಕೆ.ಎಚ್.ಮುನಿಯಪ್ಪ, ಡಾ. ಎಚ್.ಸಿ. ಮಹದೇವಪ್ಪ, ಆರ್.ಬಿ.ತಿಮ್ಮಾಪುರ, ಶಿವರಾಜ್ ಬಿ.ತಂಗಡಗಿ, ಪ್ರಿಯಾಂಕ್ ಖರ್ಗೆ, ಡಾ.ಎಂ.ಸಿ. ಸುಧಾಕರ್, ಬೈರತಿ ಸುರೇಶ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಉಪಸ್ಥಿತರಿದ್ದರು.

ಸಮಾಜದ ಶ್ರೇಯಸ್ಸಿಗೆ ಸಂಘದ ಸೇವೆ

ಪುಟ ೧➡ಹಡ್ಸನ್ ಸಂಸ್ಥೆಯು ಆಯೋಜಿಸಿದ ನ್ಯೂ ಇಂಡಿಯಾ ಕಾನ್ಫರೆನ್ಸ್‌ನಲ್ಲಿ ಸಂವಾದ ಗೋಷ್ಠಿಯಲ್ಲಿ ಲೇಖಕ ವಾಲ್ಟರ್ ರುಸೆಲ್ ಜತೆ ಚರ್ಚೆ ಸಂದರ್ಭ ಹೊಸಬಾಳೆ ಈ ರೀತಿ ಹೇಳಿದರು.

ಸರ್ವಾಧಿಕಾರದ ಪ್ರಶ್ನೆಯೇ ಇಲ್ಲ: ಆರೆಸ್ಸೆಸ್‌ನ ಧನಾತ್ಮಕ ವಿಚಾರಗಳನ್ನು ಪ್ರಚಾರ ಮಾಡಿಲ್ಲ, ಬದಲಾಗಿ ಆರೆಸ್ಸೆಸ್‌ಗೆ ವಿರುದ್ಧವಾದ ಸಂಗತಿಗಳನ್ನೇ ಸದಾ ಪ್ರಚಾರ ಮಾಡಲಾಗುತ್ತದೆ. ಆದರೆ, ನಾವು ಮಾತ್ರ ಭಾರತೀಯ ಕು ಕ್ಲುಕ್ಸ್ ಕ್ಲಾನ್ ಅಲ್ಲ ಎಂದು ಹೊಸಬಾಳೆ ಪುನರುಚ್ಚರಿಸಿದರು. ಹಿಂದು ತತ್ತ್ವ ಸಿದ್ಧಾಂತಗಳು ಮತ್ತು ಸಂಸ್ಕೃತಿಗಳ ಪ್ರಕಾರ ಇಡೀ ಜಗತ್ತೇ ಒಂದು ಪರಿವಾರವಿದ್ದಂತೆ ಮತ್ತು ಯಾವ ಕಾರಣಕ್ಕೂ ಸರ್ವಾಧಿಕಾರವನ್ನು ಪ್ರತಿಪಾದಿಸಲ್ಲ. ನಾವು ಜೀವಿ-ನಿರ್ಜೀವಿಗಳಲ್ಲೂ ಏಕತೆಯನ್ನು ಕಾಣುತ್ತೇವೆ. ಹಿಂದುಗಳ ಮೂಲ ಸಿದ್ಧಾಂತ ಇದಾಗಿರುವಾಗ ಸರ್ವಾಧಿಕಾರವಾದದ ಪ್ರಮೇಯವೇ ಉದ್ಭವಿಸುವುದಿಲ್ಲ.

ಹೊಸಬಾಳೆ ಗೌರವಾರ್ಥ ಅಮೆರಿಕದ ಭಾರತೀಯ ಸಮುದಾಯ ಗುರುವಾರ ಸಂಜೆ ವರ್ಜಿನಿಯಾ ಆರೆನಗರದಲ್ಲಿ ಸಾರ್ವಜನಿಕ ಸತ್ಕಾರಕೂಟ ಕೂಡ ಆಯೋಜಿಸಿತು. ಬಹಳಷ್ಟು ಸಂಖ್ಯೆಯಲ್ಲಿ ಭಾರತೀಯರು ಸತ್ಕಾರಕೂಟದಲ್ಲಿ ಭಾಗಿಗಳಾಗಿದ್ದರು.

ಯಾವುದೇ ರಾಷ್ಟ್ರದ ಮೇಲೆ ಹಿಂದುಗಳು ದಾಳಿ ಮಾಡಿಲ್ಲ

ಪುಟ ೧➡ಆರೆಸ್ಸೆಸ್ ಭಾರತೀಯ ಸಂಸ್ಕೃತಿ ಮತ್ತು ನಾಗರೀಕತೆ ಭಾವನೆಗಳಲ್ಲಿ ಒಂದಾಗಿರುವ ಸ್ವಯಂಸೇವಾ ಆಂದೋಲನವಾಗಿದೆ. ಭಾರತದ ಪ್ರಾಚೀನ ಸಮಾಜ ವ್ಯವಸ್ಥೆ ಹಾಗೂ ರಾಷ್ಟ್ರದ ಸಾಂಸ್ಕೃತಿಕ ಗುಣವಿಶೇಷಗಳು ಮತ್ತು ನಾಗರೀಕತೆಯ ಮೌಲ್ಯಗಳಿಂದ ಪ್ರೇರಿತ ಜನರ ಸ್ವಯಂಸೇವಾ ಆಂದೋಲನವಾಗಿದೆ ಆರೆಸ್ಸೆಸ್.

ಇದನ್ನೇ ಹಿಂದು ಸಂಸ್ಕೃತಿ ಎಂದು ಕರೆಯಲಾಗುತ್ತೆ. ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ತುಂಬಲು, ಚಾರಿತ್ರ್ಯ ನಿರ್ಮಾಣ ಮತ್ತು ಸಮುದಾಯ ಸೇವಾಭಾವ ಮೂಡಿಸಲು ಹಾಗೂ ಸಮಾಜ ಸಂಘಟನೆಗಾಗಿ ಆರೆಸ್ಸೆಸ್ ನಿತ್ಯ ಒಂದು ತಾಸು ಅವಧಿಯ ಸಭೆ ಅಥವಾ ಸಾಪ್ತಾಹಿಕ ಸಭೆಗಳ ಆಯೋಜಿಸುತ್ತೆ. ಶಾಖೆಗಳೆಂದು ಕರೆಯಲ್ಪಡುವ ಈ ಒಂದು ತಾಸಿನ ಸಭೆಯಲ್ಲಿ ಬದುಕಿನ ಮೌಲ್ಯಗಳನ್ನು ಸ್ವಯಂಸೇವಕರಿಗೆ ನಾವು ಪರಿಚಯಿಸುತ್ತೇವೆ. ಆರೆಸ್ಸೆಸ್ ದೃಷ್ಟಿಕೋನದಲ್ಲಿ ಹಿಂದು ಅಸ್ಮಿತೆ ನಾಗರೀಕತೆ ಆಧಾರಿತ ವಿನಾ ಧಾರ್ಮಿಕ ಅಸ್ಮಿತೆ ಅಲ್ಲ ಎಂದು ಹೊಸಬಾಳೆ ವಿವರಿಸಿದರು. ಚರಿತ್ರೆಯ ತಪ್ಪು ವಿಶ್ಲೇಷಣೆ ಮತ್ತು ರಾಜಕೀಯ ಹಿತಾಸಕ್ತಿಗಳೇ ಅಲ್ಪಸಂಖ್ಯಾತ ಗುಂಪುಗಳು ಮತ್ತು ನೆರೆ ರಾಷ್ಟ್ರಗಳೊಂದಿಗಿನ ಗೊಂದಲಗಳಿಗೆ ಮೂಲ ಕಾರಣ. ಅಲ್ಪಸಂಖ್ಯಾತ ಸಮುದಾಯಗಳ ಜತೆ ಸಾಗಿರುವ ಮಾತುಕತೆಗಳು ತಪ್ಪುಕಲ್ಪನೆಗಳ ನಿವಾರಿಸಲು ತೀರಾ ಮುಖ್ಯ. ರಾಜಕೀಯ ನಾಯಕತ್ವ ಸಹಿತ ವಿವಿಧ ವಿಚಾರಗಳು ನೆರೆರಾಷ್ಟ್ರಗಳ ನಡುವಣ ಉದ್ವಿಗ್ನತೆಗಳಿಗೆ ಕಾರಣ. ಸಮಸ್ಯೆ ಇರುವುದು ಒಂದೇ ಒಂದು ನೆರೆ ರಾಷ್ಟ್ರದೊಂದಿಗೆ ಮತ್ತು ಆ ರಾಷ್ಟ್ರ ಕೂಡ ಭಾರತಾಂಬೆಯ ಗರ್ಭದಿಂದಲೇ ಜನಿಸಿದ ರಾಷ್ಟ್ರವಾಗಿದೆ. ಈ ರಾಷ್ಟ್ರವೀಗ ನಮಗೆ ನೆರೆ ರಾಷ್ಟ್ರವಾಗಿದೆ, ಇದಕ್ಕೂ ಮಿಗಿಲಾಗಿ ಸಮಸ್ಯೆಗಳನ್ನು ಸೃಜಿಸಲೆಂದೇ ಹಲವು ಜನರು ಈ ರಾಷ್ಟ್ರದ ಹಿಂದಿದ್ದಾರೆ ಎಂದು ಆರೋಪಿಸಿದರು.

83 ಸಾವಿರ ಶಾಖೆಗಳು

ಆರೆಸ್ಸೆಸ್ 83 ಸಾವಿರ ನಿತ್ಯ ಶಾಖೆಗಳನ್ನು ನಡೆಸುತ್ತದೆ. ಸಾಮಾಜಿಕ ಸೌಹಾರ್ದತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಸ್ವಯಂಸೇವಕರಲ್ಲಿ ಸೇವಾ ಮನೋಭಾವ ಮೂಡಿಸುವುದು ಮತ್ತು ಬದುಕಿನ ಮೌಲ್ಯಗಳನ್ನು ಕಲಿಸುವುದು ಶಾಖೆಗಳ ಮೂಲೋದ್ದೇಶವಾಗಿದೆ.

ಬದುಕಿನ ಅನ್ಯಾನ್ಯ ರಂಗಗಳ ನಾನಾ ವಯೋಮಿತಿಯ ಜನರು ಆರೆಸ್ಸೆಸ್ ಸ್ವಯಂಸೇವಕರಾಗಿದ್ದಾರೆ. ಪ್ರಾಕೃತಿಕ ವಿಕೋಪಗಳ ಸಂದರ್ಭ ಪರಿಹಾರ ಕಾರ್ಯಗಳಲ್ಲಿ ಮುಂಚೂಣಿಯಲ್ಲಿರುವ ಆರೆಸ್ಸೆಸ್ ಶಿಕ್ಷಣ, ಆರೋಗ್ಯ, ಆತ್ಮರಕ್ಷಣೆ , ಗ್ರಾಮೀಣಾಭಿವೃದ್ಧಿ ಮತ್ತು ಪರಿಸರಾತ್ಮಕ ವಿಚಾರಗಳಲ್ಲೂ ಸಕ್ರಿಯವಾಗಿ ಕಾರ್ಯತತ್ಪರವಿದೆ. ಒಂದಷ್ಟು ಗೊಂದಲಗಳ ಹೊರತಾಗಿಸಿದರೆ ಸಾಂಸ್ಕೃತಿಕ ಮೌಲ್ಯಗಳು ಮತ್ತು ಆಧುನೀಕರಣ ಖಂಡಿತ ತದ್ವಿರುದ್ಧವಲ್ಲ. ಇವು ಜತೆ ಜತೆಯಾಗಿ ಸಾಗಬಲ್ಲುವು.

ಸಾಂಸ್ಕೃತಿಕ ಮೌಲ್ಯಗಳು ಮತ್ತು ಆಧುನೀಕರಣ ಎರಡನ್ನೂ ಕಾಲಕ್ಕನುಗುಣವಾಗಿ ಅಳವಡಿಸಿಕೊಳ್ಳೋದು ಮುಖ್ಯ. ಆಧುನೀಕರಣವು ಕೈಗಾರಿಕೀಕರಣ, ತಂತ್ರಜ್ಞಾನ ಮತ್ತು ವೈಯಕ್ತಿಕವಾದಗಳಿಗೆ ಹೇತುವಾದರೂ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಮೌಲ್ಯಗಳ ಜತೆ ಸಾಗಬಲ್ಲುದು. ಈಚಿನ ದಶಕಗಳಲ್ಲಿ ಹಲವು ಸಮಾಜಗಳಲ್ಲಿ ಸಂಸ್ಕೃತಿ ಮತ್ತು ಆಧುನೀಕತೆಗಳು ಜತೆಜತೆಯಾಗಿ ಸಾಗುವುದನ್ನು ಕಾಣಬಹುದಾಗಿದೆ ಎಂದು ಹೇಳಿದರು.

ಭಾರತ ವಿಶ್ವಗುರು ಆಗುವುದು ಖಚಿತ

ಪುಟ ೧➡'ಇದು ನಡೆಯುತ್ತದೆಯೋ ಇಲ್ಲವೋ ಎಂಬ ಗೊಂದಲ ಬೇಡ. ಯಾವುದು ವಿಧಿಯಲ್ಲಿದೆಯೋ ಅದು ನಡೆಯುತ್ತದೆ,' ಎಂದು ರಾಮ ಮಂದಿರ ಚಳವಳಿಯನ್ನು ಉದಾಹರಣೆಯಾಗಿ ನೀಡಿ ವಿವರಿಸಿದರು. 'ನಮ್ಮ ನಿರ್ಧಾರಕ್ಕೆ ಅನುಗುಣವಾಗಿ ಹಂತ ಹಂತವಾಗಿ ಕೆಲಸ ಮಾಡಿದರೆ ಭಾರತ ಬಲಶಾಲಿ, ಸತ್ವಶಾಲಿ ಮತ್ತು ವಿಶ್ವಗುರುವಾಗುತ್ತದೆ,' ಎಂದು ಅವರು ಹೇಳಿದರು.

ಭಾರತವನ್ನು ನಿಜವಾಗಿ ಅರ್ಥ ಮಾಡಿಕೊಳ್ಳಬೇಕಾದರೆ ಮೊದಲು ಭಾರತವನ್ನು ಆಳವಾಗಿ ಅರ್ಥ ಮಾಡಿಕೊಂಡು, ಆ ನಂತರ ದೈನಂದಿನ ಜೀವನದಲ್ಲಿ ಅದನ್ನು ಬದುಕಬೇಕು ಎಂದು ಭಗವತ್ ಸಲಹೆ ನೀಡಿದರು. 'ಭಾರತ ಮಾತೆಯನ್ನು ಪೂಜಿಸಬೇಕಾದರೆ ನಾವು ನಾವೇ ಭಾರತರಾಗಬೇಕು,' ಎಂದು ಹೇಳಿದರು.

ದೇಶವನ್ನು 150 ವರ್ಷಗಳ ವಸಾಹತುಶಾಹಿ ಅಥವಾ ಪಾಶ್ಚಾತ್ಯ ದೃಷ್ಟಿಕೋನದಿಂದ ನೋಡಬಾರದು. ನಮ್ಮ ಸ್ವಂತ ನಾಗರಿಕತೆಯ ಮೌಲ್ಯಗಳಿಂದಲೇ ಅರ್ಥ ಮಾಡಿಕೊಳ್ಳಬೇಕು ಎಂದು ಅವರು ಒತ್ತಿ ಹೇಳಿದರು. ಪಾಶ್ಚಾತ್ಯ ಚಿಂತನೆಯ ಪದರಗಳನ್ನು ತೆಗೆದುಹಾಕಿ, ಭಾರತೀಯ ಸಂಪ್ರದಾಯಗಳೊಂದಿಗೆ ಮತ್ತೆ ಸಂಪರ್ಕ ಸಾಧಿಸಬೇಕು ಎಂದು ಕರೆ ನೀಡಿದರು.

'ಭಾರತವನ್ನು ತಿಳಿದುಕೊಳ್ಳಬೇಕು, ಅಂಗೀಕರಿಸಬೇಕು ಮತ್ತು ದೈನಂದಿನ ಜೀವನದಲ್ಲಿ ಬದುಕಬೇಕು,' ಎಂದು ಆಶಿಸಿದರು. ಭಾರತ ಮಾತೆಯ ಪೂಜೆ ಕೇವಲ ಆಚರಣೆಗಳಿಗೆ ಸೀಮಿತವಲ್ಲ. ಪ್ರತಿ ವ್ಯಕ್ತಿ ತನ್ನ ಜೀವನದಲ್ಲಿ ಭಾರತರಾಗಿ ಮಾರ್ಪಡಬೇಕು ಎಂದು ಆರ್‌ಎಸ್‌ಎಸ್ ಸರಸಂಘಚಾಲಕರು ವಿವರಿಸಿದರು.

ಟ್ರಂಪ್ ಪೋಸ್ಟ್ ಅಜ್ಞಾನಪೂರಿತ

ಪುಟ ೧➡ಆದರೆ ಟ್ರಂಪ್ ಅವರ ಸಾಮಾಜಿಕ ಜಾಲತಾಣ ಪೋಸ್ಟ್ ಸಂಪೂರ್ಣ ತದ್ವಿರುದ್ಧವಾಗಿದೆ ಎಂದು ಜೈಸ್ವಾಲ್, ಟ್ರಂಪ್ ವಿರುದ್ಧ ಟೀಕಾಪ್ರಹಾರ ಮಾಡಿದ್ದಾರೆ. ಅಮೆರಿಕದ ರೇಡಿಯೋ ಕಾರ್ಯಕ್ರಮ ನಿರೂಪಕ ಮೈಕಲ್ ಸ್ಯಾವೇಜ್ ತಮ್ಮ ಕಾರ್ಯಕ್ರಮವೊಂದರಲ್ಲಿ ಭಾರತ, ಚೀನಾ ನರಕದ ಕೂಪಗಳೆಂದು ಅವಹೇಳನಕಾರಿ ಮಾತುಗಳನ್ನಾಡಿದ್ದು, ಕಾರ್ಯಕ್ರಮದ ತುಣುಕುಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಸ್ಯಾವೇಜ್ ಪೋಸ್ಟ್‌ಗೆ ತಮ್ಮ ಸಹಮತ ಸೂಚಿಸಿದ ಟ್ರಂಪ್ ರೀಪೋಸ್ಟ್ ಮಾಡಿದ್ದರು.

ಟ್ರಂಪ್ ಯೂ-ಟರ್ನ್: ಟ್ರಂಪ್ ಪೋಸ್ಟ್‌ಗೆ ಭಾರತೀಯರ ಭಾರೀ ವಿರೋಧ ವ್ಯಕ್ತವಾಗುತ್ತಿದ್ದಂತೆ ಅಮೆರಿಕ ರಾಯಭಾರ ಕಚೇರಿ ಮೂಲಕ ಟ್ರಂಪ್ ಸಂದೇಶ ರವಾನಿಸಿದ್ದಾರೆ. ಭಾರತವೊಂದು ಶ್ರೇಷ್ಠ ರಾಷ್ಟ್ರ, ನನ್ನ ಆತ್ಮೀಯ ಸ್ನೇಹಿತನೇ ಆ ರಾಷ್ಟ್ರವನ್ನು ಮುನ್ನಡೆಸುತ್ತಿದ್ದಾರೆ ಎಂದು ಟ್ರಂಪ್ ಯೂ-ಟರ್ನ್ ಹೊಡೆದಿದ್ದಾರೆ.

ನಾಳೆ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು/ಕಾರವಾರ: ಸೌರಭ ಸಂಸ್ಥೆ ವತಿಯಿಂದ ಭಿಸಾಧನಾ ಸೌರಭ :ಸಾಂಸ್ಕೃತಿಕ ಅನುಸಂಧಾನ ಮತ್ತು ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭವು ಏ.26ರಂದು ಬೆಳಗ್ಗೆ 9.30 ಗಂಟೆಗೆ ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಹವ್ಯಕ ಸಭಾಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

» ವಿಶ್ವೇಶ್ವರ ಭಟ್‌ಗೆ ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿ

ಕಾರ್ಯಕ್ರಮದಲ್ಲಿ ಈ ಬಾರಿಯ ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿಯನ್ನು ವಿಶ್ವವಾಣಿ ಪ್ರಧಾನ ಸಂಪಾದಕ ಹಾಗೂ ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಅವರಿಗೆ ಪ್ರದಾನ ಮಾಡಲಾಗುತ್ತದೆ. ಕಾರ್ಯಕ್ರಮವನ್ನು ಖ್ಯಾತ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅವರು ಉದ್ಘಾಟಿಸಲಿದ್ದಾರೆ.

ವಿಶ್ವೇಶ್ವರ ಭಟ್ ಅವರ ಕುರಿತು ಸಂವಾದ: ಬೆಳಗ್ಗೆ 11.10ಕ್ಕೆ ಸಂವಾದದಲ್ಲಿ ಹೊನ್ನಾವರದ ನಾಗರಿಕ ಪತ್ರಿಕೆ ಸಂಪಾದಕರಾದ ಕೃಷ್ಣಮೂರ್ತಿ ಹೆಬ್ಬಾರ ಕರ್ಕಿ ಅವರು ವಿಶ್ವೇಶ್ವರ ಭಟ್ ಅವರ ಪತ್ರಿಕಾ ಪಥ ಕುರಿತು, ಬೆಳಗ್ಗೆ 11.45ಕ್ಕೆ ಉಡುಪಿ ಜಿಲ್ಲೆ ಗಿಳಿಯಾರದ ಜನಸೇವಾ ಟ್ರಸ್ಟ್ ಪ್ರವರ್ತಕ ವಸಂತ ಗಿಳಿಯಾರ್ ಅವರು ವಿಶ್ವೇಶ್ವರ ಭಟ್ ಅವರ ಸಾಹಿತ್ಯ ಪಥದ ಕುರಿತು, ಮಧ್ಯಾಹ್ನ 2.15ಕ್ಕೆ ಸಾಹಿತಿ, ಅಂಕಣಕಾರ, ಹಿರಿಯ ಪತ್ರಕರ್ತ ರಾಜು ಅಡಕಳ್ಳಿ ಅವರು ವಿಸ್ಮಯ ಪಥ ಕುರಿತು, ಮಧ್ಯಾಹ್ನ 2.45ಕ್ಕೆ ಲೇಖಕ ಹಾಗೂ ಅಂಕಣಕಾರ ಕಿರಣ್ ಉಪಾಧ್ಯಾಯ ಅವರು ವಿಶ್ವೇಶ್ವರ ಭಟ್ ಅವರ ಪ್ರವಾಸ ಕಥನ ಕುರಿತು, ಮಧ್ಯಾಹ್ನ 3.35ಕ್ಕೆ ಮಾಜಿ ಸಂಸದ ಹಾಗೂ ಖ್ಯಾತ ಅಂಕಣಕಾರ ಪತ್ರಕರ್ತ ಪ್ರತಾಪ್ ಸಿಂಹ ಅವರು ಅಂತರಂಗ ಪಥ ಕುರಿತು ಮಾತನಾಡಲಿದ್ದಾರೆ.

ಪ್ರಶಸ್ತಿ ಪ್ರದಾನ ಹಾಗೂ ಸಮಾರೋಪ: ಸಂಜೆ 4.35ಕ್ಕೆ ಪ್ರಶಸ್ತಿ ಪ್ರದಾನ ಹಾಗೂ ಸಮಾರೋಪ ಸಮಾರಂಭ ನಡೆಯಲಿದ್ದು, ಈ ವೇಳೆ ಪ್ರಧಾನ ಅಭ್ಯಾಗತರಾಗಿ ಖ್ಯಾತ ಆಯುರ್ವೇದ ಮತ್ತು ಶಿಕ್ಷಣ ತಜ್ಞ ಹಾಗೂ ಮೂಡುಬಿದಿರೆ ಆಳ್ವಾಸ್ ಫೌಂಡೇಶನ್ ಸಂಸ್ಥಾಪಕ ಡಾ.ಎಂ.ಎನ್. ಮೋಹನ ಆಳ್ವಾ ಅವರು ಭಾಗವಹಿಸಲಿದ್ದು, ಸೌರಭ ಅಧ್ಯಕ್ಷ ಶ್ರೀಕಾಂತ ಕೆ. ಭಟ್ಟ, ಉಪಾಧ್ಯಕ್ಷ ಮೋಹನಭಾಸ್ಕರ ಹೆಗಡೆ, ಪ್ರಧಾನ ಕಾರ್ಯದರ್ಶಿ ಅರುಣ ಎನ್.ಹೆಗಡೆ ಅವರು ಉಪಸ್ಥಿತರಿರಲಿದ್ದಾರೆ.

ಪುತ್ಥಳಿ ಅನಾವರಣ



ಬೆಂಗಳೂರಿನ ಜಯನಗರದಲ್ಲಿ ನಿರ್ಮಿಸಲಾಗಿರುವ ಡಾ.ರಾಜಕುಮಾರ್ ಅವರ ಕಂಚಿನ ಪುತ್ಥಳಿಯನ್ನು ಶುಕ್ರವಾರ ಅಶ್ವಿನಿ ಪುನೀತ್ ರಾಜಕುಮಾರ್ ಉದ್ಘಾಟಿಸಿದರು. ಸಂಸದ ತೇಜಸ್ವಿ ಸೂರ್ಯ, ಶಾಸಕ ರಾಮಮೂರ್ತಿ, ನಟಿ ತಾರಾ ಇದ್ದರು.

ಜನಿವಾರ ತೆಗೆಸಿದ್ದು ಅಕ್ಷಮ್ಯ ಅಪರಾಧ

ಬೆಂಗಳೂರು: ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆಯಲು ಬಂದಿದ್ದ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರವನ್ನು ಬಲವಂತವಾಗಿ ತೆಗೆಸಿರುವುದು ಅಥವಾ ಕತ್ತರಿಸಿರುವುದು ಅಕ್ಷಮ್ಯ ಅಪರಾಧ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ತೀವ್ರವಾಗಿ ಖಂಡಿಸಿದೆ.

ನಗರದ ಕೋರಮಂಗಲದ ಕೃಪಾನಿಧಿ ಕಾಲೇಜಿನಲ್ಲಿ ಈ ವಿವಾದಾತ್ಮಕ ಘಟನೆ ನಡೆದಿದೆ ಎನ್ನಲಾಗಿದ್ದು, ಈ ಕುರಿತು ಮಹಾಸಭಾದ ಅಧ್ಯಕ್ಷ ಎಸ್. ರಘುನಾಥ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಕಠಿಣ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಗುರುವಾರ ನಡೆದ ಸಿಇಟಿ ಪರೀಕ್ಷೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ತಪಾಸಣೆ ಮಾಡುವ ನೆಪದಲ್ಲಿ ಧಾರ್ಮಿಕ ಭಾವನೆಗೆ ಧಕ್ಕೆ ತರಲಾಗಿದೆ. ವಿದ್ಯಾರ್ಥಿಗಳು ಧರಿಸಿದ್ದ ಪವಿತ್ರ ಜನಿವಾರವನ್ನು ತೆಗೆಸುವ ಮೂಲಕ ಅವಮಾನಿಸಲಾಗಿದೆ ಎಂಬ ದೂರುಗಳು ಕೇಳಿಬಂದಿವೆ. ಈ ಸಂಬಂಧ ಸಂತ್ರಸ್ತ ವಿದ್ಯಾರ್ಥಿಗಳು ಮತ್ತು ಪೋಷಕರು ಮಡಿವಾಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಮುಂದಾಗಿದ್ದರೂ, ದೂರು ಸ್ವೀಕರಿಸಲು ಹಿಂಜರಿಯಲಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಸರ್ಕಾರದ ಮುಚ್ಚಳಿಕೆ ಉಲ್ಲಂಘನೆ: ಕಳೆದ ವರ್ಷವೂ ಇದೇ ರೀತಿಯ ಘಟನೆಗಳು ವರದಿಯಾದಾಗ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿತ್ತು. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರವಹಿಸಲಾಗುವುದು ಎಂದು ನ್ಯಾಯಾಲಯಕ್ಕೆ ಮುಚ್ಚಳಿಕೆ ಬರೆದುಕೊಟ್ಟಿತ್ತು. ಆದರೆ ಈ ಬಾರಿಯೂ ಇಂತಹದ್ದೇ ಕೃತ್ಯ ನಡೆದಿರುವುದು ಸರ್ಕಾರದ ಮುಚ್ಚಳಿಕೆಗೆ ಬೆಲೆಯಿಲ್ಲದಂತಾಗಿದೆ ಎಂದು ಪತ್ರದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೆಲವು ಶಿಕ್ಷಣ ಸಂಸ್ಥೆಗಳು ಬ್ರಾಹ್ಮಣರ ವಿರುದ್ಧ ವ್ಯವಸ್ಥಿತವಾಗಿ ಹಗೆತನ ಸಾಧಿಸುತ್ತಿರುವುದು ಈ ಘಟನೆಯಿಂದ ಸ್ಪಷ್ಟವಾಗುತ್ತಿದೆ. ಕೂಡಲೇ ಇಂತಹ ತಾರತಮ್ಯ ಎಸಗಿದ ಕಾಲೇಜುಗಳ ಪರವಾನಗಿಯನ್ನು ರದ್ದುಗೊಳಿಸಬೇಕು. ಧಾರ್ಮಿಕ ಆಚರಣೆಯ ಭಾಗವಾಗಿರುವ ಜನಿವಾರವನ್ನು ಪರೀಕ್ಷೆಯ ನೆಪದಲ್ಲಿ ತೆಗೆಸುವುದು ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆಯಾಗಿದೆ. ಸರ್ಕಾರವು ಈ ಕೂಡಲೇ ಮಧ್ಯಪ್ರವೇಶಿಸಿ ತಪ್ಪಿತಸ್ಥ ಅಧಿಕಾರಿಗಳು ಹಾಗೂ ಕಾಲೇಜು ಮಂಡಳಿಯ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಮಹಾಸಭಾ ಆಗ್ರಹಿಸಿದೆ.

ಕಿರುಸುದ್ದಿ

ಮೇ 20ರೊಳಗೆ ಸಂಪುಟ ವಿಸ್ತರಣೆ ವಿಶ್ವಾಸ: ಸಲೀಂ



ಹಾವೇರಿ: ಎಲ್ಲ ಹಿರಿಯ ಶಾಸಕರು ದೆಹಲಿಯಲ್ಲಿ ಹೈಕಮಾಂಡ್ ಭೇಟಿ ಮಾಡಿದ್ದಾರೆ. ಮೇ 20ರೊಳಗೆ ಸಚಿವ ಸಂಪುಟ ವಿಸ್ತರಣೆಯಾಗುವ ವಿಶ್ವಾಸವಿದೆ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿದರು. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಈ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ಹೈಕಮಾಂಡ್ ತೀರ್ಮಾನವೇ ಅಂತಿಮವಾಗಿದೆ. ಸಿಎಂ ಸಿದ್ದರಾಮಯ್ಯ ಅವರಿಗೆ ಎಲ್ಲರೂ ಆಪ್ತರು. ಅವರು ತಮ್ಮ ಮಂತ್ರಿ ಮಂಡಲದ ಸಭೆ ಮತ್ತು ಶಾಸಕರ ಸಭೆ ಮಾಡುತ್ತಾರೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ಪ್ರತಿಕ್ರಿಯಿಸಿದರು. ನಮಗೆ ಜವಾಬ್ದಾರಿ ಕೊಟ್ಟಿದ್ದರು, ಆ ಪ್ರಕಾರ ನಾವು ವರದಿಯನ್ನು ಕೊಟ್ಟಿದ್ದೇವೆ. ಪಕ್ಷದ ಎಲ್ಲಾ ವಿಚಾರಗಳನ್ನು ಹೈಕಮಾಂಡ್ ಗಮನಿಸುತ್ತಿದೆ. ಮೇ 4ಕ್ಕೆ ಉಪಚುನಾವಣೆ ಫಲಿತಾಂಶ ಬರುತ್ತದೆ. ದಾವಣಗೆರೆ ಮತ್ತು ಬಾಗಲಕೋಟೆ ಎರಡೂ ಕ್ಷೇತ್ರದಲ್ಲಿ ನಾವು ಗೆಲ್ಲುತ್ತೇವೆ. ಗೆದ್ದು ವಿಜಯೋತ್ಸವ ಮಾಡುತ್ತೇವೆ ಎಂದರು.

ಶಾಖದಿಂದಾಗುವ ಸಮಸ್ಯೆ ತಡೆಗೆ ಕ್ರಮ

ಬೆಂಗಳೂರು: ಬೇಸಿಗೆಯಲ್ಲಿ ಅತಿಯಾದ ಶಾಖ ಮತ್ತು ಶಾಖ ತರಂಗದಿಂದ ಸಾರ್ವಜನಿಕರಿಗೆ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ತಡೆಯಲು ರಾಜ್ಯ ಆರೋಗ್ಯ ಇಲಾಖೆ ಮುಂಜಾಗ್ರತಾ ಕ್ರಮ ಕೈಗೊಂಡಿರುವ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತರು ಆದೇಶ ಹೊರಡಿಸಿದ್ದಾರೆ. ಮಾ.1ರಿಂದ ಜು.31 ರವರೆಗೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ತಾಪಾಘಾತ ನಿರ್ವಹಣಾ ಕೊಠಡಿ ಕಡ್ಡಾಯವಾಗಿ ಕಾರ್ಯನಿರ್ವಹಿಸಬೇಕು. ಸಮುದಾಯ ಆರೋಗ್ಯ ಕೇಂದ್ರದಲ್ಲಿ 2 ಹಾಸಿಗೆ, ತಾಲೂಕು ಆಸ್ಪತ್ರೆಯಲ್ಲಿ 5 ಹಾಸಿಗೆ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ 10 ಹಾಸಿಗೆಗಳ ವ್ಯವಸ್ಥೆ ಮಾಡಬೇಕು. ಶಾಖ ಸಂಬಂಧಿತ ಕಾಯಿಲೆಗಳ ನಿರ್ವಹಣೆ ಕುರಿತು ಎಲ್ಲಾ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಗೆ ತರಬೇತಿ ನೀಡಬೇಕು, ಪ್ರತಿ ಆಸ್ಪತ್ರೆಯಲ್ಲಿ ಓ.ಆರ್.ಎಸ್. ಮೂಲೆಯನ್ನು ಸ್ಥಾಪಿಸಬೇಕು, ತಾಪಾಘಾತ ನಿರ್ವಹಣಾ ಕೊಠಡಿಯಲ್ಲಿ ಗಾಳಿಯಂತ್ರ, ಮಂಜುಗಡ್ಡೆ, ಜ್ವರಮಾಪಕ ಸೇರಿದಂತೆ ಎಲ್ಲಾ ಅಗತ್ಯ ಸೌಲಭ್ಯ ಇರಬೇಕು, ಶಾಖ ಸಂಬಂಧಿತ ಕಾಯಿಲೆಗಳ ದೈನಂದಿನ ವರದಿಯನ್ನು ಸಮಗ್ರ ಆರೋಗ್ಯ ಮಾಹಿತಿ ವೇದಿಕೆಯಲ್ಲಿ ಸಲ್ಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನಿವೇಶನ ಅಕ್ರಮ ನೋಂದಣಿ: ಸಬ್ ರಿಜಿಸ್ಟ್ರಾರ್ ಅಮಾನತು

ಮೈಸೂರು: ಸರ್ಕಾರದ ಸುತ್ತೋಲೆಗಳು ಹಾಗೂ ಇಲಾಖೆಯ ನಿರ್ದೇಶನಗಳನ್ನು ಉಲ್ಲಂಘಿಸಿ, ಕೋರ್ಟ್ ಡಿಕ್ರಿ ಅಥವಾ ಆದೇಶದ ಸಬ್ ಆರ್ಟಿಕಲ್ ದುರ್ಬಳಕೆ ಮಾಡಿಕೊಂಡು 24 ನಿವೇಶನಗಳ ದಾಖಲೆಗಳನ್ನು ನೋಂದಾಯಿಸಿದ ಆರೋಪದಡಿ ಮೈಸೂರು ಪಶ್ಚಿಮ ಉಪ ನೋಂದಣಿ ಕಚೇರಿಯ ಉಪ ನೋಂದಣಾಧಿಕಾರಿ (ಸಬ್ ರಿಜಿಸ್ಟ್ರಾರ್) ಎನ್.ಶ್ರೀಕಾಂತ್ ಅವರನ್ನು ಸಸ್ಪೆಂಡ್ ಮಾಡಿ ಶಿಸ್ತು ಪ್ರಾಧಿಕಾರ ಹಾಗೂ ನೋಂದಣೀ ಮಹಾ ಪರಿವೀಕ್ಷಕರು ಆದೇಶ ಹೊರಡಿಸಿದ್ದಾರೆ. ಶ್ರೀಕಾಂತ್ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿದ್ದಾರೆ. ಅಲ್ಲದೇ ಅವರನ್ನು ಪ್ರಸ್ತುತ ಸ್ಥಳದಲ್ಲೇ ಮುಂದುವರೆಸಿದರೆ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ ಸಾಧ್ಯತೆ ಇರುವುದರಿಂದ, ಲೀನ್ ಅನ್ನು ಕೇಂದ್ರ ಕಚೇರಿಗೆ ವರ್ಗಾಯಿಸಿ ಆದೇಶಿಸಲಾಗಿದೆ.

ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಹೇಳಿಕೆ

ಕೃಷಿ ಬಲವರ್ಧನೆಗೆ ಆದ್ಯತೆ

ಬೆಂಗಳೂರು: ಕೃಷಿ ಕ್ಷೇತ್ರದಲ್ಲಿನ ಹೊಸ ಬದಲಾವಣೆಗಳು ಪ್ರತಿ ರೈತರನ್ನೂ ತಲುಪಬೇಕು. ಕೃಷಿ ಲಾಭದಾಯಕಗೊಂಡರೆ ಯುವಜನತೆ ಕೃಷಿಯತ್ತ ಮುಖ ಮಾಡುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅರಮನೆ ಮೈದಾನದಲ್ಲಿ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ(ಎಫ್‌ಕೆಸಿಸಿಐ) ವತಿಯಿಂದ ನಡೆದ ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್ -2026ನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತ ದೇಶ ಕೃಷಿಪ್ರಧಾನ ದೇಶ. ಕೃಷಿಯನ್ನು ಸುಸ್ಥಿರಗೊಳಿಸುವುದು ಹಾಗೂ ಲಾಭದಾಯಕಗೊಳಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಇಂದಿನ ಯುವಜನತೆ ಕೃಷಿಯಿಂದ ವಿಮುಖರಾಗುತ್ತಿದಾರೆ. ಕೃಷಿ ಲಾಭದಾಯಕವಾದರೆ ಯುವಜನತೆ ಸಹಜವಾಗಿ ಕೃಷಿಯತ್ತ ಮುಖಮಾಡುತ್ತಾರೆ. ಸರ್ಕಾರ ಕೃಷಿಯನ್ನು ಲಾಭದಾಯಕಗೊಳಿಸಲು ಹಲವು ಯೋಜನೆಗಳನ್ನು ರೂಪಿಸಿ, ಈ ಉದ್ದೇಶಕ್ಕೆ ಕೈಗಾರಿಕೆಗಳೂ ಕೈಜೋಡಿಸಬೇಕು ಎಂದರು.

ಕೃಷಿಭಾಗ್ಯ ಪುನ: ಜಾರಿ: ರಾಜ್ಯದಲ್ಲಿ ಒಣ ಭೂಮಿಯ ಪ್ರಮಾಣ ಹೆಚ್ಚಿದ್ದು, ಸಣ್ಣ ಹಿಡುವಳಿದಾರರಿಗೆ ಕೃಷಿಯನ್ನು ಲಾಭದಾಯಕಗೊಳಿಸಬೇಕಿದೆ. ಆದ್ದರಿಂದ ಸರ್ಕಾರ ಕೃಷಿಭಾಗ್ಯ ಯೋಜನೆಯನ್ನು ಜಾರಿಗೆ ತಂದಿದೆ. ಸುಮಾರು 83 ಲಕ್ಷ ರೈತರಿಗೆ 70 ಸಾವಿರ ಕೋಟಿ ರೂ.ಗಳ ಕೃಷಿಸಾಲವನ್ನು ನೀಡಲಾಗಿದೆ. ಕೈಗಾರಿಕೆ, ಗ್ರಾಮೀಣಾಭಿವೃದ್ಧಿಯಲ್ಲಿ ಕರ್ನಾಟಕ ಮೊದಲನೇ ಸ್ಥಾನದಲ್ಲಿದ್ದು, ಕೃಷಿ ಕ್ಷೇತ್ರದಲ್ಲಿಯೂ ಹೂಡಿಕೆಗಳು ಹೆಚ್ಚಾಗಬೇಕು. ಆಗ ಮಾತ್ರ ಕೃಷಿ ಲಾಭದಾಯಕವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಕೃಷಿ ವಿವಿ ಹಾಗೂ ಎಫ್‌ಕೆಸಿಸಿಐ ಸಹಭಾಗಿತ್ವದಲ್ಲಿ ಏರ್ಪಡಿಸಲಾದ ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್ -2026 ರೈತರಿಗೆ ಸಹಕಾರಿಯಾಗಿದೆ. ರೈತರಿಗೆ ಉಪಯುಕ್ತವಾದ ಈ ಕಾರ್ಯಕ್ರಮದಲ್ಲಿ ಸಾವಯವ ಕೃಷಿ ಹಾಗೂ ಯಂತ್ರೋಪಕರಣಗಳ ವಸ್ತುಪ್ರದರ್ಶನ ಏರ್ಪಡಿಸಿರುವುದು ಉತ್ತಮವಾಗಿದೆ. ಇಂತಹ ಕಾರ್ಯಕ್ರಮಗಳಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತಾಗಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.



ಗ್ರಾಮೀಣ ರೈತರ ಆದಾಯ ಹೆಚ್ಚಿಸುವ ಉದ್ದೇಶ

ರಾಜ್ಯದ ಆರ್ಥಿಕತೆಯಲ್ಲಿ ಕೃಷಿಯ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಒಟ್ಟು ರಾಜ್ಯದ ಆದಾಯದಲ್ಲಿ ಶೇ.17ರಷ್ಟು ಕೊಡುಗೆ ನೀಡುವುದರೊಂದಿಗೆ, ಶೇಕಡಾ 58ರಷ್ಟು ಜನರಿಗೆ ಉದ್ಯೋಗವನ್ನು ಒದಗಿಸುವ ಪ್ರಮುಖ ಕ್ಷೇತ್ರವಾಗಿದೆ. 2025-26ನೇ ಸಾಲಿನಲ್ಲಿ ದೇಶದ ಆಹಾರ ಉತ್ಪಾದನೆ 355 ದಶಲಕ್ಷ ಟನ್ ತಲುಪುವ ನಿರೀಕ್ಷೆಯಿದ್ದು, ರಾಜ್ಯದಲ್ಲಿಯೂ ಆಹಾರ ಉತ್ಪಾದನೆ 155-160 ದಶಲಕ್ಷ ಟನ್ ಮಟ್ಟದಲ್ಲಿ ಸಾಧನೆಯಾಗಿದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿದರು. ತೋಟಗಾರಿಕೆ ಉತ್ಪಾದನೆ ಹಾಗೂ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ರಾಜ್ಯದ 49 ಕೃಷಿ ಉತ್ಪನ್ನಗಳಿಗೆ ಜಿಐ ಟ್ಯಾಗ್ ದೊರೆತಿದೆ. ಇದರಿಂದ ಜಾಗತಿಕ ಮಟ್ಟದಲ್ಲಿ ರಫ್ತು ಅವಕಾಶಗಳು ವೃದ್ಧಿಯಾಗಿವೆ. ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ರಾಜ್ಯ ಮುಂಚೂಣಿಯಲ್ಲಿದ್ದು, 6500 ಘಟಕಗಳನ್ನು ಸ್ಥಾಪಿಸಿ ಸುಮಾರು 90 ಸಾವಿರ ಜನರಿಗೆ ಉದ್ಯೋಗ ಒದಗಿಸಲಾಗಿದೆ. ಕೃಷಿಯನ್ನು ಆಧುನೀಕರಣಗೊಳಿಸುವುದರ ಜೊತೆಗೆ, ಪರಿಸರ ಸ್ನೇಹಿ ಮತ್ತು ಸ್ಥಿರ ಕೃಷಿ ಪದ್ಧತಿಗಳನ್ನು ಉತ್ತೇಜಿಸುವತ್ತ ದಿಟ್ಟ ಹೆಜ್ಜೆ ಇಡುತ್ತಿದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.

> ಮಾಹಿತಿ ತಂತ್ರಜ್ಞಾನದಲ್ಲಿ ಬೆಂಗಳೂರು ರಾಜಧಾನಿ ಯಾದಂತೆ, ಕೃಷಿ ತಂತ್ರಜ್ಞಾನದಲ್ಲಿಯೂ ಬೆಂಗಳೂರು ರಾಜಧಾನಿಯಾಗಬೇಕು. ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಕೃತಕ ಬುದ್ಧಿಮತ್ತೆ ಸೇರಿದಂತೆ ಎಲ್ಲಾ ಕ್ಷೇತ್ರಗಳ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು.
> ■ ಸಿದ್ದರಾಮಯ್ಯ, ಸಿಎಂ

ಇಂಜಿನಿಯರಿಂಗ್ ಶುಲ್ಕ ನಿರ್ಧರಿಸಿಲ್ಲ: ಸುಧಾಕರ್

ಬೆಂಗಳೂರು: ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಯವರು ಇಂಜಿನಿಯರಿಂಗ್ ಸೀಟು ಶೇ.20 ಶುಲ್ಕ ಹೆಚ್ಚಳ ಮಾಡಲು ಕೋರಿದ್ದಾರೆ. ಆದರೆ ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಮಲ್ಲೇಶ್ವರನಲ್ಲಿರುವ ಸಿ.ಇ.ಟಿ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳ ಸ್ವತಃ ಮುಖ ಚಹರೆ ಪತ್ತೆ ತಂತ್ರಜ್ಞಾನದ ಮೊಬೈಲ್ ಆಪ್ ಮೂಲಕ ತಪಾಸಣೆ ನಡೆಸಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನಾನುಕೂಲವಾಗದಂತೆ, ಪಾರದರ್ಶಕವಾಗಿ ಹಾಗೂ ಯಾವುದೇ ಪರೀಕ್ಷಾ ಅಕ್ರಮ ನಡೆಯದಂತೆ ಕಟ್ಟುನಿಟ್ಟಿನಿಂದ ಸಿಇಟಿ ಪರೀಕ್ಷೆ ನಡೆಸಲಾಗಿದೆ. ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿ ಆಗಮನದಿಂದ ಪರೀಕ್ಷೆ ಬರೆದು ಮುಗಿಸುವವರೆಗೂ ಸಿ.ಸಿ.ಟಿ.ವಿ ಕ್ಯಾಮರಾಗಳ ಮೂಲಕ ಮಾನಿಟರ್ ಮಾಡಲಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ನಿರ್ಧಾರ ತೆಗೆದುಕೊಳ್ಳಲಿದೆ. ಈ ಹಿಂದಿನ ಸರ್ಕಾರ ಒಂದೇ ಬಾರೀ ಮೂರು ವರ್ಷಗಳಿಗೆ ವರ್ಷಕ್ಕೆ ಶೇ.10ರಷ್ಟು ಹೆಚ್ಚಳದ ಆದೇಶ ನೀಡಿತ್ತು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅದನ್ನು ರದ್ದುಗೊಳಿಸಿ ಆಯಾ ವರ್ಷಕ್ಕೆ ಸೂಕ್ತವಾಗಿ ಹೆಚ್ಚಳ ಮಾಡಿಕೊಂಡು ಬಂದಿದ್ದೇವೆ.

ಈ ವರ್ಷ ಶೇ.7.5ರಷ್ಟು ಮಾಡುವ ಬಗ್ಗೆ ಇನ್ನೂ ಅಧಿಕೃತ ನಿರ್ಧಾರವಾಗಿಲ್ಲ ಎಂದು ಹೇಳಿದರು.



ಹೆಚ್ಚುವರಿ ಶುಲ್ಕಕ್ಕೆ ಕಡಿವಾಣ

ಖಾಸಗಿ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಕೆ.ಇ.ಎ ಯಲ್ಲಿ ಶುಲ್ಕ ಕಟ್ಟಿ ಕಾಲೇಜಿಗೆ ದಾಖಲಾಗಲು ಹೋದಾಗ ನಿಗದಿತ ಸ್ಕಿಲ್ ಲ್ಯಾಬ್ ಶುಲ್ಕಕಿಂತ ಹೆಚ್ಚುವರಿಯಾಗಿ ವಸೂಲಿ ಮಾಡುತ್ತಿರುವುದು ಗಮನಕ್ಕೆ ಬಂದಿದ್ದು, ಈ ಬಗ್ಗೆ ಕಟುನಿಟ್ಟಿನ ಕ್ರಮಕ್ಕೆ ನಿರ್ಧರಿಸಲಾಗಿದೆ. ಈ ಹಿಂದೆ ಇದಕ್ಕೆ ಸಂಬಂಧಪಟ್ಟಂತೆ ರಚಿಸಲಾಗಿದ್ದ ವಿಶ್ರಾಂತ ಕುಲಪತಿ ಕರಿಸಿದ್ದಪ್ಪ ಸಮಿತಿ ನೀಡಿದ್ದ ವರದಿಯ ಹಿನ್ನೆಲೆಯಲ್ಲಿ 5 ಸಾವಿರದಿಂದ 20 ಸಾವಿರದವರೆಗೆ ಆಯಾ ಕಾಲೇಜುಗಳಲ್ಲಿನ ಸ್ಕಿಲ್ ಲ್ಯಾಬ್‌ಗಳನ್ನು ಆಧರಿಸಿ ವಿದ್ಯಾರ್ಥಿಗಳಿಂದ ಶುಲ್ಕ ಪಡೆಯಲು ನಿರ್ಧರಿಸಲಾಗಿತ್ತು. ದೂರು ಬಂದ ಕಾರಣ ಖಾಸಗಿ ಶಿಕ್ಷಣ ಸಂಸ್ಥೆಗಳೊಂದಿಗೆ ಮಾತನಾಡಿ, ಸ್ಕಿಲ್ ಲ್ಯಾಬ್ ಶುಲ್ಕವನ್ನು ಕೆಇಎಯಲ್ಲಿ ಸಂಗ್ರಹಿಸಲು ನಿರ್ಧರಿಸಲಾಗಿದೆ ಎಂದರು.

ವಿಶ್ವದೆಲ್ಲೆಡೆ ವೀರಶೈವ ಸಮಾಜದವರ ಸಂಘಟಿಸಲು ಮಹಾಸಭಾ ಶ್ರಮ

ಇಷ್ಟಲಿಂಗ ಪೂಜೆ ತರಬೇತಿ ಆರಂಭ: ಖಂಡ್ರೆ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭಾ ವಿಶ್ವದ ಎಲ್ಲ ಕಡೆಗಳಲ್ಲಿ ಇರುವ ಸಮಾಜದವರನ್ನು ಸಂಘಟಿಸಲಾಗುತ್ತಿದೆ. ಸ್ವಾಮೀಜಿಗಳು, ಗಣ್ಯರು ನಮ್ಮ ಸಮಾಜದ ಏಳಿಗೆಗಾಗಿ, ಸಂಘಟನೆ ಗಾಗಿ ಶ್ರಮಿಸಿದ್ದಾರೆ. ವೈಜ್ಞಾನಿಕವಾಗಿ ಇಷ್ಟಲಿಂಗ ಪೂಜೆ ತರಬೇತಿ ಆರಂಭಿಸ ಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

ನಗರದ ಟೌನ್‌ಹಾಲ್‌ನಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ) ರಾಷ್ಟ್ರೀಯ ಮಹಿಳಾ ಮತ್ತು ಯುವ ವಿಭಾಗಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿ, ಬಸವಕಲ್ಯಾಣದಲ್ಲಿ 650 ಕೋಟಿ ರೂ.ವೆಚ್ಚದಲ್ಲಿ ನೂತನ ಅನುಭವ ಮಂಟಪ ನಿರ್ಮಿಸಲಾಗುತ್ತಿದೆ. ಮುಂದಿನ ಬಸವ ಜಯಂತಿಯಂದು ಅನುಭವ ಮಂಟಪ ಉದ್ಘಾಟನೆ ಮಾಡಲಾಗುವುದು ಎಂದು ತಿಳಿಸಿದರು.

ಸಂಸದ ಜಗದೀಶ್ ಶೆಟ್ಟರ್ ಮಾತನಾಡಿ, ಭೀಮಣ್ಣ ಖಂಡ್ರೆಯವರು ಅಧ್ಯಕ್ಷರಾಗಿ ಸಂಘಟನೆ ಮಾಡಿದ ಕಾರಣದಿಂದ ನಮ್ಮ ಸಮಾಜದಲ್ಲಿ ಅತಿ ಹೆಚ್ಚು ಶಾಸಕರು ಆಯ್ಕೆಯಾದರು ವೀರಶೈವ- ಲಿಂಗಾಯತ ಒಡೆಯ ಬೇಡಿ, ಹಿಂದುಳಿದ ವರ್ಗಕ್ಕೆ ಸೇರಿಸಲು ಹೋರಾಟ ಮಾಡೋಣ, ನಮ್ಮಲ್ಲಿ ಕಚ್ಚಾಟಬೇಡ ಎಂದರು.

ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಸ್ವಾಮೀಜಿ ರವರು ಸಮಾಜ ಬೆಳಸಬೇಕು, ರಾಜಕಾರಣಿಗಳ ಮಾತಿಗೆ ತಲೆ ತೂಗಬಾರದು. ಒಳಪಂಗಡ ಕಚ್ಚಾಟ ನಿಲ್ಲಿಸಿ. ಬಸವಣ್ಣರವರ ತತ್ವ, ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದರು.

ಮಹಿಳಾ ಘಟಕದ ರಾಷ್ಟ್ರೀಯ ಅಧ್ಯಕ್ಷೆ ವೀಣಾ ಕಾಶಪ್ಪನವರ ಮಾತನಾಡಿ, ಮಹಿಳಾ ಸಬಲೀಕರಣ, ಸಮಾಜ ಸಂಘಟನೆಗಾಗಿ ಒಳಪಂಗಡದ ಸಹೋದರರನ್ನು ಒಗ್ಗೂಡಿಸಿ ಮನ್ನಡೆಯಲಾಗುವುದು ಎಂದರು.



> ರಾಜ್ಯದಲ್ಲಿ ವೀರಶೈವ-ಲಿಂಗಾಯತ ಸಮಾಜದವರು ಪ್ರತಿ ಜಿಲ್ಲೆ, ಹಳ್ಳಿಗಳಲ್ಲಿ ಇದ್ದಾರೆ. ನಮ್ಮ ಸಮಾಜದ ಹುಡುಗ-ಹುಡುಗಿಯರು ವಿದ್ಯಾವಂತರು ಆದರೆ, ಐಎಎಸ್ ಮತ್ತು ಉನ್ನತ ಹುದ್ದೆಗಳಲ್ಲಿ ನಮ್ಮ ಸಮಾಜದವರು ಕಡಿಮೆ ಇದ್ದಾರೆ.
> ■ ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ಗ್ಯಾರಂಟಿಗಳಿಂದ ಆರ್ಥಿಕ ವ್ಯವಸ್ಥೆಗೆ ಧಕ್ಕೆ: ಎಚ್‌ಡಿಕೆ



ಮೈಸೂರು: ಜನರನ್ನು ಮರಳು ಮಾಡಲೆಂದು ಕಾಂಗ್ರೆಸ್ ನೀಡುತ್ತಿರುವ ಗ್ಯಾರಂಟಿಗಳಿಂದ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಆರ್ಥಿಕ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಶುಕ್ರವಾರ ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನ ಬಸವನಪುರ, ಗೇರದಡ ಹಾಗೂ ಕೆಂಚನಹಳ್ಳಿ ಗ್ರಾಮಗಳ ಮೇಲನಕಟ್ಟೆ ಗಣಪತಿ ದೇವಾಲಯ ಲೋಕಾರ್ಪಣೆ, ಹೊಸ ಅಗ್ರಹಾರ ಗ್ರಾಮದಲ್ಲಿನ ಬಸವೇಶ್ವರಸ್ವಾಮಿ ದೇವಾಲಯದ ಗೋಪುರ ಲೋಕಾರ್ಪಣೆ ಹಾಗೂ ಬಸವೇಶ್ವರ ದೇವರ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಮಾತ ನಾಡಿ, ಸಾಲ ಮಾಡಿ ತುಪ್ಪ ತಿನ್ನು ಎನ್ನುವಂತೆ ಸರ್ಕಾರ ಲಕ್ಷಾಂತರ ಕೋಟಿ ರೂಪಾಯಿ ಸಾಲ ಮಾಡಿ ಗ್ಯಾರಂಟಿ ಯೋಜನೆಗಳಿಗೆ ಸುರಿಯುತ್ತಿದೆ. ಈಗಾಗಲೇ ಈ ಸರ್ಕಾರ 7.26 ಲಕ್ಷ ಕೋಟಿ ಸಾಲ ಮಾಡಿದೆ. ಈ ಮೂಲಕ ರಾಜ್ಯದ ಪ್ರತಿಯೊಬ್ಬರ ಮೇಲೂ ಕನಿಷ್ಠ 1 ಲಕ್ಷ ಸಾಲ ಹೇರಿದೆ ಎಂದು ದೂರಿದರು.

ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳ ಪರಿಣಾಮದಿಂದ ರಾಜ್ಯದ ಖಜಾನೆ ಖಾಲಿಯಾಗಿದೆ. ಸಕಾಲಕ್ಕೆ ಸರ್ಕಾರಿ ನೌಕರಿಗೆ ಸಂಬಳ ಕೊಡುವ ಶಕ್ತಿಯನ್ನೂ ಸರ್ಕಾರ ಕಳೆದುಕೊಂಡಿದೆ. ಹಾಗೆಯೇ ಗ್ಯಾರಂಟಿಗಳ ಆಮಿಷವೊಡ್ಡಿ ಹಿಮಾಚಲಪ್ರದೇಶದಲ್ಲಿ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಪಕ್ಷವು ಆ ರಾಜ್ಯವನ್ನೂ ಆರ್ಥಿಕವಾಗಿ ದಿವಾಳಿ ಮಾಡಿದೆ. ಸಂಬಳ ಕೊಡಲು ಹಣವಿಲ್ಲದೆ ಅಧಿಕಾರಿಗಳ ವೇತನದಲ್ಲಿ ಕಡಿತಗೊಳಿಸುತ್ತಿದೆ. ಆ ರಾಜ್ಯದ ಅಧಿಕಾರಿ ವರ್ಗದ ಮುಖ್ಯಸ್ಥರಾಗಿರುವ ಮುಖ್ಯ ಕಾರ್ಯದರ್ಶಿ ವೇತನವನ್ನೂ ಕಡಿತ ಮಾಡಲಾಗಿದೆ ಎಂಬ ವರದಿಗಳು ಮಾಧ್ಯಮದಲ್ಲಿ ಬಂದಿದೆ. ಹಿಮಾಚಲಪ್ರದೇಶದ ನಿರ್ಮಾಣವಾಗಿರುವ ಆ ದುಸ್ಥಿತಿ ಕರ್ನಾಟಕಕ್ಕೂ ಬರಲಿದೆ ಎಂದು ಎಚ್ಚರಿಕೆ ನೀಡಿದರು.

ಆನೆ ಕಾರ್ಯಪಡೆಗೆ 13 ಹೊಸ ವಾಹನ ಸೇರ್ಪಡೆ

ಬೆಂಗಳೂರು: ಆನೆಗಳ ಹಾವಳಿ ಹೆಚ್ಚಿರುವ ಹಾಸನ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಮಾಹಿತಿ ನೀಡಲು ಮತ್ತು ಆನೆಗಳನ್ನು ಕಾಡಿಗೆ ಮರಳಿಸಲು ಜಿಲ್ಲಾ ಆನೆ ಕಾರ್ಯಪಡೆಗೆ 13 ಹೊಸ ವಾಹನಗಳು ಸೇರ್ಪಡೆಯಾಗಿದ್ದು, ಅರಣ್ಯ ಸಚಿವ ಈಶ್ವರ ಖಂಡ್ರೆ ಶುಕ್ರವಾರ ಹಸಿರು ನಿಶಾನೆ ತೋರಿಸಿದರು.

ಬೆಂಗಳೂರು ಮಲ್ಲೇಶ್ವರದ ಅರಣ್ಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವರು, 1 ಸ್ಕಾರ್ಪಿಯೋ, 2 ಕ್ಯಾಂಪರ್ ಹಾಗೂ 10 ದ್ವಿಚಕ್ರವಾಹನಗಳಿಗೆ ಹಸಿರು ನಿಶಾನೆ ತೋರಿ, ತಾವೇ ಬೈಕ್ ಓಡಿಸುವ ಮೂಲಕ ಚಾಲನೆ ನೀಡಿದರು. ಮಾನವ-ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕೆ ಇದು ಹೊಸ ಉಪಕ್ರಮವಾಗಿದೆ. ಈ ಎಲ್ಲ ವಾಹನಗಳಿಗೆ ವಾಕಿಟಾಕಿ ಮತ್ತು ಧ್ವನಿವರ್ಧಕ ಅಳವಡಿಸಲಾಗಿದೆ.

ಜಿಲ್ಲಾ ಆನೆ ಕಾರ್ಯಪಡೆ ಸಿಬ್ಬಂದಿ ವಾಹನಗಳಲ್ಲಿ ಗಸ್ತು ಮಾಡುತ್ತಾ ಆನೆಗಳು ತೋಟ ಅಥವಾ ವಸತಿ ಪ್ರದೇಶಗಳ ಬಳಿ ಬಂದಾಗ ಸ್ಥಳೀಯರಿಗೆ ಧ್ವನಿವರ್ಧಕಗಳ ಮೂಲಕ ಎಚ್ಚರಿಕೆ ನೀಡುತ್ತಾರೆ ಮತ್ತು ಆನೆಗಳನ್ನು ಕಾಡಿಗೆ ಮರಳಿಸುತ್ತಾರೆ ಎಂದರು.

ಒಂದು ವಾರದಲ್ಲಿ 110 ಕೋಳಿ ಸಾವು | ಉರಿಬಿಸಿಲಿನಿಂದ ಕುಕ್ಕುಟೋದ್ಯಮಕ್ಕೆ ಹೊಡೆತ

ರಣಬಿಸಿಲಿಗೆ ನಲುಗಿದ ಫಾರ್ಮ್ ಕೋಳಿ

ಜಗದೀಶ ಎಂ.ಗಾಣಿಗೇರ

ದಿಗಂತ ವಿಶೇಷ

ಬಾಗಲಕೋಟೆ: ದಿನದಿಂದ ದಿನಕ್ಕೆ ರಣಬಿಸಿಲಿನ ತಾಪಮಾನ ಹೆಚ್ಚಾಗುತ್ತಿರುವುದರಿಂದ ಜಿಲ್ಲೆಯ ಜನರು ತತ್ತರಿಸಿ ಹೋಗಿದ್ದರೆ ಇತ್ತ ಪ್ರಾಣಿ, ಪಕ್ಷಿಗಳು ಕೂಡ ಬಿಸಿಲಿನ ಹೊಡೆತಕ್ಕೆ ನಲುಗಿ ಹೋಗಿವೆ. ಬಿಸಿಲಿನ ಝಳಕ್ಕೆ ಫಾರ್ಮ್ ಕೋಳಿಗಳು ಸಾವೀಗೀಡಾಗುತ್ತಿವೆ.

ಕಳೆದ ಒಂದು ವಾರದಿಂದ 39 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ದಾಖಲಾಗುತ್ತಿದ್ದು, ಇನ್ನು ಮುಂದಿನ ವಾರವಂತೂ 40 ಡಿಗ್ರಿ ಸೆಲ್ಸಿಯಸ್‌ನಷ್ಟು ಬಿಸಿಲು ಏರಿಕೆಯಾಗುವ ಸಾಧ್ಯತೆಯಿದೆ. ಕೃಷಿಯೊಂದಿಗೆ ಕೋಳಿ ಸಾಕಾಣಿಕೆ ಮಾಡಿಕೊಂಡಿರುವ ರೈತರಿಗೆ ಈಗ ಬಿಸಿಲಿನ ಪರಿಣಾಮ ಫಾರ್ಮ್‌ನಲ್ಲಿರುವ ಕೋಳಿಗಳನ್ನು ಸಾಕುವುದು ದೊಡ್ಡ ಕಷ್ಟವಾಗಿದೆ. ಕೋಳಿ ಫಾರ್ಮ್‌ನಲ್ಲಿನ ಮರಿಗಳು ದೊಡ್ಡದಾಗಬೇಕಾದರೆ 45 ದಿನಗಳು ಬೇಕಾಗುತ್ತವೆ. ಇದಕ್ಕೆ 29 ಡಿಗ್ರಿ ಸೆಲ್ಸಿಯಸ್‌ನಷ್ಟು ಬಿಸಿಲು ಇದ್ದರೆ ಕೋಳಿಗಳಿಗೆ ಅನುಕೂಲಕರ ವಾತಾವರಣ ಇರಲಿದೆ. ಆದರೆ, ಈಗಿನ ಬಿಸಿಲು ನೋಡಿದರೆ 2 ಪಟ್ಟು ಆಗಿದ್ದರಿಂದ ಫಾರ್ಮ್‌ನಲ್ಲಿನ ಕೋಳಿಗಳು ಬಿಸಿಲಿನ ಝಳಕ್ಕೆ ನಲುಗಿ ಹೋಗಿವೆ.



110 ಕೋಳಿಗಳ ಸಾವು: ಜಿಲ್ಲೆಯ ಗದ್ದನಕೇರಿ ಸಮೀಪದ ನೂರಜಹಾನ್ ಹುಸೇನಸಾಬ್ ರೊಳ್ಳಿಯವರ ತೋಟದಲ್ಲಿ ಇರುವ ಕೋಳಿ ಫಾರ್ಮ್‌ನಲ್ಲಿ ಕಳೆದ ಒಂದು ವಾರದಲ್ಲಿ ಉರು ಬಿಸಿಲು ತಡೆದುಕೊಳ್ಳದೆ 110 ಕೋಳಿಗಳು ಮೃತಪಟ್ಟಿವೆ. ಸಣ್ಣ ಮಕ್ಕಳಂತೆ ಕೋಳಿಗಳನ್ನು ರೈತ ಕುಟುಂಬ ಜೋಪಾನ ಮಾಡಿದರೂ ಬಿಸಿಲಿನ ಝಳ ತಡೆದುಕೊಳ್ಳಲು ಕೋಳಿಗಳಿಗೆ ಆಗುತ್ತಿಲ್ಲ. ಬಿಸಿಲು ಹೆಚ್ಚಾಗುತ್ತಿರುವುದರಿಂದ ಪ್ರತಿದಿನ ಐದಾರು ಕೋಳಿಗಳು ಮೃತಪಡುತ್ತಿವೆ.

ಬಿಸಿಲಿನಿಂದ ನಲುಗಿರುವ ಕೋಳಿಗಳನ್ನು ಫಾರ್ಮ್‌ನಲ್ಲಿ ತಂಪಾಗಿಡಲು ಪ್ರತಿದಿನ ಫಾರ್ಮ್‌ನ ಮೇಲೆ ಸ್ಪ್ರಿಂಕ್ಲರ್‌ನಿಂದ ನೀರು ಹರಿಸಲಾಗುತ್ತಿದೆ. ಫಾರ್ಮ್ ತಂಪಾಗಿಡಲು ಕಬ್ಬಿನ ರವದಿ, ತೆಂಗಿನ ಗರಿಯನ್ನು ಮೇಲ್ಛಾವಣಿ ಮೇಲೆ ಹಾಕಲಾಗಿದೆ. ಇನ್ನೂ ಫಾರ್ಮ್ ಒಳಗಡೆ ಕೂಡ ಪಾಗರ (ಸ್ಪ್ರಿಂಕ್ಲರ್‌ನಿಂದ ನೀರು) ಮಾಡಲಾಗುತ್ತಿದೆ. ಅಲ್ಲದೆ ಗ್ಲುಕೋಸ್ ಕೂಡ ನೀಡಲಾಗುತ್ತಿದೆ.

ಬಿಸಿಲಿನಿಂದ ಪಾರಾಗಲು ರೈತ ಕುಟುಂಬ ನಿತ್ಯ ಹರಸಾಹಸ ಪಡುವಂತಾಗಿದೆ. ದಿನಕ್ಕೆ ಐದಾರು ಬಾರಿ ಫಾರ್ಮ್‌ನಲ್ಲಿ ಸ್ಪ್ರಿಂಕ್ಲರ್‌ನಿಂದ ನೀರು ಬಿಡಲಾಗುತ್ತಿದೆ. ಒಬ್ಬರು ಮಾಡುವ ಕೆಲಸವನ್ನು ಈಗ ಬಿಸಿಲಿನಲ್ಲಿ ಎರಡ್ಮೂರು ಜನ ಮಾಡಬೇಕಾಗಿದೆ. ಇದೇ ರೀತಿ ಬಿಸಿಲು ಮುಂದುವರೆದರೆ ನಮ್ಮ ಫಾರ್ಮ್‌ನಲ್ಲಿರುವ ಕೋಳಿಗಳಿಗೆ ದೊಡ್ಡ ಪ್ರಮಾಣದ ಹಾನಿಯಾಗಲಿದೆ. ಪ್ರಕೃತಿ ಯಾರ ಕೈಯಲ್ಲಿಯೂ ಇಲ್ಲ. ಆದಷ್ಟು ಕೋಳಿಗಳನ್ನು ರಕ್ಷಣೆ ಮಾಡುವತ್ತ ಗಮನ ಹರಿಸುತ್ತಿದ್ದೇವೆ ಎಂದು ರೈತ ಮಹಿಳೆ ನೂರಜಹಾನ್ ಹುಸೇನಸಾಬ್ ರೊಳ್ಳಿ ಹೇಳುತ್ತಾರೆ.

> ನಮ್ಮ ಕೋಳಿ ಫಾರ್ಮ್‌ನಲ್ಲಿ ಸದ್ಯ 1,700 ಕೋಳಿಗಳು ಇದ್ದು ಇದರಲ್ಲಿ ಬಿಸಿಲಿನ ಝಳಕ್ಕೆ ಒಂದು ವಾರದಲ್ಲಿ 110 ಕೋಳಿಗಳು ಮೃತಪಟ್ಟಿವೆ. ಸಣ್ಣ ಮಗುವಿನ ತರಹ ಅವುಗಳನ್ನು ಜೋಪಾನ ಮಾಡುತ್ತಿದ್ದೇವೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಬಿಸಿಲು ಹೆಚ್ಚಾಗಿರುವುದರಿಂದ ಕೋಳಿಗಳಿಗೆ ತಡೆದುಕೊಳ್ಳಲು ಆಗುತ್ತಿಲ್ಲ. ಒಂದು ವಾರದಲ್ಲಿ ಸುಮಾರು 20 ಸಾವಿರ ರೂ.ಗಳಷ್ಟು ನಷ್ಟವಾಗಿದೆ.
> ■ ನೂರಜಹಾನ್ ಹುಸೇನಸಾಬ್ ರೊಳ್ಳಿ, ಮುರನಾಳ ರೈತ ಮಹಿಳೆ

ಯುವತಿಯನ್ನು ನಂಬಿಸಿ ಗರ್ಭವತಿ ಮಾಡಿದ ಆರೋಪ

ತಿಂಗಳಿಗೆ ₹75 ಸಾವಿರ ನೀಡಿ: ಹೈ

ಬೆಂಗಳೂರು: ಭವಿಷ್ಯ ನೋಡಬೇಕಾದ 20 ವರ್ಷದ ಯುವತಿ ಗರ್ಭಿಣಿಯಾಗಿ ಮಗುವಿಗೆ ಜನ್ಮ ನೀಡಿದ್ದಾಳೆ. ಆ ಹುಡುಗಿಯ ಭವಿಷ್ಯವನ್ನು ನೀವು ಸಂಪೂರ್ಣವಾಗಿ ಕೊಂದಿದ್ದೀರಿ. ಆಕೆ ಈಗ ಮಗುವನ್ನು ನೋಡಿಕೊಳ್ಳಬೇಕೇ ಅಥವಾ ತನ್ನ ಭವಿಷ್ಯವನ್ನು ನೋಡಿಕೊಳ್ಳಬೇಕೇ ಎಂದು ಪುತ್ತೂರಿನ ಕೃಷ್ಣರಾವ್ ಅವರನ್ನು ಹೈಕೋರ್ಟ್ ಶುಕ್ರವಾರ ತೀಕ್ಷ್ಣವಾಗಿ ಪ್ರಶ್ನಿಸಿದೆ.

ಇದೇ ವೇಳೆ, ಸಂತ್ರಸ್ತೆ ಹಾಗೂ ಮಗುವಿನ ಅಗತ್ಯತೆ ಪೂರೈಸಲು ಆರೋಪಿಯು ಪ್ರತಿ ತಿಂಗಳು 75 ಸಾವಿರ ರೂ.ಗಳನ್ನು ಪಾವತಿಸಬೇಕು ಎಂಬ ಷರತ್ತಿಗೆ ಒಳಪಟ್ಟಂತೆ ಕೃಷ್ಣರಾವ್ ವಿರುದ್ಧದ ಪ್ರಕರಣದ ಮುಂದಿನ ಎಲ್ಲ ಪ್ರಕ್ರಿಯೆಗಳಿಗೆ ನ್ಯಾಯಾಲಯ ಮಧ್ಯಂತರ ತಡೆ ನೀಡಿದೆ.

ಪ್ರೀತಿಸಿದ ಯುವತಿಯನ್ನು ಮದುವೆಯಾಗುವುದಾಗಿ ನಂಬಿಸಿ ಗರ್ಭವತಿ ಮಾಡಿದ ಆರೋಪ ಸಂಬಂಧ ದಾಖಲಾಗಿರುವ ಪ್ರಕರಣ ರದ್ದು ಕೋರಿ ಕೃಷ್ಣರಾವ್ ಸಲ್ಲಿಸಿರುವ ಅರ್ಜಿಯನ್ನು ಶುಕ್ರವಾರ ವಿಚಾರಣೆ ನಡೆಸಿದ ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಮಧ್ಯಂತರ ಆದೇಶ ಮಾಡಿತು.

ಕೆಲಕಾಲ ಅರ್ಜಿ ಆಲಿಸಿದ ಪೀಠವು ಒಂದು ವೇಳೆ ಈ ಪ್ರಕರಣವು ಕೇವಲ ಇಬ್ಬರ ನಡುವಿನ ಒಮ್ಮತದ ಸಂಬಂಧವಾಗಿದ್ದು, ಮಗು ಜನಿಸುವ ಹಂತಕ್ಕೆ ತಲುಪದೆ ಇದ್ದಿದ್ದರೆ ಹಾಗೂ ತಾಯಿ-ಮಗು ಸಂಕಷ್ಟಕ್ಕೆ ಸಿಲುಕದೆ ಇದ್ದಿದ್ದರೆ, ಈ ನ್ಯಾಯಾಲಯ ಪ್ರಕರಣದ ಪ್ರಕ್ರಿಯೆಗಳಿಗೆ ಸಂಪೂರ್ಣ ತಡೆ ನೀಡುತ್ತಿತ್ತು.

ಆದರೆ, ಈಗ ಪರಿಸ್ಥಿತಿ ಭಿನ್ನವಾಗಿದ್ದು, ಸಂತ್ರಸ್ತೆಯ ಪೋಷಕರು ಮಗುವನ್ನು ನೋಡಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಅರ್ಜಿದಾರರ ಕೃತ್ಯಗಳಿಂದಾಗಿ ಸಂತ್ರಸ್ತೆ ಮತ್ತು ಮಗು ಇಂದು ಸಂಕಷ್ಟದಲ್ಲಿದ್ದಾರೆ. ಆದ್ದರಿಂದ, ಪ್ರಕರಣ ಇತ್ಯರ್ಥವಾಗುವವರೆಗೆ ಅರ್ಜಿದಾರ ಆರೋಪಿಯು ಸ್ವತಃ, ತನ್ನ ಪೋಷಕರ ಮೂಲಕ ಸಂತ್ರಸ್ತೆ ಹಾಗೂ ಮಗುವಿನ ಅಗತ್ಯತೆಗಳನ್ನು ಪೂರೈಸಲು ಪ್ರತಿ ತಿಂಗಳು 75 ಸಾವಿರ ರೂ. ಪಾವತಿಸಬೇಕು ಎಂಬ ಷರತ್ತಿಗೆ ಒಳಪಟ್ಟು ಅರ್ಜಿದಾರರ ವಿರುದ್ಧದ ಪ್ರಕರಣಕ್ಕೆ ತಡೆ ನೀಡಿ, ಅರ್ಜಿ ವಿಚಾರಣೆಯನ್ನು ಜೂ.5ಕ್ಕೆ ಮುಂದೂಡಿತು. ಮುಂದಿನ ಒಂದು ವಾರದ ಒಳಗೆ 75 ಸಾವಿರ ರೂ.ಗಳ ಮೊದಲ ಕಂತನ್ನು ಸಂತ್ರಸ್ತೆಗೆ ಪಾವತಿಸಬೇಕು ನ್ಯಾಯಾಲಯ ಅರ್ಜಿದಾರರಿಗೆ ನಿರ್ದೇಶಿಸಿದೆ.

ಸಂಪಾದಕೀಯ

ದಾಖಲೆಯ ಮತದಾನ

ತಮಿಳುನಾಡು ವಿಧಾನಸಭೆಗೆ ನಡೆದ ಏಕಹಂತದ ಮತದಾನವು ಶೇ.85ಕ್ಕಿಂತ ಹೆಚ್ಚಿನ ಮತದಾನವನ್ನು ದಾಖಲಿಸಿರುವುದು ಮತ್ತು ಪಶ್ಚಿಮ ಬಂಗಾಳದ ಮೊದಲ ಹಂತದ ಚುನಾವಣೆಯಲ್ಲಿ ದಾಖಲೆಯ ಶೇ.92.8 ಮತದಾನವಾಗಿರುವುದು ಭಾರತದ ಪ್ರಜಾತಂತ್ರವು ಅದೆಷ್ಟು ಸಂವೇದನಾಶೀಲವಾಗಿದೆ ಹಾಗೂ ಜನರು ಅದರಲ್ಲಿ ಹೇಗೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ ಎನ್ನುವುದಕ್ಕೆ ನಿದರ್ಶನ. ತಮಿಳುನಾಡಿನ ಮತದಾನವು ಶಾಂತಿಯುತವಾಗಿದ್ದರೆ, ಪ.ಬಂಗಾಳದಲ್ಲಿ ಕೆಲವೆಡೆಗಳಲ್ಲಿ



ಸಣ್ಣಪುಟ್ಟ ಘರ್ಷಣೆ ನಡೆಯಿತಾದರೂ ಉಳಿದಂತೆ ಅಲ್ಲಿನ ಚುನಾವಣೆಯೂ ಯಶಸ್ವಿಯಾಗಿಯೇ ನಡೆಯಿತೆನ್ನಬಹುದು. ಪ.ಬಂಗಾಳದಲ್ಲಿ ಮೊದಲ ಹಂತದಲ್ಲಿ 152 ಸ್ಥಾನಗಳಿಗೆ ಮತದಾನ ನಡೆದಿದ್ದು, ಇಷ್ಟು ದೊಡ್ಡ ಪ್ರಮಾಣದಲ್ಲಿ ಮತದಾನ ನಡೆದಿರುವುದು ಇದೇ ಪ್ರಥಮ.

ದಾಖಲೆ ಪ್ರಮಾಣದಲ್ಲಿ ಮತದಾನ ನಡೆಯಲು ಕಾರಣವೇನು ಹಾಗೂ ಹೆಚ್ಚು ಮತದಾನವಾಗಿರುವುದು ಯಾವ ಪಕ್ಷಕ್ಕೆ ಹೆಚ್ಚು ಲಾಭ ತರಲಿದೆ ಎಂಬುದರ ಲೆಕ್ಕಾಚಾರವೂ ಈಗ ನಡೆದಿದೆ. ಬಹುತೇಕವಾಗಿ ಅಧಿಕ ಮತದಾನವಾಗಿರುವುದನ್ನು 'ಆಡಳಿತ ವಿರೋಧಿ ಅಲೆ'ಯ ಪ್ರಭಾವವೆಂದು ವಿಶ್ಲೇಷಿಸಲಾಗುತ್ತದಾದರೂ, ಎಲ್ಲಾ ಬಾರಿ ಅದನ್ನೇ ಪರಿಗಣಿಸಲಾಗುವುದಿಲ್ಲ. ಬಿಜೆಪಿಯಂತೂ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಆಡಳಿತ ಉರುಳುವುದು ಖಚಿತ, ಆಕೆಯ ಆಡಳಿತದಿಂದ ರೋಸಿರುವ ಜನರೇ ಈ ಪ್ರಮಾಣದಲ್ಲಿ ಮತದಾನ ಮಾಡಿದ್ದಾರೆ ಎಂದು ಹೇಳಿಕೊಂಡಿದೆ. ಆದರೆ ಅತಿ ಹೆಚ್ಚ ಮತದಾನವಾಗಿರುವುದು ತಮಗೇ ಲಾಭ ಎಂದು ಟಿಎಂಸಿ ಹೇಳಿಕೊಂಡಿದೆ. ಇತ್ತ ತಮಿಳುನಾಡಿನಲ್ಲಿ ಅಧಿಕ ಮತದಾನ ಆಗಿರುವುದು ಆಡಳಿತಾರೂಢ ಡಿಎಂಕೆಗೆ ತುಸು ತಲೆಬೇನೆ ತಂದಿದ್ದರೆ ಅದು ಸಹಜವೇ. ಇಲ್ಲಿನ ರಾಜಕೀಯ ವೀಕ್ಷಕರು ಮಾತ್ರ ಭಾರೀ ಮತದಾನವು ಡಿಎಂಕೆಗೆ ಪ್ರತಿಕೂಲವಾಗಲಿದೆ ಎಂದು ವಿಶ್ಲೇಷಿಸುತ್ತಿದ್ದಾರೆ.

ಈ ಬಾರಿಯ ವಿಧಾನಸಭಾ ಚುನಾವಣೆಗಳಲ್ಲಿ ಅಧಿಕ ಮತದಾನವಾಗಲು 'ಮತದಾರ ಪಟ್ಟಿಯ ವಿಶೇಷ ಪರಿಷ್ಕರಣೆ' (ಎಸ್ಐಆರ್) ಕೂಡಾ ಸ್ವಲ್ಪ ಮಟ್ಟಿಗೆ ಕಾರಣವಾಗಿದೆ ಎಂಬುದನ್ನು ತಳ್ಳಿ ಹಾಕಲಾಗುವುದಿಲ್ಲ. ಮತದಾರ ಪಟ್ಟಿಯಲ್ಲಿ ಮತದಾರರ ಸಂಖ್ಯೆಯು ಈಗ ಹಿಂದಿನದಕ್ಕಿಂತ ಕ್ಷೀಣಿಸಿರುವುದರಿಂದ ಮತದಾನ ಪ್ರಮಾಣವು ಅಧಿಕವಾಗಿ ದಾಖಲಾಗುವುದು ಸಹಜವೇ ಆಗಿದೆ.

ಈ ವಿಶ್ಲೇಷಣೆಗಳು ಯಾವ ಬಗೆಯಲ್ಲೇ ಫಲಿತಾಂಶ ನೀಡಲಿ, ಒಂದು ವಿಷಯವನ್ನು ಮಾತ್ರ ಅಲ್ಲಗಳೆಯಲಾಗುವುದಿಲ್ಲ. ಭಾರತದ ಪ್ರಜಾತಂತ್ರವು ಜಗತ್ತಿಗೇ ಅತ್ಯಂತ ಮಾದರಿಯಾಗಿರುವುದನ್ನು ಇದು ತೋರ್ಪಡಿಸಿದೆ. ದೇಶದ ಜನರು ತಮ್ಮ ಸರಕಾರವನ್ನು ಆರಿಸುವ ನಿಟ್ಟಿನಲ್ಲಿ ಅತ್ಯಂತ ಉತ್ಸಾಹದಿಂದ ಕಾರ್ಯಾಚರಿಸಿರುವುದು ಇದರಿಂದ ಕಂಡುಬರುತ್ತದೆ. ಪಶ್ಚಿಮ ಬಂಗಾಳದಂತಹ ರಾಜ್ಯದಲ್ಲಿ ಚುನಾವಣಾ ಅಕ್ರಮ, ಹಿಂಸೆ ಮೊದಲಾದವು ಕೂಡಾ ತಹಬಂದಿಗೆ ಬಂದಿರುವುದನ್ನು ಇದು ತೋರ್ಪಡಿಸಿದೆ.

ಚಿಕ್ಕದಾದರೂ ಬೆಟ್ಟದಂತೆ

ಯದಾ ಪ್ರಿಯೋ ದೋಷಭಾಕ್ ಸ್ಯಾತ್ ತದಾಲ್ಪೋ ಭಾತಿ ದೋಷಕಃ ।
ಅಪ್ರಿಯೇ ತು ಸ್ಥಿತೋ ದೋಷಃ ಸ್ವಲ್ಪೋ ಭೂಮಿಧರಾಯತೇ ॥ -ಸುವಚನಶತಕಂ

ನಮಗೆ ಇಷ್ಟವಾದವರಲ್ಲಿ ಯಾವ ದೋಷವಿದ್ದರೂ ಅದು ಸಣ್ಣ ದೋಷ ಎನಿಸುತ್ತದೆ. ನಮಗೆ ಇಷ್ಟವಿಲ್ಲದವರ ದೋಷವು ಚಿಕ್ಕದಾದರೂ ಬೆಟ್ಟದಂತೆ ದೊಡ್ಡದಾಗಿ ಕಾಣಿಸುತ್ತದೆ –ಎಂಬುದು ಶ್ಲೋಕಾರ್ಥ.

ಮನುಷ್ಯ ಪ್ರಪಂಚದ ವ್ಯವಹಾರವು ವೈವಿಧ್ಯದಿಂದ ಕೂಡಿದೆ. ಮನುಷ್ಯ ಅವನನ್ನೇ ಕೇಂದ್ರವಾಗಿರಿಸಿಕೊಂಡು ವ್ಯವಹರಿಸುತ್ತಾನೆ. ಈ ಕಾರಣಕ್ಕಾಗಿ ತನಗೆ ಇಷ್ಟವಾದವರು ಕೆಡುಕು ಮಾಡಿದರೂ ಅವನಿಗೆ ಅದು ಕೇಡು ಎನಿಸುವುದಿಲ್ಲ. ತನಗೆ



ಇಷ್ಟವಿಲ್ಲದವರಿಂದ ಒಳಿತಾದರೂ ಆತ ಒಳಿತಾಯಿತೆಂದು ಭಾವಿಸುವುದಿಲ್ಲ.

ಸಂಸ್ಕೃತದಲ್ಲಿ 'ಯಥಾದೃಷ್ಟಿ ತಥಾ ಸೃಷ್ಟಿ ' ಎಂಬ ಉಕ್ತಿ ಅತ್ಯಂತ ಪ್ರಸಿದ್ಧ. ಇದು ಮನುಷ್ಯನ ಸಹಜ ಗುಣ ಸ್ವಭಾವವನ್ನು ತೆರೆದಿರಿಸುತ್ತದೆ. ತನಗೆ ಪೂರಕವಾದ ವಾತಾವರಣವಿದ್ದರೆ ತನಗೆ ಬೇಕಾದವರ ಜೊತೆಗೆ ವ್ಯವಹಾರ ನಡೆಸಬೇಕಾದರೆ ಎಷ್ಟೇ ದೋಷವಿದ್ದರೂ ದೋಷವನ್ನು ಅಷ್ಟಾಗಿ ಎಣಿಸದೆ ವ್ಯವಹಾರ ಸಾಗುತ್ತದೆ. ಯಾವ ಆತಂಕವೂ ಎದುರಾಗುವುದಿಲ್ಲ.

ಇದಕ್ಕೆ ವ್ಯತಿರಿಕ್ತವಾಗಿ ಅಂದರೆ ತನಗೆ ಒಪ್ಪಿತರೆನಿಸದವರೊಂದಿಗೆ ವ್ಯವಹರಿಸುವಾಗ ಅವರಲ್ಲಿರುವ ಸಣ್ಣಪುಟ್ಟ ದೋಷಗಳು ದೊಡ್ಡದಾಗಿ ಕಾಣುತ್ತವೆ. ಅವರಾಡುವ ಸಾಮಾನ್ಯ ಮಾತುಗಳೂ ನಮಗೆ ಅಷ್ಟಾಗಿ ರುಚಿಸುವುದಿಲ್ಲ.

ಇಂತಹ ಲೋಕಸಹಜವಾದ ಸ್ವಭಾವವನ್ನು ಕವಿಯು ಪ್ರಕೃತ ಶ್ಲೋಕದಲ್ಲಿ ನಿರೂಪಿಸುತ್ತಾನೆ. ಕವಿ ಕಥನದ ತಾತ್ಪರ್ಯವನ್ನು ಈ ಪ್ರಕಾರವಾಗಿ ನಾವು ಗ್ರಹಿಸಬಹುದು. ಎಲ್ಲರೊಂದಿಗೂ ಸದ್ಭಾವವನ್ನು ಬೆಳೆಸಿಕೊಳ್ಳಬೇಕು. ಲೋಕದಲ್ಲಿ ವ್ಯವಹಾರ ನಡೆಸುವ ನಾವು ನಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಬೇಕು. ನಮ್ಮ ಆಚಾರ- ವಿಚಾರ ವ್ಯವಹಾರಗಳಲ್ಲಿ ಕಿಂಚಿತ್ ಔದಾರ್ಯವನ್ನು ರೂಢಿಸಿಕೊಳ್ಳಬೇಕು. ದೋಷೈಕ್ಯ ದೃಷ್ಟಿಯ ಬದಲಾಗಿ ಗುಣಗ್ರಾಹಿ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು. ಜಗತ್ತಿನಲ್ಲಿ ದೋಷವಿಲ್ಲದ ವಸ್ತು ಯಾವುದೂ ಇಲ್ಲ. ಒಂದಲ್ಲ ಒಂದು ಬಗೆಯ ದೋಷ ಸ್ವಲ್ಪಮಟ್ಟಿಗಾದರೂ ಇರುತ್ತದೆ.

ಬದುಕೆಂದ ಮೇಲೆ ಒಂದಷ್ಟು ಕೊರತೆಗಳು ಇದ್ದೇ ಇರುತ್ತವೆ. ಯಾರ ಬದುಕೂ ಪರಿಪೂರ್ಣವಲ್ಲ. ಯಾರೂ ಪರಿಪೂರ್ಣರಲ್ಲ. ಯಾರೇ ಕೆಲಸ ಮಾಡಲಿ, ನೂರಕ್ಕೆ ನೂರರಷ್ಟು ಸರಿ ಎನ್ನುವಂತಿಲ್ಲ. ಇದನ್ನು ಗಮನದಲ್ಲಿರಿಸಿ ಜೀವನವನ್ನು ನಿರ್ವಹಿಸಬೇಕು. ಎಲ್ಲರೊಂದಿಗೆ ಪ್ರೀತಿಯನ್ನು ಇರಿಸಿಕೊಂಡಾಗ ದೋಷವು ದೂರಾಗಿ ಗುಣವು ಕಾಣಿಸುತ್ತದೆ. ದೋಷವನ್ನು ನೋಡಿ ದೂರುವುದಕ್ಕಿಂತ ಗುಣ ನೋಡಿ ಹೊಗಳುವುದನ್ನು ರೂಡಿಸಿಕೊಳ್ಳಬೇಕು.

ಆಗ ಎಲ್ಲರೂ ಇಷ್ಟವಾಗುತ್ತಾರೆ. ಎಲ್ಲರಿಗೂ ಇಷ್ಟವಾಗುತ್ತೇವೆ. ಎಲ್ಲರೂ ನಮಗೆ ಹೊಂದಿಕೊಳ್ಳಬೇಕು, ನಮಗೆ ಬೇಕಾದ ರೀತಿಯಲ್ಲಿ ಅವರು ನಡೆದುಕೊಳ್ಳಬೇಕು ಎಂಬುದನ್ನು ಬಿಟ್ಟು ನಾವೇ ಹೊಂದಿಕೊಂಡು ಬದುಕಬೇಕು. ಇತರರಿಗೆ ಪೂರಕವಾದ ರೀತಿಯಲ್ಲಿ ನಮ್ಮ ನಡೆ ನುಡಿಯನ್ನು ಬದಲಾಯಿಸಿಕೊಳ್ಳಬೇಕು.

ಸಹಸ್ರಾರ ಮತ್ತು ಸೂರ್ಯ ರೇಖೆ

ಕಠಿಣ ಶ್ರಮ, ಸಾಧನೆ, ತಪಸ್ಸಿನಿಂದ ಹಣೆಬರೆಹವನ್ನು ಕೂಡಾ ಬದಲಾಯಿಸಲು ಸಾಧ್ಯ.

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಸಹಸ್ರಾರ ಎಂದರೆ ನೀವು ಪ್ರಕೃತಿಯೊಂದಿಗೆ, ಪರಮಾತ್ಮನೊಂದಿಗೆ, ಈ ವಿಶ್ವದೊಳಗೆ ಲೀನವಾಗುವ ಕೇಂದ್ರ. ಬರೀ ಲೀನವಾಗುವ ಮಾತ್ರವಲ್ಲ, ಮತ್ತೆ ಹಿಂತಿರುಗಿ ಲೌಕಿಕಕ್ಕೆ ಬರುವ ಮತ್ತೆ ಲೀನವಾಗುವ ಹೀಗೆ ಲೌಕಿಕದಲ್ಲಿದ್ದೂ ಅಲೌಕಿಕವನ್ನು ಪಡೆಯುವ ಸಾಧನೆ. ಉನ್ನತ ಪ್ರಜ್ಞೆಯನ್ನು ಹೊಂದುವ ಪ್ರದೇಶ. ಅದನ್ನು ನೀವು ಹೊಂದುವಿರಾದರೆ ನಿಮ್ಮ ಕೈಯಲ್ಲಿರುವ ಸೂರ್ಯ ರೇಖೆಯು ಅದನ್ನು ತೋರಿಸುತ್ತದೆ. ಮಣಿಕಟ್ಟಿನಿಂದ ಬರುವ ಸೂರ್ಯ ರೇಖೆಯು ಸೂರ್ಯ ಪರ್ವತವನ್ನು ತಲುಪಿ ಅಲ್ಲಿ ತ್ರಿಶೂಲದಂತೆ ಮೂರು ಕವಲೊಡೆದರೆ ನಿಮಗೆ ಕೈಲಾಸ ಪ್ರಾಪ್ತಿ. ಅಂದರೆ ಸಹಸ್ರಾರದಲ್ಲಿರುವ ಸಹಸ್ರ ದಳಗಳ ಕಮಲ ನಿಮ್ಮಲ್ಲಿ ಅರಳುವುದು ಖಚಿತ. ಒಂದೊಮ್ಮೆ ತ್ರಿಶೂಲದ ಬದಲು ನಕ್ಷತ್ರ ಚಿಹ್ನೆಯನ್ನು ಹೊಂದಿದ್ದರೆ ಆಗಲೂ ಸಹಾ ನಿಮಗೆ ಕೈವಲ್ಯ ಪ್ರಾಪ್ತಿಯಾಗುತ್ತದೆ. ಬದುಕಿರುವಾಗಲೇ ನೀವು ಸಹಸ್ರಾರದಲ್ಲಿರುವ ಸಹಸ್ರ ದಳಗಳ ಕಮಲವು ವಿಕಸಿಸುವುದನ್ನು ಕಾಣುವಿರಿ.

ಇದು ಅತ್ಯುನ್ನತ ಸ್ಥಿತಿ. ಇಲ್ಲಿ ವ್ಯಕ್ತಿಯು ಲೌಕಿಕದ ಯಾವ ಅಪೇಕ್ಷೆಯನ್ನೂ ಸಹಾ ಹೊಂದಿರುವುದಿಲ್ಲ. ಕೇವಲ ಆಧ್ಯಾತ್ಮಿಕ ಜ್ಞಾನವನ್ನು ಪಡೆದುಕೊಂಡು ಪಾರಮಾರ್ಥಿಕ ಸಂವೇದನೆಯನ್ನು ಪಡೆಯುತ್ತಿರುತ್ತಾನೆ. ಈ ಮೂಲಕ ವಿಶ್ವವ್ಯಾಪಿ ಪ್ರಸಿದ್ಧಿಯನ್ನು ಪಡೆಯುತ್ತಾನೆ.

ಹೀಗೆ ಹಸ್ತದಲ್ಲಿರುವ ಸೂರ್ಯ ರೇಖೆಯು ದೇಹದೊಳಗೆ ಅಂತರ್ಗತವಾಗಿರುವ ಕುಂಡಲಿನಿ ಶಕ್ತಿಯೊಂದಿಗೆ ಬೆರೆತು ಜೀವನವನ್ನು ದಿವ್ಯವಾಗಿಸುತ್ತದೆ. ಯಾವ ಚಕ್ರವು ಹೆಚ್ಚು ಸಕ್ರಿಯವಾಗಿದೆ ಎನ್ನುವುದನ್ನು ಸೂರ್ಯ ರೇಖೆಯ ಆರಂಭದ ಸ್ಥಾನವು ತಿಳಿಸುತ್ತದೆ. ನೀವು ಕುಂಡಲಿನಿ ಸಾಧನೆಯನ್ನು ಮಾಡುತ್ತಾ ಬಂದಂತೆ ಸೂರ್ಯ ರೇಖೆಯು ಇನ್ನಷ್ಟು ಸ್ಪಷ್ಟವಾಗುತ್ತಾ ಹೋಗುತ್ತದೆ. ಅದರ ಮೇಲಿನ ಮಚ್ಚೆಗಳು, ಕಪ್ಪು ಕಲೆಗಳು, ಕತ್ತರಿಸಿದ ಗುರುತುಗಳು ಮಾಯವಾಗುತ್ತಾ ರೇಖೆಯು ಪ್ರಕಾಶಮಾನವಾಗುತ್ತಾ ಹೋಗುತ್ತದೆ.

ಸಾಧನೆಯ ಪ್ರತಿಫಲ

ಕುಂಡಲಿನಿ ಶಕ್ತಿಯನ್ನು ನಮ್ಮ ಆಂತರಿಕ ಜಾಗೃತಿಗೆ ಉತ್ತೇಜಿಸುತ್ತೇವೆ. ಹೀಗೆ ಉತ್ತೇಜನ ನೀಡಿದಂತೆ ಸೂರ್ಯ ರೇಖೆಯು ಬಲಗೊಳ್ಳುತ್ತಾ ಹೋಗುತ್ತದೆ. ಅದನ್ನು ನೀವು ನಿಮ್ಮ ಕೈಯಲ್ಲಿ ಕಾಣಬಹುದು. ಸೂರ್ಯ ರೇಖೆಯೇ ಇಲ್ಲದವರಿಗೂ ಸಹಾ ಕುಂಡಲಿನಿ ಜಾಗೃತವಾದರೆ ಸೂರ್ಯ ರೇಖೆಯು ಮೂಡುತ್ತಾ ಹೋಗುತ್ತದೆ. ಅವರ ಸಾಧನೆಯು ಹೆಚ್ಚುತ್ತಾ ಹೋದಂತೆ ಮಣಿಕಟ್ಟಿನಿಂದಲೇ ಉಂಗುರ ಬೆರಳಿನವರೆಗೂ ವ್ಯಾಪಿಸುತ್ತದೆ. ಅಂದರೆ ನಿಮ್ಮ ಸಾಧನೆಯು ನಿಮ್ಮ ಭವಿಷ್ಯವನ್ನು ರೂಪಿಸಿದಂತೆ. ನಿಮ್ಮ ತಪಸ್ಸು ನಿಮ್ಮ ಶಕ್ತಿಯನ್ನು ಹೆಚ್ಚಿಸಿದಂತೆ. ನಿಮ್ಮ ಶ್ರಮವು ನಿಮಗೆ ಯಶಸ್ಸನ್ನು ತಂದುಕೊಟ್ಟಂತೆ. ಸೂರ್ಯ ರೇಖೆಯು ದಟ್ಟವಾಗುತ್ತಾ ಹೋಗುತ್ತದೆ.

ಒಂದೊಮ್ಮೆ ನಿಮ್ಮ ಹಣೆಬರಹದಲ್ಲಿ ಇರುವುದೇ ಆಗುತ್ತದೆ ಎಂದು ನೀವು ಸಾಧನೆ ಮಾಡುವುದನ್ನು, ಶ್ರಮ ಪಡುವುದನ್ನು, ತಪಸ್ಸು ಮಾಡುವುದನ್ನು ಮಾಡದಿದ್ದರೆ ಹಣೆಬರೆಹ ಎಂದಿಗೂ ಬದಲಾಗುವುದಿಲ್ಲ. ಹೌದು ಹಣೆಬರೆಹ ವನ್ನೂ ಸಹಾ ಬದಲಾಯಿಸಲು ಕಠಿಣ ಶ್ರಮ, ಸಾಧನೆ, ತಪಸ್ಸಿನಿಂದ ಸಾಧ್ಯ ಎಂದು ಪುರಾಣಗಳಲ್ಲಿ ನೀವು ಹಿಂದೆಯೇ ಓದಿದ್ದೀರಿ. ನೀವು ಇದನ್ನೆಲ್ಲಾ ಮಾಡಿದಂತೆ ಸೂರ್ಯ ರೇಖೆಯು ದೋಷ ರಹಿತವಾಗಿ, ಪ್ರಕಾಶಮಾನವಾಗಿ ಕಾಣಿಸುತ್ತದೆ. ಕುಂಡಲಿನಿ ಶಕ್ತಿಯು ಕಲ್ಮಶಗಳಿಂದ ಮುಕ್ತವಾಗಿ ಶುದ್ಧವಾಗುತ್ತಾ ಹೋಗುತ್ತದೆ.

ಸೂರ್ಯ ರೇಖೆಯು ನಿಮ್ಮ ಅಂಗೈಯಲ್ಲಿ ಇರುವುದು ಒಂದು ಲೌಕಿಕ ಸಂಗತಿ ಮಾತ್ರವಲ್ಲ. ಅದು ನಿಮ್ಮ ದೇಹವನ್ನು ಪ್ರತಿಬಿಂಬಿಸುವ ಗೆರೆಯಾಗಿದೆ. ಏಳು ಚಕ್ರಗಳ ವಿಕಾಸದ ಹಾದಿಯಾಗಿದೆ. ಕುಂಡಲಿನಿಯು ಒಂದೊಂದೇ ಚಕ್ರವನ್ನು ದಾಟಿದಂತೆ ಸೂರ್ಯ ರೇಖೆಯೇ ಬದಲಾಗುತ್ತದೆ. ವ್ಯಕ್ತಿಯ ಭವಿಷ್ಯವೇ ಬದಲಾಗುತ್ತದೆ. ಅವರ ಪ್ರಭಾವ ಎಲ್ಲೆಡೆಗೂ ಪಸರಿಸುತ್ತದೆ. ಅವರು ನಾಯಕರಾಗುತ್ತಾರೆ. ಅವರು ದಾರ್ಶನಿಕರಾಗುತ್ತಾರೆ. ಅವರು ಯೋಗಿಗಳಾಗುತ್ತಾರೆ. ಅಧಿಕಾರಿಗಳಾಗುತ್ತಾರೆ. ಪ್ರೇಮಮಯಿಗಳಾಗುತ್ತಾರೆ. ಶ್ರೀಮಂತರಾಗುತ್ತಾರೆ. ಕಲಾವಿದರಾಗುತ್ತಾರೆ. ಸಂಗೀತ ಸಾಮ್ರಾಟರಾಗುತ್ತಾರೆ. ಶ್ರೇಷ್ಠ ನಟರಾಗುತ್ತಾರೆ. ಶಿಕ್ಷಣ ತಜ್ಞರಾಗುತ್ತಾರೆ.

ಚಿಹ್ನೆಗಳಿಂದ ಅಭ್ಯುದಯ

ಸೂರ್ಯ ರೇಖೆಯ ಮೇಲೆ ಅಥವಾ ತುದಿಯಲ್ಲಿ ಕೆಲವು ಚಿಹ್ನೆಗಳು ಇದ್ದರೆ ಅದರ ಶಕ್ತಿಯು ದ್ವಿಗುಣವಾಗುತ್ತದೆ ಅಥವಾ ಅಪಾರವಾಗುತ್ತದೆ.

ಚೌಕದ ಚಿಹ್ನೆ: ಇದೊಂದು ರಕ್ಷಾ ಚಿಹ್ನೆ. ಯಾವುದೇ ತೊಡಕುಗಳನ್ನು ಈ ಚೌಕ ಚಿಹ್ನೆ ನಿವಾರಿಸುತ್ತದೆ. ಉದಾಹರಣೆಗೆ ದ್ವೀಪ ಚಿಹ್ನೆಯಿಂದ ಉಂಟಾಗುವ ಕಂಟಕಗಳನ್ನು ಈ ಚೌಕ ಚಿಹ್ನೆ ನಿಷ್ಕ್ರಿಯಗೊಳಿಸುತ್ತದೆ. ಅಪವಾದ ಬರುವುದನ್ನು ತಡೆಯುತ್ತದೆ. ದೊಡ್ಡ ನಷ್ಟ ಆಗುವುದನ್ನು ತಪ್ಪಿಸುತ್ತದೆ. ಒಂದೊಮ್ಮೆ ತಡೆಗಳು ಬಂದರೂ ಅದು ತಾತ್ಕಾಲಿಕವಾಗಿರುತ್ತದೆ. ಬಳಿಕ ಮರುಚೇತರಿಕೆ ಉಂಟಾಗುವಂತೆ ಚೌಕ ಚಿಹ್ನೆಯು ನೋಡಿಕೊಳ್ಳುತ್ತದೆ. ಕಾನೂನಿನ ತೊಡಕುಗಳು, ಮಾನಹಾನಿ, ಬಂಧನ ಇತ್ಯಾದಿಗಳು ಬಂದರೂ ಸಹಾ ಚೌಕದ ಚಿಹ್ನೆಯು ನಿಮ್ಮ ಸೂರ್ಯ ರೇಖೆಯ ಮೇಲೆ ಇದ್ದರೆ ತಡೆಯುತ್ತದೆ. ಅಂದರೆ ಸಮಾಜದಲ್ಲಿ ನೀವು ತುಂಬಾ ಹೆಸರು ಮಾಡುವ ಕಾರಣ ಅವುಗಳೆಲ್ಲಾ ಬಂದಂತೆ ಕರಗಿಹೋಗುತ್ತವೆ. ಚೌಕವು ಸೂರ್ಯ ರೇಖೆಯನ್ನು ಸಂಪೂರ್ಣವಾಗಿ ಸುತ್ತುವರೆದಿದ್ದರೆ; ರಕ್ಷಣೆ ಬಲವಾಗಿರುತ್ತದೆ. ಅದರೊಳಗೆ ದ್ವೀಪವಾಗಲೀ, ಅಡ್ಡಗೆರೆಗಳಾಗಲೀ ಇದ್ದರೆ ಕಷ್ಟ ಬರುತ್ತದೆ ಮತ್ತು ಅದರಿಂದ ಬೇಗ ಪಾರಾಗುತ್ತೀರಿ. ಚೌಕವು ಸಣ್ಣದಾಗಿದ್ದು ಸೂರ್ಯ ರೇಖೆಯು ಅದಕ್ಕಿಂತಲೂ ಮುಂದುವರೆದಿದ್ದರೆ, ಯಶಸ್ಸು ಮತ್ತೆ ಮತ್ತೆ ಸಿಗುತ್ತದೆ. ಸೂರ್ಯ ರೇಖೆ ನಿಂತರೆ ಆ ಕ್ಷೇತ್ರದ ಬಗ್ಗೆ ನಿಮ್ಮ ಆಸಕ್ತಿ ಹೋಗುತ್ತದೆ. ಚೌಕವು ಎಂತಹಾ ಅಶುಭವನ್ನೂ ಸಹಾ ಶುಭಕರವಾಗಿ ಮಾಡುತ್ತದೆ.

ನಕ್ಷತ್ರ ಚಿಹ್ನೆ: ಸೂರ್ಯ ರೇಖೆಯ ಮೇಲೆ ಎಲ್ಲಿಯಾದರೂ ನಕ್ಷತ್ರ ಚಿಹ್ನೆ ಇದ್ದರೆ ಅಂತಹಾ ವ್ಯಕ್ತಿಯು ವಿಶ್ವ ವಿಖ್ಯಾತರಾಗುತ್ತಾರೆ. ಮಣಿಕಟ್ಟಿನ ಬುಡದಲ್ಲೇ ಇದ್ದರೆ ಅವರು ಬಾಲ್ಯದಲ್ಲೇ ಪ್ರಖ್ಯಾತಿಯನ್ನು ಪಡೆಯುತ್ತಾರೆ. ಅಂದರೆ ನಕ್ಷತ್ರವು ರಾಜಯೋಗದ ಸೂಚನೆ. ಕೇವಲ ಒಂದು ಘಟನೆ ಮಾತ್ರ ಸಾಕು ನಿಮಗೆ ಹೆಸರು, ಹಣ ಮತ್ತು ಮನ್ನಣೆ ಸಿಗುತ್ತದೆ. ವಿಶೇಷವಾಗಿ ಕಲಾ ಪ್ರಕಾರ, ಮಾಧ್ಯಮ, ಸಾರ್ವಜನಿಕ ಕ್ಷೇತ್ರಗಳಲ್ಲಿ ಇರುವವರಿಗೆ ಇದು ತುಂಬಾ ಸಹಾಯ ಮಾಡುತ್ತದೆ. ಅವರ ಜೀವನದಲ್ಲಿ ದೊಡ್ಡ ಬ್ರೇಕ್ ನೀಡುತ್ತದೆ. ಸೂರ್ಯ ರೇಖೆಯ ತುತ್ತ ತುದಿಯಲ್ಲಿ ನಕ್ಷತ್ರ ಇದ್ದರೆ ಅವರು ಮರಣಾನಂತರವೂ ಅನೇಕ ವರ್ಷಗಳ ಕಾಲ ಜಗತ್ತಿನಲ್ಲೇ ನೆನಪಲ್ಲಿ ಉಳಿಯುತ್ತಾರೆ. ದೊಡ್ಡ ಕೀರ್ತಿಯನ್ನು ಧನ ಲಾಭವನ್ನೂ ಸಹಾ ಹೊಂದುತ್ತಾರೆ. ಸೂರ್ಯ ರೇಖೆಯ ಮಧ್ಯದಲ್ಲಿ ನಕ್ಷತ್ರ ಇದ್ದರೆ, ಮಧ್ಯ ವಯಸ್ಸಿನಲ್ಲಿ ಏರಿಕೆ ಕಾಣುತ್ತದೆ. ಕೆಲವು ಆಘಾತವೂ ಉಂಟಾಗಬಹುದು. ಆದರೆ ನಕ್ಷತ್ರದ ಬಳಿಕ ಸಹಾ ರೇಖೆ ಮುಂದುವರೆದಿರಬೇಕು. ಇಲ್ಲದಿದ್ದರೆ ಅಪವಾದ ಕಟ್ಟಿಟ್ಟದ್ದು. ಹಾಗೂ ವಿವಾದ ಪದೇ ಪದೇ ಬರುತ್ತದೆ.

ನಕ್ಷತ್ರ ಎಂದರೆ ವಿಶೇಷವಾದ ಶಕ್ತಿ. ಅದನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ನಿಮ್ಮೊಳಗೆ ಇರಬೇಕಾದ್ದು ತುಂಬಾ ಮುಖ್ಯ. ಅದಕ್ಕಾಗಿಯೇ ಕುಂಡಲಿನಿಯನ್ನು ನೀವು ಸಾಧನೆ ಮಾಡಬೇಕು. ಅನ್ಯಥಾ ನಿತ್ಯ ಅನುಷ್ಠಾನವನ್ನಾದರೂ ಮಾಡಬೇಕು. ಸೂರ್ಯ ರೇಖೆಯು ದುರ್ಬಲವಾಗಿದ್ದರೆ ಅಥವಾ ಹಾನಿಗೊಳಗಾಗಿದ್ದರೆ ಆಗ ನಕ್ಷತ್ರವು ವ್ಯತಿರಿಕ್ತವಾದ ಪರಿಣಾಮವನ್ನು ಮಾಡಬಹುದು. ಜೈಲಿಗೂ ಸೇರಿಸಬಹುದು. ಚೌಕವು ಯಶಸ್ಸನ್ನು ನೀಡಿದರೆ, ನಕ್ಷತ್ರವು ಹಠಾತ್ ಯಶಸ್ಸನ್ನು ನೀಡುತ್ತದೆ. ಎರಡೂ ಒಂದೊಮ್ಮೆ ಇದ್ದರೆ ಸಮತೋಲನ. ಅಥವಾ ದುರ್ಬಲ ಸೂರ್ಯ ರೇಖೆಯ ಮೇಲಿನ ನಕ್ಷತ್ರದಿಂದ ಆಗುವ ಹಿನ್ನಡೆಯನ್ನು ಚೌಕವು ತಪ್ಪಿಸುತ್ತದೆ. ಸೂರ್ಯ ರೇಖೆಯು ಅಲ್ಲಲ್ಲಿ ಕತ್ತರಿಸಿ ಮುಂದುವರೆಯದೇ ಹೋಗಿದ್ದರೆ, ಆಗ ಅದರಿಂದಾಗುವ ಅನಾಹುತವನ್ನು ತಡೆಯುವುದು ಕಷ್ಟ.

ತ್ರಿಕೋನ ಚಿಹ್ನೆ: ಸೂರ್ಯ ರೇಖೆಯ ಮೇಲೆ ಎಲ್ಲಾದರೂ ತ್ರಿಕೋನದ ಚಿಹ್ನೆ ಇದ್ದರೆ ಆತ ಕೀರ್ತಿ ಪಿಪಾಸುವಾಗಿರುತ್ತಾನೆ. ಅಂತಹವರನ್ನು ವಿಶೇಷ ಪ್ರತಿಭೆ ಎಂದು ಕರೆಯಬಹುದು. ಯಶಸ್ಸು, ಕೀರ್ತಿಗಳನ್ನು ಅವರು ತಮ್ಮ ಸ್ವಂತ ಬಲದಿಂದ ಪಡೆಯುತ್ತಾರೆ. ಯಾವುದಾದರೂ ಒಂದು ಆವಿಷ್ಕಾರವನ್ನು ಮಾಡಿಯೇ ಸಿದ್ಧ. ದೊಡ್ಡ ದೊಡ್ಡ ಐಡಿಯಾಗಳು ಹೊಳೆದು ಅವರು ಅದನ್ನು ತಕ್ಷಣದಲ್ಲಿಯೇ ಕಾರ್ಯ ರೂಪಕ್ಕೆ ತರುತ್ತಾರೆ. ಅದೃಷ್ಟವನ್ನು ಇವರು ನಂಬುವುದೇ ಇಲ್ಲ. ಬದಲಿಗೆ ತಮ್ಮ ಶ್ರಮದ ಮೇಲೆ ನಂಬಿಕೆ. ಸ್ವ ಪ್ರಯತ್ನದಿಂದ ಇವರು ಎಲ್ಲವನ್ನೂ ಸಾಧಿಸುತ್ತಾರೆ. ತ್ರಿಕೋನವು ದ್ವೀಪ, ಕತ್ತರಿಸಿರುವುದು, ಮಚ್ಚೆ ಇವುಗಳ ಹಿಂದೆ ಇದ್ದರೆ ಹಣಕಾಸಿನ ನಷ್ಟ ಮತ್ತು ಅಪವಾದ ಬಂದೇ ಬರುತ್ತದೆ. ಅದೇ ಇವೆಲ್ಲದರ ಬಳಿಕ ತ್ರಿಕೋನ ಇದ್ದರೆ ಎಲ್ಲವನ್ನೂ ಸಹಾ ಸರಿತೂಗಿಸುವ ಶಕ್ತಿ ವ್ಯಕ್ತಿಯಲ್ಲಿ ಉಂಟಾಗುತ್ತದೆ. ಯಾವುದೇ ಕೆಲಸವನ್ನೂ ಮಾಡುವುದಾದರೂ ಇವರು ಆಲೋಚನೆ ಮಾಡದೇ, ತಂತ್ರವನ್ನು ರೂಪಿಸದೇ ಮಾಡುವುದೇ ಇಲ್ಲ. ಸೂರ್ಯ ರೇಖೆಯ ತುದಿಯಲ್ಲಿ ತ್ರಿಕೋನ ಇದ್ದರೆ ವೃದ್ಧಾಪ್ಯದಲ್ಲೂ ಅವರೇ ಗಳಿಸಿದ ಆಸ್ತಿಯು ಅವರನ್ನು ರಕ್ಷಣೆ ಮಾಡುತ್ತದೆ. ಮಧ್ಯದಲ್ಲಿ ಇದ್ದರೆ, ಮಧ್ಯ ವಯಸ್ಸಿನಲ್ಲಿ ಕೀರ್ತಿ, ಗೌರವ, ಅಧಿಕಾರ, ಹಣ ಎಲ್ಲಾ ಹರಿದು ಬರುತ್ತದೆ. ದೊಡ್ಡ ಅವಕಾಶ, ಪ್ರಮೋಶನ್, ಉನ್ನತ ಹುದ್ದೆ ಎಲ್ಲವೂ ಸಿಗುತ್ತದೆ. ಆರಂಭದಲ್ಲೇ ಇದ್ದರೆ ಅವರು ಶಾಲೆಯಲ್ಲಿ ಅತ್ಯುತ್ತಮ, ಪ್ರತಿಭಾವಂತ ವಿದ್ಯಾರ್ಥಿ ಆಗಿರುತ್ತಾರೆ.

ತ್ರಿಕೋನವು ಸ್ಪಷ್ಟವಾಗಿದ್ದರೆ ಮಾತ್ರ ಪೂರ್ಣಫಲ ದೊರೆಯುತ್ತದೆ. ಅರ್ಧವಾಗಿದ್ದರೆ, ಗೆರೆಗಳು ಎತ್ತೆತ್ತಲೋ ಹೋಗಿದ್ದರೆ, ಅಡ್ಡಗೆರೆಗಳು ಇದ್ದರೆ ಫಲ ಕಡಿಮೆ. ಹೀಗೆ ತ್ರಿಕೋನದ ಚಿಹ್ನೆಯು ಲಕ್ಷ್ಮಿ ಮತ್ತು ಸರಸ್ವತಿಯರ ಸಮಾಗಮ.

ಮನೋನಿಯಂತ್ರಣವೇ ಎಲ್ಲ ಸಮಸ್ಯೆಗಳಿಗೆ ಪರಿಹಾರ

ಒಳನೋಟ
• ಹೆ.ಬಾ. ಮಲ್ಯ



ಇಂದು ಭಾರತವೂ ಸೇರಿದಂತೆ ಇಡೀ ಜಗತ್ತಿನಲ್ಲಿ ವಾತಾವರಣ ಹದಗೆಟ್ಟಿರುವುದು ಕಂಡು ಬರುತ್ತಿದೆ. ಎಲ್ಲೆಡೆ ಯುದ್ಧ, ಮತೀಯ ಸಂಘರ್ಷ, ಸಾಮಾಜಿಕ ಸಮಸ್ಯೆಗಳು, ಗೊಂದಲಗಳೇ ಎದ್ದು ಕಾಣುತ್ತಿವೆ. ಮನುಷ್ಯ ಸುಖವನ್ನು ಬಯಸುತ್ತಾನೆ. ಸುಖವನ್ನು ಅರಸುತ್ತಾನೆ. ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನ ಅನೇಕ ಸೌಲಭ್ಯಗಳನ್ನು ಒದಗಿಸಿದೆ. ಅನೇಕರ ಬಳಿ ಹೇರಳ ಹಣ, ಆಸ್ತಿ ಎಲ್ಲ ಇದೆ. ಆದರೆ ಮನಸ್ಸಿಗೆ ನೆಮ್ಮದಿ ಇಲ್ಲ. ಬಾಹ್ಯ ಭೌತಿಕ ಸೌಲಭ್ಯಗಳಿಂದ ಸುಖ ಸಿಗುತ್ತದೆ ಎಂಬುದು ಭ್ರಮೆ. ಸುಖ-ದುಃಖಗಳು ಮನಸ್ಸಿಗೆ ಸಂಬಂಧಪಟ್ಟವುಗಳು. ಸುಖವೆಂಬುದು ಮನಸ್ಸಿನ ಆಯ್ಕೆ. ಕೆಲವರು ಯಾವುದನ್ನು ಕಷ್ಟ-ದುಃಖಕರ ಎಂದೆಣಿಸುತ್ತಾರೋ ಅದರಲ್ಲೇ ಇನ್ನು ಕೆಲವರು ಸುಖವನ್ನು ಕಾಣುತ್ತಾರೆ. ಹಣವಿಲ್ಲದಿದ್ದರೂ, ಸರಳ ಜೀವನದಲ್ಲೇ ನೆಮ್ಮದಿಯಿಂದ ಬದುಕುವವರಿದ್ದಾರೆ. ಇದ್ದುದರಲ್ಲೇ ಸಂತೃಪ್ತಿ ಪಡುವವರಿದ್ದಾರೆ.

ಹಾಗಂತ ಕಾಲಚಕ್ರವನ್ನು ಹಿಂದಕ್ಕೆ ತಿರುಗಿಸಲಾಗುವುದಿಲ್ಲ. ಹಿಂದಿನ ಕಾಲಕ್ಕೆ ಹೋಗಲು ಸಾಧ್ಯವೂ ಇಲ್ಲ, ಹೋಗುವ ಅಗತ್ಯವೂ ಇಲ್ಲ. ಏನೇನು ಆಗಬೇಕೋ ಅದು ಆಗುತ್ತಲೇ ಹೋಗುತ್ತದೆ. ಅದರ ಮೇಲೆ ಮನುಷ್ಯನ ಹಿಡಿತ ಅತ್ಯಂತ ಕಡಿಮೆ. ಜಗತ್ತಿನ ಆಗುಹೋಗುಗಳನ್ನು ನಾವೇ ನಿಯಂತ್ರಿಸುತ್ತಿದ್ದೇವೆ ಎಂದು ಅನೇಕರು ಭಾವಿಸಿದ್ದಾರೆ. ಅದೊಂದು ಭ್ರಮೆ. ದೊಡ್ಡ ಚಕ್ರದ ಹಿಡಿಯನ್ನು ನಾವು ಹಿಡಿದಿರುತ್ತೇವೆ. ಈ ಬೃಹತ್ ಚಕ್ರವನ್ನು ನಾವೇ ತಿರುಗಿಸುತ್ತಿದ್ದೇವೆ ಎಂಬ ಭ್ರಮೆಯಲ್ಲಿರುತ್ತೇವೆ. ಆದರೆ ಆ ಚಕ್ರ ನಮ್ಮನ್ನೇ ತಿರುಗಿಸುತ್ತಿರುತ್ತದೆ. ನಾವು ಹಿಡಿಯನ್ನು ಹಿಡಿದು ನೇತಾಡುವುದು ಮಾತ್ರ.

ಹಿಂದಿನದೆಲ್ಲವೂ ಒಳ್ಳೆಯದು, ಆಧುನಿಕವಾದುದೆಲ್ಲವೂ ಕೆಟ್ಟದು ಎಂದು ಭಾವಿಸುವವರು ಕೆಲವರಾದರೆ, ಆಧುನಿಕವೆಲ್ಲವೂ ಒಳ್ಳೆಯದು ಹಿಂದಿನದೆಲ್ಲವೂ ಕೆಟ್ಟದು, ಅನಾಗರಿಕ, ಮೂಢನಂಬಿಕೆ ಎನ್ನುವವರು ಇದ್ದಾರೆ. ಎರಡು ಕಡೆಯವರ ಅಭಿಪ್ರಾಯಗಳೂ ಪೂರ್ಣ ಸತ್ಯವಲ್ಲ. ದೇವರು ಮನುಷ್ಯನಿಗೆ ವಿಶೇಷವಾದ ಬುದ್ಧಿಶಕ್ತಿ ಹಾಗೂ ವಿವೇಚನಾ ಶಕ್ತಿಯನ್ನು ಕೊಟ್ಟಿದ್ದಾನೆ. ಹಿಂದಿನ ಒಳ್ಳೆಯ ಸಂಗತಿಗಳ ಸ್ಫೂರ್ತಿಯನ್ನು (Spirit) ಪಡೆದು ಆಧುನಿಕ ಕಾಲದ ಒಳ್ಳೆಯ ಸಂಗತಿಗಳನ್ನು ಜೋಡಿಸಿಕೊಳ್ಳುವುದು ಸರಿಯಾದ ಕ್ರಮ. ಈಗಲೂ ನಡೆದುಕೊಂಡೇ ಪ್ರಯಾಣ ಮಾಡುವುದು, ಎತ್ತಿನಗಾಡಿಯಲ್ಲಿ ಹೋಗುವುದು, ಚಿಮಿಣಿ ದೀಪವನ್ನು ಉಪಯೋಗಿಸುವುದು ಇತ್ಯಾದಿ ಸಂಗತಿಗಳನ್ನು ಇಂದಿಗೂ ಅನುಸರಿಸಬೇಕೆಂದೇನಿಲ್ಲ. ಆಧುನಿಕ ವಿಜ್ಞಾನ ಅನೇಕ ಪರ್ಯಾಯ ಸಾಧನ ಸೌಲಭ್ಯಗಳನ್ನು ನೀಡಿದೆ. ಅವುಗಳ ಉಪಯೋಗ ತಪ್ಪಲ್ಲ. ಆದರೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಸ್ವೀಕರಿಸಬೇಕು. ಆಧುನಿಕ ತಂತ್ರಜ್ಞಾನ ಉತ್ಪಾದಿಸಿ ನೀಡುವ ಅನೇಕ ಯಂತ್ರಗಳನ್ನಾಗಲೀ, ವಾಹನಗಳನ್ನಾಗಲೀ, ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳನ್ನಾಗಲಿ ಒಂದು ಮಿತಿಯಲ್ಲಿ ಉಪಯೋಗಿಸುವುದು ಸರಿಯಾದ ಕ್ರಮ. ಇವುಗಳಲ್ಲೂ ಒಳ್ಳೆಯ ಅಂಶಗಳು ಇವೆ. ಶರೀರಕ್ಕೆ, ಮನಸ್ಸಿಗೆ ಹಾನಿಕರವಾದ ಅಂಶಗಳೂ ಇವೆ.

ಎಲ್ಲದಕ್ಕೂ ಮೊದಲು ಈ ಜಗತ್ ಅಂದರೆ ಏನು, ಮಾನವ, ಪ್ರಾಣಿ, ಸಸ್ಯಗಳು ಎಲ್ಲಿಂದ ಬಂದುವು? ಮಾನವನ ಮುಂದಿನ ಗಮ್ಯ ಸ್ಥಾನ ಯಾವುದು, ಉದ್ದೇಶ ಏನು ಇತ್ಯಾದಿಗಳ ಬಗ್ಗೆ ಸರಿಯಾದ ತಿಳಿವಳಿಕೆ ಪಡೆದುಕೊಂಡು ಅದಕ್ಕನುಗುಣವಾಗಿ ಜೀವನ ನಡೆಸುವುದು ಸೂಕ್ತ.

ನಾವು ದೇವರೆಂದು ಕರೆಯುವ ಅಗಾಧ ಶಕ್ತಿ ಸಾಗರ (energy) ದಿಂದ ಈ ಜಗತ್ತು, ಮಾನವ, ಪ್ರಾಣಿ, ಸಸ್ಯ ಎಲ್ಲವೂ ಹುಟ್ಟಿದೆ. ಚೇತನ- ಅಚೇತನ ಹೀಗೆ ಎರಡು ಆಯಾಮಗಳಿವೆ. ಭಗವಂತನಿಗೆ ಇದೊಂದು ಆಟ. ನಾವೆಲ್ಲ ಸೂತ್ರದ ಬೊಂಬೆಗಳು ಎಂಬುದನ್ನು ಸಹಸ್ರಾರು ವರ್ಷಗಳ ಮೊದಲೇ ಋಷಿ-ಮುನಿಗಳು ಸಾಧನೆ ಹಾಗೂ ಅಂತರ್ಬೋಧೆಯ ಮೂಲಕ ಕಂಡುಕೊಂಡು ವೇದ, ಉಪನಿಷತ್ತು,ಭಗವದ್ಗೀತೆ, ಭಾಗವತ, ಪುರಾಣಗಳ ಮೂಲಕ ಮಾನವ ಸಮೂಹಕ್ಕೆ ತಿಳಿಸಿಕೊಟ್ಟರು. ಅದನ್ನು ತಿಳಿಸಿಕೊಡಲು ಗುರುಕುಲಗಳನ್ನು ಸ್ಥಾಪಿಸಿದರು. ಜಗತ್ತಿನಲ್ಲಿ ಒಳ್ಳೆಯದು (ಧರ್ಮ) ಕೆಟ್ಟದ್ದು (ಅಧರ್ಮ) ಎಂಬ ಎರಡು ಆಯಾಮಗಳಿವೆ. ಒಳ್ಳೆ ಕರ್ಮಗಳಿಂದ ಪುಣ್ಯ, ಕೆಟ್ಟ ಕರ್ಮಗಳಿಂದ ಪಾಪ. ಕಲ್ಪಾದಿಯಲ್ಲೇ ಈ ಎರಡು ಆಯಾಮಗಳು ಪ್ರಾರಂಭವಾದವು. ಕರ್ಮಗಳಿಂದ ಪುನರ್ಜನ್ಮ- ಪಾಪ, ಪುಣ್ಯಗಳನ್ನು ಭೋಗಿಸುವುದಕ್ಕಾಗಿ. ಮನಸ್ಸು- ಬುದ್ಧಿ- ವಿವೇಕವನ್ನು ಸರಿಯಾಗಿ ಉಪಯೋಗಿಸಿದರೆ ಜೀವಾತ್ಮ- ಶರೀರಗಳು ಪುಣ್ಯ ಕಾರ್ಯದಲ್ಲಿ ತೊಡಗಿ ಪುಣ್ಯ ಸಂಚಯವಾಗುತ್ತದೆ. ಇಲ್ಲವಾದಲ್ಲಿ ಪಾಪ ಸಂಚಯ. ಮನಸ್ಸಿನ ನಿಯಂತ್ರಣದಿಂದ ಈ ಕರ್ಮ ಚಕ್ರದಿಂದ ಬಿಡುಗಡೆಯಾಗಿ ಮತ್ತೆ ಎಲ್ಲಿಂದ ಬಂದವೋ ಅಲ್ಲಿಗೆ ತಲಪುವುದೇ ಮಾನವ ಜೀವಿತದ ಮುಖ್ಯ ಉದ್ದೇಶ ಎನ್ನಲಾಗಿದೆ. ಅದನ್ನೇ ಮೋಕ್ಷ ಎನ್ನುವುದು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಎಂಬ ಹಂತಗಳನ್ನು ದಾಟಿದಾಗ ಸಮಾಧಿ ಸ್ಥಿತಿ ಲಭ್ಯ. ಅದನ್ನು ಜೀವನ್ಮುಕ್ತಿ ಎನ್ನುತ್ತಾರೆ. ರಾಮಕೃಷ್ಣ ಪರಮಹಂಸ ಮುಂತಾದವರು ಈ ಸ್ಥಿತಿ ತಲುಪಿದವರು. ಈ ಶರೀರವನ್ನು ತ್ಯಾಗ ಮಾಡಿದಾಗ ಅವರು ಮೋಕ್ಷ ಅಂದರೆ ಬ್ರಹ್ಮ ಚೈತನ್ಯದಲ್ಲಿ ಲೀನವಾಗಿ ಹೋಗುತ್ತಾರೆ. ಮತ್ತೆ ಮರು ಜನ್ಮ ಇಲ್ಲ. ಶಂಕರಾಚಾರ್ಯರ "ಅಹಂ ಬ್ರಹ್ಮಾಸ್ಮಿ, ತತ್ ತ್ವಂ ಅಸಿ"- "ನಾನು ಬ್ರಹ್ಮ ಚೈತನ್ಯದ ಅಂಶ, ನೀನೂ ಅದೇ ಆಗಿದ್ದೀಯಾ " ಎಂಬ ಅದ್ವೈತ ತತ್ವವನ್ನು ಸಾರಿದ್ದಾರೆ. ಪುಣ್ಯ ಸಂಚಯನದಿಂದ, ಭಗವಂತನಲ್ಲಿ ಪರಿಪೂರ್ಣ ಶ್ರದ್ಧೆ ಇಡುವುದರಿಂದ, ಭಕ್ತಿ ಮಾರ್ಗದಿಂದ, ವಿಷ್ಣು ಪರಮಾತ್ಮನ ಸಾನಿಧ್ಯ ಪಡೆಯಲು ಸಾಧ್ಯ ಎಂದು ಮಧ್ವಾಚಾರ್ಯರು ತಮ್ಮ ದ್ವೈತ ತತ್ವದಲ್ಲಿ ಸಾರಿದ್ದಾರೆ. ಜೀವಾತ್ಮಗಳು ತಮ್ಮ ಬಾಕಿ ಉಳಿದಿರುವ ಕರ್ಮಗಳನ್ನು ಅನುಭವಿಸಲು ಮತ್ತೆ ಜನ್ಮ ತಾಳಬೇಕಲ್ಲವೇ. ಆದ್ದರಿಂದ ಜೀವಾತ್ಮಗಳು ಅವಿನಾಶಿ. ಹೀಗೆ ಪರಮಾತ್ಮ , ಜೀವಾತ್ಮ, ಜಡ ಪ್ರಕೃತಿ ಈ ಮೂರು ತತ್ವಗಳು ಶಾಶ್ವತ ಎನ್ನಲಾಗಿದೆ.

ಪರಮಾತ್ಮನಲ್ಲಿ ಲೀನವಾಗಲು ಅಥವಾ ಸಾನಿಧ್ಯದಲ್ಲಿರಲು ಸಾಧನೆ ಅಗತ್ಯ. ಋಷಿಗಳು ಮಾರ್ಗವನ್ನು ಬೋಧಿಸಿದ್ದಾರೆ. ಧರ್ಮ- ಅರ್ಥ- ಕಾಮ- ಮೋಕ್ಷ ಜೀವನದಲ್ಲಿ ಹಾದು ಹೋಗಬೇಕಾದ ಹಂತಗಳನ್ನೂ, ಆಯಾ ಹಂತದ ಕರ್ತವ್ಯಗಳನ್ನೂ ಬೋಧಿಸಿದ್ದಾರೆ. ಇದೇ ಆಶ್ರಮ ವ್ಯವಸ್ಥೆ- ಬ್ರಹ್ಮಚರ್ಯ, ಗೃಹಸ್ಥ , ವಾನಪ್ರಸ್ಥ, ಸನ್ಯಾಸ- ಇವೆರಡನ್ನು ಸರಿಯಾಗಿ ಅರ್ಥ ಮಾಡಿಕೊಂಡು ಪ್ರಾಮಾಣಿಕವಾಗಿ ಆಚರಿಸಿದರೆ ನಮ್ಮ ಜೀವನದ ಎಲ್ಲಾ ಜಂಜಾಟಗಳಿಂದ ಪಾರಾಗಿ ಆನಂದಮಯ ಸ್ಥಿತಿಯನ್ನು ಹೊಂದಲು ಸಾಧ್ಯ ಎಂದಿದ್ದಾರೆ ಋಷಿಗಳು.

ಎಲ್ಲದಕ್ಕೂ ಮನಸ್ಸೇ ಕಾರಣ ಎಂದಾದ ಮೇಲೆ ಅದರ ಮೇಲೆ ನಿಯಂತ್ರಣ ಸಾಧಿಸಿದಾಗ ಸಾಧನೆ ಸುಲಭ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳ ಮೇಲೆ ಹತೋಟಿ ಸಾಧಿಸಿದಾಗ ಮನಸ್ಸು ಹತೋಟಿಗೆ ಬರುತ್ತದೆ. ಜಗತ್ತಿನಲ್ಲಿ ಚೆನ್ನಾಗಿ ಬದುಕಬೇಕು. ಎಲ್ಲವನ್ನೂ ಅನುಭವಿಸಬೇಕು. ಆದರೆ ಹಿತಮಿತವಾಗಿ ಅನುಭವಿಸಬೇಕು. ಯಾವುದರ ಬಗ್ಗೆಯೂ, ಯಾರ ಬಗ್ಗೆಯೂ ಅತಿಯಾದ ಮೋಹ (attachment) ಇರಬಾರದು. ನಿಸ್ಸಂಗತ್ವ (Detachment) ಇರಬೇಕು ಎನ್ನುತ್ತಾರೆ. ಪ್ರತಿಯೊಬ್ಬರದೂ ಒಂಟಿ ಪ್ರಯಾಣ. ಬರುವಾಗ ಜೊತೆಗೆ ಯಾರೂ ಬರಲಿಲ್ಲ, ಏನನ್ನೂ ತರಲಿಲ್ಲ . ಹೋಗುವಾಗಲೂ ಒಂಟಿಯಾಗಿಯೇ ಹೋಗುತ್ತೇವೆ.

ಈ ಆಧ್ಯಾತ್ಮಿಕ ದೃಷ್ಟಿಯಿಂದ ಯೋಚಿಸಿದಾಗ ದುರಾಸೆಗಳು ದೂರವಾಗುತ್ತವೆ. ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು ಎಂಬ ಹಳೆ ಗಾದೆ ಮಾತೊಂದು ಇದೆ. ಇದನ್ನು ಅಪರಿಗ್ರಹ ಎನ್ನುತ್ತಾರೆ. ಇಂದಿನ ಎಲ್ಲಾ ಸಮಸ್ಯೆಗಳಿಗೆ ನಾವೇ ಕಾರಣಕರ್ತರು ಎಂಬ ಸತ್ಯ ಆಳವಾಗಿ ಚಿಂತಿಸಿದಾಗ ಹೊಳೆಯುತ್ತದೆ. ಮನಸ್ಸಿನ ಗುಲಾಮರಾಗಿರುವುದೇ ಸಮಸ್ಯೆ. ಬೇಡಿಕೆಗೆ ಅನುಗುಣವಾಗಿ ಫ್ಯಾಕ್ಟರಿಗಳು, ಉದ್ಯಮಿಗಳು ಏನೇನೋ ವಸ್ತುಗಳನ್ನು ಉತ್ಪಾದಿಸಿ ಮಾರ್ಕೆಟಿಗೆ ಹಾಕುತ್ತಾರೆ. ಅಗತ್ಯವಿಲ್ಲದಿದ್ದರೂ ಕೈಯಲ್ಲಿ ಸುಲಭವಾಗಿ, ಅಡ್ಡದಾರಿಯಿಂದ ದಕ್ಕಿದ ಹಣದಿಂದ ಜನರು ಕೊಂಡುಕೊಳ್ಳುತ್ತಾರೆ. ಜೀವನ ಶೈಲಿ, ಆಹಾರದ ಆಯ್ಕೆ ಸರಿಯಾಗಿಲ್ಲದ ಕಾರಣ ಗಳಿಸಿದ ಹಣವನ್ನೆಲ್ಲ ವೈದ್ಯರಿಗೆ ಅರ್ಪಿಸುತ್ತಾರೆ. ಹೀಗೆ ಪ್ರತಿಯೊಂದು ಸಮಸ್ಯೆಯ ಮೂಲವು ಸ್ವಾರ್ಥಿಯಾದ ಮನಸ್ಸಿನ ಮೇಲೆ ನಿಯಂತ್ರಣವಿಲ್ಲದ ಮಾನವನಿಂದಲೇ ಉದ್ಭವವಾಗಿದೆ ಎಂಬುದು ಗೋಚರವಾಗುತ್ತದೆ.

ಹಾಗೆ ನೋಡಿದರೆ ನಮ್ಮ ಪ್ರಾಚೀನ ಭಾರತೀಯರ ಜೀವನಶೈಲಿಯೇ ಉತ್ತಮವಾದುದು. ಶಾಂತಿ, ಸಮಾಧಾನ ತಂದು ಕೊಡುವಂಥದು. ಪ್ರಾಚೀನ ಗುರು ಕುಲ ಶಿಕ್ಷಣ ಪದ್ಧತಿಯೇ ಶ್ರೇಷ್ಠವಾದುದು. ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಆಸನ, ಪ್ರಾಣಾಯಾಮ, ಧ್ಯಾನ, ದೇವರಲ್ಲಿ ನಂಬಿಕೆ ಇವುಗಳಿಂದ ಉತ್ತಮ ಆರೋಗ್ಯ, ಮನೋನಿಯಂತ್ರಣ, ಒತ್ತಡರಹಿತ ಜೀವನ ಸಾಧ್ಯ; ಸುಖ ಜೀವನ ಸಾಧ್ಯ.

ಒಟ್ಟಾರೆ ಹೇಳಬೇಕೆಂದರೆ ಮನೋನಿಯಂತ್ರಣವೇ ಸುಖಕ್ಕೆ ಸಾಧನ ಎಂಬ ಸತ್ಯ ಈ ಎಲ್ಲ ಸಂಗತಿಗಳಿಂದ ಗೊತ್ತಾಗುತ್ತದೆ. ಶರೀರಕ್ಕೆ ಶಿಕ್ಷಣ ಹೇಗೆ ಅಗತ್ಯವೋ ಮನಸ್ಸಿಗೂ ಶಿಕ್ಷಣ ಅಷ್ಟೇ ಅಗತ್ಯ. ಲೋಕಹಿತದ ದೃಷ್ಟಿಯಿಂದ ಈ ಭಾರತೀಯ ಚಿಂತನೆಯನ್ನು ಜಗತ್ತಿನಾದ್ಯಂತ ಹರಡಬೇಕಾದ ಅಗತ್ಯವಿದೆ. ಆಗಲೇ ಇಂದು ಜಗತ್ತು ಹೆದರಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೆ, ಗೊಂದಲ, ಟೆನ್ಶನ್‌ಗಳಿಗೆ ಪರಿಹಾರ ಸಿಗಬಲ್ಲದು.


ಬ್ರ್ಯಾಂಡ್ ಬೆಂಗಳೂರಿನ ಹೆಮ್ಮೆ ಬ್ರಾಹ್ಮಣರ ಕಾಫಿ ಬಾರ್

▶ ಸು.ನಾಗರಾಜ್

ಬಾಳಿನಲ್ಲಿ ಮಹತ್ಸಾಧನೆ ಮಾಡಿದವರ ಜೀವನ ಚರಿತ್ರೆಗಳನ್ನು ಓದುವುದೇ ಒಂದು ಚೇತೋಹಾರಿ ಅನುಭವ. ಯೋಗ, ಆಧ್ಯಾತ್ಮ, ಸಾಹಿತ್ಯ, ಸಾಮಾಜಿಕ, ರಾಜಕೀಯ, ಸಂಗೀತ, ನೃತ್ಯ, ಸೈನ್ಯ... ಹೀಗೆ ಹಲವಾರು ಕ್ಷೇತ್ರಗಳಲ್ಲಿ ಉತ್ತುಂಗ ಸಾಧನೆ ಮಾಡಿದವರ ಜೀವನ ಚರಿತ್ರೆಗಳನ್ನು ಸಾಕಷ್ಟು ಓದಿರಬಹುದು. ಆದರೆ ಹೊಟ್ಟೆಪಾಡಿಗಾಗಿ ಮಡದಿಯೊಂದಿಗೆ ಬೆಂಗಳೂರಿಗೆ ಬಂದು ದಶಕಗಳ ಕಾಲ ಕಷ್ಟ ನಷ್ಟಗಳನ್ನು ಅನುಭವಿಸಿ, ಸಾಲು ಸಾಲಾಗಿ ಎಂಟು ಮಕ್ಕಳ ಸಂಸಾರದ ಉದರ ಪೋಷಣೆ ಮಾಡಲು ರಕ್ತವನ್ನು ಬೆವರಾಗಿ ಹರಿಸಿ ದುಡಿದ ಜೀವವೊಂದು ಸ್ಥಾಪಿಸಿದ ಚಿಕ್ಕ ಹೋಟೆಲ್ ಇಂದು ಬೆಂಗಳೂರಿನ ಹೆಮ್ಮೆಯ ಬ್ರಾಂಡ್ ಆಗಿ ನಿಲ್ಲುವಂತೆ, ಬೆಂಗಳೂರಿನ ಬಹುತೇಕ ಗಣ್ಯ ವ್ಯಕ್ತಿಗಳ ಬಾಯಲ್ಲಿ ನಲಿದಾಡುವಂತೆ ಮಾಡಿದವರ ಜೀವನ ಚರಿತ್ರೆ ಓದುವುದು ನಿಜಕ್ಕೂ ಕುತೂಹಲ ಹುಟ್ಟಿಸುತ್ತದೆ.

ಬೆಂಗಳೂರಿನ ಶಂಕರಪುರಂನ ರಂಗರಾವ್ ರಸ್ತೆಯ ತುದಿಯಲ್ಲಿ ಇರುವ 'ಬ್ರಾಹ್ಮಣರ ಕಾಫಿ ಬಾರ್' ಎಂಬ ಹೋಟೆಲಿನ ಯಶೋಗಾಥೆಯೇ 'ರಾಧಾಕೃಷ್ಣ ಅಡಿಗ-ಇಡ್ಲಿ ಕಾಫಿ ಪರಂಪರೆ-ಪಯಣ' ಎಂಬ ಸುಂದರ ಕಥನ. ಇದರಲ್ಲಿ ಅಡಕವಾಗಿರುವುದು ರಾಧಾಕೃಷ್ಣ ಅಡಿಗರ ಬಾಳಪಯಣವಷ್ಟೇ ಅಲ್ಲ, ಅವರ ಇಡೀ ಕುಟುಂಬವು ಹೇಗೆ ತನ್ನ ಉದ್ಯಮವನ್ನು ಗ್ರಾಹಕ ಕೇಂದ್ರಿತವಾಗಿ, ತನ್ನ ಸ್ಥಾಪಕರ ಮೂಲ ಆಶಯಗಳಿಗೆ ಅನುಗುಣವಾಗಿ ಶ್ರದ್ಧಾಭಕ್ತಿಯಿಂದ, ಪಾರಂಪರಿಕ ಮೌಲ್ಯಗಳನ್ನು ಉಳಿಸಿಕೊಂಡೇ ಬೆಳೆಯಿತು ಎಂಬ ವಿಸ್ಮಯಕರ ಒಳನೋಟ.

ಕೆಲವು ದಶಕಗಳ ಮೊದಲು ಬೆಂಗಳೂರಿನಲ್ಲಿ ಹೋಟೆಲ್ ಎಂದರೆ ಅಡಿಗರ ಕಾಫಿ ಬಾರ್ ಎನ್ನುವ ಅನ್ವರ್ಥನಾಮ ಪ್ರಚಲಿತದಲ್ಲಿತ್ತು. ಇದರ ಹಿಂದೆ ರಾಧಾಕೃಷ್ಣರ ತಂದೆ ನಾಗೇಶ ಅಡಿಗರ, ಅಮ್ಮ ಸರಸ್ವತಿಯವರ ಏಳುಬೀಳಿನ ಸಂಗ್ರಾಮವಿದೆ. ಎಲ್ಲಕ್ಕೂ ಸಂವಾದಿಯಾಗಿ ರಾಧಾಕೃಷ್ಣರ ವ್ಯವಹಾರ ಕುಶಲತೆ, ದೂರದೃಷ್ಟಿ, ಸ್ನೇಹಶೀಲತೆ, ಛಲ ಇದೆ. ನಾಗೇಶ ಅಡಿಗರು ಬಾಲ್ಯದಿಂದ ಮೃದು ಸ್ವಭಾವದವರಾದರೂ ಸ್ವಾಭಿಮಾನಿ. ತಮ್ಮ ಉಪನಯನದ ಖರ್ಚನ್ನು ತಾವೇ ದುಡಿದು ಸಂಪಾದಿಸಿಕೊಂಡು ಜನಿವಾರ ಹಾಕಿದವರು. ಕೊಲ್ಲೂರಿನಲ್ಲಿ ವೇದಪಾಠ ಕಲಿತವರು. ಹಾಗೇ ಅಡುಗೆ ಮಾಡುವುದನ್ನೂ ಕಲಿತಿದ್ದರು. ಜೀವನ ನಿರ್ವಹಣೆಗೆ ಪೌರೋಹಿತ್ಯವಾದರೂ ಸರಿ, ಅಡುಗೆ ಭಟ್ಟನಾಗಿ ಆದರೂ ಸರಿ ಎಂಬ ಮನೋದಾರ್ಢ್ಯ. ಅವರಿಗಿಂತ 14 ವರ್ಷ ಕಿರಿಯ ಸರಸ್ವತಿಯವರನ್ನು ವರಿಸಿದಾಗ ಆಕೆಗಿನ್ನೂ 13 ವರ್ಷ. ಕಷ್ಟಗಳಿಂದ ಮಾಗಿದ ಆಕೆಯ ವ್ಯಕ್ತಿತ್ವ ಮುಂದೆ ಅದೆಂತಹ ಬೆಳಕನ್ನು ಪಸರಿಸಿತು ಎಂದರೆ, ಅವರ 8 ಜನ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು, ಹೋಟೆಲಿನ ಸಿಬ್ಬಂದಿ ವರ್ಗ ಆ ಬೆಳಕಿನಲ್ಲಿ ತಮ್ಮ ನೆಲೆ ಕಂಡುಕೊಂಡವರೇ, ನೆಮ್ಮದಿ ಉಂಡವರೇ.



ಸಾತ್ವಿಕ ಸ್ವಭಾವದ ನಾಗೇಶ ಅಡಿಗರು ಬೆಂಗಳೂರಿನಲ್ಲಿ ಪ್ರಾರಂಭಿಸಿ ಕೈ ಸುಟ್ಟುಕೊಂಡ ಹೋಟೆಲ್‌ಗಳು ಹಲವಾರು. ಆದರೂ ಛಲ ಬಿಡದೆ 1965ರ ಜನವರಿ 27ನೇ ತಾರೀಕು 150 ಅಡಿ ಚಿಕ್ಕ ಜಾಗದಲ್ಲಿ, ಎರಡು ಕಟ್ಟಿಗೆ ಒಲೆ ಹೂಡಿ ಆರಂಭಿಸಿದ ಬ್ರಾಹ್ಮಣರ ಕಾಫಿ ಬಾರ್ ಕ್ರಮೇಣ ಮಡದಿಯ ಕೈಗುಣದ ರುಚಿಗೆ ಆಕರ್ಷಿತರಾದ ಗ್ರಾಹಕರ ಬೆಂಬಲದೊಂದಿಗೆ ಬೆಳೆಯುತ್ತಾ ಹೋಯಿತು. ಆಗ ಕಾಫಿಯ ಬೆಲೆ 4 ಪೈಸೆ ಮತ್ತು ಮೊದಲ ದಿನದ ಗಳಿಕೆ 7 ರೂ 50 ಪೈಸೆ!

8 ಚಿಕ್ಕ ಮಕ್ಕಳ ಪೋಷಣೆಯ ಜೊತೆಗೇ ದಿನದಿನಕ್ಕೆ ಬೇಕಾಗುವ ದಿನಸಿ ತರಿಸಿ, ಹಿಟ್ಟು ಚಟ್ನಿ ರುಬ್ಬಿ ಸರಸ್ವತಿ ಅಮ್ಮ ಮಾಡಿದ ಅವಿಶ್ರಾಂತ ದುಡಿಮೆಯಿಂದಾಗಿ ಹೋಟೆಲ್ ಅಭಿವೃದ್ಧಿ ಕಾಣತೊಡಗಿತು. ಮೂರನೇ ಕ್ಲಾಸ್‌ವರೆಗೆ ಓದಿದ ಅಮ್ಮ ಯಾವುದೇ ಹೋಟೆಲ್ ಮ್ಯಾನೇಜ್ಮೆಂಟ್ ಪದ ಪಡೆದವರಿಗಿಂತ ಒಂದು ಕೈ ಮಿಗಿಲು ಎನಿಸಿಕೊಂಡರು. ನಾಗೇಶ ಅಡಿಗರು ಮಡದಿಯ ಅಸೀಮ ಕರ್ತೃತ್ವಕ್ಕೆ ತಲೆಬಾಗಿ ತಮ್ಮ ಸಂಪೂರ್ಣ ವ್ಯವಹಾರಗಳನ್ನು ಅವರಿಗೆ ಒಪ್ಪಿಸಿ ತಾವು ನಿಷ್ಕಾಮ ಯೋಗಿಯಂತೆ ಬದುಕಿದರು. ಅವರ ಮಕ್ಕಳೂ ಕಷ್ಟ ಪಟ್ಟು ಕೆಲಸ ಮಾಡುತ್ತಿದ್ದರು. ಕಡೆಯ ಕುಡಿ ರಾಧಾಕೃಷ್ಣರಿಗೆ ಅಮ್ಮನ ಶಿಸ್ತು, ವ್ಯವಹಾರ ಕೌಶಲ್ಯ, ಸಂಸ್ಕಾರ, ಅಪ್ಪನ ಪ್ರಾಮಾಣಿಕತೆ, ದೈವಭಕ್ತಿ, ಸರಳತೆ ಎಲ್ಲವೂ ಮೈಗೂಡಿತು.

ಬರೆಯುತ್ತಾ ಹೋದರೆ ಈ ಪುಸ್ತಕದ ಬಗ್ಗೆಯೇ ಇನ್ನೊಂದು ಪುಸ್ತಕ ಬರೆಯಬಹುದು. ಪುಸ್ತಕದ ಸ್ವಾರಸ್ಯದ ಕೆಲವು ಘಟನೆಗಳನ್ನು ಇಲ್ಲಿ ಉಲ್ಲೇಖಿಸುವುದಾದರೆ,

ಬಿಸಿಬಿನಲ್ಲಿ ಅಂದಿನಿಂದ ಇಂದಿಗೂ ಮೊದಲ ಟೋಕನ್ ಗ್ರಾಹಕ ಒಬ್ಬರೇ! ಅವರ್ಯಾರು?, ಅಡಿಗ ದಂಪತಿಗಳ ಏಕೈಕ ಪುತ್ರಿಗೆ ಕೌಸ್ತುಭಾ ಎಂಬ ಹೆಸರು ಇಟ್ಟಿದ್ದೇಕೆ? ರಾಧಾಕೃಷ್ಣ ದಂಪತಿ ಆರಂಭಿಸಿದ ಹೋಟೆಲ್‌ಗಳ ಸರಣಿ ಯಾವುದು? ಮುಚ್ಚಿದ್ದೆಷ್ಟು, ಕೊಟ್ಟಿದ್ದೆಷ್ಟು, ಈಗಿರುವುದು ಎಷ್ಟು? ಪಾಕಶಾಲಾ ಸರಣಿ ಹೋಟೆಲ್‌ಗಳು ಯಾರದು? ಅವರ ಜೀವನದಲ್ಲಿ ನಡೆದು ಹೋದ ಪವಾಡಗಳು ಯಾವುವು? ಅವರು ವ್ಯವಹಾರ ಚತುರತೆ, ಮಾತುಗಾರಿಕೆಯಿಂದ ಬಗೆಹರಿಸಿದ ಕ್ಲಿಷ್ಟಕರ ಸನ್ನಿವೇಶಗಳು ಯಾವುವು? ರಾಧಾಕೃಷ್ಣರ ಸ್ನೇಹ ಬಳಗದಲ್ಲಿ ಇದ್ದ, ಇರುವ, ಚಿತ್ರ ನಟರು, ಪತ್ರಕರ್ತರು, ರಾಜಕಾರಣಿಗಳು, ಕ್ರಿಕೆಟ್ ಪಟುಗಳು ಯಾರ್ಯಾರು? ಬ್ರಾಹ್ಮಣರ ಕಾಫಿ ಬಾರ್‌ನ ಈಗಿರುವ ಜಾಗವನ್ನು ಖರೀದಿಸಿ, ಈಗಿನ ರೂಪು ಕೊಟ್ಟಿದ್ದು ಯಾವಾಗ? ರಾಧಾಕೃಷ್ಣರು ತಮ್ಮ ಹೋಟೆಲ್ ಸಿಬ್ಬಂದಿಯನ್ನು ನಡೆಸಿಕೊಳ್ಳುವ ಪರಿ ಹೇಗೆ?

ಈ ಎಲ್ಲವನ್ನೂ ಅತ್ಯಂತ ಸ್ವಾರಸ್ಯವಾಗಿ, ಸರಳವಾಗಿ ನಾಯಕ ಭಟ್ ತದ್ದಲಸೆಯವರು ವಿವರಿಸಿ ಬರೆದಿದ್ದಾರೆ. ಬೇಳೂರು ಸುದರ್ಶನರು 'ಬಿಸಿಬಿ ಯಶಸ್ಸಿನ ಏಳು ಸೂತ್ರಗಳು' ಎಂದು ಸುಂದರ ಮುನ್ನುಡಿಯನ್ನು ಬರೆದಿದ್ದಾರೆ. ಅಡಿಗರ ಸ್ನೇಹದ ರಸಗುಲ್ಲ ಸವಿದ ಹಲವಾರು ಗಣ್ಯರ ಆತ್ಮೀಯ ನುಡಿಗಳಿವೆ. ಒಟ್ಟಿನಲ್ಲಿ ಇದೊಂದು ಕನ್ನಡದಲ್ಲಿ ಬಂದಿರುವ ವಿಶಿಷ್ಟ ವ್ಯಕ್ತಿ ಚಿತ್ರಣ.

ಕಿರುಸುದ್ದಿ

ಶಿಕ್ಷಣದಲ್ಲಿ ನಿಮ್ಮ ಜಿಲ್ಲೆ ಸಾಧನೆ ಏನು: ಪ್ರಿಯಾಂಕ ಖರ್ಗೆ ಕಾಲೆಳೆದ ಡಾ. ಭರತ್ ಶೆಟ್ಟಿ

ಮಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಮತ್ತು ಕಲ್ಬುರ್ಗಿ ಜಿಲ್ಲೆಗಳ ಸಾಧನೆ ಕುರಿತು ಶಾಸಕ ಡಾ. ಭರತ್ ಶೆಟ್ಟಿ ಅವರು ಸಚಿವ ಪ್ರಿಯಾಂಕ್ ಖರ್ಗೆ ಕಾಲೆಳೆದಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಸದಾ ಟೀಕಿಸುತ್ತಿರುವ ಪ್ರಿಯಾಂಕ ಖರ್ಗೆ ಇನ್ನಾದರೂ ತಮ್ಮ ಜಿಲ್ಲೆಯಲ್ಲಿ ಉಳಿದುಕೊಂಡು ಶಿಕ್ಷಣ ಕ್ಷೇತ್ರವನ್ನು ಮೇಲಕ್ಕೆತ್ತಲು ಶ್ರಮವಹಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಪ್ರಥಮ ಸ್ಥಾನ ಪಡೆದಿದ್ದರೆ, ಕಲ್ಬುರ್ಗಿ ಜಿಲ್ಲೆ ಕೊನೆಯ ಸ್ಥಾನದಲ್ಲಿದೆ ಎಂಬುದನ್ನು ಉಲ್ಲೇಖಿಸಿ, ಸಚಿವರ ಜಿಲ್ಲೆಯ ಶಿಕ್ಷಣ ವ್ಯವಸ್ಥೆ ಹಿಂದುಳಿದಿದೆ ಎಂದು ಟೀಕಿಸಿದ್ದಾರೆ. ಸಚಿವರು ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಟೀಕೆ ಮಾಡುವುದನ್ನು ಬಿಟ್ಟು, ತಮ್ಮ ಜಿಲ್ಲೆಯ ಅಭಿವೃದ್ಧಿಯ ಕಡೆ ಗಮನಹರಿಸಬೇಕು ಎಂದು ಅವರು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ ಆರೋಗ್ಯ, ಶಿಕ್ಷಣ ಹಾಗೂ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಮುಂದಿದ್ದು, ಕಲ್ಬುರ್ಗಿ ಜಿಲ್ಲೆ ಇನ್ನೂ ಅನೇಕ ವಿಷಯಗಳಲ್ಲಿ ಹಿಂದೆ ಉಳಿದಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಇದೇ ವೇಳೆ, ಐಟಿ ಸಚಿವರಾಗಿ ತಮ್ಮ ಜಿಲ್ಲೆಗೆ ನೀಡಿದ ಕೊಡುಗೆಗಳ ಬಗ್ಗೆ ಪ್ರಶ್ನೆ ಎತ್ತಿದ ಅವರು, ಜಿಲ್ಲೆಯ ಅಭಿವೃದ್ಧಿಯ ಮೂಲಕ ನಿಮ್ಮ ಸಾಮರ್ಥ್ಯ ತೋರಿಸಿ ಎಂದು ಪ್ರಿಯಾಂಕ್ ಖರ್ಗೆ ಅವರಿಗೆ ಡಾ. ಭರತ್ ಶೆಟ್ಟಿ ಸಲಹೆ ನೀಡಿದ್ದಾರೆ.

ಕಾಂಗ್ರೆಸ್ ಪ್ರಜಾತಂತ್ರವನ್ನು ಗೆಲ್ಲಿಸಿದೆ: ಅಪ್ಪಿ

ಮಂಗಳೂರು: ಕ್ಷೇತ್ರ ವಿಂಗಡನಾ ಮಹಿಳಾ ಮೀಸಲಾತಿ ಮಸೂದೆಯನ್ನು ಸೋಲಿಸುವ ಮೂಲಕ ರಾಹುಲ್ ಗಾಂಧಿ ಹಾಗೂ ಮಿತ್ರ ಕೂಟವು ಪ್ರಜಾತಂತ್ರವನ್ನು ಗೆಲ್ಲಿಸಿದೆ ಎಂದು ದ.ಕ. ಜಿಲ್ಲಾ ಮಹಿಳಾ ಕಾಂಗ್ರೆಸ್ ಮಂಗಳೂರು ನಗರ ಸಮಿತಿ ಅಧ್ಯಕ್ಷೆ ಅಪ್ಪಿ ಹೇಳಿದ್ದಾರೆ.

ದ.ಕ. ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಮಸೂದೆ ಅಂಗೀಕಾರವಾಗಿರುತ್ತಿದ್ದರೆ ದಕ್ಷಿಣ ಭಾರತದ ಜನರಿಗೆ ಅದರಲ್ಲೂ ಮಹಿಳೆಯರಿಗೆ ಅನ್ಯಾಯವಾಗುತ್ತಿತ್ತು ಎಂದರು. ದೇಶದ ಇತಿಹಾಸದಲ್ಲಿ ಮಹಿಳಾ ಪ್ರಧಾನಿ, ಮಹಿಳಾ ರಾಷ್ಟ್ರಪತಿಯನ್ನು ನೀಡಿದ ಖ್ಯಾತಿ ಕಾಂಗ್ರೆಸ್‌ಗಿದೆ. ಮಹಿಳೆಯರ ಬಗ್ಗೆ ಕಾಂಗ್ರೆಸ್ ಉತ್ತಮ ಯೋಜನೆ, ಕೆಲಸ ಕಾರ್ಯಗಳನ್ನು ಮಾಡಿದೆ. ಹಾಗಾಗಿ ಬಿಜೆಪಿಗೆ ಕಾಂಗ್ರೆಸನ್ನು ದೂರುವ ನೈತಿಕತೆ ಇಲ್ಲ. ಮಹಿಳೆಯರ ಬಗ್ಗೆ ಅಷ್ಟೊಂದು ಕಾಳಜಿ, ಗೌರವ ಇದ್ದಲ್ಲಿ ಈಗಾಗಲೇ ಅಂಗೀಕಾರಗೊಂಡಿರುವ ಮಸೂದೆ ಯಥಾವತ್ತಾಗಿ ಜಾರಿಯಾಗಲಿ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಪ್ರಮುಖರಾದ ಸ್ವರೂಪ ಶೆಟ್ಟಿ, ನೀತು ಡಿಸೋಜಾ, ಚಂದ್ರಕಲಾ ರಾವ್, ಸಬಿತಾ ಮಿಸ್ಕಿತ್, ವೀಣಾ, ಮೀನಾ ಟೆಲ್ಲಿಸ್, ಗೀತಾ ಪ್ರವೀಣ್, ಶಾಂತಲಾ ಗಟ್ಟಿ ಉಪಸ್ಥಿತರಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ದಿ| ಎ. ಪದ್ಮನಾಭ ಶೆಟ್ಟಿ ಸ್ಮರಣಾರ್ಥ ಸುಂದರಿ ಪಿ. ಶೆಟ್ಟಿ ಮತ್ತು ಮಕ್ಕಳು, 'ದುರ್ಗಾ ನಿಲಯ', ಕುಂಡೋಳಿ, ಅಜ್ಜಿಬೆಟ್ಟು, ವಾಮದಪದವು.
2. ಸುಶೀಲ ಎಸ್. ಬಂಗೇರ, ಕೊಂಡೇಲ ಮನೆ, ಕಟೀಲು.
3. ರಾಮಚಂದ್ರ ಬಲ್ಲಾಳ್, ಪಕೇಲರ ಮನೆ, ಒಲವಿನ ಗುಡ್ಡೆ, 'ಸುರಗಿರಿ ದೇವಸ್ಥಾನದ ವಠಾರ', ಅತ್ತೂರು.
4. ಶಂಕರ ಪೆರ್ಗಡೆ, ಪಾದೆಮನೆ, ಪೇಜಾವರ, ಬಜಪೆ, ಪೊರ್ಕೋಡಿ ದೇವಸ್ಥಾನದ ವಠಾರ.
5. ಶೆಡ್ಡೆ ಜಾರ ಹತ್ತುಸಮಸ್ತರು, ಯಕ್ಷಗಾನ ಬಯಲಾಟ ಸಮಿತಿ, ಮೂಡುಶೆಡ್ಡೆ.
6. ಲೀಲಾ ಮಹಾಬಲ ಶೆಟ್ಟಿ, 'ಲೀಲಾಶ್ರಯ', ಸುಭಾಷಿತ ನಗರ, ಕಬ್ಬಿನಹಿತ್ಲು, ಸುರತ್ಕಲ್.
7. ಬಿ. ಚಿತ್ತರಂಜನ್ ರೈ, 'ಆಶ್ರಯ', ಪಡು ಬೊಂಡಂತಿಲ, ವಯಾ ನೀರುಮಾರ್ಗ.

ಶ್ರೀ ಧರ್ಮಸ್ಥಳ ಮೇಳ
ಬ್ರಹ್ಮಾವರ ತೆಂಕುಬಿರ್ತಿಯಲ್ಲಿ
ಶ್ರೀ ರಾಮಚಂದ್ರ ಗೊಲ್ಲ ಮತ್ತು ಮನೆಯವರು
ತೆಂಕುಬಿರ್ತಿ, ವಾರಂಬಳ್ಳಿ

ಶ್ರೀ ಸಾಲಿಗ್ರಾಮ ಮೇಳ
ಬೆಳ್ವೆ ಗಜಾನನ ಕ್ಯಾಶ್ಯೂಸ್‌ನಲ್ಲಿ ಬಯಲಾಟ
ಏಕಲವ್ಯ- ಶಶಿಪ್ರಭಾ ಪರಿಣಯ

ಶ್ರೀ ಪೆರ್ಡೂರು ಮೇಳ
ಸಿದ್ದಾಪುರದಲ್ಲಿ-**ಸುಂದೋಪಸುಂದ-ಅವತಾರ ವೇದಿಕೆ-ರಕ್ತರಾತ್ರಿ**

ಶ್ರೀ ಹನುಮಗಿರಿ ಮೇಳ
ಬ್ರಹ್ಮಕಲಶೋತ್ಸವ ಪ್ರಯುಕ್ತ ಪೆರಡಾಲದಲ್ಲಿ

ಶ್ರೀ ಪಾವಂಜೆ ಮೇಳ
ತೌಡುಗೋಳಿಯಲ್ಲಿ- **ಛಾಯಾನಂದನ**



ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ರ್‍ಯಾಂಕ್ ಪಡೆದ ಕುಂದಾಪುರ ತಾಲೂಕಿನ ಶಂಕರ ನಾರಾಯಣದ ಮದರ್ ತೆರೆಸಾ ಮೆಮೋರಿಯಲ್ ಶಾಲೆಯ ವಿದ್ಯಾರ್ಥಿ ಪ್ರೀತಮ್ ಜಿ. ಪೂಜಾರಿ ಅವರನ್ನು ಕುಂದಾಪುರದ ವಿಧಾನಸಭಾ ಕ್ಷೇತ್ರದ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಅವರು ಗುರುವಾರ ಅಭಿನಂದಿಸಿದರು. ಕಡು ಬಡತನ ನಡುವೆಯೂ ಮಗನ ಶಿಕ್ಷಣಕ್ಕೆ ಬೆನ್ನೆಲುಬಾಗಿ ನಿಂತಿರುವ ತೊಂಭಟ್ಟು ಕಸಿನಪಾಲು ಗಣಪತಿ ಪೂಜಾರಿ ಮತ್ತು ನಾಗರತ್ನ ದಂಪತಿಗೆ ಹಾಗೂ ಶಂಕರ್ ನಾರಾಯಣ ಮದರ್ ತೆರೇಸಾ ಶಾಲಾ ಆಡಳಿತ ಮಂಡಳಿಗೂ ಮತ್ತು ಅಧ್ಯಾಪಕ ವಂದದವರಿಗೆ ಶುಭ ಹಾರೈಸಿದರು.

ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿಂದು ಒಪ್ಪಂದಕ್ಕೆ ಸಹಿ ಕಾರ್ಯಕ್ರಮ

ಮಂಗಳೂರು: ಅಡ್ಯಾರ್‌ನ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಮತ್ತು ಬೆಂಗಳೂರಿನ ಕ್ರೈಸ್ಟ್ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ ಮತ್ತು ಅದರ ವಿಭಾಗವಾದ ಕ್ರೈಸ್ಟ್ ಇನ್ಕ್ಯುಬೇಷನ್ ಮತ್ತು ಕನ್ಸಲ್ಟೆನ್ಸಿ ಫೌಂಡೇಶನ್ ನಡುವೆ ಪರಸ್ಪರ ಒಪ್ಪಂದಕ್ಕೆ ಸಹಿ ಹಾಕುವ ಕಾರ್ಯಕ್ರಮ ಏ. 25ರಂದು ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ನಡೆಯಲಿದೆ.

ಈ ಒಪ್ಪಂದವು 2026-27ನೇ ಸಾಲಿಗೆ ಹೊಸದಾಗಿ ಪ್ರಾರಂಭಿಸಲಾಗುವ ವಿಭಾಗಗಳಾದ ಬ್ಯಾಚುಲರ್ ಆಫ್ ಬಿಸ್‌ನೆಸ್ ಆಡ್ಮಿನಿಸ್ಟ್ರೇಷನ್, ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ಸ್ ಮತ್ತು ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್ಸ್ ಗಳ ಮೌಲ್ಯ ವರ್ಧನೆ, ಅಭಿವೃದ್ಧಿಯನ್ನು ಕೇಂದ್ರೀಕರಿಸುತ್ತದೆ. ಕರಾವಳಿ ಭಾಗದ ವಿದ್ಯಾರ್ಥಿ ಸಮುದಾಯದ ಹಿತಾಸಕ್ತಿಗಳಲ್ಲಿ ಅರ್ಥಪೂರ್ಣ ಮತ್ತು ದೀರ್ಘಕಾಲೀನ ಶೈಕ್ಷಣಿಕ ಪಾಲುದಾರಿಕೆಗೆ ಬಲವಾದ ಅಡಿಪಾಯ ಒದಗಿಸಲಿದೆ ಎಂದು ಸಹ್ಯಾದ್ರಿ ಪ್ರಾಂಶುಪಾಲ ಡಾ. ಎಸ್. ಎಸ್.ಇಂಜಗನೇರಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇಂದು ಕಾರ್ಯಕ್ರಮ

25ರಂದು ಮಧ್ಯಾಹ್ನ 12 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಸಹ್ಯಾದ್ರಿ ಸಂಸ್ಥೆಯ ಅಧ್ಯಕ್ಷ ಮಂಜುನಾಥ ಭಂಡಾರಿ, ಕ್ರೈಸ್ಟ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಡಾ. ಅನಿಲ್ ಪಿಂಟೊ, ಸ್ಕೂಲ್ ಆಫ್ ಬಿಸ್‌ನೆಸ್ ಮ್ಯಾನೇಜ್ ಮೆಂಟ್‌ನ ಮುಖ್ಯಸ್ಥ ಡಾ. ಶ್ರೀನಿವಾಸ್ ಕೆ., ಕಂಪ್ಯೂಟರ್ ವಿಜ್ಞಾನ, ಅಂಕಿಅಂಶಗಳು ಮತ್ತು ದತ್ತಾಂಶ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ವಿನಯ್ ಎಂ., ಬೆಂಗಳೂರಿನ ಯಶವಂತಪುರ ಕ್ಯಾಂಪಸ್‌ನ ಕಾರ್ಯಕ್ರಮ ಸಂಯೋಜಕಿ ಡಾ. ಡಿ. ಸಂಧ್ಯಾ ಭಾಗವಹಿಸಲಿದ್ದಾರೆ ಎಂದರು.

ಎಂಬಿಎ ವಿಭಾಗದ ನಿರ್ದೇಶಕಿ ಡಾ.ವಿಶಾಲ್ ಸಮರ್ಥ, ಡೀನ್ ಅಕಡೆಮಿಕ್ಸ್, ಡಾ. ಶಮತ್ ರೈ, ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಮುಸ್ತಫಾ ಬಸ್ತಿಕೋಡಿ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಅನುಷ್ ಬೇಕಲ್ ಉಪಸ್ಥಿತರಿದ್ದರು.

ಮಲ್ಲಿಕಾರ್ಜುನ ಖರ್ಗೆ ಅವರ 'ಭಯೋತ್ಪಾದಕ' ಹೇಳಿಕೆಗೆ ಆಕ್ರೋಶ

ಯುವ ಮೋರ್ಚಾ ಪ್ರತಿಭಟನೆ

ಕುಶಾಲನಗರ: ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷಮಲ್ಲಿಕಾರ್ಜುನಖರ್ಗೆ ಅವರುಪ್ರಧಾನಿ ನರೇಂದ್ರಮೋದಿಯವರನ್ನು'ಭಯೋತ್ಪಾದಕ' ಎಂದು ಸಂಬೋಧಿಸಿರುವುದನ್ನು ವಿರೋಧಿಸಿ ಕೊಡಗು ಜಿಲ್ಲಾ ಬಿಜೆಪಿ ಯುವಮೋರ್ಚಾ ವತಿಯಿಂದ ಕುಶಾಲನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.



ಇಲ್ಲಿನ ಗಣಪತಿ ದೇವಾಲಯದ ಮುಂಭಾಗ ಪ್ರತಿಭಟಿಸಿದ ಬಿಜೆಪಿ ಪ್ರಮುಖರು ಹಾಗೂ ಕಾರ್ಯಕರ್ತರು ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಧಿಕ್ಕಾರ ಕೂಗಿದರಲ್ಲದೆ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಮಲ್ಲಿಕಾರ್ಜುನ ಖರ್ಗೆ ಭಾವಚಿತ್ರವನ್ನು ದಹಿಸಿ ಕೆಲಕಾಲ ರಸ್ತೆ ತಡೆ ನಡೆಸುವುದರೊಂದಿಗೆ ಆಕ್ರೋಶ ವ್ಯಕ್ತಪಡಿಸಿದರು.

ಈಸಂದರ್ಭಸುದ್ದಿಗಾರರೊಂದಿಗೆಮಾತನಾಡಿದ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಮಹೇಶ್ ತಿಮ್ಮಯ್ಯ, ದೇಶದ ಉನ್ನತ ಹುದ್ದೆ ಅಲಂಕರಿಸಿರುವ ಪ್ರಧಾನಿಯನ್ನು 'ಟೆರರಿಸ್ಟ್' ಎಂದು ಸಂಬೋಧಿಸಿ ಅವಹೇಳನ ಮಾಡಿರುವುದು ಖಂಡನೀಯ. ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ಪ್ರಮುಖರು ದೇಶ ಹಾಗೂ ದೇಶದ ಪ್ರಧಾನಿಯನ್ನು ಹಲವು ಬಾರಿ ಅವಹೇಳನವಾಗಿ ಸಂಬೋಧಿಸಿದ್ದಾರೆ ಎಂದು ಕಿಡಿಕಾರಿದರು.

ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಕ್ರಮಕ್ಕೆ ಕೋರಿ ದೂರು ಸಲ್ಲಿಸಿದ್ದರೂ, ರಾಜ್ಯದ ಕಾಂಗ್ರೆಸ್ ಸರಕಾರ ಯಾವುದೇ ಕ್ರಮ ಜರುಗಿಸಲು ಮುಂದಾಗುತ್ತಿಲ್ಲ. ಹಿಂಬಾಗಿಲಿಂದ ಪೊಲೀಸ್ ವ್ಯವಸ್ಥೆ ನಿಯಂತ್ರಿಸುವ ಮೂಲಕ ಬಿಜೆಪಿ ಕಾರ್ಯಕರ್ತರ ವಿರುದ್ಧವೇ ಸುಮೋಟೋ ದೂರು ದಾಖಲಿಸಲು ಕುಮ್ಮಕ್ಕು ನೀಡುತ್ತಿದೆ ಎಂದು ಅವರು ಆರೋಪಿಸಿದರು.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿ.ಕೆ.ಲೋಕೇಶ್ ಮಾತನಾಡಿ, ಯಾವುದೇ ದೂರದೃಷ್ಟಿ ಇಲ್ಲದ ಕಾಂಗ್ರೆಸ್ ನಾಯಕ ಎಂದರೆ ಅದು ಮಲ್ಲಿಕಾರ್ಜುನ ಖರ್ಗೆ. ಇದಕ್ಕೆ ಸ್ಪಷ್ಟ ಉದಾಹರಣೆ ಎಂದರೆ ಖರ್ಗೆ ಕುಟುಂಬ ಪ್ರತಿನಿಧಿಸುತ್ತಿರುವ ಅಭಿವೃದ್ಧಿ ವಂಚಿತ ಹೈದರಾಬಾದ್ ಕರ್ನಾಟಕ ಎಂದು ಟೀಕಿಸಿದರು.

ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ಭಯೋತ್ಪಾದನೆ ಮಿತಿಮೀರಿತ್ತು. ಭಯೋತ್ಪಾದನೆ ವಿರುದ್ಧದ ದಾಳಿಗಳು, ದೇಶದ ಏಕತೆಗೆ ಕೈಗೊಂಡ ಕ್ರಮಗಳು, ಮಹಿಳಾ ಮೀಸಲಾತಿ ಮತ್ತಿತರ ಪ್ರತಿಯೊಂದು ವಿಚಾರದಲ್ಲೂ ಮಲ್ಲಿಕಾರ್ಜುನ ಖರ್ಗೆ ನೇತೃತ್ವದ ಕಾಂಗ್ರೆಸ್ ಸದಾ ವಿರೋಧ ವ್ಯಕ್ತಪಡಿಸುತ್ತಾ ಬಂದಿದೆ. ವಿಶ್ವ ಗುರು ಮೋದಿಯನ್ನು ಭಯೋತ್ಪಾದಕ ಎನ್ನುವವರು ಪಂಜಾಬ್‌ನಲ್ಲಿ ಭಯೋತ್ಪಾದನೆಗೆ ಕುಮ್ಮಕ್ಕು ನೀಡಿದವರು ಯಾರು ಎಂಬುದನ್ನು ಅವಲೋಕಿಸಬೇಕಿದೆ. ಮುಂದೆ ಇಂತಹ ಅವಹೇಳನ ಪುನರಾವರ್ತನೆಯಾದಲ್ಲಿ ದೇಶಾದ್ಯಂತ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ನಡೆಯಲಿದೆ ಎಂದು ಎಚ್ಚರಿಸಿದರು.

ಮಹಿಳಾ ಮೋರ್ಚಾ ಕಾರ್ಯಕರ್ತೆ ಗೀತಾ ಮಾತನಾಡಿ, ಮಹಿಳೆಯರ ಮೀಸಲಾತಿ ಮಸೂದೆಗೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಪಕ್ಷಕ್ಕೆ ಮಹಿಳೆಯರು ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಪ್ರತಿಭಟನೆಯಲ್ಲಿ ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷ ನವನೀತ್ ಪೊನ್ನೇಟಿ, ಪ್ರವೀಣ್ ಮಲ್ಲಜಿರ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಚೆಂಗಪ್ಪ, ಕಾರ್ಯದರ್ಶಿ ರಕ್ಷಿತ್ ಮಾವಾಜಿ, ಮಂಡಲ ಅಧ್ಯಕ್ಷ ಗೌತಮ್, ನಗರ ಯುವ ಮೋರ್ಚಾ ಅಧ್ಯಕ್ಷ ರಾಮನಾಥನ್, ಕಾರ್ಯದರ್ಶಿಗಳಾದ ಸಚಿನ್, ಆದರ್ಶ, ನಗರ ಬಿಜೆಪಿ ಅಧ್ಯಕ್ಷ ಚರಣ್, ಪ್ರಮುಖರಾದ ಎಂ.ಡಿ. ಕೃಷ್ಣಪ್ಪ, ಮಧುಸೂದನ್, ಎಂ ವಿ ನಾರಾಯಣ್, ಡಿ.ಕೆ.ತಿಮ್ಮಪ್ಪ, ಚಂದ್ರಶೇಖರ್ ಹೇರೂರು, ಭಾಸ್ಕರ್ ನಾಯಕ್, ಮೋಹಿತ್, ಪದ್ಮನಾಭ, ಪ್ರಸಿನ್, ಸುಮನ್, ಗೀತಾಂಜಲಿ, ಅವಿನಾಶ್, ಶಿವಾಜಿ, ಮಣಿಕಂಠ, ದೊರೆ ಗಣಪತಿ ಮತ್ತಿತರರು ಇದ್ದರು.

ಮೇ1- 3: ಮಂಗಳೂರಿನಲ್ಲಿ ಕೆನರಾ ಇಂಜಿನಿಯರಿಂಗ್- ಕೈಗಾರಿಕಾ-ತಂತ್ರಜ್ಞಾನ ಪ್ರದರ್ಶನ

ಮಂಗಳೂರು: ಕೆನರಾ ಕೈಗಾರಿಕಾ ಸಂಘದ ವತಿಯಿಂದ ಮೇ 1ರಿಂದ 3ರವರೆಗೆ ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ಕೆನರಾ ಎಂಜಿನಿಯರಿಂಗ್, ಕೈಗಾರಿಕಾ ಮತ್ತು ತಂತ್ರಜ್ಞಾನ ಪ್ರದರ್ಶನ-2026ನ್ನು ಆಯೋಜಿಸಿದೆ ಎಂದು ಸಂಸ್ಥೆಯ ಅಧ್ಯಕ್ಷ ಎಂ.ಡಿ.ಪೂಜಾರಿ ತಿಳಿಸಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 1ರಂದು ಪೂರ್ವಾಹ್ನ 10 ಗಂಟೆಗೆ ವಿಧಾನ ಸಭಾ ಅಧ್ಯಕ್ಷ ಯು.ಟಿ.ಖಾದರ್ ಉದ್ಘಾಟನೆ ನೆರವೇರಿಸುವರು. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ಸಂಸದ ಕ್ಯಾ.ಬ್ರಿಜೇಶ್ ಚೌಟ, ಅಚಲ್ ಗ್ರೂಪ್‌ನ ಮುಖ್ಯಸ್ಥ ಜಿ.ಗಿರಿಧರ ಪ್ರಭು ಮತ್ತಿತರರು ಉಪಸ್ಥಿತರಿರುವರು ಎಂದರು. 120ಕ್ಕೂ ಅಧಿಕ ಉದ್ಯಮಗಳು ಈ ಎಕ್ಸ್ಪೋವೋದಲ್ಲಿ ಭಾಗವಹಿಸಲಿದ್ದು, ತಮ್ಮ ತಾಂತ್ರಿಕತೆ ಪ್ರಗತಿ, ನವೀನತೆ ಹಾಗೂ ಗುಣಮಟ್ಟದ ಮಾನದಂಡಗಳನ್ನು ಇಲ್ಲಿ ಪ್ರದರ್ಶಿಸಲಿವೆ ಎಂದವರು ಹೇಳಿದರು.

ಕರಾವಳಿಯ ಅನೇಕ ಸಣ್ಣ ಉದ್ಯಮಗಳು ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ವಿವಿಧ ಉತ್ಪನ್ನಗಳು ಮತ್ತು ಉತ್ತಮ ಸೇವೆಯನ್ನು ಒದಗಿಸುತ್ತಾ ಬಂದಿವೆ. ಇಲ್ಲಿನ ಅನೇಕ ಸಣ್ಣ, ಮಧ್ಯಮ ಮತ್ತು ದೊಡ್ಡ ಉದ್ಯಮಗಳು ತಮ್ಮ ಉತ್ಪನ್ನಗಳನ್ನು ದೇಶೀಯ ಮಾರುಕಟ್ಟೆಯಷ್ಟೇ ಅಲ್ಲದೆ ಅಂತಾರಾಷ್ಟ್ರೀಯ ಮಟ್ಟಕ್ಕೂ ರಫ್ತು ಮಾಡುತ್ತಿದೆ. ಇದೀಗ ಮಂಗಳೂರಿನಲ್ಲಿ ಕೈಗಾರಿಕಾ ಮತ್ತು ತಂತ್ರಜ್ಞಾನ ಪ್ರದರ್ಶನವನ್ನು ಏರ್ಪಡಿಸಿರುವುದರಿಂದ ಕರಾವಳಿ ಭಾಗದ ಜನತೆಗೆ ಉದ್ಯಮದ ಬೆಳವಣಿಗೆಯ ಹಾದಿಯನ್ನು ತೆರೆದಿಟ್ಟಂತಾಗಲಿದೆ ಎಂದು ಎಂ.ಡಿ.ಪೂಜಾರಿ ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಅಧ್ಯಕ್ಷ ಅರುಣ್ ಪಡಿಯಾರ್, ಉಪಾಧ್ಯಕ್ಷ ಬಿ.ಎ.ಇಕ್ಬಾಲ್, ಕಾರ್ಯದರ್ಶಿ ರೋಶನ್ ಬಾಳಿಗಾ ಬಿ., ಜೊತೆ ಕಾರ್ಯದರ್ಶಿ ರಾಮಚಂದ್ರ, ಕೋಶಾಧಿಕಾರಿ ಪುಷ್ಪರಾಜ್ ಉಪಸ್ಥಿತರಿದ್ದರು.



ಮೇ 7ರಂದು ಶೃಂಗೇರಿ ಜಗದ್ಗುರುಗಳು ಪುತ್ತೂರಿಗೆ ಗುರುವಂದನಾ ಕಾರ್ಯಕ್ರಮದ ಪೂರ್ವಭಾವಿ ಸಭೆ

ಪುತ್ತೂರು: ನಗರದ ಬಪ್ಪಳಿಗೆಯಲ್ಲಿನ ಶ್ರೀ ಶಂಕರ ಸಭಾಭವನದಲ್ಲಿ ಮೇ 7ರಂದು ನಡೆಯಲಿರುವ ಶೃಂಗೇರಿ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಗುರುವಂದನಾ ಕಾರ್ಯಕ್ರಮದ ಪೂರ್ವಭಾವಿ ಸಭೆ ಬಪ್ಪಳಿಗೆಯ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯಲ್ಲಿ ನಡೆದು ಕಾರ್ಯಕ್ರಮದ ಹಿನ್ನೆಲೆಯಲ್ಲಿ ಜವಾಬ್ದಾರಿಯನ್ನು ಹಂಚಿಕೆ ಮಾಡಲಾಯಿತು.



ಈ ಸಂದರ್ಭ ಮಾತನಾಡಿದ ಗುರು ವಂದನಾ ಸಮಿತಿಯ ಅಧ್ಯಕ್ಷ ಚಿದಾನಂದ ಬೈಲಾಡಿ, ಸಾರ್ವಜನಿಕರು ಹಾಗೂ ಅಂಬಿಕಾ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯಕ್ರಮಹಮ್ಮಿಕೊಳ್ಳಲಾಗಿದ್ದು, ನಾನಾ ಬಗೆಯ ಜವಾಬ್ದಾರಿಗಳನ್ನು ಗುರುತಿಸಿ ಹಂಚಲಾಗಿದೆ. ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯಗಳನ್ನು ನೆರವೇರಿಸಿಕೊಟ್ಟಾಗ ಕಾರ್ಯಕ್ರಮದ ಆಯೋಜನೆ ಸುಲಲಿತವೆನಿಸುತ್ತದೆ ಎಂದು ತಿಳಿಸಿದರು.

ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷಸುಬ್ರಮಣ್ಯನಟ್ಟೋಜ ಮಾತನಾಡಿ, ಶೃಂಗೇರಿ ಪೀಠ ಸಮಸ್ತ ಹಿಂದೂ ಸಮಾಜಕ್ಕೆ ಜಗದ್ಗುರು ಪೀಠವಾಗಿದ್ದು, ಆದಿ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಚತುರಾಮ್ನಾಯ ಪೀಠಗಳಲ್ಲಿ ಒಂದಾಗಿ ಕಂಗೊಳಿಸುತ್ತಿದೆ. ಶೃಂಗೇರಿ ಜಗದ್ಗುರುಗಳ ಆಶೀರ್ವಾದ ಪಡೆದ ಅವೆಷ್ಟೋ ಮಂದಿ ಬದುಕಿನಲ್ಲಿ ಉನ್ನತಿಯನ್ನು ಕಂಡಿದ್ದಾರೆ ಎಂದು ಹೇಳಿದರು.

> ▸▸ ಪ್ರತಿಯೊಬ್ಬರೂ ತಮ್ಮ ಕರ್ತವ್ಯಗಳನ್ನು ನೆರವೇರಿಸಿಕೊಟ್ಟಾಗ ಕಾರ್ಯಕ್ರಮದ ಆಯೋಜನೆ ಸುಲಲಿತವೆನಿಸುತ್ತದೆ
>
> ▸▸ ಶೃಂಗೇರಿ ಪೀಠ ಸಮಸ್ತ ಹಿಂದೂ ಸಮಾಜಕ್ಕೆ ಜಗದ್ಗುರು ಪೀಠವಾಗಿದೆ

ಈ ಸಂದರ್ಭ ಸಮಿತಿಯ ಗೌರವಾಧ್ಯಕ್ಷ ಮುಗೆರೋಡಿ ಬಾಲಕೃಷ್ಣ ರೈ, ಗೌರವ ಸಲಹೆಗಾರ ಎನ್.ಕೆ. ಜಗನ್ನಿವಾಸ ರಾವ್, ಕಾರ್ಯಾಧ್ಯಕ್ಷ ಶಿವರಾಮ ಆಳ್ವ, ಪ್ರಧಾನ ಕಾರ್ಯದರ್ಶಿ ಆರ್.ಸಿ. ನಾರಾಯಣ, ಖಜಾಂಜಿ ಕಾವು ಹೇಮನಾಥ ಶೆಟ್ಟಿ, ಕಾರ್ಯದರ್ಶಿ ಸಾಜ ರಾಧಾಕೃಷ್ಣ ಆಳ್ವ, ಸಂಚಾಲಕ ಡಾ.ಸುರೇಶ್ ಪುತ್ತೂರಾಯ, ಸಂಘಟನಾ ಕಾರ್ಯದರ್ಶಿ ದಿನೇಶ್ ಜೈನ್, ತಾಲೂಕು ಧರ್ಮ ಶಿಕ್ಷಣ ಸಮಿತಿಯ ಅಧ್ಯಕ್ಷ ದಂಬೆಕಾನ ಸದಾಶಿವ ರೈ, ಮಹಿಳಾ ಪ್ರಮುಖರಾದ ಶಶಿಕಲಾ ಸಿ.ಎಸ್. ಮತ್ತಿತರರು ಅನಿಸಿಕೆ ವ್ಯಕ್ತಪಡಿಸಿದರು. ಅಂಬಿಕಾ ಕಾಲೇಜಿನ ಪ್ರಾಚಾರ್ಯ ರಾಕೇಶ ಕುಮಾರ್ ಕಮ್ಮಜೆ ಕಾರ್ಯಕ್ರಮ ನಿರ್ವಹಿಸಿದರು.

ಮಡಿಕೇರಿ: ಲವ್ ಜಿಹಾದ್ ವಿರುದ್ಧ ವಿಹಿಂಪ, ಬಜರಂಗದಳ ಪ್ರತಿಭಟನೆ

ಮಡಿಕೇರಿ: ಲವ್ ಜಿಹಾದ್ ಹಾಗೂ ಕಾರ್ಪೊರೇಟ್ ಜಿಹಾದ್ ವಿರುದ್ಧ ವಿಶ್ವ ಹಿಂದೂ ಪರಿಷದ್ ಹಾಗೂ ಬಜರಂಗದಳದವತಿಯಿಂದಗುರುವಾರ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಯಿತು.



ದೇಶದ ವಿವಿಧ ರಾಜ್ಯಗಳಲ್ಲಿ ಇತ್ತೀಚೆಗೆ ಲವ್ ಜಿಹಾದ್ ಮತ್ತು ನಾಸಿಕ್‌ನಲ್ಲಿ ಟಿಸಿಎಸ್ ಕಂಪೆನಿಯಲ್ಲಿ ಕಾರ್ಪೋರೇಟ್ ಜಿಹಾದ್ ನಡೆಯುತ್ತಿದೆ. ಇಷ್ಟೆಲ್ಲಾ ಆದರೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಜಿಲ್ಲೆಯಲ್ಲಿಯೂ ಲವ್ ಜಿಹಾದ್ ಪ್ರಕರಣ ನಡೆಯುತ್ತಿದ್ದರೂ ಪೊಲೀಸ್ ಇಲಾಖೆ ಗಮನ ಹರಿಸುತ್ತಿಲ್ಲ. ಹಿಂದೂ ಸಂಘಟನೆಗಳು ದೂರು ನೀಡಿದ ನಂತರ ಕ್ರಮ ಕೈಗೊಳ್ಳಲು ಮುಂದಾಗುತ್ತಿದೆ ಎಂದು ಪ್ರತಿಭಟನಾಕಾರರು ದೂರಿದರು.

ರಾಜ್ಯದ ಎಲ್ಲಾ ಖಾಸಗಿ ಸಂಸ್ಥೆಗಳ ವಿರುದ್ಧ ನೀಡಿದ ದೂರುಗಳನ್ನು ಪರಿಶೀಲನೆ ಮಾಡಿ ಮತಾಂತರ ಸಂಬಂಧಿತ ಕಿರುಕುಳ ಕೇಸ್‌ಗಳನ್ನು ಮರು ತೆರೆಯಬೇಕು. ಕಾಣೆಯಾದ ಹಿಂದೂ ಯುವತಿಯರ ಪತ್ತೆಗಾಗಿ ವಿಶೇಷ ಆ್ಯಂಟಿ ಹ್ಯೂಮನ್ ಟ್ರಾಫಿಕಿಂಗ್ ಯೂನಿಟ್ ರಚಿಸಿ ಈ ಜಿಹಾದ್ ಜಾಲದ ಜೊತೆ ಲಿಂಕ್ ಇದೆಯೇ ಎಂದು ತನಿಖೆ ಮಾಡಬೇಕು. ಸಂತ್ರಸ್ತ ಮಹಿಳೆಯರ ಗುರುತು ಗೌಪ್ಯವಾಗಿಟ್ಟು, ಉಚಿತ ಕಾನೂನು ನೆರವು, ಕೌನ್ಸಿಲಿಂಗ್ ಮತ್ತು ಉದ್ಯೋಗ ನೀಡಲು ಧರ್ಮರಕ್ಷಾ ನಿಧಿ ಸ್ಥಾಪಿಸಬೇಕು. ಎಲ್ಲಾ ಜಿಮ್ ಮತ್ತು ಕೋಚಿಂಗ್ ಸೆಂಟರ್‌ಗಳ ಮೇಲೆ ನಿಗಾ ಇಟ್ಟು, ಇವುಗಳ ಕಡ್ಡಾಯ ನೋಂದಣಿ, ಸಿಸಿ ಟಿವಿ ಅಳವಡಿಕೆ, ಮಹಿಳಾ ತರಬೇತುದಾರರ ನೇಮಕಾತಿ ಕಡ್ಡಾಯ ಮಾಡಿ, ತಪಾಸಣೆ ನಡೆಸಬೇಕು ಎಂದು ಪ್ರತಿಭಟನಾನಿರತರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪಂ. ಮಾಜಿ ಅಧ್ಯಕ್ಷ ರವಿ ಕುಶಾಲಪ್ಪ, ವಿಹಿಂಪ ಜಿಲ್ಲಾ ಅಧ್ಯಕ್ಷ ರಮೇಶ್ ಪುದಿಯೊಕ್ಕಡ, ಕಾರ್ಯದರ್ಶಿ ಸಂತೋಷ್, ಚೇತನ್ ಶಾಂತಿನಿಕೇತನ, ಬಜರಂಗದಳ ಸಂಯೋಜಕ ವಿನಯ್ ಕುಮಾರ್, ಸಹ ಸಂಯೋಜಕ ದುರ್ಗೇಶ್, ಮುಕುಂದ್, ನಗರ ಸಂಯೋಜಕ ಚರಣ್ ಕುಮಾರ್ ಸೇರಿದಂತೆ ಹಿಂದೂ ಪರ ಸಂಘಟನೆಗಳ ಹಾಗೂ ಬಿಜೆಪಿ ಕಾರ್ಯಕರ್ತರು ಮೊದಲಾದವರು ಪಾಲ್ಗೊಂಡಿದ್ದರು.

ಮಳೆಗಾಲ ಪೂರ್ವ ಸ್ವಚ್ಛತಾ ಪರಿಶೀಲನಾ ಸಭೆ: ಕಾಸರಗೋಡು ಡಿಸಿ ಅರ್ಜುನ್ ಪಾಂಡ್ಯನ್ ಅಧ್ಯಕ್ಷತೆ

ಕಚೇರಿ, ಸಾರ್ವಜನಿಕ ಸ್ಥಳ ಶುಚಿಗೊಳಿಸಲು ಯೋಜನೆ

ಕಾಸರಗೋಡು: ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳ ವಿಶೇಷ ಸಭೆಯು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜರಗಿತು. ಸಭೆಯಲ್ಲಿ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅಧ್ಯಕ್ಷತೆ ವಹಿಸಿದ್ದರು. ಮಳೆಗಾಲ ಪೂರ್ವ ಸ್ವಚ್ಛತಾ ಕಾರ್ಯಕ್ಕೆ ಅಗತ್ಯದ ಕ್ರಮಗಳನ್ನು ಕೈಗೊಳ್ಳಲು ಸಭೆಯಲ್ಲಿ ನಿರ್ಧರಿಸಲಾಯಿತು.



ವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ನಡೆಸದೆ ಎಲ್ಲೆಂದರಲ್ಲಿ ತ್ಯಾಜ್ಯ ಸುರಿಯುವ ಸಂಸ್ಥೆಗಳು ಮತ್ತು ವ್ಯಕ್ತಿಗಳ ಮೇಲೆ ದಂಡ ವಿಧಿಸಲು ಹಾಗೂ ಸ್ಕ್ವಾಡ್‌ಗಳ ಚಟುವಟಿಕೆಗಳನ್ನು ತೀವ್ರಗೊಳಿಸಲು ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು. ವಿವಿಧ ರಸ್ತೆಗಳ ಬದಿಗಳಲ್ಲಿ ಮಾಲಿನ್ಯ ಎಸೆಯುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಯಿತು.

ರಾಷ್ಟ್ರೀಯ ಹೆದ್ದಾರಿ 66ರಲ್ಲಿ ನಿರ್ಮಾಣ ಕಾರ್ಯ ನಡೆಯುತ್ತಿರುವ ಚೆರ್ಕಳ ಸೌತ್ ಮತ್ತು ಚೆರುವತ್ತೂರು ವೀರಮಲಕುನ್ನು ಪ್ರದೇಶಗಳಲ್ಲಿ ಭೂಕುಸಿತಗಳನ್ನು ತಡೆಗಟ್ಟಲು ಮತ್ತು ನೀರಿನ ಅಡಚಣೆಯನ್ನು ನಿಭಾಯಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಮತ್ತು ನಿರ್ಮಾಣ ಗುತ್ತಿಗೆದಾರ ಕಂಪೆನಿಯ ಪ್ರತಿನಿಧಿಗಳು ಸಭೆಗೆ ಮಾಹಿತಿ ನೀಡಿದರು. ರಾಷ್ಟ್ರೀಯ ಹೆದ್ದಾರಿ 66 ಹಾದುಹೋಗುವ ಗ್ರಾಮ ಪಂಚಾಯತ್‌ಗಳು ಮತ್ತು ನಗರಸಭೆಗಳು ನೀರಿನ ಸೋರಿಕೆಯನ್ನು ನಿಯಂತ್ರಿಸಲು ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿ ತಿಳಿಸಿದರು.

ಜಿಲ್ಲೆಯ ಎಲ್ಲಾ ಕಚೇರಿಗಳು ಮತ್ತು ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸಲು ಅರ್ಜುನ್ ಪಾಂಡ್ಯನ್ ನಿರ್ದೇಶಿಸಿದರು. ಸ್ವಚ್ಛತಾ ಚಟುವಟಿಕೆಗಳ ಮೇಲೆ ನಿಗಾ ಇಡಲಾಗುವುದು ಮತ್ತು ತ್ಯಾಜ್ಯ ಎಸೆಯುವವರ ವಿರುದ್ಧ ದಂಡ ವಿಧಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಸಭೆಯಲ್ಲಿ ಎಡಿಎಂ ಕೆ.ವಿ.ಶ್ರುತಿ, ಎಲ್‌ಎಸ್‌ಜಿಡಿ ಜಂಟಿ ನಿರ್ದೇಶಕ ಜೇಸನ್ ಮ್ಯಾಥ್ಯೂ ಮತ್ತು ವಿವಿಧ ಇಲಾಖೆಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಕಾಟಿಪಳ್ಳ ಗಣೇಶಪುರ ದೇವಳದ ವಠಾರದಲ್ಲಿ ಕಾರ್ಯಕ್ರಮ

ಭರತಾಂಜಲಿಯಿಂದ ಗಾನಮೃತ, ನೃತ್ಯ ವೈಭವ

ಮಂಗಳೂರು: ಭರತನಾಟ್ಯವು ಕೇವಲ ಒಂದು ನೃತ್ಯ ಪ್ರಕಾರವಲ್ಲ, ಅದೊಂದು ಜೀವನ ವಿಧಾನ ಮತ್ತು ಸಾಂಸ್ಕೃತಿಕ ಪರಂಪರೆಯ ಪ್ರತಿಬಿಂಬವಾಗಿದೆ. ಜೀವನ ಮೌಲ್ಯಗಳನ್ನು ಕಲಿಸುವ, ಶಿಸ್ತು ಮೂಡಿಸುವ ಮತ್ತು ಆತ್ಮಾವಲೋಕನಕ್ಕೆ ಪ್ರೇರೇಪಿಸುವ ಅದ್ಭುತ ಕಲೆಯಾಗಿದೆ ಎಂದು ಕಾಟಿಪಳ್ಳ ಶ್ರೀ ಮಹಾಗಣಪತಿ ದೇವಸ್ಥಾನದ ವ್ಯವಸ್ಥಾಪನ ಸಮಿತಿಯ ನಿಕಟ ಪೂರ್ವ ಅಧ್ಯಕ್ಷ ಧರ್ಮೇಂದ್ರ ನುಡಿದರು.



ಅವರು ಭರತಾಂಜಲಿ ನೃತ್ಯಸಂಸ್ಥೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ಗಣೇಶಪುರ ದೇವಳದ ವಠಾರದಲ್ಲಿ ಹಮ್ಮಿಕೊಂಡಿರುವ ಗಾನಾಮೃತ ಹಾಗೂ ಭರತನಾಟ್ಯ ವೈಭವ ಕಾರ್ಯಕ್ರಮ ಉದ್ಘಾಟಿಸಿ ಮಾತಾಡಿದರು.

ಭರತಾಂಜಲಿ ಸಂಸ್ಥೆಯ ರೂವಾರಿಗಳಾದ ಶ್ರೀಧರ ಹೊಳ್ಳ-ಪ್ರತಿಮಾ ದಂಪತಿ ಮಹಾಗಣಪತಿ ದೇವಸ್ಥಾನದ ಪ್ರಾರಂಭದಿಂದಲೂ ಕಲಾ ಸೇವೆಯನ್ನು ಮಾಡಿಕೊಂಡು ಬರುತ್ತಿರುವುದು ಶ್ಲಾಘನೀಯ ಎಂದರು.

ಭರತಾಂಜಲಿಯ ನಿರ್ದೇಶಕ ಗುರು ಶ್ರೀಧರ ಹೊಳ್ಳ ಪ್ರಸ್ತಾವಿಕ ಮಾತುಗಳನ್ನಾಡಿ ಸಂಸ್ಥೆಯು ಬೆಳೆದು ಬಂದ ಬಗ್ಗೆ ಮಾತನಾಡಿದರು.

ಸಾಂಸ್ಕೃತಿಕ ಸಮಿತಿಯ ಚಂದ್ರಹಾಸ ಶೆಟ್ಟಿಗಾರ್ ಸ್ವಾಗತಿಸಿ ನಿರೂಪಿಸಿದರು. ವಿದುಷಿ ಪ್ರತಿಮಾ ಶ್ರೀಧರ್ ವಂದಿಸಿದರು. ದೀನನಾಥ ಶೆಟ್ಟಿಗಾರ್, ರಾಮಚಂದ್ರ ಶೆಟ್ಟಿಗಾರ್ ಮೊದಲಾದವರು ಉಪಸ್ಥಿತರಿದ್ದರು.

ಬೆಂಗಳೂರಿನ ವಂದನಾ ರಾಣಿ ಅವರಿಂದ ಗಾನಮೃತ ಹಾಗೂ ಸಿದ್ಧಿ ವಿನಾಯಕ ನೃತ್ಯ ಶಾಲೆಯ ವಿದ್ಯಾರ್ಥಿಗಳಿಂದ ನೃತ್ಯ ವೈಭವ ಕಾರ್ಯಕ್ರಮ ಸಂಪನ್ನಗೊಂಡಿತು.

ಮರಳು: ಟಿಪ್ಪರ್ ಚಾಲಕ ಸೆರೆ

ಕುಂಬಳೆ: ಅಕ್ರಮವಾಗಿ ಮರಳು ಸಂಗ್ರಹಿಸುತ್ತಿದ್ದ ವೇಳೆ ಪೊಲೀಸರನ್ನು ಕಂಡು ಟಿಪ್ಪರ್ ಲಾರಿ ಹಾಗೂ ಮರಳು ಸಂಗ್ರಹ ಉಪಕರಣಗಳನ್ನು ಬಿಟ್ಟು ಪರಾರಿಯಾದ ಪ್ರಕರಣದಲ್ಲಿ ವಾಹನದ ಆರ್‌ಸಿ ಮಾಲಕನನ್ನು ಪೊಲೀಸರು ಬಂಧಿಸಿದ್ದಾರೆ.

ಪೆರಿಯಡ್ಕದ ಎಂ.ಅಶ್ರಫ್ ಬಂಧಿತ ವ್ಯಕ್ತಿಯೆಂದು ಪೊಲೀಸರು ತಿಳಿಸಿದ್ದಾರೆ. ಮರಳು ಲೋಡ್ ಮಾಡುವ ಕಾರ್ಮಿಕರ ಸಹಿತ 5 ಮಂದಿಯ ವಿರುದ್ಧ ಪೊಲೀಸರು ಕೇಸು ದಾಖಲಿಸಿಕೊಂಡಿದ್ದರು.

ಮಾರ್ಚ್ 30ರಂದು ಸಂಜೆ ಶಿರಿಯ ಹೊಳೆಯ ಹೇರೂರು ಪೈಯಾರ್‌ಕಡವ್‌ನಲ್ಲಿ ಅಕ್ರಮವಾಗಿ ಮರಳು ಸಂಗ್ರಹಿಸುತ್ತಿದ್ದ ಬಗ್ಗೆ ಮಾಹಿತಿ ಲಭಿಸಿದ ಎಸ್‌ಐಗಳಾದ ಸಿ.ಸನೀಶ್, ಅನಂತಕೃಷ್ಣ ಆರ್. ಮೆನೋನ್ ಎಂಬವರು ದಾಳಿ ನಡೆಸಿದ್ದರು. ಈ ವೇಳೆ ಲಾರಿಯ ಡ್ರೈವಿಂಗ್ ಸೀಟಿನಲ್ಲಿದ್ದ ಅಶ್ರಫ್ ಹಾಗೂ ಹೊಳೆಯಿಂದ ಮರಳು ಸಂಗ್ರಹಿಸಿ ದಡಕ್ಕೆ ತಲುಪಿಸುತ್ತಿದ್ದ ನಾಲ್ವರು ಓಡಿ ಪರಾರಿಯಾಗಿದ್ದರು. ಮರಳು ತುಂಬಿಸುತ್ತಿದ್ದ ಲಾರಿಯನ್ನು ಪೊಲೀಸರು ಕಸ್ಟಡಿಗೆ ತೆಗೆದುಕೊಂಡಿದ್ದರು. ಬಳಿಕ ಆರೋಪಿಗಳಿಗಾಗಿ ಹುಡುಕಾಟ ನಡೆಸುತ್ತಿದ್ದ ವೇಳೆ ಅಶ್ರಫ್ ಸೆರೆಗೀಡಾಗಿದ್ದಾನೆ.

ಸುಳ್ಯದಲ್ಲಿಂದು ವಿದ್ಯುತ್ ವ್ಯತ್ಯಯ

ಸುಳ್ಯ: ಸುಳ್ಯ ಉಪ ವಿಭಾಗದ ಕೇರ್ಪಳ, ಶ್ರೀರಾಂಪೇಟೆ, ಜಬಳೆ ಡಿಪ್ಪೋ, ಕೊಲ್ಚಾರ್, ತೊಡಿಕಾನ, ಅಜ್ಜಾವರ, ಉಬರಡ್ಕ, ಕಲ್ಲುಗುಂಡಿ, ಮಂಡೆಕೋಲು ಫೀಡರುಗಳಲ್ಲಿ ಇಂದು ಬೆಳಗ್ಗೆ 10ರಿಂದ ಸಂಜೆ 6ರ ತನಕ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಪುತ್ತೂರು ಮಾರುಕಟ್ಟೆ ಧಾರಣೆ

24-04-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	445 - 475
ಚೋಲ್ ಅಡಿಕೆ	525 - 550
ಡಬಲ್ ಚೋಲ್	525 - 550
ಹೊಸ ಪಟೋರ	350 - 400
ಹಳೆ ಪಟೋರ	375 - 405
ಹೊಸ ಉಳ್ಳಿ	120 - 290
ಹಳೆ ಉಳ್ಳಿ	110 - 290
ಹೊಸ ಕೋಕಾ	325 - 345
ಹಳೆ ಕೋಕಾ	325 - 345
ಹೊಸ ಕರಿಗೋಟು	235 - 265
ಹಳೆ ಕರಿಗೋಟು	235 - 265
ಹಸಿ ಕೊಕ್ಕೋ	70 - 100
ಒಣ ಕೊಕ್ಕೋ	270 - 310

ಕಾಳುಮೆಣಸು ಧಾರಣೆ

ಕಾಳುಮೆಣಸು	450 - 680

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	235.00
ಆರ್‌ಎಸ್‌ಎಸ್ 2	196.00
ಸ್ಕ್ರಾಪ್ 1	145.00
ಸ್ಕ್ರಾಪ್ 2	125.00

IN THE COURT OF I Addl. DISTRICT JUDGE, D.K., (COMMERCIAL) MANGALORE
Com. O.S No. 56/2026

Between:
Canara Bank, Gurpur-Kaikamba Branch ...Plaintif
And
Mrs. Vijayalaxmi .. Defendant

NOTICE

To
Mrs. Vijayalaxmi,
W/o Srinivasa Suvarna,
M/s: V care Beauty Parlour, 2-163-26, Fortune Building,
Opp: Ganapathi Temple,
Ganjimatt, Manglauru-574141
H.No. 3-36, Thimri House,
Kuppepadavu Post, Kolavoor,
Mangaluru Taluk-574144

Take notice the above suit stands posted to **20-06-2026** for your appearance. You may appear on that day at **11 a.m.** before the above court either personally or through Advocate. Otherwise the matter will be decided ex-parte.

Given under my hand and seal of the court on this 22nd day of April 2026.

/By ORDER OF COURT/
Sd/- Chief Administrative officer
District Court, Mangalore
Sd/- G.K. MANJUNATH
Advocate for Plaintiff
Mangalore
23-04-2026

IN THE COURT OF I Addl. DISTRICT JUDGE, D.K., (COMMERCIAL) MANGALORE
Com. O.S No. 55/2026

Between:
Canara Bank, Gurpur-Kaikamba Branch ...Plaintiff
Mr. Sunil ... Defendant
And

NOTICE

To
Mr. Sunil,
Prop: M/s K.K. Electronics Sales & Services
S/o Narayan B.,
Shop No. 4, D. No. 2-179,
Abbas Arcade, Bajpe,
Mangaluru 574142
D.No. 8-16/1, Laxmi Nivasa,
Kanadka Padavu,
Shakthinagar Post & Village,
Mangaluru Tq-575016

Take notice the above suit stands posted to **20-06-2026** for your appearance. You may appear on that day at **11 a.m.** before the above court either personally or through Advocate. Otherwise the matter will be decided ex-parte.

Given under my hand and seal of the court on this 22nd day of April 2026.

/By ORDER OF COURT/
Sd/- Chief Administrative officer
District Court, Mangalore
Sd/- G.K. MANJUNATH
Advocate for Plaintiff
Mangalore
23-04-2026

ಕರ್ನಾಟಕ ಸರಕಾರ
ಪಟ್ಟಣ ಪಂಚಾಯತ್ ಕಾರ್ಯಾಲಯ, ಕಡಬ, ದಕ್ಷಿಣ ಕನ್ನಡ ಜಿಲ್ಲೆ
TOWN PANCHAYATH KADABA, D.K.
e-mail : co.kadaba2@gmail.com Phone: 08251-298002
ನಂ: ಕಪಪಂ/ಜೆ.ಇ/ಪ.ಪಂ.ನಿ/ಟೆ.ಪ್ರ/01/2026–27 ದಿನಾಂಕ: 15/04/2026

ಟೆಂಡರ್ ಪ್ರಕಟಣೆ

(ಕರ್ನಾಟಕ ಸರಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ) ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ಕಾರ್ಯಾಲಯ ಕಡಬರವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ತಿದ್ದುಪಡಿ 2000 ರ ಪ್ರಕಾರ ಇ-ಪೋರ್ಟಲ್ ಮುಖಾಂತರ ಪಟ್ಟಣ ಪಂಚಾಯತ್ ನಿಧಿಯಡಿ ಮಂಜೂರಾದ ವಾರ್ಷಿಕ ನಿರ್ವಹಣೆ ಕಾಮಗಾರಿ ಇಂಡೆಂಟ್ ಸಂಖ್ಯೆ: 1) DMA/2026-27/OW/WORK_INDENT57333, 2) DMA/2026-27/EL/WORK_INDENT 57352, 3) DMA/2026-27/EL/WORK_INDENT57332 ರ ಕಾಮಗಾರಿಗಳಿಗೆ ಸರಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.
ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 29/04/2026 ಅಪರಾಹ್ನ 5.00 ಗಂಟೆ. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಯನ್ನು www.kppp.karnataka.gov.in ಪರಿಶೀಲಿಸಿಕೊಂಡು ಟೆಂಡರ್ ಸಲ್ಲಿಸಲು ಕೋರಲಾಗಿದೆ ಹಾಗೂ ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ www.sulliatown.mrc.gov.in ನಿಂದ ಪಡೆದುಕೊಳ್ಳಬಹುದು.

ಸಹಿ/– ಶ್ರೀಮತಿ ತಮನ್ನಾ ಜಬೀನ್, ಅಧ್ಯಕ್ಷರು, ಪಟ್ಟಣ ಪಂಚಾಯತ್, ಕಡಬ
ಸಹಿ/– ಶ್ರೀಮತಿ ಲೀಲಾವತಿ ಇ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್, ಕಡಬ
DIPR/DK/KSMCA/121/26-27 dt.24.04.26

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಉರ್ವಾಸ್ಟೋರ್ಸ್, ಅಶೋಕನಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ
ಉಲ್ಲೇಖ: ಮನಪ್ರಾ/ನಿವೇಶನ/(32)/2026–27 ದಿನಾಂಕ: 23/04/2026

ಪ್ರಾಧಿಕಾರದ ನಿವೇಶನಗಳ ಇ–ಹರಾಜು ಪ್ರಕಟಣೆ

ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸೋಮನಾಥ ಬಡಾವಣೆಯಲ್ಲಿ ಖಾಲಿ ಇರುವ 1) ವಾಣಿಜ್ಯ ನಿವೇಶನ 1 ಸರ್ವೆ ನಂ. 67/4 ಮತ್ತು 67 2) ವಾಣಿಜ್ಯ ನಿವೇಶನ 2 ಸರ್ವೆ ನಂ. 215/1B2, 2B2A ಬಡಾವಣೆಗಳ ನಿವೇಶನಗಳನ್ನು ಸಾರ್ವಜನಿಕ ಟೆಂಡರು ಮೂಲಕ ವಿಲೀನಗೊಳಿಸಲು ತೀರ್ಮಾನಿಸಲಾಗಿದೆ. ಆಸಕ್ತರು ಇ–ಪೋರ್ಟಲ್ ಮುಖಾಂತರ ನೋಂದಣಿ ಮಾಡಿಸಿಕೊಂಡು ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಸಲ್ಲಿಸಬಹುದು. (AS IS WHERE IS BASIS) ಆಸಕ್ತರು ಆನ್‌ಲೈನ್ ಮೂಲಕ ಭಾಗವಹಿಸಬೇಕಾಗುತ್ತದೆ. ಹರಾಜು ದಾಖಲೆಗಳನ್ನು ದಿನಾಂಕ: 23–04–2026ರಿಂದ ದಿನಾಂಕ: 07–05–2026ರಂದು ಸಾಯಂಕಾಲ 5.30 ಘಂಟೆಯ ವರೆಗೆ ಸಲ್ಲಿಸಬೇಕಾಗಿರುತ್ತದೆ. ಲೈವ್ ಬಿಡ್ಡಿಂಗ್ ದಿನಾಂಕ: 08.05.2026 ಬೆಳ್ಳಿಗೆ 10.30 ಘಂಟೆಗೆ ಪ್ರಾರಂಭವಾಗಿ ಸಾಯಂಕಾಲ 5.30 ಘಂಟೆಗೆ ಮುಕ್ತಾಯವಾಗುತ್ತದೆ.
ಸೂಚನೆ: ಬಿಡ್ಡಿಂಗ್ ಕುರಿತಾದ ಷರತ್ತು ಹಾಗೂ ಯಾವುದೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪ್ರಾಧಿಕಾರದ ಕಛೇರಿಯಿಂದ ಪಡೆಯಬಹುದಾಗಿದೆ. ಟೆಂಡರ್ ಕ್ಯಾಲೆಂಡರ್ ಅನ್ನು ಮುಂದೂಡುವುದು (ಯಾವುದಾದರೂ ಇದ್ದರೆ) ಇ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಧಿಸೂಚಿಸಲಗುವುದು ಮತ್ತು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–, ಆಯುಕ್ತರು
ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು
DIPR/DK/KSMCA/130/26-27 dt. 22.04.2026

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ
ಕ್ರ.ಸಂ: ಕಾನಿಇಂ/ಸನೀ&ಅಂಅವಿ/ವಿ/ತಾಶಾ/2026–27/251 ದಿನಾಂಕ :23.04.2026

ತಿದ್ದುಪಡಿ ಅಲ್ಪಾವಧಿ ಟೆಂಡರ್ ಪ್ರಕಟಣೆ(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಉಲ್ಲೇಖ: ಈ ಕಛೇರಿ ಅಲ್ಪಾವಧಿ ಟೆಂಡರ ಪ್ರಕಟಣೆ ಸಂಖ್ಯೆ: 167 ದಿನಾಂಕ: 17.04.2026
ಮೇಲಿನ ಉಲ್ಲೇಖದಲ್ಲಿ ಪ್ರಕಟಗೊಂಡ ಟೆಂಡರನಲ್ಲಿರುವ ಕಾಮಗಾರಿಗಳ ಈ ಕೆಳಗಿನಂತೆ ಮಾರ್ಪಾಡಿಸಿ ತಿದ್ದುಪಡಿ ಟೆಂಡರ ಪ್ರಕಟಣೆಯನ್ನು ಹೊರಡಿಸಲಾಗಿದೆ.

ಮೂಲ ಟೆಂಡರ್ ಪ್ರಕಟಣೆ	ತಿದ್ದುಪಡಿ
ಗುತ್ತಿಗೆದಾರರು ಡೌನಲೋಡ್ ಮಾಡಿಕೊಳ್ಳುವ ದಿನಾಂಕ: 18.04.2026	ಗುತ್ತಿಗೆದಾರರು ಡೌನಲೋಡ್ ಮಾಡಿಕೊಳ್ಳುವ ದಿನಾಂಕ: 22.04.2026
ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.04.2026	ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.05.2026
ಪ್ರಿ ಬಿಡ್ ನಿಗದಿಪಡಿಸಿದ ದಿನಾಂಕ 22.04.2026	ಪ್ರಿ ಬಿಡ್ ನಿಗದಿಪಡಿಸಿದ ದಿನಾಂಕ 27.04.2026

ಮೇಲಿನ ಟೆಂಡರ ಅಧಿಸೂಚನೆಯ ಎಲ್ಲಾ ನಿಯಮಗಳು ಮತ್ತು ಷರತ್ತುಗಳು ಬದಲಾವಣೆಯಾಗಿರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ
ವಾಸಾಸಂಇ/ವಿಜಯಪುರ/57/ಕೆಎಸ್‌ಎಂಸಿಎ/2026–27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಅಥಣಿ
ಸಂ:ಕೃಉಮಾಸ(ಅ)/ಅಭಿಕೆ/59/2025–26 ದಿನಾಂಕ:21/04/2026

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಅಥಣಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸನ್ 2025–26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ https:// kppp.karnataka.gov.in ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ–07–05–2026 ಸಾಯಂಕಾಲ–5–00 ಗಂಟೆಯವರೆಗೆ

ಕ್ರ ಸಂ	ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ	ಇಂಡೆಂಟ್ ಸಂಖ್ಯೆ	ಮೀಸಲಾತಿ	ಟೆಂಡರಿಗಿಟ್ಟ ಅಂದಾಜು ಮೊತ್ತ (ಜಿ.ಎಸ್.ಟಿ ಹೊರತು ಪಡಿಸಿ (ರೂ ಗಳಲ್ಲಿ)
1	ಕೃಉಮಾಸ(ಅ)/ಅಭಿಕೆ/ವಾಕ್ರಿಯೋ/56/2026–27 ದಿನಾಂಕ–21–04–2026	APMC/2025-26/OW/WORK _INDENT 863	ಸಾಮಾನ್ಯ ವರ್ಗ	1,11,64,663–00
2	ಕೃಉಮಾಸ(ಅ)/ಅಭಿಕೆ/ವಾಕ್ರಿಯೋ/57/2026–27 ದಿನಾಂಕ–21–04–2026	APMC/2025-26/OW/WORK_INDENT 862	ಸಾಮಾನ್ಯ ವರ್ಗ	45,04,230–00

ಟೆಂಡರನ ಷರತ್ತು ಮತ್ತು ನಿಬಂಧನೆಗಳಿಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ https://kppp. karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಪೋರ್ಟಲ್ ಸಹಾಯವಾಣಿ +91 8046010000, +91 8068948777 ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಥಣಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಥಣಿ.
ಸಹಿ/–ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಥಣಿ.
DIPR/BGM/RO-NO-146/KSMCA/2026-27

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ(ಜಾ)
ಪಿ.ಡಬ್ಲ್ಯೂ.ಡಿ ಕಟ್ಟಡ, ನೆಹರೂ ಮೈದಾನದ ಬಳಿ, ಮಂಗಳೂರು–575001
Email: dcffmsmng2@gmail.com
ಸಂಖ್ಯೆ:ಅಸಂದಳ: ಮಂ: ಪಿಸಿಪಿ.ವಿವ: 05/ಟೆಂಡರ್/2026–27 ದಿನಾಂಕ: 23–04–2026

ಇ–ಟೆಂಡರ್ ಪ್ರಕಟಣೆ

2026–27 ನೇ ಸಾಲಿನಲ್ಲಿ ಮಂಗಳೂರು ಅರಣ್ಯ ಸಂಚಾರಿ ದಳ ಘಟಕಕ್ಕೆ ಅಗತ್ಯವಿರುವ ಗಣಕಯಂತ್ರ ನಿರ್ವಾಹಕರು / ಲಿಪಿಕ ಸಹಾಯಕರು, ವಾಹನ ಚಾಲಕರು ಮತ್ತು 'ಡಿ' ಗ್ರೂಪ್ ನೌಕರರ ಸೇವೆಯನ್ನು ಸೇವಾ ಸಂಸ್ಥೆ (Outsourcing) ಮೂಲಕ ಪಡೆಯಲು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರನ್ನು ಅಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಪಡೆದು ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 08–05–2026 ಅಪರಾಹ್ನ 5.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ಸಮಯ ದಿನಾಂಕ: 11–05–2026 ರಂದು ಪೂರ್ವಾಹ್ನ 11.00 ಗಂಟೆಗೆ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ: 15–05–2026 ರಂದು ಪೂರ್ವಾಹ್ನ 11.00 ಗಂಟೆಗೆ. ಹೆಚ್ಚಿನ ವಿವರಗಳನ್ನು ಅರಣ್ಯ ಸಂಚಾರಿ ದಳ(ಜಾ) ಮಂಗಳೂರು ಕಛೇರಿಯಿಂದ ಪಡೆದುಕೊಳ್ಳಬಹುದು ಒಂದು ವೇಳೆ ಮೇಲೆ ಹೇಳಿದ ದಿನಾಂಕದಂದು ಯಾವುದೇ ಗುತ್ತಿಗೆದಾರರು ಟೆಂಡರ್ ಹಾಕದಿದ್ದಲ್ಲಿ ಇದೇ ಇ–ಟೆಂಡರ್ ಪ್ರಕ್ರಿಯೆಯನ್ನು ಮುಂದುವರಿಸಿ ಮರು ಇ–ಟೆಂಡರನ್ನು ಆಹ್ವಾನಿಸಲಾಗಿದ್ದು, ಮರು ಟೆಂಡರನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 22–05–2026 ಅಪರಾಹ್ನ 5.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ಸಮಯ ದಿನಾಂಕ: 26–05–2026 ರಂದು ಪೂರ್ವಾಹ್ನ 11.00 ಗಂಟೆಗೆ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ ಸಮಯ ದಿನಾಂಕ: 29–05–2026 ರಂದು ಪೂರ್ವಾಹ್ನ 11.30 ಗಂಟೆಗೆ ಹೆಚ್ಚಿನ ವಿವರಗಳನ್ನು ಮಂಗಳೂರು ಅರಣ್ಯ ಸಂಚಾರಿ ದಳ ಕಛೇರಿಯಿಂದ ಪಡೆದುಕೊಳ್ಳಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಅರಣ್ಯ ಸಂಚಾರಿ ದಳ(ಜಾ), ಮಂಗಳೂರು
DIPR/DK/KSMCA/120/26-27 dt.24.04.2026

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182–222943 Email ID: spdivision@gmail.com

ಆಸಕ್ತಿ ವ್ಯಕ್ತಪಡಿಸುವಿಕೆಗೆ ಆಹ್ವಾನ

No. EE/PWD, Special Division, Shimoga IFT No. 07/2026-27 Dtd. 22-04-2026

1. ಕಾರ್ಯನಿರ್ವಾಹಕ ಎಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ ಇವರು ಶಿವಮೊಗ್ಗ, ದಾವಣಗೆರೆ ಮತ್ತು ಪುತ್ತೂರುನಲ್ಲಿರುವ ಭೂ ಪ್ರದೇಶಗಳನ್ನು ಪಿಪಿಪಿ ಮಾದರಿಯಲ್ಲಿ PWD/2025-26/SE0329/Call-3 ಅಭಿವೃದ್ಧಿಗೊಳಿಸಲು (3 ಆಸ್ತಿಗಳು) ವಹಿವಾಟು ಸಲಹಾ ಸೇವೆಗಳನ್ನು (Transaction Advisory Services) ಒದಗಿಸಲು ಸಲಹೆಗಾರರನ್ನು ಆಯ್ಕೆ ಮಾಡಲು ಆಸಕ್ತಿ ವ್ಯಕ್ತಪಡಿಸುವಿಕೆಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಿದ್ದಾರೆ. (https://kppp.karnataka.gov.in)
2. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ: 22.04.2026 ರಿಂದ 21.05.2026ರವರೆಗೆ ಡೌನ್‌ಲೋಡ್ ಮಾಡಬಹುದು.
3. ಟೆಂಡರ್ ಗಳನ್ನು ಆನ್‌ಲೈನ್‌ನಲ್ಲಿ ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ 21.05.2026ರ ಸಾಯಂಕಾಲ 5.30 ಗಂಟೆಯೊಳಗೆ ಸಲ್ಲಿಸಬೇಕು. ಕೆಪಿಪಿ ಪೋರ್ಟಲ್ ಮಾರ್ಗಸೂಚಿಯಂತೆ ಟೆಂಡರ್‌ಗಳನ್ನು ತೆರೆಯಲಾಗುವುದು.
4. ಪ್ರಿ–ಬಿಡ್ ಸಭೆಯು ದಿನಾಂಕ 18.05.2026 ರಂದು ಬೆಳಿಗ್ಗೆ 11.30 ಕ್ಕೆ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ ಇಲ್ಲಿ ನಡೆಯಲಿರುವುದು.
5. ಕೆಟಿಟಿಪಿ ಕಾಯ್ದೆಯಡಿಯಲ್ಲಿ ಟೆಂಡರ್ ತಿರಸ್ಕರಿಸಿದ ಬಿಡ್ಡರ್‌ಗಳು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಮೇಲ್ಮನವಿ ಸಲ್ಲಿಸಬಹುದು. ಲಿಖಿತ ಮನವಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಸಹಿ/–
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.115–04/ ಝೋಂಕಾರ್/2026–27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-50) ಡ್ರಾ ಏಪ್ರಿಲ್ 24ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RW 211038 (ERNAKULAM)

Consolation Prize Rs.5,000/-
RN 211038 RO 211038 RP 211038 RR 211038
RS 211038 RT 211038 RU 211038 RV 211038
RX 211038 RY 211038 RZ 211038

2nd Prize Rs.30,00,000/- [30 Lakhs]
RO 735760 (VAIKKOM)

3rd Prize Rs.5,00,000/- [5 Lakhs]
RS 285978 (IRINJALAKKUDA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0438 0451 0593 1159 2384 2410 2508 3192 3961 4012
4302 5922 6501 6692 7206 7646 8594 8948 9055

5th Prize Rs.2,000/-
0887 1046 2294 3732 3944 4555

6th Prize Rs.1,000/-
0411 1328 1836 1941 1999 2734 3191 5280 5424 5519
5525 5544 6214 6866 7595 7608 7777 7857 8087 8919
9039 9491 9641 9793 9891

7th Prize Rs.500/-
0002 0698 0792 1016 1057 1255 1316 1400 2028 2179
2201 2287 2569 2648 2807 2845 2957 3047 3250 3500
3565 3668 3725 3837 3915 3922 3934 3952 4369 4582
4594 4644 4680 4726 4890 4946 4968 5004 5056 5350
5695 5772 5830 6054 6126 6131 6192 6511 6631 6872
6874 7013 7303 7537 7664 7768 7835 8187 8397 8403
8481 8516 8604 8679 8721 8875 8998 9051 9099 9156
9467 9709 9711 9739 9898 9940

8th Prize Rs.200/-
0035 0039 0198 0222 0305 0686 0971 1297 1350 1353
1543 1546 1586 1667 1693 1716 1728 1880 2164 2349
2369 2387 2564 2642 2733 2761 2865 3171 3198 3297
3303 3305 3306 3578 3679 3799 3815 3828 3829 3857
4180 4509 4612 4629 4651 4674 4787 4805 4908 5122
5218 5384 5426 5535 5740 5784 6088 6099 6288 6496
6613 6645 6691 6856 6858 6884 6942 6947 7086 7118
7405 7708 7757 8364 8372 8672 8793 8909 8993 9147
9226 9320 9380 9412 9514 9617 9664 9733 9754 9950
9997 9999

9th Prize Rs.100/-
0023 0258 0318 0450 0510 0544 0555 0578 0633 0882
1109 1112 1309 1548 1634 1665 1680 1769 1892 1942
1971 2063 2155 2177 2319 2322 2448 2472 2527 2532
2779 2791 2805 2843 2903 2948 2951 3027 3086 3187
3217 3233 3252 3437 3472 3487 3502 3532 3576 3615
3681 3692 3729 3780 3804 3907 4049 4159 4227 4327
4340 4351 4405 4534 4592 4767 5003 5071 5087 5190
5318 5362 5382 5411 5518 5568 5646 5819 5874 5989
6053 6068 6133 6634 6670 6734 6749 6815 6849 6868
6906 6999 7229 7234 7275 7343 7423 7439 7480 7491
7515 7582 7676 7874 7887 8021 8075 8107 8199 8238
8255 8285 8305 8402 8428 8444 8456 8529 8615 8628
8684 8720 8791 8799 8819 8935 9033 9059 9070 9133
9353 9394 9421 9499 9540 9590 9608 9640 9744 9746
9797 9800 9809 9820

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
Email:itstaff_ulb_channarayapatna@yahoo.co.in, Phone:08176-255411
ನಂ:ಪು.ಸ.ಚ./ಪಅ/ಟೆಂಡರ್/01/2026–27 ದಿನಾಂಕ: 23–04–2026

"ಇ–ಪ್ರೂಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ"

ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯ ಪುರಸಭಾ ಅನುದಾನದ ಕೆಳಕಂಡ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ 1999 ಮತ್ತು 2000 ನಿಯಮದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ, ಮತ್ತು ಇ–ಪ್ರೊಕೂರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ–ಪ್ರೊಕೂರ್‌ಮೆಂಟ್ (Visit:https://kppp.karnataka.gov.in/) ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ವೆಬ್ ಸೈಟ್ www.channarayapatnatown.mrc.gov.in ನಲ್ಲಿ ವೀಕ್ಷಿಸಬಹುದು. ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ : 23-04-2026 to 08-05-2026 up to 17.30 hrs ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 1)ಟೆಂಡರ್‌ಗಳನ್ನು ತೆರೆಯುವ ದಿನಾಂಕ : 11-05-2026 at 11.00 hrs 2)ಟೆಂಡರ್ ಫಾರಂ ಬೆಲೆ: ಇ–ಪೋರ್ಟಲ್‌ನಲ್ಲಿರುವಂತೆ ಕ್ರ.ಸಂ ಇ–ಪೋರ್ಟಲ್‌ನಲ್ಲಿನ ಟೆಂಡರ್ ಇಂಡೆಂಟ್ 1)DMA/2026-27/IND6195 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)8.00 ಇಎಂಡಿ ಮೊತ್ತ (ರೂ ಗಳಲ್ಲಿ)20000/– 2)DMA/2026-27/IND6194 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)8.00 ಇಎಂಡಿ ಮೊತ್ತ (ರೂ ಗಳಲ್ಲಿ)20000/– 3)DMA/2026-27/SE7720 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)4.71 ಇಎಂಡಿ ಮೊತ್ತ (ರೂ ಗಳಲ್ಲಿ)11270/– 4)DMA/2026-27/EL/WORK_INDENT57380 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)26.00 ಇಎಂಡಿ ಮೊತ್ತ (ರೂ ಗಳಲ್ಲಿ)50000/– 5)DMA/2026-27/EL/WORK_INDENT57388 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)26.00 ಇಎಂಡಿ ಮೊತ್ತ (ರೂ ಗಳಲ್ಲಿ)50000/–

ಸಹಿ/–ಶ್ರೀ ಜಗದೀಶ ಗಂಗಣ್ಣನವರ್, ಕೆ.ಎ.ಎಸ್, ಉಪವಿಭಾಗಾಧಿಕಾರಿಗಳು ಹಾಸನ, ಹಾಗೂ ಆಡಳಿತಾಧಿಕಾರಿಗಳು, ಪುರಸಭೆ ಚನ್ನರಾಯಪಟ್ಟಣ
ಸಹಿ/–ಶ್ರೀ ಆರ್.ಯತೀಶ್ ಕುಮಾರ್ K.M.A.S ಮುಖ್ಯಾಧಿಕಾರಿ, ಪುರಸಭೆ, ಚನ್ನರಾಯಪಟ್ಟಣ
ವಾಸಾಸಂಇ/ಹಿಸನಿ/ಹಾಸನ/63/ಕೆಎಸ್‌ಎಂಸಿಎ/2026–27

ನಗರಸಭಾ ಕಾರ್ಯಾಲಯ, ಉಡುಪಿ
ಸಂಖ್ಯೆ : ಉನಸ:ಬಿ4:ಸಿಆರ್:2026 ದಿನಾಂಕ: 24.04.2026

ಟೆಂಡರು ಪ್ರಕಟಣೆ

2026–27ನೇ ಸಾಲಿನ ನೀರು ಸರಬರಾಜು ಮತ್ತು ಒಳಚರಂಡಿ ನಿಧಿ ಮತ್ತು ನಗರಸಭಾ ನಿಧಿಯಡಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ನಿಗದಿತ ನಮೂನೆಯಲ್ಲಿ ಪ್ರತ್ಯೇಕ ಮೊಹರಾದ ಐಟಂವಾರು ಟೆಂಡರನ್ನು ನಗರಸಭೆಯಲ್ಲಿ ನೊಂದಾಯಿತಗುತ್ತಿಗೆದಾರರಿಂದ ದ್ವಿಪ್ರತಿಯಲ್ಲಿ ಆಹ್ವಾನಿಸಲಾಗಿದ್ದು, ದಿನಾಂಕ:08.05.2026ರಂದು ಸಂಜೆ 4.00 ಗಂಟೆಯವರೆಗೆ ಅರ್ಜಿ ಸಲ್ಲಿಸುವುದು. ದಿನಾಂಕ 11.05.2026ರಂದು ಸಂಜೆ 4.00 ಗಂಟೆವರೆಗೆ ಪೌರಾಯುಕ್ತರು ಅಥವಾ ಅವರಿಂದ ಅಧಿಕಾರ ಹೊಂದಿದವರು ಟೆಂಡರನ್ನು ಸ್ವೀಕರಿಸಲಿರುವರು. ಬಂದಿರುವ ಟೆಂಡರನ್ನು ದಿನಾಂಕ: 12.05.2026ರಂದು ರಂದು ಸಂಜೆ 5.00 ಗಂಟೆಗೆ ಸರಿಯಾಗಿ ಅಥವಾ ಸೂಕ್ತ ದಿನದಂದು ಹಾಜರಿರುವ ಟೆಂಡರುದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಪಡೆದುಕೊಳ್ಳಬಹುದು.

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಇ.ಎಂ.ಡಿ.
	ನೀರು ಸರಬರಾಜು ಮತ್ತು ಒಳಚರಂಡಿ ನಿಧಿ		
1	ಉಡುಪಿ ನಗರಸಭಾ ವ್ಯಾಪ್ತಿಯ ದೊಡ್ಡಣಗುಡ್ಡೆ ಅಂಗನವಾಡಿ (ಪಾರ್ಕ್ ಹತ್ತಿರ) ಒಳಚರಂಡಿ ಪೈಪ್ ಲೈನ್ ಜೋಡಣೆ ಹಾಗೂ ಕುಂಜಿಬೆಟ್ಟು ವಿದ್ಯೋದಯ ಪಬ್ಲಿಕ್ ಶಾಲೆ ರಸ್ತೆ ಹಾಗೂ ನಿಟ್ಟೂರು ಹನುಮಂತನಗರ ಕಾಲನಿ ರಸ್ತೆಯಲ್ಲಿ ಒಳಚರಂಡಿ ಜಾಲದ ಛೇಂಬರ್‌ಗಳನ್ನು ರಸ್ತೆ ಮಟ್ಟಕ್ಕೆ ಎತ್ತರಿಸುವ ಕಾಮಗಾರಿ	2,40,000.00	6,000.00
2	ಉಡುಪಿ ನಗರಸಭಾ ವ್ಯಾಪ್ತಿಯ ಕರಂಬಳ್ಳಿ ವಾರ್ಡಿನ ಮಹಾಲಕ್ಷ್ಮಿ ನಗರ ರಸ್ತೆಯಲ್ಲಿ ಒಳಚರಂಡಿ ಜಾಲದ ಮುಂದುವರೆದ ಭಾಗದ ಕಾಮಗಾರಿ	5,00,000.00	12,500.00
	ನಗರಸಭಾ ನಿಧಿ		
3	ಈಶ್ವರನಗರ ವಾರ್ಡಿನ ವಿವೇಕಾನಂದ ನಗರ ಮಲ್ಲಿಕಾ ಮನೆಯ ಹತ್ತಿರ ಮಳೆ ನೀರು ಹರಿಯುವ ತೋಡಿನ ಮುರ ಕಟ್ಟಿಂಗ್ ಹಾಗೂ ಕಡಿಯಾಳಿ ಮಾಂಡವಿ ಟೈಮ್ಸ್‌ಸ್ಕ್ವೇರ್ ಮಾಲ್‌ನ ಎದುರು ಇಂಟರ್‌ಲಾಕ್ ಅಳವಡಿಸುವುದು ರಿಸೆಟ್ಟಿಂಗ್ ಮಾಡುವುದು ಮತ್ತು ಉಡುಪಿ ಕ್ಲಾಕ್ ಟವರ್‌ನ ರೇಲಿಂಗ್ಸ್ ರಿಪೇರಿ ಮತ್ತು ಸೆಟ್ಟಿಬೆಟ್ಟು ವಾರ್ಡಿನ ಮಹಾಲಕ್ಷ್ಮಿ ಲೇಔಟ್ ಹೋಗುವ ರಸ್ತೆಗೆ ವೆಟ್‌ಮಿಕ್ಸ್ ಹಾಕುವ ಕಾಮಗಾರಿ	3,65,000.00	9,125.00
4	ಕಡಿಯಾಳಿ ವಾರ್ಡಿನ ನಾಗಬನ ಹತ್ತಿರ, ಕಡಿಯಾಳಿ ತುಳಜಾ ಭವಾನಿ ರಸ್ತೆಯಲ್ಲಿರುವ ಮಳೆ ನೀರು ಹರಿಯುವ ತೋಡಿನಲ್ಲಿ ಶೇಖರಣೆಯಾದ ಮಣ್ಣನ್ನು (ಹೂಳು) ತೆಗೆಯುವ ಕಾಮಗಾರಿ	4,95,000.00	12,375.00

ಷರತ್ತುಗಳು: 1) ಕಾಮಗಾರಿಗಳು ಪೂರ್ತಿಗೊಳಿಸುವ ಅವಧಿ - 2ತಿಂಗಳು 2) ಟೆಂಡರು ನಮೂನೆ ಬೆಲೆ - ರೂ. 590.00 (ಜಿ.ಎಸ್.ಟಿ. ಸೇರಿ). 2) ಯಾವುದೇ ಟೆಂಡರನ್ನು ಯಾ ಎಲ್ಲಾ ಟೆಂಡರುಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಥವಾ ಅಂಗೀಕರಿಸುವ ಹಕ್ಕನ್ನು ಕಾದಿರಿಸಲಾಗಿದೆ. 3) ಇ.ಎಂ.ಡಿ.ಯನ್ನು ಫಿಕ್ಸೆಡ್ ಡೆಪಾಸಿಟ್ ರಿಸಿಪ್ಟ್ (FDR) ರೂಪದಲ್ಲಿ ಇರಿಸತಕ್ಕದ್ದು. ನಿಗದಿಪಡಿಸಿದ ಇ.ಎಂ.ಡಿ.ಯನ್ನು ಇರಿಸದ ಟೆಂಡರನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಪೌರಾಯುಕ್ತರು
ಉಡುಪಿ ನಗರಸಭೆ

ಸಹಕಾರ ಸಂಘಗಳ ಉಪ ನಿಬಂಧಕರು(ನಿ.441),ಸೌಹಾರ್ದ ಸಹಕಾರಿಗಳ ದಾವಾಪಂಚಾಯ್ತಿ ನ್ಯಾಯಾಲಯ,
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ
"ಸೌಹಾರ್ದ ಸಹಕಾರ ಸೌಧ" #68, 1ನೇ ಮಹಡಿ 17 & 18 ನೇ ಅಡ್ಡರಸ್ತೆ ಮಧ್ಯೆ,ಮಾರ್ಗೋಸಾ ರಸ್ತೆ
ಮಲ್ಲೇಶ್ವರಂ ಬೆಂಗಳೂರು-560055

ಪತ್ರಿಕಾ ಪ್ರಕಟಣೆ

ವಾದಿ:
ಮುಖ್ಯಕಾರ್ಯನಿರ್ವಾಹಕರು
ಮಾತೃಭೂಮಿ ಸೌಹಾರ್ದ ಸಹಕಾರಿ ಸಂಘ ನಿಯಮಿತ
ಮಾತೃಧಾಮ ಗುರುಪುರ-ಕೈಕಂಬ ಕಿನ್ನಿಕಂಬಳ ಮಂಗಳೂರು-574151

ಪ್ರತಿವಾದಿಗಳು :

ವ್ಯಾಜ್ಯ ಸಂಖ್ಯೆ : ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ/1857/2025-26



ಮಹಮ್ಮದ್ ನಾಸೀರ್
ಬಿನ್.ಸಿರಾಜ್
#4-205 ಕಿಸಾನ್ ನಗರ ಮನೆ ಹರೇಕಳ ಗ್ರಾಮ ಮತ್ತು ಅಂಚೆ
ಮಂಗಳೂರು ದ.ಕ.- 574199

ವ್ಯಾಜ್ಯ ಸಂಖ್ಯೆ : ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ/1859/2025-26



ಮಹಮ್ಮದ್ ಶರೀಫ್
ಬಿನ್.ಅಬ್ದುಲ್ ರಹಿಮಾನ್
#1-92-2 ರಂತಡ್ಕ ಹೌಸ್
ಬೊಳಿಯಾರ್ ಗ್ರಾಮ ಮತ್ತು ಅಂಚೆ
ಮಂಗಳೂರು ದ.ಕ.574153



ಮಾಲಿಕ್
ಬಿನ್.ಹಸನಬ್ಬ
3-108 (B) ಸಿದ್ಧಿವಿನಾಯಕ ರಸ್ತೆ
ದಾರಂದ ಬಾಗಿಲು ಪಲ್ಲ ಹೌಸ್
ಪೆರ್ಮನ್ನೂರು ಗ್ರಾಮ ಮತ್ತು ಅಂಚೆ
ಮಂಗಳೂರು ದ.ಕ.575017



ಉಮ್ಮರ್ ಖಾನ್ ಎಸ್
ಬಿನ್.ಎಸ್.ಇಬ್ರಾಹಿಂ ಖಾನ್
1-81-1ರಂತಡ್ಕ ಹೌಸ್
ಬೊಳಿಯಾರ್ ಗ್ರಾಮ ಮತ್ತು ಅಂಚೆ
ಮಂಗಳೂರು ದ.ಕ.574153

ವಿಷಯ : ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟಿಸ್

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿಮಗೆ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ಪ್ರತಿವಾದಿಗಳ ವಿರುದ್ಧ ಸಹಕಾರ ಸಂಘಗಳ ಉಪನಿಬಂಧಕರು(ನಿ.441) ಸೌಹಾರ್ದ ಸಹಕಾರಿಗಳ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ವಾದಿ ಸಹಕಾರಿ ಕರ್ನಾಟಕ ಸಹಕಾರಿ ಅಧಿನಿಯಮ-1997 ಕಲಂ-39ರಡಿಯಲ್ಲಿ ಸಾಲ ವಸೂಲಾತಿಗಾಗಿ ದಾವೆ ದಾಖಲಿಸಿರುತ್ತಾರೆ.ಈ ಪ್ರಕರಣದಲ್ಲಿ ತಾವು ಪ್ರತಿವಾದಿಯಾಗಿರುತ್ತೀರಿ.ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಮಾನ್ಯ ನ್ಯಾಯಾಲಯದ ಮುಂದೆ ದಿನಾಂಕ **13-05-2026** ರಂದು ಬೆಳಿಗ್ಗೆ **11-30** ಗಂಟೆಗೆ ಸರಿಯಾಗಿ ತಾವಾಗಲಿ,ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರವಾಗಲಿ ಹಾಜರಾಗಲು ಈ ಮೂಲಕ ತಿಳಿಯಪಡಿಸಿದೆ.ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು.ಸದರಿ ಪ್ರಕಟಣೆಯನ್ನು ದಿನಾಂಕ **22-04-2026** ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/-
ಸಹಕಾರ ಸಂಘಗಳ ಉಪನಿಬಂಧಕರು (ನಿ.441)
ದಾವಾಪಂಚಾಯ್ತಿ ನ್ಯಾಯಾಲಯ
ಕ.ರಾ.ಸೌ.ಸಂ.ಸ.ನಿ.ಬೆಂಗಳೂರು
(ನ್ಯಾಯಾಲಯದ ಆದೇಶದ ಮೇರೆಗೆ)

ಕಿರುಸುದ್ದಿ

ವಿದ್ಯುತ್ ತಂತಿ ಸ್ಪರ್ಶಗೊಂಡು ಗ್ರಾಮ ಸಹಾಯಕ ಮೃತ್ಯು

ಉಡುಪಿ: ರಜತಾದ್ರಿ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣದ ಹಿಂಭಾಗದಲ್ಲಿ ಮಾವಿನಕಾಯಿ ಕಟಾವು ನಡೆಸು ತ್ತಿದ್ದ ವೇಳೆ ವಿದ್ಯುತ್ ತಂತಿ ಸ್ಪರ್ಶಗೊಂಡು ಗ್ರಾಮ ಸಹಾ ಯಕ ಮೃತಪಟ್ಟಿರುವ ದುರ್ಘಟನೆ ಶುಕ್ರವಾರ ಸಂಭವಿಸಿದೆ.



ಅಲೆವೂರು ಗ್ರಾಮದ ನಿವಾಸಿ ಸದಾನಂದ ದೇವಾಡಿಗ (55) ಮೃತ ವ್ಯಕ್ತಿ. ಮರದ ಮೇಲಿಂದ ವಿದ್ಯುತ್ ತಂತಿ ಹಾದು ಹೋಗಿದ್ದರಿಂದ, ಮಾವು ಕಟಾವು ಮಾಡಲು ಬಳಸಿದ ಕಬ್ಬಿಣದ ನಳಿಕೆ ತಂತಿಗೆ ತಗುಲಿದ ಪರಿಣಾಮ ವಿದ್ಯುತ್ ಹರಿದಿದೆ. ತಕ್ಷಣ ಅವರನ್ನು ಜಿಲ್ಲಾಸ್ಪತ್ರೆ ಅಜ್ಜರಕಾಡಿಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ. ಘಟನೆಯ ಕುರಿತು ಮಣಿಪಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಮೃತದೇಹವನ್ನು ತೆರವುಗೊಳಿಸಲು ಸಹಕರಿಸಿದರು.

ಇಂದು ಮೌನ ಚಳವಳಿ

ಕುಂದಾಪುರ: ಜಾಗತಿಕ ಮಟ್ಟದ ಸಹಬಾಳ್ವೆ, ಶಾಂತಿ, ಸೌಹಾರ್ದತೆ, ಪರಸ್ಪರ ಹೊಂದಾಣಿಕೆ, ಮಾನವ ಪ್ರೀತಿ, ಪರಿಸರ ಕಾಳಜಿ, ನಮ್ಮ ಮಕ್ಕಳ ಭವಿಷ್ಯಕ್ಕೆ ಉತ್ತಮ ವಾತಾವರಣ ಸೃಷ್ಟಿಸಲು ಅವಕಾಶ ನೀಡುವಂತೆ ಆಗ್ರಹಿಸಿ, ಜಾಗತಿಕ ಯುದ್ಧ ಭೀತಿ, ಮಾನವೀಯ ಸಂಬಂಧಗಳಲ್ಲಿ ಬಿರುಕು ಹೋಗಲಾಡಿಸಿ ಶಾಂತಿ ಕರೆಗಾಗಿ ಕುಂದಾಪುರದ ಅಂತಾರಾಷ್ಟ್ರೀಯ ದುಡಿಯುವ ಮಕ್ಕಳ ಸಂಸ್ಥೆಯಾದ 'ನಮ್ಮ ಭೂಮಿ'ಯ ಮಕ್ಕಳ ಹಕ್ಕುಗಳ ಹೋರಾಟಗಾರ, ರಂಗಕರ್ಮಿ, ಉಪನ್ಯಾಸಕ ರಾಮಾಂಜಿ ಅವರು ಏ. 25ರಂದು ಬೆಳಿಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕುಂದಾಪುರದ ಶಾಸ್ತ್ರಿ ವೃತ್ತದಲ್ಲಿ ಮೌನ ಚಳುವಳಿ ನಡೆಸಲಿದ್ದಾರೆ.

ನಿಧನ ಸುದ್ದಿ

ಹರಿಶ್ಚಂದ್ರ ಹೆಜ್ಮಾಡಿ

ಪಡುಬಿದ್ರಿ: ನಿವೃತ್ತ ಡಿವೈಎಸ್‌ಪಿ, ಹೆಜಮಾಡಿ ಉತ್ತರ ಸುಲ್ತಾನ್ ರಸ್ತೆಯ ಲಲಿತಾ ಸದನದ ವಾಸಿ ಹರಿಶ್ಚಂದ್ರ ಹೆಜ್ಮಾಡಿ (70) ಅಲ್ಪ ಕಾಲದ ಅಸೌಖ್ಯದಿಂದ ಬುಧವಾರ ಸ್ವಗೃಹದಲ್ಲಿ ನಿಧನರಾದರು.



ಅವರು ಪತ್ನಿ, ಓರ್ವ ಪುತ್ರ, ಎಂಟು ಸಹೋದರರು ಹಾಗೂ ಆರು ಮಂದಿ ಸಹೋದರಿಯರನ್ನು ಅಗಲಿದ್ದಾರೆ. ಅತ್ಯುತ್ತಮ ದೇಹದಾರ್ಢ್ಯಪಟುವಾಗಿದ್ದ ಅವರು 1981ರಲ್ಲಿ ಭಾರತ್ ಕುಮಾರ್ ಪ್ರಶಸ್ತಿ ಸಹಿತ ನೂರಾರು ಪ್ರಶಸ್ತಿ ಗಳಿಸಿದ್ದು, ಬಳಿಕ ನೂರಾರು ದೇಹದಾರ್ಢ್ಯ ವಿದ್ಯಾರ್ಥಿಗಳನ್ನು ತರಬೇತುಗೊಳಿಸಿದ್ದರು. ಪೊಲೀಸ್ ಸೇವೆಗೆ ಸೇರಿ ಬೆರಳಚ್ಚು ತಜ್ಞರಾಗಿ ಹಲವು ವರ್ಷ ಸೇವೆ ಸಲ್ಲಿಸಿ ಡಿವೈಎಸ್‌ಪಿಯಾಗಿ ನಿವೃತ್ತಿ ಹೊಂದಿದ್ದರು. ಶೈಕ್ಷಣಿಕ ಸಾಧಕರಾಗಿ ಬಿಎಸ್‌ಸಿ, ಎಲ್ ಎಲ್‌ಬಿ, ಎಮ್‌ಬಿಎ, ಎಲ್‌ಎಲ್‌ಎಮ್ ಪದವೀಧರರಾಗಿ ಸಾಧನೆಗೈದಿದ್ದರು. ಯುನೆಸ್ಕೋ ಶಾಂತಿ ಪಾಲನಾ ಪಡೆಯಲ್ಲಿ ಕೊಸೊವಾದಲ್ಲಿ 2 ವರ್ಷ ಸೇವೆ ಸಲ್ಲಿಸಿದ್ದರು. ಬೆಂಗಳೂರಿನ ದ.ಕ. ವಿಶ್ವಕರ್ಮ ಮಹಾಸಭಾ ಪದಾಧಿಕಾರಿಯಾಗಿಯೂ ಅವರು ಸೇವೆ ಸಲ್ಲಿಸಿದ್ದರು.

ಇಂದಿರಾ ನಾಯಕ್

ಪೆರ್ಲ: ಬಿಜೆಪಿ ಹಿರಿಯ ಮುಖಂಡರಾದ ಶೇಣಿ ಬಾಲಕೃಷ್ಣನಾಯಕ್ ಅವರ ಪತ್ನಿ ಇಂದಿರಾ ನಾಯಕ್ (52-ಲತಾ ನಾಯಕ್) ಗುರುವಾರ ನಿಧನ ಹೊಂದಿದರು. ಕಳೆದ ಕೆಲವು ಸಮಯಗಳಿಂದ ಅಸೌಖ್ಯ ಬಾಧಿಸಿದ್ದ ಅವರು ಚಿಕಿತ್ಸೆ ಪಡೆಯುತ್ತಿದ್ದರು.



2005ರಲ್ಲಿ ನಡೆದ ಪಂಚಾಯತ್ ಚುನಾವಣೆಯಲ್ಲಿ ಶೇಣಿ ವಾರ್ಡ್‌ನಿಂದ ಬಿಜೆಪಿ ಅಭ್ಯರ್ಥಿಯಾಗಿ ಅವರು ಸ್ಪರ್ಧಿಸಿದ್ದರು. ಮೃತರು ಪತಿ, ಮಕ್ಕಳಾದ ರೂಪ, ದೀಪ, ಪ್ರದೀಪ ಅವರನ್ನು ಅಗಲಿದ್ದಾರೆ.

ಗಣೇಶ್ ಕೆ.

ಕಾಸರಗೋಡು: ಕಾಸರಗೋಡು ಜಿಲ್ಲೆಯ ಪ್ರಥಮ ಕನ್ನಡ ಸಂಜೆ ಪತ್ರಿಕೆಯಾದ ಗಡಿನಾಡು ಇದರ ಸಂಪಾದಕ, ಉಳಿಯತ್ತಡ್ಕ ಭಗವತೀ ನಗರದ ಕೋಕಿಲಾ ನಿಲಯದ ಗಣೇಶ್ ಕೆ. (66) ನಿಧನ ಹೊಂದಿದರು. ಮನೆಯಲ್ಲಿ ಎದೆನೋವು ಕಾಣಿಸಿಕೊಂಡಿದ್ದ ಅವರು ಅಲ್ಲೇ ಕುಸಿದು ಬಿದ್ದರು. ತಕ್ಷಣ ಆಸ್ಪತ್ರೆಗೆ ಕೊಂಡೊಯ್ದು ತುರ್ತು ಚಿಕಿತ್ಸೆ ನೀಡಿದರೂ ಜೀವ ಉಳಿಸಲು ಸಾಧ್ಯವಾಗಲಿಲ್ಲ. ಗಡಿನಾಡು ಪತ್ರಿಕೆಯ ಸಂಪಾದಕ, ಪ್ರಕಾಶಕ ಹಾಗೂ ನುರಿತ ಮುದ್ರಣಗಾರರಾಗಿಯೂ ಕಾರ್ಯ ನಿರ್ವಹಿಸಿದ್ದರು. ಕಾಸರಗೋಡು ಕರಂದಕ್ಕಾಡು ಶ್ರೀ ವೀರಹನುಮಾನ್ ವ್ಯಾಯಾಮ ಶಾಲೆಯ ಸ್ಥಾಪಕ ಸದಸ್ಯರಾಗಿದ್ದರು. ಗಣೇಶ್ ಕೆ. ಅವರು ಮೂಲತಃ ಕಾಸರಗೋಡು ಸೂರ್ಲು ನಿವಾಸಿಯಾಗಿದ್ದರು. ಮೊದಲು ನಗರದ ಚಕ್ಕರ ಬಜಾರ್‌ನಲ್ಲಿ ಮುದ್ರಿಸಲ್ಪಡುತ್ತಿದ್ದ ಗಡಿನಾಡು ಪತ್ರಿಕೆಯ ಕಚೇರಿಯನ್ನು ಬಳಿಕ ಸೂರ್ಲುವಿನಲ್ಲಿರುವ ತಮ್ಮ ಮನೆ ಪರಿಸರಕ್ಕೆ ಸ್ಥಳಾಂತರಿಸಿದ್ದರು. ಕಾಲಕ್ರಮೇಣ ನಷ್ಟದ ಹಾದಿಯಲ್ಲಿ ಸಾಗಿದ ಪತ್ರಿಕೆಯ ಮುದ್ರಣವನ್ನು ಸ್ಥಗಿತಗೊಳಿಸಲಾಗಿತ್ತು. ಮೃತರು ಪತ್ನಿ ಮಾಲತಿ, ಮಕ್ಕಳಾದ ಕಿಶೋರ್, ಸ್ಮಿತಾ ಅವರನ್ನು ಅಗಲಿದ್ದಾರೆ.

ಕೆ.ಬಿ.ಗಂಗಾಧರನ್

ಕಾಸರಗೋಡು: ಕಾಸರಗೋಡು ನಗರಸಭಾ ಮಾಜಿ ಕೌನ್ಸಿಲರ್, ಕಡಪ್ಪುರ ಎಸ್‌ಸಿ ಬಿಬಿಎಂ ರಸ್ತೆ ಪರಿಸರದ ನಿವಾಸಿ ಕೆ.ಬಿ.ಗಂಗಾಧರನ್ (64) ನಿಧನರಾದರು. ಮೃತರು ಪತ್ನಿ ಸುಕನ್ಯಾ, ಮಕ್ಕಳಾದ ನೀತು, ನಿಖಿಲ್, ನಖಿಲ್ ಅವರನ್ನು ಅಗಲಿದ್ದಾರೆ. ಸಿಪಿಎಂ ಕಾರ್ಯಕರ್ತರಾಗಿದ್ದ ಅವರು ವಿವಿಧ ವಲಯಗಳಲ್ಲಿ ಸಕ್ರಿಯರಾಗಿದ್ದರು.

ಗಂಗಾಧರ ರಾವ್

ಮಂಜೇಶ್ವರ: ಪೈವಳಿಕೆ ಕುದ್ರೆಕೂಡ್ಲು ನಿವಾಸಿ ಗಂಗಾಧರ ರಾವ್ (86) ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಹಲವು ವರ್ಷಗಳ ಕಾಲ ಧರ್ಮತ್ತಡ್ಕದಲ್ಲಿ ಟೈಲರ್ ಆಗಿದ್ದರು. ನಂತರ ಜವುಳಿ ಅಂಗಡಿ ನಡೆಸುತ್ತಿದ್ದರು. ಪ್ರಗತಿಪರ ಕೃಷಿಕರೂ ಆಗಿದ್ದರು. ಮೃತರು ಪತ್ನಿ ವಸಂತಿ, ಮಕ್ಕಳಾದ ಶ್ರೀಲತಾ, ಮಮತಾ, ಗೀತಾ, ಜ್ಯೋತಿ, ಸುಮತಿ, ಸ್ಮಿತಾ ಅವರನ್ನು ಅಗಲಿದ್ದಾರೆ.

ಬಾಲಕೃಷ್ಣ ಶೆಟ್ಟಿ

ಮುಳ್ಳೇರಿಯ: ಕುಂಬ್ಡಾಜೆ ಸಮೀಪದ ಬೆಳಿಂಜ ಮಿತ್ತಬೊಳಿಂಜ ನಿವಾಸಿ ಬಾಲಕೃಷ್ಣ ಶೆಟ್ಟಿ (72) ನಿಧನರಾದರು. ಮೃತರು ಪತ್ನಿ ಕುಸುಮಾ ಶೆಟ್ಟಿ, ಮಕ್ಕಳಾದ ಮೋಹಿನಿ, ಶ್ಯಾಮಲಾ, ಪುಷ್ಪರಾಜ್, ಪ್ರಶಾಂತ್ ಅವರನ್ನು ಅಗಲಿದ್ದಾರೆ.

ಡಾ. ಆಳ್ವರಿಗೆ ಯಕ್ಷಧ್ರುವ ಮಹಾಪೋಷಕ ಪ್ರಶಸ್ತಿ, ಪೊಲ್ಯರಿಗೆ ಯಕ್ಷಧ್ರುವ ಪಟ್ಲ ಪ್ರಶಸ್ತಿ | ಮೇ 30 ಸಮಾರಂಭ

ಪಟ್ಲ ಸಂಭ್ರಮಕ್ಕೆ ಸಜ್ಜಾಗುತ್ತಿದೆ ಅಡ್ಯಾರ್ ಗಾರ್ಡನ್

ಮಂಗಳೂರು: ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ವತಿಯಿಂದ 11ನೇ ವರ್ಷದ ಪಟ್ಲ ಸಂಭ್ರಮ ಕಾರ್ಯಕ್ರಮ ಮೇ 30ರಂದು ನಗರದ ಅಡ್ಯಾರ್ ಗಾರ್ಡನ್‌ನಲ್ಲಿ ನಡೆಯಲಿದೆ. ಇದೇ ಸಂದರ್ಭ ಆಳ್ವಾಸ್ ಶಿಕ್ಷಣ ಸಂಸ್ಥೆಯ ರೂವಾರಿ, ಸಾಂಸ್ಕೃತಿಕ ಸಂಘಟಕ ಡಾ.ಎಂ.ಮೋಹನ ಆಳ್ವ ಅವರಿಗೆ ಯಕ್ಷಧ್ರುವ ಮಹಾಪೋಷಕ ಪ್ರಶಸ್ತಿ ಹಾಗೂ ಹಿರಿಯ ಯಕ್ಷಗಾನ ಭಾಗವತ ಮತ್ತು ವಿದ್ವಾಂಸ ಪೊಲ್ಯ ಲಕ್ಷ್ಮೀನಾರಾಯಣ ಶೆಟ್ಟಿ ಪೊಲ್ಯರಿಗೆ ಯಕ್ಷಧ್ರುವ ಪಟ್ಲ ಪ್ರಶಸ್ತಿ ಪ್ರದಾನವಾಗಲಿದೆ.



ಶುಕ್ರವಾರ ಮಂಗಳೂರಿನಲ್ಲಿ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆಗೊಳಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಪಟ್ಲ ಫೌಂಡೇಶನ್‌ನ ಅಧ್ಯಕ್ಷ ಪಟ್ಲ ಸತೀಶ್ ಶೆಟ್ಟಿಯವರು, ಅಂದು ಬೆಳಿಗ್ಗೆ 8.30ರಿಂದಲೇ ಕಾರ್ಯಕ್ರಮಗಳು ಆರಂಭವಾಗಲಿವೆ. 11 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದ್ದು, ಎಡನೀರು ಮಠದ ಸಚ್ಚಿದಾನಂದ ಭಾರತೀ ಶ್ರೀಪಾದರು ಹಾಗೂ ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡುವರು ಎಂದರು.

ಯಕ್ಷಧ್ರುವ ಪಟ್ಲ ಸಂಭ್ರಮ 2026 ಕಾರ್ಯಕ್ರಮವನ್ನು ಪಾವಂಜೆ ನಾಗವೃಜ ಕ್ಷೇತ್ರದ ಧರ್ಮದರ್ಶಿ ಡಾ.ಯಾಜಿ ನಿರಂಜನ ಭಟ್ ಉದ್ಘಾಟಿಸಲಿದ್ದಾರೆ. ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಂಬೈ ಹೇರಂಭ ಇಂಡಸ್ಟ್ರೀಸ್ ಸಂಸ್ಥೆಯ ಅಧ್ಯಕ್ಷ ಡಾ.ಸದಾಶಿವ ಶೆಟ್ಟಿ ಕನ್ಯಾನ ಅಧ್ಯಕ್ಷತೆ ವಹಿಸಲಿದ್ದಾರೆ. ಎಂಆರ್ ಜಿ ಗ್ರೂಪ್ ಕಂಪನೀಸ್ ಬೆಂಗಳೂರು ಇದರ ಅಧ್ಯಕ್ಷರು ಹಾಗೂ ನಿರ್ದೇಶಕರಾದ ಡಾ.ಕೆ ಪ್ರಕಾಶ್ ಶೆಟ್ಟಿ ಸಮಾರಭವನ್ನು ದೀಪ ಬೆಳಗಿಸಿ ಉದ್ಘಾಟಿಸಲಿದ್ದಾರೆ ಎಂದವರು ತಿಳಿಸಿದರು.

ಕಳೆದ 11 ವರ್ಷಗಳಲ್ಲಿ ಟ್ರಸ್ಟಿನ ಆಶ್ರಯದಲ್ಲಿ ಖ್ಯಾತ 8 ಕಲಾವಿದರಿಗೆ ಪ್ರಶಸ್ತಿಯೊಂದಿಗೆ ತಲಾ 1 ಲಕ್ಷ ರೂ. ನಗದು, ಬೆಳ್ಳಿ ಪದಕ ಹಾಗೂ ಸನ್ಮಾನ ಫಲಕ ನೀಡಿ ವಿಶೇಷವಾಗಿ ಗೌರವಿಸಲಾಗಿದೆ. ಪಟ್ಲ ಯಕ್ಷಾಶ್ರಯದಡಿ 56 ಮನೆಗಳನ್ನು ನಿರ್ಮಿಸಿ ಕಲಾವಿದರಿಗೆ ಹಸ್ತಾಂತರಿಸಲಾಗಿದ್ದು, 60 ಮನೆಗಳು ಅಂತಿಮ ಹಂತದ ನಿರ್ಮಾಣದಲ್ಲಿವೆ. ಗೃಹ ದುರಸ್ತಿ ನೆರವು ಕಾರ್ಯಕ್ರಮದಡಿ 210 ಕಲಾವಿದರಿಗೆ ತಲಾ 25,000 ಸಾವಿರ ರೂಪಾಯಿ ಮನೆ ದುರಸ್ತಿ ಸಹಾಯಧನ ವಿತರಿಸಲಾಗಿದೆ. ಹೀಗೆ ಹತ್ತಾರು ಕಾರ್ಯಕ್ರಮಗಳನ್ನು ನಿಷ್ಠೆಯಿಂದ ಮಾಡಲಾಗಿದೆ ಎಂದವರು ವಿವರಿಸಿದರು.

ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ 11 ವರ್ಷಗಳಲ್ಲಿ 16 ಕೋಟಿ ಮೌಲ್ಯದ ಸೇವಾ ಕಾರ್ಯಗಳನ್ನು ನೆರವೇರಿಸಿದೆ. ಈ ಕಾರ್ಯಕ್ರಮ ಇನ್ನಷ್ಟು ಯಶಸ್ವಿಯಾಗಬೇಕು ಪಟ್ಲ ಫೌಂಡೇಶನ್‌ನ ಕಾರ್ಯಕ್ರಮಗಳೊಂದಿಗೆ ಸದಾ ನಾನಿರುತ್ತೇನೆ ಎಂದು ಡಾ.ಸದಾಶಿವ ಶೆಟ್ಟಿ ಕನ್ಯಾನ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪಟ್ಲ ಫೌಂಡೇಶನ್‌ನ ಗೌರವಾಧ್ಯಕ್ಷ ಡಾ.ಸದಾಶಿವ ಶೆಟ್ಟಿ ಕನ್ಯಾನ, ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ ಭಂಡಾರಿ, ಕೋಶಾಧಿಕಾರಿ ಸಿಎ ಸುದೇಶ್ ಕುಮಾರ್ ರೈ, ಸಂಘಟನಾ ಕಾರ್ಯದರ್ಶಿಗಳಾದ ಬಾಳ ಜಗನ್ನಾಥ ಶೆಟ್ಟಿ, ಪ್ರದೀಪ್ ಆಳ್ವ ಕದ್ರಿ, ಪ್ರಮುಖರಾದ ರವಿಚಂದ್ರ ಶೆಟ್ಟಿ, ಉದಯಕುಮಾರ್ ಶೆಟ್ಟಿ, ಆರತಿ ಆಳ್ವ ಡಾ.ಎಂ.ಪ್ರಭಾಕರ ಜೋಷಿ, ಸವಣೂರು ಸೀತಾರಾಮ ರೈ, ಭುಜಬಲಿ ಮುಂತಾದವರು ಉಪಸ್ಥಿತರಿದ್ದರು.

ಆಳ್ವಾಸ್‌ನಲ್ಲಿ ಮೆಟಾಸಾಫ್ಟ್-ಕಾಕುಂಜೆ ಸಾಫ್ಟ್‌ವೇರ್ ಕಚೇರಿ ಉದ್ಘಾಟನೆ

ಸಂಶೋಧನೆ-ನವೀನತೆಗೆ ಪೂರಕ

ಮೂಡುಬಿದಿರೆ: ಆಳ್ವಾಸ್ ಇಂಜಿನಿಯರಿಂಗ್ ಕಾಲೇಜಿನ ಆವರಣದ ಟೆಕ್ನಾಲಜಿ ಸೆಂಟರ್‌ನಲ್ಲಿ ಮೆಟಾಸಾಫ್ಟ್ ಐಟಿ ಸೊಲ್ಯೂಷನ್ಸ್ ಹಾಗೂ ಕಾಕುಂಜೆ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗಳ ಹೊಸ ಕಚೇರಿ ಹಾಗೂ ಸಂಶೋಧನೆ-ನವೀನತೆ ಕೇಂದ್ರವನ್ನು ಗುರುವಾರ ಉದ್ಘಾಟಿಸಲಾಯಿತು.



ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಹೊಸ ಕಚೇರಿ ಉದ್ಘಾಟಿಸಿ ಮಾತನಾಡಿ, ಆಳ್ವಾಸ್ ಇಂಜಿನಿಯರಿಂಗ್ ಕಾಲೇಜು- ತಂತ್ರಜ್ಞಾನ, ಸಂಶೋಧನೆ ಹಾಗೂ ಉದ್ಯೋಗಾವಕಾಶಗಳ ಸಮಗ್ರ ಪರಿಸರವನ್ನು ಒದಗಿಸುವ ವಿಶಿಷ್ಟ ಕ್ಯಾಂಪಸ್ ಆಗಿ ಹೊರಹೊಮ್ಮಿದೆ. ಇಲ್ಲಿ ಸ್ಥಾಪಿಸಿರುವ ವಿವಿಧ ಐಟಿ ಕಂಪನಿಗಳು ಮತ್ತು ಸ್ಟಾರ್ಟ್‌ಅಪ್‌ಗಳು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸುತ್ತಿವೆ. ಈ ಕೇಂದ್ರವು ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್, ಪ್ರಾಜೆಕ್ಟ್, ಉದ್ಯೋಗಾವಕಾಶಗಳು ಹಾಗೂ ಸಂಶೋಧನೆ-ನವೀನತೆ ಕ್ಷೇತ್ರಗಳಲ್ಲಿ ಪೂರಕ ವೇದಿಕೆಯಾಗಿ ಕಾರ್ಯ ನಿರ್ವಹಿಸಲಿದೆ ಎಂದರು.

ಈ ಸಂದರ್ಭದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ, ಮೆಟಾಸಾಫ್ಟ್ ಸಂಸ್ಥೆಯ ಕಾರ್ಯಾಕಾರಿ ನಿರ್ದೇಶಕಿ ಸರಿತಾ ಪ್ರವೀಣ್, ಅಂಚನ್ ಆಯುರ್ವೇದಿಕ್ ಇಂಡಸ್ಟ್ರೀಸ್ ಸಂಸ್ಥಾಪಕ ಡಾ. ನಾರಾಯಣ ಟಿ. ಅಂಚನ್, ಆಗರಿ ಎಂಟರ್‌ಪ್ರೈಸಸ್‌ನ ಮಾಲೀಕ ಆಗರಿ ರಾಘವೇಂದ್ರ ರಾವ್, ಪ್ರಿಯಾ ಅಸೋಸಿಯೇಟ್ಸ್‌ನ ಡಾ. ಪ್ರಿಯಾ ಹಾಗೂ ಆಳ್ವಾಸ್ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಪೀಟರ್ ಫೆರ್ನಾಂಡಿಸ್, ಉಪಸ್ಥಿತರಿದ್ದರು.

> ಆಳ್ವಾಸ್ ಇಂಜಿನಿಯರಿಂಗ್ ಕಾಲೇಜಿನ ಕ್ಯಾಂಪಸ್‌ನಲ್ಲಿ ಸಂಪೂರ್ಣ ಬ್ಲಾಕ್‌ವೊಂದನ್ನು ಟೆಕ್ ಸೆಂಟರ್‌ಗಳ ಸ್ಥಾಪನೆಗಾಗಿ ಮೀಸಲಿಟ್ಟಿದೆ. ಈ ವಿಶೇಷ ಬ್ಲಾಕ್‌ನಲ್ಲಿ ಕಚೇರಿ ಸ್ಥಳ, ಮೂಲಭೂತ ಸೌಲಭ್ಯಗಳು, ವಿದ್ಯುತ್, ಇಂಟರ್‌ನೆಟ್ ಸೇರಿದಂತೆ ಅಗತ್ಯವಿರುವ ಎಲ್ಲಾ ಮೂಲಸೌಕರ್ಯಗಳನ್ನು ಉಚಿತವಾಗಿ ಒದಗಿಸಲಾಗುತ್ತಿದೆ. ಈ ಉಪಕ್ರಮವು ಕಂಪನಿಗಳನ್ನು ಕ್ಯಾಂಪಸ್‌ಗೆ ಆಕರ್ಷಿಸುವುದರ ಜೊತೆಗೆ, ವಿದ್ಯಾರ್ಥಿಗಳಿಗೆ ನೇರ ಸಂಪರ್ಕವನ್ನು ಕಲ್ಪಿಸುತ್ತದೆ. ಆಳ್ವಾಸ್ ಕ್ಯಾಂಪಸ್‌ನಲ್ಲಿ ಈಗಾಗಲೇ ಸ್ಟೆಲಿಯಂ, ಸ್ಪೀಕಾನ್, ಇನ್ಫೋಸಿಸ್, ಸ್ಟಿಚ್‌ಗೇರ್, ಎಲ್‌ಎಸ್‌ಜಿಎ ಕಂಪೆನಿಗಳು ಕಾರ್ಯ ನಿರ್ವಹಿಸುತ್ತಿದ್ದು, ಇವುಗಳ ಜೊತೆಯಲ್ಲಿ ಕಾಕುಂಜೆ ಹಾಗೂ ಮೆಟಾಸಾಫ್ಟ್ ಕಂಪನಿಗಳು ಸೇರ್ಪಡೆಗೊಂಡವು. ಇವುಗಳೊಂದಿಗೆ ವಲ್ಕನ್ಸ್ ವಿದ್‌ಸೂತ್ರ, ಹ್ಯಾಕ್‌ಫೈ, ಕ್ರೆಸೆಂಟ್, ವಾಶಿಟೆಕ್, ಲೋಜಿಕ್ಯೂ ಮತ್ತು ಲಿಂಕ್ಲಿ ಮುಂತಾದ ಸ್ಟಾರ್ಟ್‌ಅಪ್ ಸಂಸ್ಥೆಗಳೂ ಕಾಲೇಜಿನ ಆವರಣದಲ್ಲಿ ಕಾರ್ಯನಿರ್ವಹಿಸುತ್ತಿವೆ.
>
> ■ ವಿವೇಕ್ ಆಳ್ವ

ಕಾಕುಂಜೆ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಜಿ.ಕೆ. ಭಟ್ ಕಾಕುಂಜೆ, ಮಾಲತಿ ಎಸ್‌ಎನ್ ಭಟ್ ಕಾಕುಂಜೆ, ಅಪರ್ಣಾ ಜಿಕೆ ಭಟ್ ಕಾಕುಂಜೆ, ತಂಡದ ಸದಸ್ಯರು ಉಪಸ್ಥಿತರಿದ್ದರು.

ನಿಡಿಗಲ್ ಸಮೀಪದ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಕಳ್ಳತನ

ಬೆಳ್ತಂಗಡಿ: ಮುಂಡಾಜೆ ಗ್ರಾಮದ ನಿಡಿಗಲ್ ಸಮೀಪದ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಕಳ್ಳತನ ನಡೆದ ಘಟನೆ ಏ.24 ರಂದು ಮುಂಜಾನೆ ನಡೆದಿದೆ. ಬೆಳಗಿನ ಜಾವ ಪೂಜೆಗೆಂದು ಆಗಮಿಸಿದ ಅರ್ಚಕ ಸತ್ಯನಾರಾಯಣ ಭಟ್ ಅವರು ದೇವಸ್ಥಾನದ ಬಾಗಿಲು ತೆಗೆಯುವ ಸಂದರ್ಭದಲ್ಲಿ ಈ ಘಟನೆ ಬೆಳಕಿಗೆ ಬಂದಿದೆ. ಕಳ್ಳರು ಒಳಗೆ ಇರುವುದನ್ನು ತಿಳಿದ ಅರ್ಚಕರು ಸ್ಥಳೀಯ ನಿವಾಸಿಯನ್ನು ಕರೆದುಕೊಂಡು ಬರುವ ವೇಳೆಯಲ್ಲಿ ಕಳ್ಳರು ಹಿಂಬಾಗಿಲಿನ ಮೂಲಕ ಪರಾರಿಯಾಗಿದ್ದಾರೆ. ದೇವಸ್ಥಾನದ ಛಾವಣಿಯ ಹಂಚನ್ನು ಸರಿಸಿ ಲುಂಗಿಯನ್ನು ಛಾವಣಿಯ ಪಕ್ಕಾಸಿಗೆ ಕಟ್ಟಿ ಕಳ್ಳರು ಒಳಗೆ ನುಗ್ಗಿದ್ದು,ಕಾಣಿಕೆ ಡಬ್ಬಿ ಒಡೆದು ಕಳ್ಳತನ ಮಾಡಿದ್ದಾರೆ. ಅಂದಾಜು 4 ಸಾವಿರ ರೂ. ಕಳ್ಳತನ ಆಗಿರುವ ಸಾಧ್ಯತೆ ಇದೆ. ಘಟನೆಯ ಬಗ್ಗೆ ಧರ್ಮಸ್ಥಳ ಪೊಲೀಸರಿಗೆ ಮಾಹಿತಿ ನೀಡಲಾಗಿದೆ. ಈ ದೇವಸ್ಥಾನವು ರಾಷ್ಟ್ರೀಯ ಹೆದ್ದಾರಿ ತೀರಾ ಪಕ್ಕದಲ್ಲಿದೆ ಹಾಗೂ ಪರಿಸರದಲ್ಲಿ ಸಾಕಷ್ಟು ಮನೆಗಳು ಇವೆ. ಆದರೂ ಕಳ್ಳರು ಯಾವುದೇ ಎಗ್ಗಿಲ್ಲದೆ ದೇವಸ್ಥಾನದ ಒಳಗೆ ನುಗ್ಗಿದ್ದಾರೆ.

ಇಲ್ಲಿಂದ ಸುಮಾರು ಒಂದು ಕಿ.ಮೀ. ದೂರದ ಕನ್ಯಾಡಿ ಗ್ರಾಮದ ನಿಡಿಗಲ್ ಲೋಕನಾಡು ಶ್ರೀ ಲೋಕನಾಥೇಶ್ವರ ದೇವಸ್ಥಾನದದಲ್ಲಿ ಎರಡು ದಿನಗಳ ಹಿಂದೆ ಕಳ್ಳತನ ನಡೆದಿತ್ತು. ಈ ವೇಳೆ ಕಾಣಿಕೆ ಡಬ್ಬಿಗಳನ್ನು ಕಳ್ಳರು ದೋಚಿದ್ದು ಸುಮಾರು 30 ಸಾವಿರ ರೂ.ನಷ್ಟು ಹಣ ಕಳ್ಳತನವಾಗಿತ್ತು.

ಕುಪ್ಮ ಕರ್ನಾಟಕ ಬೇಡಿಕೆಗೆ ಸ್ಪಂದಿಸಿದ ಶಿಕ್ಷಣ ಇಲಾಖೆ

ಮಂಗಳೂರು: ಕುಪ್ಮ ಕರ್ನಾಟಕ ವತಿಯಿಂದ ಏ. 22 ರಂದು ವಿಕಾಸಸೌಧದಲ್ಲಿ ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಅವರ ಅಧ್ಯಕ್ಷತೆಯಲ್ಲಿ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಶ್ಮಿ ಮಹೇಶ್, ಪಿ.ಯು. ಬೋರ್ಡ್‌ನ ನಿರ್ದೇಶಕ ಭರತ್ ಹಾಗೂ ಕುಪ್ಮಾ ಸಂಘಟನೆಯ ಬೆಂಗಳೂರು ಉತ್ತರ ಜಿಲ್ಲೆಯ ಕುಪ್ಮಾ ಕಾರ್ಯದರ್ಶಿ ಡಾ. ದೇವರಾಜ್ ಬಿ. ಕೆ., ಬೆಂಗಳೂರು ದಕ್ಷಿಣ ಜಿಲ್ಲೆಯ ಕುಪ್ಮಾ ಅಧ್ಯಕ್ಷ ಡಾ. ಜಯರಾಮ್ ಶೆಟ್ಟಿ ಹಾಗೂ ಇತರ ಪ್ರತಿನಿಧಿಗಳೊಂದಿಗೆ ಮಹತ್ವದ ಸಭೆ ನಡೆಯಿತು.



ಸಭೆಯಲ್ಲಿ ಪ್ರಸ್ತುತ ಖಾಸಗಿ ಪಿ.ಯು. ಕಾಲೇಜುಗಳಿಗೆ ಕೆಲವು ವಿದ್ಯಾರ್ಥಿ ಸಂಘಟನೆಗಳಿಂದ ದ್ವಿತೀಯ ಪಿ.ಯು. ತರಗತಿಗಳನ್ನು ನಡೆಸದಂತೆ ಉಂಟಾಗುತ್ತಿರುವ ತೊಂದರೆಗಳ ಕುರಿತು ಹಾಗೂ ವಿದ್ಯಾರ್ಥಿಗಳ ಟಿ.ಸಿ.ಗಳನ್ನು ಡಿಜಿ ಲಾಕರ್ ಮೂಲಕ ವಿತರಿಸುವ ಇಲಾಖೆಯ ನಿರ್ಧಾರದಿಂದ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳ ಮೇಲೆ ಉಂಟಾಗಬಹುದಾದ ಪರಿಣಾಮಗಳ ಕುರಿತು ಸಮಗ್ರಚರ್ಚೆ ನಡೆಯಿತು.

ಈ ಸಂದರ್ಭದಲ್ಲಿ, ಪೋಷಕರ ಸಹಮತದೊಂದಿಗೆ ವಿಶೇಷ ತರಗತಿಗಳನ್ನು ನಡೆಸಲು ಅವಕಾಶ ಕಲ್ಪಿಸುವ ಕುರಿತು ಚರ್ಚೆ ನಡೆದಿದ್ದು, ರಶ್ಮಿ ಮಹೇಶ್ ಅವರು ಸಕಾರಾತ್ಮಕ ಭರವಸೆ ನೀಡಿದರು. ಜೊತೆಗೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕ ಭರತ್ ಅವರಿಗೆ ಈ ಸಂಬಂಧ ಸೂಕ್ತ ಸುತ್ತೋಲೆ ಹೊರಡಿಸಲು ಸಭೆಯಲ್ಲಿಯೇ ಸೂಚಿಸಿದರು. ಮರುದಿನವೆ ಸುತ್ತೋಲೆ ಹೊರಡಿಸಲಾಗಿದೆ.

ರಾಜ್ಯದ ಖಾಸಗಿ ಪಿ.ಯು. ಕಾಲೇಜುಗಳ ಗಂಭೀರ ಸಮಸ್ಯೆಗಳನ್ನು ಮನಗಂಡು, ನಮ್ಮ ಮನವಿಗೆ ಸ್ಪಂದಿಸಿ ತುರ್ತಾಗಿ ಇಲಾಖಾ ಅಧಿಕಾರಿಗಳೊಂದಿಗೆ ಸಭೆ ಏರ್ಪಡಿಸಿ ಸಮಸ್ಯೆಗಳನ್ನು ಸಮಗ್ರವಾಗಿ ಮಂಡಿಸಲು ಅವಕಾಶ ಕಲ್ಪಿಸಿದಲ್ಲದೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿಶೇಷ ತರಗತಿಗಳನ್ನು ನಡೆಸಲು ಅನುಮತಿ ನೀಡುವ ದಿಕ್ಕಿನಲ್ಲಿ ಕ್ರಮ ಕೈಗೊಂಡು, ಖಾಸಗಿ ಕಾಲೇಜುಗಳಿಗೆ ಆತಂಕಕಾರಿಯಾದ ಡಿಜಿ ಲಾಕರ್ ಮೂಲಕ ಟಿ.ಸಿ. ವಿತರಣಾ ನಿರ್ಧಾರವನ್ನು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಮನವರಿಕೆ ಮಾಡಿಕೊಟ್ಟರು.

ಈ ಸಂದರ್ಭದಲ್ಲಿ ತುಮಕೂರು, ಕೋಲಾರ ಶಿಕ್ಷಕರ ಕ್ಷೇತ್ರದ ವಿಧಾನಸಭಾ ಸದಸ್ಯ ಡಿ. ಟಿ. ಶ್ರೀನಿವಾಸ್, ಬೆಂಗಳೂರು ಉತ್ತರ ಜಿಲ್ಲೆಯ ಸಹಕಾರ್ಯದರ್ಶಿ ವೆಂಕಟೇಶ್ ಬಿ. ಎಂ. ಹಾಗೂ ಮತ್ತೊಬ್ಬ ಸಹಕಾರ್ಯದರ್ಶಿ ಮಧುಕುಮಾರ್, ಟ್ಯಾಪ್ ರೂಟ್ ಗ್ರೂಪ್ ಆಫ್ ಪಿಯು ಕಾಲೇಜಿನ ನಿರ್ದೇಶಕ ಪ್ರೊ

ಅಕ್ಷಯ್ ಕಲ್ಲೇಗ ಕೊಲೆ ಪ್ರಕರಣ: ಜಾಮೀನು ತಿರಸ್ಕೃತ

ಪುತ್ತೂರು: ಕಲ್ಲೇಗ ಟೈಗರ್ಸ್ ತಂಡದ ಮುಖ್ಯಸ್ಥ ಅಕ್ಷಯ್ ಕಲ್ಲೇಗ ಕೊಲೆ ಪ್ರಕರಣಕ್ಕೆ ಸಂಬಂಧಿಸಿ 1ನೇ ಮತ್ತು 2ನೇ ಆರೋಪಿಯ ಜಾಮೀನು ಅರ್ಜಿಯನ್ನು ಪುತ್ತೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತಿರಸ್ಕೃತಗೊಳಿಸಿ ಆದೇಶಿಸಿದೆ.

2023 ನ.6ರಂದು ನೆಹರುನಗರದಲ್ಲಿ ರಾತ್ರಿ ವೇಳೆ ಅಕ್ಷಯ್ ಕಲ್ಲೇಗ ಅವರನ್ನು ಕೊಲೆ ಮಾಡಲಾಗಿತ್ತು. ಪ್ರಕರಣದಲ್ಲಿ ಪಡೀಲು ನಿವಾಸಿ ಮನೀಶ್, ಕೃಷ್ಣನಗರದ ಚೇತನ್, ಬನ್ನೂರಿನ ಮಂಜುನಾಥ್ ಯಾನೆ ಹರಿ ಹಾಗೂ ಕೇಶವ ಪಡೀಲ್ ಎಂಬವರನ್ನು ಪೊಲೀಸರು ಬಂಧಿಸಿದ್ದರು. ಆ ಬಳಿಕ ಜಾಮೀನು ಕೋರಿ ಸಲ್ಲಿಸಿದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಕೆಲ ತಿಂಗಳ ಹಿಂದೆ ಕೊಲೆ ಪ್ರಕರಣದ 3ನೇ ಆರೋಪಿ ಮಂಜುನಾಥ್ ಶೆಣೈ ಮತ್ತು 4ನೇ ಆರೋಪಿ ಕೇಶವಗೆ ಪುತ್ತೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು.

ಇದೀಗ ಪ್ರಕರಣದ 1ನೇ ಆರೋಪಿ ಮನೀಶ್ ಮತ್ತು 2ನೇ ಆರೋಪಿ ಚೇತನ್ ಜಾಮೀನು ಕೋರಿ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯ ತಿರಸ್ಕೃತಗೊಳಿಸಿದೆ.

ಪುತ್ತೂರು ಬಪ್ಪಳಿಗೆಯ ಅಂಬಿಕಾ ವಿದ್ಯಾಲಯದ ನಿಹಾಲ್ ಎನ್. ವಿಶಿಷ್ಟ ಸಾಧನೆ

ಎಸ್ಸೆಸ್ಸೆಲ್ಸಿಯಲ್ಲಿ ಶೇ.55, ಪಿಯುಸಿಯಲ್ಲಿ ಶೇ.94.6!

ಪುತ್ತೂರು: ಇತ್ತೀಚೆಗೆ ಪ್ರಕಟವಾದ ದ್ವಿತೀಯ ಪಿಯು ಫಲಿತಾಂಶದಲ್ಲಿ ಪುತ್ತೂರಿನ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಅಂಬಿಕಾ ಪದವಿ ಪೂರ್ವ ವಿದ್ಯಾಲಯ ಶೇ.100 ಉತ್ತೀರ್ಣತೆ ಸಹಿತ ಹಲವು ರ್‍ಯಾಂಕ್‌ಗಳನ್ನು ತನ್ನದಾಗಿಸಿರುವುದು ಈಗಾಗಲೇ ದಾಖಲಾಗಿದೆ. ಈ ಮಧ್ಯೆ ಅಂಬಿಕಾದ ಶಿಕ್ಷಣ ಗುಣಮಟ್ಟವನ್ನು ಗುರುತಿಸಿ ಕಾಣಿಸುವಂತಹ ಘಟನೆಗೂ ಈ ಬಾರಿಯ ಪಿಯು ಫಲಿತಾಂಶ ಕಾರಣವಾಗಿದೆ.



ಪ್ರಸ್ತುತ ಪಿಯು ಫಲಿತಾಂಶದಲ್ಲಿ ಬಪ್ಪಳಿಗೆಯ ಅಂಬಿಕಾ ವಸತಿಯುತ ಪ.ಪೂ. ವಿದ್ಯಾಲಯದ ವಿದ್ಯಾರ್ಥಿ ನಿಹಾಲ್ ಅಚ್ಚರಿಯ ದಾಖಲೆಯನ್ನು ಬರೆದಿದ್ದಾರೆ. ಮೂಲತಃ ಮೈಸೂರಿನವರಾದ ನಿಹಾಲ್ ಎಸ್ಸೆಸ್ಸೆಲ್ಸಿಯಲ್ಲಿ ಕೇವಲ ಶೇ.55 ಅಂಕಗಳನ್ನು ದಾಖಲಿಸಿದ್ದರು. ಆದರೆ, ಇದೀಗ ಬಂದ ಪಿಯು ಫಲಿತಾಂಶದಲ್ಲಿ ಮೈಸೂರಿನ ಎಚ್.ಡಿ.ಕೋಟೆಯ ನಂಜುಂಡಸ್ವಾಮಿ ಎಂ. ಹಾಗೂ ವೀಣಾ ಎಸ್. ದಂಪತಿ ಪುತ್ರ ನಿಹಾಲ್ ಶೇ.94.6 ಅಂಕಗಳನ್ನು ಗಳಿಸಿ ಹೆತ್ತವರ ಮುಖದಲ್ಲಿ ಸಂತಸದ ನಗು ಮೂಡಿಸಿದ್ದಾರೆ.

ಅಂಬಿಕಾ ಪ.ಪೂ. ವಿದ್ಯಾಲಯದಿಂದ ಪ್ರಸ್ತುತ ಬಾರಿ ಪರೀಕ್ಷೆ ಬರೆದಿದ್ದ 484 ಮಂದಿ ವಿದ್ಯಾರ್ಥಿಗಳಲ್ಲಿ 158 ಮಂದಿ ತಮ್ಮ 10ನೇ ತರಗತಿಯ ಫಲಿತಾಂಶಕ್ಕಿಂತಲೂ ಅಧಿಕ ದಾಖಲಿಸಿದ್ದಾರೆ. ಅದರಲ್ಲೂ ನಿಹಾಲ್ ಸುಮಾರು ಶೇ.40ರಷ್ಟು ಹೆಚ್ಚಿನ ಅಂಕ ಗಳಿಸಿರುವುದು ಸಂಸ್ಥೆಯ ಗುಣಮಟ್ಟವನ್ನು ಎತ್ತಿ ಹಿಡಿದಿದೆ.

ನನ್ನ ಪ್ರಥಮ ವರ್ಷದ ಪಿಯು ದಿನಗಳಿಂದಲೇ ಅಂಬಿಕಾದ ಎಲ್ಲಾ ಉಪನ್ಯಾಸಕರು ನನ್ನಲ್ಲಿ ಆತ್ಮವಿಶ್ವಾಸ ತುಂಬುವ ಕಾರ್ಯವನ್ನು ಮಾಡಿದ್ದಾರೆ. ಸಂಸ್ಥೆಯ ಅಧ್ಯಕ್ಷರು ನಾನು ಸಂಸ್ಥೆಗೆ ಸೇರಿದ ಸಂದರ್ಭದಲ್ಲೇ ಖಂಡಿತವಾಗಿಯೂ ನೀನು ಡಿಸ್ಟಿಂಕ್ಷನ್ ಪಡೆಯುತ್ತಿ ಎಂದು ಪ್ರೇರಣೆ ನೀಡಿದ್ದರು. ಅವರ ಮಾತಿನಂತೆ ಮೊದಲ ವರ್ಷವೇ ನಾನು ಶೇ.84 ಹಾಗೂ ಇದೀಗ ಶೇ.94 ಪಡೆಯುವುದಕ್ಕೆ ಸಾಧ್ಯವಾಗಿದೆ. ಅಂಬಿಕಾ ನನ್ನ ಬದುಕಿನಲ್ಲಿ ಒಂದು ಮಹತ್ತರ ಪಾತ್ರ ವಹಿಸಿದೆ ಎಂಬುದು ನಿಹಾಲ್ ಎನ್. ಅಭಿಪ್ರಾಯ.

> **ಶಿಕ್ಷಣದ ಸಾರ್ಥಕತೆ**
>
> ಇದು ನಿಜವಾಗಿಯಾದರೂ ಅಂಬಿಕಾದ ಶಿಕ್ಷಣದ ಸಾರ್ಥಕತೆ. ಒಬ್ಬ ಕಡಿಮೆ ಅಂಕ ಹೊಂದಿದ್ದ ವಿದ್ಯಾರ್ಥಿಯನ್ನು ನಿರೀಕ್ಷೆಗೂ ಮೀರಿ ತಯಾರು ಮಾಡಿ ಅತ್ಯುತ್ಕೃಷ್ಟ ಫಲಿತಾಂಶ ಪಡೆಯುವಂತೆ ಮಾಡುವುದು ಆತ್ಮತೃಪ್ತಿ ಕೊಡುವ ವಿಷಯ. ವಿದ್ಯಾರ್ಥಿಗಳ ಉತ್ಕರ್ಷಕ್ಕಾಗಿ ಎಲ್ಲ ಬಗೆಯ ಮಾರ್ಗದರ್ಶನ, ಆತ್ಮವಿಶ್ವಾಸ ತುಂಬುವ ಕಾರ್ಯಗಳು ನಮ್ಮ ಸಂಸ್ಥೆಯಲ್ಲಿ ಸದಾ ನಡೆಯುತ್ತಲೇ ಇರುತ್ತವೆ.
>
> ■ ಸುಬ್ರಮಣ್ಯ ನಟ್ಟೋಜ, ಅಧ್ಯಕ್ಷರು, ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳು

ಕಿರುಸುದ್ದಿ

ವಿಶ್ವ ರಿಲೇ ಚಾಂಪಿಯನ್ ಶಿಪ್ ಸ್ಪರ್ಧೆ: ತೀರ್ಥೇಶ್ ಶೆಟ್ಟಿ ಆಯ್ಕೆ

ಬಂಟ್ವಾಳ: ಸೌತ್ ಆಫ್ರಿಕಾದ ಬೋಟ್ಸ್ ವಾನದಲ್ಲಿ ಮೇ 2 ರಂದು ನಡೆಯಲಿರುವ ವಿಶ್ವ ರಿಲೇ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ಬಂಟ್ವಾಳ ತಾಲೂಕಿನ ಕೊಯಿಲ ಗ್ರಾಮದ ಕೊಯಿಲ ನಿವಾಸಿ, ಮೂಡುಬಿದಿರೆ ಆಳ್ವಾಸ್ ಕಾಲೇಜಿನ ಹಳೇ ವಿದ್ಯಾರ್ಥಿ ತೀರ್ಥೇಶ್ ಶೆಟ್ಟಿ ಅವರು ಪುರುಷರ 4X400 ಮೀ ರಿಲೇಯಲ್ಲಿ ಭಾರತವನ್ನು



ಪ್ರತಿನಿಧಿಸಲು ಆಯ್ಕೆಯಾಗಿದ್ದಾರೆ. ಪ್ರಸ್ತುತ ಅವರು ಭಾರತೀಯ ರೈಲ್ವೇ ಇಲಾಖೆಯಲ್ಲಿ ಉದ್ಯೋಗಿಯಾಗಿದ್ದು, ಭಾರತದ ರಾಷ್ಟ್ರೀಯ ಸೀನಿಯರ್ ಕ್ಯಾಂಪ್ ನಲ್ಲಿ ತರಬೇತಿ ಪಡೆಯುತ್ತಿದ್ದಾರೆ. ತೀರ್ಥೇಶ್ ಅವರು ಕೊಯಿಲ ಪ್ರಶಾಂತ್ ಶೆಟ್ಟಿ, ಸವಿತ ದಂಪತಿಯ ಪುತ್ರರಾಗಿದ್ದಾರೆ.

ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಪ್ರೀತಮ್‌ಗೆ ಸಂಸದ ಬಿ.ವೈ. ರಾಘವೇಂದ್ರ ಅಭಿನಂದನೆ

ಮಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625 ಕ್ಕೆ 625 ಅಂಕಗಳನ್ನು ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿರುವ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಬೈಂದೂರು ವಿಧಾನಸಭಾ ವ್ಯಾಪ್ತಿಯ ಕುಂದಾಪುರ ತಾಲೂಕಿನ ಮಚ್ಚಟ್ಟು ಗ್ರಾಮದ ವಿದ್ಯಾರ್ಥಿ ಪ್ರೀತಮ್ ಜಿ. ಅವರಿಗೆ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಸಂಸದ ಬಿ. ವೈ. ರಾಘವೇಂದ್ರ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಈ ಸಾಧನೆ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸುವುದರ ಜೊತೆಗೆ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೂ ಪ್ರೇರಣೆಯಾಗಲಿದೆ. ಪ್ರೀತಮ್ ಜಿ ಅವರ ಮುಂದಿನ ವಿದ್ಯಾಭ್ಯಾಸ ಹಾಗೂ ಜೀವನದಲ್ಲಿ ಇನ್ನಷ್ಟು ಯಶಸ್ಸು ದೊರಕಲಿ ಎಂದು ಸಂಸದರು ಹಾರೈಸಿದ್ದಾರೆ. ಅದೇ ರೀತಿ, ವಿದ್ಯಾರ್ಥಿಯ ಸಾಧನೆಗೆ ಪೋಷಕರು, ಶಿಕ್ಷಕರು ಹಾಗೂ ಶಾಲಾ ಆಡಳಿತ ಮಂಡಳಿಯ ಶ್ರಮವೂ ಮಹತ್ವದ್ದಾಗಿದ್ದು, ಅವರಿಗೆ ಸಹ ಸಂಸದ ಬಿ.ವೈ. ರಾಘವೇಂದ್ರ ಅವರು ಅಭಿನಂದನೆ ಸಲ್ಲಿಸಿದ್ದಾರೆ.



ಇಂದು ವಾರ್ಷಿಕೋತ್ಸವ

ಕುಂದಾಪುರ: ಶ್ರೀ ಚೆನ್ನಬಸವೇಶ್ವರ ಯುವಕ ಮಂಡಲ ನಾಯಕವಾಡಿ– ಗುಜ್ಜಾಡಿ ಇದರ 51ನೇ ವಾರ್ಷಿಕೋತ್ಸವ ಸಂಭ್ರಮ 'ಸಂಗಮ' ಯುವಕ ಮಂಡಲದ ವಠಾರದಲ್ಲಿ ಏ.25ರಂದು ಸಂಜೆ 5.30ಕ್ಕೆ ನಡೆಯಲಿದೆ. ಕೋಟ ಗೀತಾನಂದ ಫೌಂಡೇಶನ್‌ನ ಪ್ರವರ್ತಕ ಆನಂದ ಸಿ.ಕುಂದರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಯುವಕ ಮಂಡಲದ ಅಧ್ಯಕ್ಷ ಶ್ರೀನಿವಾಸ ಕೆ. ಅಧ್ಯಕ್ಷತೆ ವಹಿಸಲಿದ್ದಾರೆ. ಕುಂದಾಪುರದ ವಕೀಲ ರವಿಕಿರಣ್ ಮುರ್ಡೇಶ್ವರ ಪ್ರಶಸ್ತಿ ಫಲಕ ಅನಾವರಣ ಮಾಡಲಿದ್ದು, ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ, ಮಾಜಿ ಶಾಸಕ ಕೆ.ಗೋಪಾಲ ಪೂಜಾರಿ ಮೊದಲಾದವರು ಪಾಲ್ಗೊಳ್ಳಲಿದ್ದಾರೆ. ಸಮಾಜಸೇವಕ ಬೆಂಕಿಮಣಿ ಸಂತು, ಹಿರಿಯ ನಾಟಿ ವೈದ್ಯ ಮ್ಯಾಕ್ಸಿಮ್ ಒಲಿವೇರಾ ಮತ್ತಯ ಕ್ಲೀನ್ ಕಿನಾರಾ ತಂಡವನ್ನು ಸನ್ಮಾನಿಸಿ ಗೌರವಿಸಲಾಗುವುದು. ಶೈಕ್ಷಣಿಕ ಮತ್ತು ಅಶಕ್ತರಿಗೆ ನೆರವು ಹಸ್ತಾಂತರಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಎಸ್ಸೆಸೆಲ್ಸಿ : ಕಲ್ಲಡ್ಕ ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆ 100% ಫಲಿತಾಂಶ

ಬಂಟ್ವಾಳ: ಪ್ರಸಕ್ತ ಸಾಲಿನ ಎಸ್ಸೆಸೆಲ್ಸಿ ಪರೀಕ್ಷೆಯಲ್ಲಿ ಕಲ್ಲಡ್ಕ ಶ್ರೀರಾಮ ಆಂಗ್ಲ ಮಾಧ್ಯಮ ಶಾಲೆಯು 100% ಫಲಿತಾಂಶವನ್ನು ದಾಖಲಿಸಿದೆ. ವಿದ್ಯಾರ್ಥಿನಿಯರಾದ ಬ್ರಾಹ್ಮೀ 611 (97.76%) ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಹಾಗೂ ವಂಶಿ 605 (96.8.%) ಅಂಕಗಳನ್ನು ಪಡೆದು ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ಪರೀಕ್ಷೆ ಬರೆದ 52 ವಿದ್ಯಾರ್ಥಿಗಳಲ್ಲಿ ವಿಶಿಷ್ಟ ಶ್ರೇಣಿ 15, ಪ್ರಥಮ ಶ್ರೇಣಿ 27 ಮಂದಿ ಪಡೆದಿದ್ದಾರೆ. ಸಂಸ್ಕೃತದಲ್ಲಿ 125 ರಲ್ಲಿ 125 ಅಂಕಗಳನ್ನು 8 ವಿದ್ಯಾರ್ಥಿಗಳು, ಇಂಗ್ಲಿಷ್ ಭಾಷೆಯಲ್ಲಿ 100 ಕ್ಕೆ 100 ಒಂದು ವಿದ್ಯಾರ್ಥಿ , ತೃತೀಯ ಭಾಷೆ ಕನ್ನಡದಲ್ಲಿ 100 ಕ್ಕೆ 100 ಅಂಕವನ್ನು ಒಬ್ಬ ವಿದ್ಯಾರ್ಥಿ ಪಡೆದಿದ್ದಾರೆ.





'ಸಾಧನೆ ಎಂಬುದು ಸಾಧಕನ ಸೊತ್ತೇ ಹೊರತು ಸೋಮಾರಿಯದ್ದಲ್ಲ!' ಈ ಮಾತು ಅಕ್ಷರಶಃ ಈ ಸಂಸ್ಥೆಗೆ ಹೊಂದುತ್ತದೆ. ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿರಬೇಕು ಎಂಬ ನೆಲೆಯಲ್ಲಿ ವಿದ್ಯಾರ್ಥಿಗಳ ನಾಳಿನ ಉತ್ತಮ ಭವಿಷ್ಯಕ್ಕಾಗಿ ಟೊಂಕ ಕಟ್ಟಿ ಕೆಲಸ ಮಾಡುತ್ತಿದೆ ಈ ಸಂಸ್ಥೆ. ಶಿಕ್ಷಣ, ಕಲೆ, ಸಾಹಿತ್ಯ, ಕ್ರೀಡೆ ಹೀಗೆ ಬಹುಮುಖೀ ವ್ಯಕ್ತಿತ್ವದ ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾಗಿ ಅವರನ್ನು ಬೆಳೆಸುತ್ತಾ ಪೋಷಿಸುತ್ತಾ ನಿಜಾರ್ಥದಲ್ಲಿ 'ಮಾದರೀ' ನಾಗರೀಕರನ್ನಾಗಿ ರೂಪಿಸುವ ಮಹತ್ಕಾರ್ಯವನ್ನು ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಮಾಡುತ್ತಿದೆ.

ವಿದ್ಯಾರ್ಥಿಗಳ ಶೈಕ್ಷಣಿಕ ಪರಿವರ್ತನೆಯ ಸಾಧನೆಗೆ ಮೂಡುಬಿದಿರೆಯ ಈ ಶಿಕ್ಷಣ ಸಂಸ್ಥೆಯೇ ಸಾಕ್ಷಿ

ಆಳ್ವಾಸ್ ಮುಡಿಯಲ್ಲಿ ರಾರಾಜಿಸಿದೆ ಸಾಧನೆ ಕಿರೀಟ

ಹರೀಶ್ ಕೆ.ಆದೂರು

ಸಮಾಜದಲ್ಲಿ ಹಲವು ರೀತಿಯ ಸಾಧಕರನ್ನು ನಾವು ನೋಡುತ್ತೇವೆ. ಆದರೆ ಇಲ್ಲಿ ನಾವು ನೋಡುವ ಸಾಧಕರ ಹಿಂದಿರುವ ಕಥೆಯೇ ಬೇರೆ!. ಅವರವರ ಪ್ರತಿಭೆಗಳನ್ನು ಆಯಾ ಕ್ಷೇತ್ರದಲ್ಲಿ ಉತ್ತುಂಗದಲ್ಲಿ ಬೆಳಗುವಂತೆ ಮಾಡುವುದರ ಜೊತೆ ಜೊತೆಗೆ ಶೈಕ್ಷಣಿಕ ಕ್ಷೇತ್ರದಲ್ಲೂ ಸಮಾನ ಪ್ರಗತಿಯಾಗುವಂತೆ ಪ್ರೋತ್ಸಾಹಿಸಿ ಬೆಳೆಸುವುದೇ ಆಳ್ವಾಸ್ ಶಿಕ್ಷಣ ಸಂಸ್ಥೆಯ ಮತ್ತೊಂದು ವಿಶೇಷತೆ. ವಿದ್ಯಾರ್ಥಿಗಳಿಗೆ ಒತ್ತಡ ರಹಿತವಾಗಿ ಶೈಕ್ಷಣಿಕ ಸಾಧನೆಗೆ ಪೂರಕ ವ್ಯವಸ್ಥೆ ಕಲ್ಪಿಸುತ್ತಾ ಹಂತ ಹಂತವಾಗಿ ಸಿದ್ಧಪಡಿಸುವ ಮಾದರೀ ಕಾರ್ಯ ಪ್ರತಿಯೊಬ್ಬರೂ ಗಮನಿಸಲೇ ಬೇಕಾಗುತ್ತದೆ.

ಕಲಾ ಕ್ಷೇತ್ರವನ್ನೇ ಪರಿಗಣಿಸಿದರೆ, ಅಲ್ಲಿ ಆ ವಿದ್ಯಾರ್ಥಿಗಳ ಸಾಧನೆ ಅದ್ಭುತವಾಗಿರುತ್ತದೆ, ಕ್ರೀಡೆಯನ್ನು ಗಮನಿಸಿದರೆ ಅಲ್ಲೂ ಅದ್ಭುತವಾಗಿರುತ್ತದೆ, ಜೊತೆ ಜೊತೆಗೆ ಶೈಕ್ಷಣಿಕ ಕ್ಷೇತ್ರದಲ್ಲೂ ಅದೇ ಅದ್ಭುತಗಳು ವಿದ್ಯಾರ್ಥಿಗಳಿಂದ ನಡೆಯುತ್ತಿರುವುದು ಒಂದು ವಿಶೇಷವೇ ಸರಿ.

ಎಸ್.ಎಸ್.ಎಲ್.ಸಿ ಎಂಬುದು ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದ ಬಹುದೊಡ್ಡ ಘಟ್ಟ. ಬಹುತೇಕ ಮಕ್ಕಳು ಈ ವಯಸ್ಸಿನಲ್ಲಿ ನಾನಾ ರೀತಿಯಿಂದ ಮಾನಸಿಕವಾಗಿ ವಿಚಲಿತರಾಗುವುದು ಸಹಜ. ಹಲವು ದಾಸ್ಯಕ್ಕೆ ಒಳಪಟ್ಟು ಶೈಕ್ಷಣಿಕ ವ್ಯವಸ್ಥೆಯಿಂದ ವಿಮುಖರಾಗುವ ಸಾಧ್ಯತೆಯೂ ಹೆಚ್ಚು. ಮೊಬೈಲ್, ದುಷ್ಚಟ, ಮಾನಸಿಕ ಒತ್ತಡ, ಸೋಮಾರಿತನ, ಕೆಟ್ಟ ವಾತಾವರಣ, ಕೌಟುಂಬಿಕ ಸಮಸ್ಯೆ, ಹದಿಹರೆಯದ ಆಕರ್ಷಣೆಗಳು, ಬೌತಿಕ ಸಂಪರ್ಕಗಳು, ಭಾವನಾತ್ಮಕ ಅಂಶಗಳಿಂದಾಗಿ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಹಿಂದುಳಿದಿರುವ ಸಾಕಷ್ಟು ಉದಾಹರಣೆಗಳು ಸಮಾಜದಲ್ಲಿವೆ. ಇಂತಹ ವಿದ್ಯಾರ್ಥಿಗಳಿಗೆ ಅವರ ಭವಿಷ್ಯದ ಕನಸು ನನಸುಮಾಡಲು ಅವಕಾಶ ವಂಚಿತವಾಗುವ ಸಂದರ್ಭಗಳೇ ಹೆಚ್ಚು.

ಎಸ್.ಎಸ್.ಎಲ್.ಸಿಯಲ್ಲಿ ಕನಿಷ್ಠ ಅಂಕ ಗಳಿಸಿ ತೇರ್ಗಡೆ ಹೊಂದಿರುವ ಮಕ್ಕಳಿಗೂ ಸಮಾನ ಅವಕಾಶ ನೀಡುತ್ತಾ, ಅವರ ಸಮಸ್ಯೆಗಳಿಗೆ ಸೂಕ್ತ ಸ್ಪಂದನೆ ನೀಡಿ, ಅವರಿಗೆ ಆತ್ಮಸ್ಥೈರ್ಯ ತುಂಬಿ, ಶೈಕ್ಷಣಿಕ ಪ್ರಗತಿಗೆ ಕಾರಣವಾಗುತ್ತಿದೆ ಆಳ್ವಾಸ್ ಸಮೂಹ ಸಂಸ್ಥೆ. ಖಿನ್ನತೆಗೊಳಗಾದ ವಿದ್ಯಾರ್ಥಿಗಳಿಗೆ ಸೂಕ್ತ ಪೂರಕ ವಾತಾವರಣ ಕಲ್ಪಿಸಿ, ಅವರಿಗೆ ಧೈರ್ಯತುಂಬಿ ಕೈ ಹಿಡಿದು ಮುನ್ನಡೆಸುತ್ತಾ ಬಂದಿದೆ. 'ಇದು ಜವಾಬ್ದಾರಿ' ಎಂಬ ನೆಲೆಯಲ್ಲಿ ಆಳ್ವಾಸ್ ಸಂಸ್ಥೆ ಕಾರ್ಯನಿರ್ವಹಿಸಿದೆ.



> ವಿದ್ಯಾರ್ಥಿಗಳ ಅತ್ಯುತ್ತಮ ಪರಿವರ್ತನೆಗೆ ಅವಕಾಶವನ್ನು ನಮ್ಮ ಸಂಸ್ಥೆ ಒದಗಿಸುತ್ತಿದೆ. ನಾನಾ ರೀತಿಯಿಂದಾಗಿ ಶೈಕ್ಷಣಿಕವಾಗಿ ವಿದ್ಯಾರ್ಥಿಗಳು ಹಿಂದುಳಿದಿರುತ್ತಾರೆ. ನಮ್ಮ ಸಂಸ್ಥೆಗೆ ಬಂದ ನಂತರ ಅವರ ದಿನಚರಿಯನ್ನು ಸರಿಯಾಗಿ ವರ್ಗೀಕರಣ ಮಾಡಿ, ಅವರಿಗೆ ಸೂಕ್ತ ತರಬೇತಿಗಳನ್ನು ನೀಡುತ್ತಾ, ಶೈಕ್ಷಣಿಕ ಸಾಧನೆಗೆ ಪೂರಕ ಅವಕಾಶವನ್ನು ಒದಗಿಸಿಕೊಡುತ್ತೇವೆ. ಸರಿಯಾದ 'ವ್ಯವಸ್ಥೆ'ಯೊಳಗೆ ಬೆಳೆಯುವಂತೆ ನಾವು ನೋಡಿಕೊಳ್ಳುತ್ತೇವೆ. ಆ ಪೂರಕ ವಾತಾವರಣ ಸೃಷ್ಟಿ ಮಾಡುತ್ತೇವೆ. ಇದರಿಂದಾಗಿ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಸಾಧನೆ ಮಾಡುತ್ತಿದ್ದಾರೆ. ದೊಡ್ಡ ಮಟ್ಟದ ಪರಿವರ್ತನೆ ಅವರಲ್ಲಾಗುತ್ತಿರುವುದನ್ನು ನಾವು ಗಮನಿಸಿದ್ದೇವೆ.
>
> ■ ಡಾ.ಎಂ.ಮೋಹನ ಆಳ್ವ, ಅಧ್ಯಕ್ಷರು, ಆಳ್ವಾಸ್ ಸಮೂಹ ಶಿಕ್ಷಣ ಸಂಸ್ಥೆಗಳು, ಮೂಡುಬಿದಿರೆ.



ದಿಗಂತ ವಿಶೇಷ

ಎಲ್ಲಿಂದ ಎಲ್ಲಿಗೆ!

ಇದೊಂದು ಆಸಕ್ತಿದಾಯಕ ಅಂಶ. ಸರಿಸುಮಾರು ಒಂದು ಸಾವಿರಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಕನಿಷ್ಠ ಅಂಕಗಳಿಂದ ಗರಿಷ್ಠ ಅಂಕಕ್ಕೇರಿದ ಅದ್ಭುತ ಸಾಧನೆಯ ರೋಚಕ ಕಥೆ!. ಒಬ್ಬೊಬ್ಬ ವಿದ್ಯಾರ್ಥಿಯದ್ದೂ ಒಂದೊಂದು ಕಥೆಯಿದೆ... ಅವೆಲ್ಲವನ್ನು ಮೀರಿ ಆಳ್ವಾಸ್ ಸೇರ್ಪಡೆಗೊಂಡ ನಂತರ ಆಗಿರುವುದೇ ಒಂದು ಇತಿಹಾಸ! ಹತ್ತನೇ ತರಗತಿಯನ್ನು ಪಾಸು ಮಾಡಿ, ಆಳ್ವಾಸ್ ಮೆಟ್ಟಿಲೇ ರಿದ ಇಂತಹ ವಿದ್ಯಾರ್ಥಿಗಳು ಇಲ್ಲಿಂದ ಹೊರ ಹೋಗುವಾಗ 'ಇತಿಹಾಸ' ಬರೆದು ಹೋಗು ತ್ತಿದ್ದಾರೆ!. ಅಂತಹ ಅದ್ಭುತ ಪರಿವರ್ತನೆ ಇಲ್ಲಿ ನಡೆಯುತ್ತಿದೆ!

ಎಸ್.ಎಸ್.ಎಲ್.ಸಿಯಲ್ಲಿ ಕೇವಲ 40.67ಶೇಕಡಾ ಅಂಕ ಪಡೆದು ಆಳ್ವಾಸ್ ಪದವಿಪೂರ್ವ ಕಾಲೇಜು ಸೇರಿದ ಕಿರಣ್ ಗೋಪಾಲ್ ದಾಸ್ ಭಟ್ವಡ್ ಎಂಬ ವಿದ್ಯಾರ್ಥಿ ದ್ವಿತೀಯ ಪಿಯುಸಿಯಲ್ಲಿ ಶೇಕಡಾ 91.67 ಅಂಕ ಪಡೆದು ದಾಖಲೆ ಬರೆದಿದ್ದಾನೆ. ಈತನ ಶೈಕ್ಷಣಿಕ ಮಟ್ಟ 51 ಶೇಕಡಾ ಹೆಚ್ಚಾಗಿದೆ! ಎಸ್.ಎಸ್.ಎಲ್ .ಸಿಯಲ್ಲಿ 59.8 ಶೇಕಡಾ ಅಂಕ ಪಡೆದ ಮಾನವಿ ಡಿಎಸ್ ದ್ವಿತೀಯ ಪಿಯುಸಿಯಲ್ಲಿ 99.17 ಶೇಕಡಾ ಅಂಕ ಪಡೆದು ರಾಜ್ಯಕ್ಕೆ 5ನೇ ರ್‍ಯಾಂಕ್ ತನ್ನದಾಗಿಸಿ ಹೊಸ ದಾಖಲೆ ಬರೆದಿದ್ದಾಳೆ. ಈಕೆ ತನ್ನ ಶೈಕ್ಷಣಿಕ ಗುಣಮಟ್ಟವನ್ನು ಆಳ್ವಾಸ್‌ಗೆ ಸೇರಿದ ನಂತರ 39.37 ಶೇಕಡಾ ಹೆಚ್ಚಿಸಿಕೊಂಡಿದ್ದಾಳೆ!

ಶ್ರವಣ್ ಸಂದೀಪ್ ಮೆಹ್ತಾ ಎಂಬ ವಿದ್ಯಾರ್ಥಿ ಎಸ್.ಎಸ್.ಎಲ್.ಸಿಯಲ್ಲಿ 48.8 ಅಂಕ ಪಡೆದರೆ, ಪಿಯುಸಿಯಲ್ಲಿ 95.67ಶೇಕಡಾ ಅಂಕ ಪಡೆಯುವ ಮೂಲಕ 46.87 ಶೇಕಡಾ ಅಂಕ ಹೆಚ್ಚಿಸಿಕೊಂಡಿದ್ದಾಳೆ.

ಸುಜಾತಾ ವಿಠಲ ಗುಡಿಮನಿ ಎಂಬ ವಿದ್ಯಾರ್ಥಿ ಶೇಕಡಾ 40.67 ಅಂಕಗಳನ್ನು ಎಸ್.ಎಸ್. ಎಲ್.ಸಿಯಲ್ಲಿ ಪಡೆದುಕೊಂಡಿದ್ದು, ದ್ವಿತೀಯ ಪಿಯುಸಿಯಲ್ಲಿ 43.83ಶೇಕಡಾ ಅಂಕಗಳನ್ನು ಹೆಚ್ಚಿಸಿಕೊಂಡು 84.5 ಶೇಕಡಾ ಹೆಚ್ಚಿಸಿಕೊಂಡಿದ್ದಾನೆ.

ಸೋನಿಕಾ ಜೆ 51.4 ಅಂಕಗಳೊಂದಿಗೆ ಎಸ್. ಎಸ್.ಎಲ್.ಸಿಯಲ್ಲಿ ಪಾಸಾಗಿದ್ದು, ದ್ವಿತೀಯ ಪಿಯುಸಿಯಲ್ಲಿ 94.33 ಶೇಕಡಾ ಅಂಕ ಪಡೆದುಕೊಂಡು 42.93 ಶೇಕಡಾ ಅಂಕಗಳನ್ನು ಹೆಚ್ಚುಮಾಡಿಕೊಂಡಿದ್ದಾಳೆ.

ಈ ಸಾಧನೆ ಇವಿಷ್ಟೇ ಮಕ್ಕಳಿಗೆ ಸೀಮಿತವಾಗಿಲ್ಲ. ಎಸ್.ಎಸ್.ಎಲ್.ಸಿಯಲ್ಲಿ 1972 ವಿದ್ಯಾರ್ಥಿಗಳು ಕನಿಷ್ಠ ಅಂಕಗಳೊಂದಿಗೆ ದಾಖಲಾಗಿ, ತಮ್ಮ ಅಂಕಗಳನ್ನು ಗಣನೀಯ ಪ್ರಮಾಣದಲ್ಲಿ ಏರಿಕೆ ಮಾಡಿಕೊಂಡು ದಾಖಲೆ ಬರೆದಿದ್ದಾರೆ. ಕಳೆದ ಹತ್ತು ವರುಷಗಳಲ್ಲಿ ಸಹಸ್ರಾರು ಮಂದಿ ಈ ರೀತಿಯ ಅದ್ಭುತಗಳನ್ನು ಸೃಷ್ಟಿಸಿದ್ದು, ಸಂಸ್ಥೆಯ ಬದ್ಧತೆಗೆ ಸಾಕ್ಷಿಯಾಗಿದೆ.

ಇಷ್ಟೇ ಅಲ್ಲದೆ, ಈ ಬಾರಿಯ ಪ್ರಥಮ ಪಿಯುಸಿ ಫಲಿತಾಂಶವನ್ನು ಗಮನಿಸಿದಾಗ 1843 ವಿದ್ಯಾರ್ಥಿಗಳು ತಮ್ಮ ಎಸ್.ಎಸ್.ಎಲ್. ಸಿ. ಅಂಕಗಳನ್ನು ಮೀರಿಸಿ, ಹೆಚ್ಚು ಅಂಕಗಳ ಸಾಧನೆಗೆ ನಾಂದಿ ಹಾಡಿದ್ದಾರೆ. ಹಲೀಮ ಹರ್ಷಿಯಾ ಎಂಬ ವಿದ್ಯಾರ್ಥಿ ಎಸ್ ಎಸ್ ಎಲ್ ಸಿಯಲ್ಲಿ 47.40 ಶೇಕಡಾ ಅಂಕಗಳಿಂದ 95.17 ಅಂಕಗಳಿಗೆ ತನ್ನ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಿಕೊಂಡು 47.77ಶೇಕಡಾ ಸಾಧನೆಯನ್ನು ಹೆಚ್ಚುಮಾಡಿಕೊಂಡಿದ್ದಾರೆ. ಮೊಹಮ್ಮದ್ ಬಿಲಾಲ್ 56.20 ಶೇಕಡಾ ಅಂಕಗಳಿಂದ 94.33 ಶೇಕಡಾ ಅಂಕಗಳಿಗೆ ತಮ್ಮ ಸಾಮರ್ಥ್ಯ ಹೆಚ್ಚುಮಾಡಿಕೊಂಡಿದ್ದಾರೆ. ವೈಭವ್ ಶ್ರೀನಿವಾಸ್ ಆಸೂರ್ ಎಂಬವರು 58.80 ಶೇಕಡಾ ಅಂಕಗಳಿಂದ 95.83ಶೇಕಡ ಅಂಕಗಳಿಗೆ ತನ್ನ ಸಾಧನೆಯನ್ನು ಹೆಚ್ಚಿಸಿಕೊಂಡಿದ್ದಾರೆ.

ನಿರಂತರ ಪ್ರಕ್ರಿಯೆ

ಆಳ್ವಾಸ್ ಸಂಸ್ಥೆ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಮಾತ್ರ ತನ್ನ ಶಿಕ್ಷಣ ಸಂಸ್ಥೆಗೆ ನೋಂದಾವಣೆ ಮಾಡುತ್ತಿಲ್ಲ! ಕೇವಲ 40% ಅಂಕ ಪಡೆದ ವಿದ್ಯಾರ್ಥಿಗಳಿಗೂ ಅವಕಾಶ ನೀಡುತ್ತದೆ. ಅವರ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಿ ಅವರನ್ನು ಉತ್ತಮ ಸಾಧಕರನ್ನಾಗಿ ಮಾಡುವ ಪಣತೊಟ್ಟು ಕಾರ್ಯನಿರ್ವಹಿಸುತ್ತಿದೆ. 2010ರಿಂದಲೂ ಈ ಕಾರ್ಯ ನಿರಂತರವಾಗಿ ನಡೆಯುತ್ತಿದೆ.

5 ಲಕ್ಷದಿಂದ 5ನೇ ರ್‍ಯಾಂಕ್!

ಹೌದು ಈ ಹುಡುಗಿಯ ಸಾಧನೆ ನಿಜಕ್ಕೂ ಅತ್ಯಪೂರ್ವ. ಎಸ್.ಎಸ್.ಎಲ್.ಸಿಯಲ್ಲಿ 59.8 ಶೇಕಡಾ ಅಂಕಗಳೊಂದಿಗೆ ಸುಮಾರು 5ಲಕ್ಷ ಅಂದಾಜು ರ್‍ಯಾಂಕ್ ಪಡೆದುಕೊಂಡಿದ್ದರೆ, ಆಳ್ವಾಸ್ ಪದವಿಪೂರ್ವ ಕಾಲೇಜಿಗೆ ಸೇರ್ಪಡೆಗೊಂಡ ನಂತರ ಗಣನೀಯ ವಾಗಿ ತನ್ನ ಶೈಕ್ಷಣಿಕ ಮಟ್ಟವನ್ನು ಹಂತ ಹಂತವಾಗಿ ಹೆಚ್ಚಿಸಿ ಕೊಳ್ಳುತ್ತಾ ಬಂದಿದ್ದಾಳೆ. ಶೈಕ್ಷಣಿಕ ಪ್ರಗತಿಗೆ ಪೂರಕ ವಾತಾವರಣ ದೊಂದಿಗೆ, ಉತ್ತಮ ಗುಣಮಟ್ಟದ ಶಿಕ್ಷಣ ಪಡೆದು ಕೊಂಡು ಇಡೀ ರಾಜ್ಯಕ್ಕೇ ಐದನೇ ರ್‍ಯಾಂಕ್ ಪಡೆದುಕೊಂಡಿದ್ದಾಳೆ. ಮಾನವೀ ಡಿ.ಎಸ್ ಎಂಬ ಈ ವಿದ್ಯಾರ್ಥಿನಿ ದ್ವಿತೀಯ ಪಿಯುಸಿಯಲ್ಲಿ 595 ಅಂಕಗಳೊಂದಿಗೆ 99.17 ಶೇಕಡಾ ಅಂಕಗಳಲನ್ನು ಪಡೆದುಕೊಂಡಿದ್ದಾಳೆ.



ಬೆಳ್ತಂಗಡಿಯಲ್ಲಿ ಬಸ್‌ನಿಂದ ಬಿದ್ದು ಗಾಯಗೊಂಡಿದ್ದಳು

ಸಹಾಯಕಿಯ ಸಹಕಾರದಲ್ಲಿ ಪರೀಕ್ಷೆ ಬರೆದ ವಿದ್ಯಾರ್ಥಿನಿಗೆ ಉನ್ನತ ಶ್ರೇಣಿ

ಬೆಳ್ತಂಗಡಿ: ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಆಗಮಿಸುತ್ತಿದ್ದ ವೇಳೆ ಚಲಿಸುತ್ತಿದ್ದ ಕೆಎಸ್ಸಾರ್ಟಿಸಿ ಬಸ್ ನ ಬಾಗಿಲು ಏಕಾಏಕಿ ತೆರೆದುಕೊಂಡು ರಸ್ತೆಗೆ ಬಿದ್ದು ಗಾಯಗೊಂಡಿದ್ದ ವಿದ್ಯಾರ್ಥಿನಿ ಸಹಾಯಕಿಯ ಸಹಕಾರದಲ್ಲಿ ಪರೀಕ್ಷೆ ಬರೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಬೆಳ್ತಂಗಡಿ ಹಳೆಕೋಟೆವಾಣಿ ಆಂಗ್ಲ ಮಾಧ್ಯಮ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಚಧ್ರಿಕಾ ಮಾ. 31ರಂದು ತುಳು ಪರೀಕ್ಷೆ ಬರೆಯಲು ಬೆಳ್ತಂಗಡಿಯ ಪರೀಕ್ಷಾ ಕೇಂದ್ರಕ್ಕೆ ಗೇರುಕಟ್ಟೆಯಿಂದ ಬೆಳ್ತಂಗಡಿ ಕಡೆ ಆಗಮಿಸುತ್ತಿದ್ದ ವೇಳೆ ಸರಕಾರಿ ಬಸ್ ನ ಬಾಗಿಲು ಇದ್ದಕ್ಕಿದ್ದಂತೆ ತೆರೆದುಕೊಂಡು ಇಬ್ಬರು ವಿದ್ಯಾರ್ಥಿನಿಯರು ಗೇರುಕಟ್ಟೆಯ ರೇಷ್ಮೆ ರೋಡ್ ಬಳಿ ರಸ್ತೆಗೆ ಬಿದ್ದು ಗಾಯಗೊಂಡಿದ್ದರು.

ಒಂದೇ ಮನೆಯ ಈ ಇಬ್ಬರು ವಿದ್ಯಾರ್ಥಿನಿಯರು ಗಾಯಗೊಂಡಿದ್ದರು.

ಒಬ್ಬಾಕೆ ಚರಿಷ್ಮಾ (18) ಬೆಳ್ತಂಗಡಿ ಖಾಸಗಿ ಕಾಲೇಜಿನ ಪಿಯುಸಿ ವಿದ್ಯಾರ್ಥಿನಿಯಾಗಿದ್ದು, ಚಧ್ರಿಕಾ(16) ಎಸ್ಸೆಸೆಲ್ಸಿ ವಿದ್ಯಾರ್ಥಿನಿ.ಬಸ್‌ನಲ್ಲಿ ಅಧಿಕ ಸಂಖ್ಯೆಯ ಪ್ರಯಾಣಿಕರು ಇದ್ದ ಕಾರಣ, ಓವರ್ ಲೋಡ್ ಆಗಿ ಈ ಘಟನೆ ನಡೆದಿತ್ತು.



ಬಸ್‌ನಿಂದ ಬಿದ್ದು ಗಾಯಗೊಂಡಿದ್ದ ವಿದ್ಯಾರ್ಥಿನಿ ಮಾ.31ರಂದು ನಡೆದ ಎಸ್ಸೆಸೆಲ್ಸಿಯ ತುಳು ಪರೀಕ್ಷೆಯನ್ನು ಬರೆದಿದ್ದರು.

ಮಾ.30 ರಂದು ನಡೆಯಬೇಕಿದ್ದ ಈ ಪರೀಕ್ಷೆ ಮಹಾವೀರ ಜಯಂತಿ ರಜೆ ಬದಲಾವಣೆ ಮಾಡಿದ ಕಾರಣ ಮಾ.31ಕ್ಕೆ ಮುಂದೂಡಲ್ಪಟ್ಟಿತ್ತು. ಗಾಯಗೊಂಡ ವಿದ್ಯಾರ್ಥಿನಿಯನ್ನು ಸ್ಕ್ಯಾನಿಂಗ್‌ಗಾಗಿ ಉಜಿರೆಯ ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ಬಳಿಕ ಪರೀಕ್ಷಾ ಕೇಂದ್ರಕ್ಕೆ ಕರೆತಂದು ಇಲಾಖೆಯ ನಿಯಮದಂತೆ ಈಕೆಯ ಉಪಸ್ಥಿತಿಯಲ್ಲಿ ಒಂಬತ್ತನೇ ತರಗತಿಯ ವಿದ್ಯಾರ್ಥಿನಿಯೊಬ್ಬಳ ಮೂಲಕ ತುಳು ಪರೀಕ್ಷೆ ಹಾಗೂ ಏ. 2ರಂದು ನಡೆದ ಸಮಾಜ ವಿಜ್ಞಾನ ಪರೀಕ್ಷೆ ಬರೆಯಲಾಗಿತ್ತು.

ಇದೀಗ ಈಕೆ ಒಟ್ಟು 541 ಅಂಕಗಳನ್ನು ಪಡೆದಿದ್ದು ತುಳು ಪರೀಕ್ಷೆಯಲ್ಲಿ, 100 ಹಾಗೂ ಸಮಾಜ ವಿಜ್ಞಾನ ಪರೀಕ್ಷೆಯಲ್ಲಿ 87 ಅಂಕಗಳನ್ನು ಪಡೆದಿದ್ದಾರೆ.

ತುಂಬೇಜಾ ಪಬ್ಲಿಸಿಟಿಯಿಂದ ಶಿಕ್ಷಣ ಮೇಳ

ಮಂಗಳೂರು: ನಗರದ ತುಂಬೇಜಾ ಪಬ್ಲಿಸಿಟಿ ವತಿಯಿಂದ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಮಾರ್ಗದರ್ಶನ ನೀಡುವ ಶಿಕ್ಷಣ ಮೇಳ ಎಜು ಕನೆಕ್ಟ್ ಎಕ್ಸ್ ಪೊ 2026 ಏ.27 ಮತ್ತು 28ರಂದು ಹಮ್ಮಿಕೊಳ್ಳಲಾಗಿದೆ.

ಎರಡು ದಿನಗಳ ಶಿಕ್ಷಣ ಮೇಳ ನಗರದ ಪಂಪ್‌ವೆಲ್ ಬಳಿಯ ಫಾದರ್ ಮುಲ್ಲರ್ಸ್ ಕನ್ವೆನ್ಷನ್ ಸೆಂಟರಿನಲ್ಲಿ ನಡೆಯಲಿದೆ. ವಿದ್ಯಾರ್ಥಿಗಳು, ಪೋಷಕರಿಗೆ ಉಚಿತ ಪ್ರವೇಶವಿದೆ. ಕ್ಯೂಆರ್ ಕೋಡ್ ಆಧರಿತ ನೋಂದಣಿ ವ್ಯವಸ್ಥೆ ಇರುತ್ತದೆ ಎಂದು ತುಂಬೇಜಾ ಪಬ್ಲಿಸಿಟಿಯ ಶಕೀಲ್ ತುಂಬೇಜಾ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿಯ ಬಳಿಕ ಯಾವ ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ಗೊಂದಲದಲ್ಲಿರುವ ವಿದ್ಯಾರ್ಥಿಗಳು, ಪೋಷಕರಿಗೆ ಇಲ್ಲಿ ಮಾರ್ಗದರ್ಶನ ಸಿಗಲಿದೆ. ಇದೇ ವೇಳೆ ಪ್ರಮುಖ ಪ್ರೇರಣಾ ಭಾಷಣಕಾರರಾಗಿ ಸಹ್ಲಾ ಪರವೀನ್ ಮತ್ತು ಡಾ.ರಾಹುಲ್ ದೇವರಾಜ್ ಅವರು ಪಾಲ್ಗೊಳ್ಳಲಿದ್ದಾರೆ ಎಂದರು.

ಪ್ರಮುಖರಾದ ಹರಿಕೃಷ್ಣ ಮೊಹಮ್ಮದ್ ಹುಸೈಫ್ ಉಪಸ್ಥಿತರಿದ್ದರು.

ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ

ಕರ್ನಾಟಕಕ್ಕೆ ಉಡುಪಿ ಪ್ರಥಮ; ಉಡುಪಿಗೆ 'ಜನತಾ' ಪ್ರಥಮ

ಕುಂದಾಪುರ: 2025 –26ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯು ಫಲಿತಾಂಶದಲ್ಲಿ ಕುಂದಾಪುರ ಭಾಗದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆ ಹೆಮ್ಮಾಡಿಯ ಜನತಾ ಪದವಿ ಪೂರ್ವ ಕಾಲೇಜು ಸತತ ನಾಲ್ಕನೇ ವರ್ಷವೂ ಉತ್ತಮ ಸಾಧನೆ ಮಾಡಿದೆ.

ರಶ್ಮಿ ಪೈ 598 (ವಿಜ್ಞಾನ ವಿಭಾಗ) ಅಂಕಗಳಿಸಿ ರಾಜ್ಯ ಮಟ್ಟದಲ್ಲಿ 2ನೇ ರ್‍ಯಾಂಕ್ , ಶ್ರಾವ್ಯ ದೇವಾಡಿಗ 597(ವಿಜ್ಞಾನ ವಿಭಾಗ) 3ನೇ ರ್‍ಯಾಂಕ್, ಶಮ್ಯ ಶೆಟ್ಟಿ 597(ವಾಣಿಜ್ಯ ವಿಭಾಗ)4ನೇ ರ್‍ಯಾಂಕ್, ಅಕ್ಷತಾ ವೀರಣ್ಣ596 (ವಿಜ್ಞಾನ ವಿಭಾಗ)4ನೇ ರ್‍ಯಾಂಕ್ , ಪ್ರಥಮ ಕಾಂಚನ್ 596(ವಾಣಿಜ್ಯ ವಿಭಾಗ)5ನೇ ರ್‍ಯಾಂಕ್, ಪ್ರಜ್ಞಾ ಎಸ್. ಪೂಜಾರಿ 594 (ವಿಜ್ಞಾನ ವಿಭಾಗ) 6ನೇ ರ್‍ಯಾಂಕ್, ಸುಚಿತ್ರ 595 (ವಾಣಿಜ್ಯ ವಿಭಾಗ) 6ನೇ ರ್‍ಯಾಂಕ್ , ಇಂಚರಾ ಅಶೋಕ್ 594 (ವಿಜ್ಞಾನ ವಿಭಾಗ) 6ನೇ ರ್‍ಯಾಂಕ್, ಅನ್ವಿತಾ 594 (ವಾಣಿಜ್ಯ ವಿಭಾಗ)7ನೇ ರ್‍ಯಾಂಕ್, ಸಾನಿಕಾ 593 (ವಾಣಿಜ್ಯ ವಿಭಾಗ) 8ನೇ ರ್‍ಯಾಂಕ್, ಮಾನ್ಯ 592 (ವಿಜ್ಞಾನ ವಿಭಾಗ) 8ನೇ ರ್‍ಯಾಂಕ್, ಕಲ್ಪಿತಾ 592 (ವಾಣಿಜ್ಯ ವಿಭಾಗ) 9ನೇ ರ್‍ಯಾಂಕ್, ಹಿರಣ್ಮಯ್ 592 (ವಾಣಿಜ್ಯ ವಿಭಾಗ) 9ನೇ ರ್‍ಯಾಂಕ್, ಪ್ರಸಾದ್ ಪೂಜಾರಿ 591 (ವಿಜ್ಞಾನ ವಿಭಾಗ) 9ನೇ ರ್‍ಯಾಂಕ್, ಪ್ರೀತನ್ 591 (ವಾಣಿಜ್ಯ ವಿಭಾಗ) 10 ನೇ ರ್‍ಯಾಂಕ್, ಸ್ಮೃತಿಕಾ 590 (ವಿಜ್ಞಾನ ವಿಭಾಗ) 10ನೇ ರ್‍ಯಾಂಕ್, ಧನ್ಯ ಬಿಲ್ಲವ 590 (ವಿಜ್ಞಾನ ವಿಭಾಗ) 10ನೇ ರ್‍ಯಾಂಕ್, ಪಡೆದು ರಾಜ್ಯ ಮಟ್ಟದಲ್ಲೇ ವಿಶೇಷ ಸಾಧನೆ ಮಾಡಿದ್ದಾರೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಈ ಸಾಧನೆ ಮೆಚ್ಚುಗೆಗೆ ಪಾತ್ರವಾಗಿದೆ.





ಏ. 28, 29: ಅಂತಾರಾಷ್ಟ್ರೀಯ ಮಾಧ್ಯಮ ಸಮಾವೇಶ

ಮಂಗಳೂರು: ನಿಟ್ಟೆ ವಿಶ್ವವಿದ್ಯಾಲಯದ ಅಂಗಸಂಸ್ಥೆಯಾದ ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಷನ್ ವತಿಯಿಂದ ಜಾಗತಿಕ ಸಂಘರ್ಷ ಮತ್ತು ಜವಾಬ್ದಾರಿ ಕುರಿತು ಎರಡು ದಿನಗಳ ಅಂತಾರಾಷ್ಟ್ರೀಯ ಮಾಧ್ಯಮ ಸಮಾವೇಶ ಏ. 28 ಮತ್ತು 29 ರಂದು ಮಂಗಳೂರಿನ ಪನೀರ್ ಕ್ಯಾಂಪಸ್‌ನಲ್ಲಿರುವ ವಿಶ್ವವಿದ್ಯಾಲಯ ಸಭಾಂಗಣದಲ್ಲಿ ನಡೆಯಲಿದೆ.

'ಪ್ರಚಾರದಿಂದ ಶಾಂತಿಯವರೆಗೆ: ಜಾಗತಿಕ ಸಂಘರ್ಷಗಳಲ್ಲಿ ಮಾಧ್ಯಮದ ಜವಾಬ್ದಾರಿಯ ಮರುಚಿಂತನೆ' ಎಂಬ ವಿಷಯದ ಅಡಿಯಲ್ಲಿ ಈ ಸಮಾವೇಶ ನಡೆಯಲಿದ್ದು, ಏ.28ರಂದು ಬೆಳಗ್ಗೆ 9ಕ್ಕೆ 'ದಿ ನ್ಯೂಸ್ ಮಿನಿಟ್' ಡಿಜಿಟಲ್ ಮಾಧ್ಯಮದ ಸಹ-ಸ್ಥಾಪಕಿ ಮತ್ತು ಮುಖ್ಯ ಸಂಪಾದಕಿ ಧನ್ಯಾ ರಾಜೇಂದ್ರನ್ ಸಮಾವೇಶವನ್ನು ಉದ್ಘಾಟಿಸಲಿದ್ದಾರೆ. ನಿಟ್ಟೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ. ಎಸ್. ಮೂಡಿತ್ತಾಯ ಭಾಗವಹಿಸಲಿದ್ದಾರೆ. ಅಮೆರಿಕದ ಕಾನ್ಸಾಸ್ ಸ್ಟೇಟ್ ಯೂನಿವರ್ಸಿಟಿಯ ಎ. ಕ್ಯೂ. ಮಿಲ್ಲರ್ ಸ್ಕೂಲ್ ಆಫ್ ಮೀಡಿಯಾ ಅಂಡ್ ಕಮ್ಯುನಿಕೇಷನ್‌ನ ಮಾಜಿ ನಿರ್ದೇಶಕ ಮತ್ತು ಸಹ ಪ್ರಾಧ್ಯಾಪಕ ಡಾ. ನಿಖಿಲ್ ಮೊರೊ ದಿಕ್ಸೂಚಿ ಭಾಷಣ ಮಾಡಲಿದ್ದಾರೆ ಎಂದು ನಿಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಷನ್ ಮುಖ್ಯಸ್ಥೆ ಹಾಗೂ ಸಹ ಪ್ರಾಧ್ಯಾಪಕಿ ಡಾ. ಮೌಲ್ಯಾ ಬಾಲಾಡಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೊದಲ ದಿನ ಎರಡು ಪ್ಯಾನಲ್ ಚರ್ಚೆಗಳು, ಪೋಸ್ಟರ್ ಪ್ರೆಸೆಂಟೇಶನ್ ಮತ್ತು ಸಂಜೆ 5.30 ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಏ.29ರಂದು ಬೆಳಿಗ್ಗೆ 9.30ರಿಂದ ಮೂರನೇ ಪ್ಯಾನಲ್ ಚರ್ಚೆ, ಮಾಧ್ಯಮ ಕಾರ್ಯಾಗಾರ ಮತ್ತು ಮಧ್ಯಾಹ್ನ 3ಕ್ಕೆ ಪ್ರಶಸ್ತಿ ಪ್ರದಾನ, ಸಮಾರೋಪ ಸಮಾರಂಭ ನಡೆಯಲಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಯನಿರತ ಪತ್ರಕರ್ತರಿಗಾಗಿ ಏ. 29ರಂದು ಸಂಘರ್ಷದ ವರದಿಗಾರಿಕೆಯಲ್ಲಿ ತಪ್ಪು ಮಾಹಿತಿ, ಡೀಪ್ ಫೇಕ್‌ಗಳು ಮತ್ತು ಸುಳ್ಳು ಸುದ್ದಿಗಳನ್ನು ಅರ್ಥಮಾಡಿಕೊಳ್ಳುವುದು – ವಿಚಾರ ಕುರಿತು ಮಾಧ್ಯಮ ಕಾರ್ಯಾಗಾರವನ್ನು ಡೇಟಾ ಲೀಡ್ಸ್ ಅಕಾಡೆಮಿಯ ಎಐ ಫಾರ್ ಡಿಜಿಟಲ್ ರೆಡಿನೆಸ್ ಅಂಡ್ ಅಡ್ವಾನ್ಸ್ ಮೆಂಟ್ ಜೊತೆಗೂಡಿ ಹಮ್ಮಿಕೊಳ್ಳಲಾಗಿದೆ. ಸ್ವತಂತ್ರ ಪತ್ರಕರ್ತ ಎಸ್. ಕುಮಾರ್ ಕಾರ್ಯಾಗಾರ ನಡೆಸಿಕೊಡಲಿದ್ದಾರೆ ಎಂದರು.

ಏ.29ರಂದು ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭದಲ್ಲಿ ನಿಟ್ಟೆ ವಿವಿ ಉಪಕುಲಸಚಿವೆ ಡಾ. ಸುಮಾ ಬಲ್ಲಾಳ್, ಸ್ವತಂತ್ರ ಪತ್ರಕರ್ತೆ ಸ್ವಾನಿ ಕರ್ವಾಲೊ ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಚಿದಂಬರ ಬೈಕಂಪಾಡಿ ಅವರಿಗೆ ಮಾಧ್ಯಮ ಶ್ರೇಷ್ಠತಾ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ ಎಂದು ವಿವರಿಸಿದರು.

ಸಹ ಪ್ರಾಧ್ಯಾಪಕರಾದ ಡಾ. ಅನಿಶ, ಡಾ. ನೇಸರ ಕಾಡನಕುಪ್ಪೆ ಹಾಗೂ ಜಯಂತ್ ಕೊಡ್ಕಾಣಿ ಉಪಸ್ಥಿತರಿದ್ದರು.

ಪ್ರಾರ್ಥನಾ ಕ್ರಿಯೇಷನ್ಸ್ ಲಾಂಛನದ 'ಕೊರಗ್ಲಾ ತನಿಯಾ', 'ಕನ' ತುಳು ಸಿನಿಮಾಗೆ ಮುಹೂರ್ತ

ಸಂಸ್ಕೃತಿ ಪರಿಚಯಿಸುವ ಸಿನಿಮಾ ಸರ್ಕಾರ ಗುರುತಿಸಲಿ: ತಲ್ವಾರ್

ಮಂಗಳೂರು: ಪ್ರಾರ್ಥನಾ ಕ್ರಿಯೇಷನ್ಸ್ ಲಾಂಛನದಲ್ಲಿ ಡಾ. ಆರ್. ಧನರಾಜ್ ನಿರ್ಮಾಣದೊಂದಿಗೆ ನಿರ್ದೇಶಿಸುತ್ತಿರುವ 'ಕೊರಗ್ಲಾ ತನಿಯಾ' ಮತ್ತು 'ಕನ' ತುಳು ಚಿತ್ರಗಳ ಮುಹೂರ್ತ ಸಮಾರಂಭ ಕದ್ರಿ ಶ್ರೀ ಮಂಜುನಾಥೇಶ್ವರ ದೇವಸ್ಥಾನದ ನೆರವೇರಿತು.

'ಕೊರಗ್ಲಾ ತನಿಯ' ಸಿನಿಮಾಕ್ಕೆ ಶಾಸಕ ಸಿ. ಬಿ. ಸುರೇಶ್ ಕ್ಯಾಮರಾ ಚಾಲನೆಗೈದರು. ಕದ್ರಿ ದೇವಸ್ಥಾನದ ಆಡಳಿತ ನಿರ್ದೇಶಕ ಎ. ಜೆ. ಶೆಟ್ಟಿ ಕ್ಲ್ಯಾಪ್ ಮಾಡಿದರು. 'ಕನ' ಸಿನಿಮಾಕ್ಕೆ ವಿಜಯಕುಮಾರ್ ಕೊಡಿಯಾಲ್‌ಬೈಲ್ ಕ್ಯಾಮರಾ ಚಾಲನೆ ನೀಡಿದರು. ನಟ ಸುಮನ್ ತಲ್ವಾರ್ ಆರಂಭಫಲಕ ತೋರಿಸಿದರು.

ನಟ ಸುಮನ್ ತಲ್ವಾರ್ ಮಾತನಾಡಿ, ಭಾಷೆ, ಸಂಪ್ರದಾಯ ಮತ್ತು ಸಂಸ್ಕೃತಿ ಜಗತ್ತಿಗೆ ಪರಿಚಯಿಸುವ ಸಿನಿಮಾಗಳಿಗೆ ಸರ್ಕಾರವು ಸಬ್ಸಿಡಿ ಮತ್ತು ತೆರಿಗೆ ವಿನಾಯಿತಿ ನೀಡಬೇಕು. ಆಗ ಮಾತ್ರ ಹೆಚ್ಚಿನ ನಿರ್ಮಾಪಕರು ಇಂತಹ ಕಥೆಗಳನ್ನು ತೆರೆಯ ಮೇಲೆ ತರಲು ಮುಂದೆ ಬರುತ್ತಾರೆ ಎಂದರು.

ಜೆಡಿಎಸ್ ಮುಖಂಡ ಹಾಗೂ ಚಿಕ್ಕನಾಯಕನಹಳ್ಳಿ ಶಾಸಕ ಸುರೇಶ್ ಬಾಬು ಅವರು ದೀಪ ಬೆಳಗಿಸಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ನಿರ್ದೇಶಕ ಆರ್ ಧನರಾಜ್ ಅವರು ಈಗಾಗಲೇ ರಾಷ್ಟ್ರಪ್ರಶಸ್ತಿ ವಿಜೇತ ಸಿನಿಮಾ ನೀಡಿರುವ ಪ್ರತಿಭಾವಂತರು. ಈ 'ಕೊರಗ್ಲಾ ತನಿಯಾ' ಚಿತ್ರವೂ ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಳ್ಳಲಿ ಎಂದರು.




ನಿರ್ದೇಶಕ ವಿಜಯಕುಮಾರ್ ಕೊಡಿಯಾಲ್ ಬೈಲ್ ಮಾತನಾಡಿ, ತುಳು ಚಿತ್ರರಂಗ ಈಗ ಸಂಕಷ್ಟದಲ್ಲಿದೆ. ಧನರಾಜ್ ಸಿನಿಮಾ ನಿರ್ಮಿಸಿ ಎರಡೂ ಸಿನಿಮಾಗಳು ಮೈಲುಗಲ್ಲು ಸ್ಥಾಪಿಸಲಿ ಎಂದರು.

ಚಿತ್ರದ ನಿರ್ದೇಶಕ ಹಾಗೂ ನಿರ್ಮಾಪಕ ಡಾ. ಆರ್. ಧನರಾಜ್ ಮಾತನಾಡಿ, ಈ ಚಿತ್ರಗಳು ಆರು ಭಾಷೆಗಳಲ್ಲಿ ಮೂಡಿಬರಲಿದ್ದು, ಉತ್ತಮ ಕಥೆ ಮತ್ತು ಸಂದೇಶವನ್ನು ಹೊಂದಿವೆ. ತುಳುನಾಡಿನ ಸಂಪ್ರದಾಯವನ್ನು ವಿಶ್ವದಾದ್ಯಂತ ಪಸರಿಸುವ ಈ ಪ್ರಯತ್ನಕ್ಕೆ ಎಲ್ಲರ ಸಹಕಾರ ಅಗತ್ಯ ಎಂದರು.

ಕಾರ್ಯಕ್ರಮದಲ್ಲಿ ದ.ಕ. ಜಿಲ್ಲಾ ಜಾನಪದ ಪರಿಷತ್ ನ ಅಧ್ಯಕ್ಷ ಪಮ್ಮಿ ಕೊಡಿಯಾಲ್‌ಬೈಲ್, ವಕೀಲ ಮೋಹನ್ ದಾಸ್ ರೈ, ಸುಧಾಕರ್ ಮೊಯಿಲಿ, ಹಿರಿಯ ಪತ್ರಕರ್ತ ಜಗನ್ನಾಥ ಶೆಟ್ಟಿ ಬಾಳ, ಧನರಾಜ್ ಅವರ ಮಾತೃಶ್ರೀ ಕೆ. ಪುಷ್ಪಾ, ಅರ್ಚನ ಶೆಟ್ಟಿ, ನಾಗೇಶ್ ಶೆಟ್ಟಿ ಮುಂಬೈ, ಅನಿಲ್, ರಾಮಣ್ಣ, ಸಂಜೀವ ಮಾಸ್ಟರ್, ಪುರುಷೋತ್ತಮ್, ರಾಜೇಶ್ ಕೊಟ್ಟಿನ್, ಜೆಪಿ, ಗಂಗಾಧರ ಕಿರೋಡಿಯನ್, ಯುವನಟ ಸಾಚನ್ ಶೆಟ್ಟಿ, ಯುವನಟಿ ಹಿಮಾನಿ, ನಾಗೇಶ್ ಮತ್ತಿತರರಿದ್ದರು. ಆಂಕರ್ ಚೇತನ್ ಶೆಟ್ಟ ಕಾರ್ಯಕ್ರಮ ನಿರೂಪಿಸಿದರು.

ಕೊರಗ್ಲಾ ತನಿಯಾ

ಬಹುಭಾಷಾ 'ಕೊರಗ್ಲಾ ತನಿಯಾ' ಸಿನಿಮಾಕ್ಕೆ ಡಾ ಆರ್ ಧನರಾಜ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ಮಾಣದೊಂದಿಗೆ ನಿರ್ದೇಶನ ಮಾಡಲಿದ್ದಾರೆ. 'ಕನ' ತುಳು ಸಿನಿಮಾಕ್ಕೆ ವಿಶ್ವನಾಥ್ ಕೋಡಿಕಲ್ ಕಥೆ ಚಿತ್ರಕಥೆ ಸಂಭಾಷಣೆ ಬರೆದು ನಿರ್ದೇಶಿಸಲಿದ್ದಾರೆ. ಅರ್ಚನ ಶೆಟ್ಟಿ ಎರಡೂ ಸಿನಿಮಾಗಳ ಸಹ ನಿರ್ಮಾಪಕಿಯಾಗಿದ್ದಾರೆ.



ಐಪಿಎಲ್–2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	6	5	0	1	11	+1.420
ಆರ್‌ಸಿಬಿ	7	5	2	0	10	+1.101
ರಾಜಸ್ಥಾನ್	7	5	2	0	10	+0.790
ಹೈದರಾಬಾದ್	7	4	3	0	8	+0.820
ಚೆನ್ನೈ	7	3	4	0	6	+0.118
ಡೆಲ್ಲಿ	6	3	3	0	6	-0.130
ಗುಜರಾತ್	7	3	4	0	6	-0.790
ಮುಂಬೈ	7	2	5	0	4	-0.736
ಲಖನೌ	7	2	5	0	4	-1.177
ಕೆಕೆಆರ್	7	1	5	1	3	-0.879

ಆರ್‌ಸಿಬಿಗೆ ಐದು ವಿಕೆಟ್ ಭರ್ಜರಿ ಗೆಲುವು | ಪಡಿಕ್ಕಲ್ ಅಬ್ಬರ | ಸಾಯಿ ಸುದರ್ಶನ್ ಹೋರಾಟ ವ್ಯರ್ಥ

ಕಿಂಗ್ ಕೊಹ್ಲಿ ಅಬ್ಬರಕ್ಕೆ ನಲುಗಿದ ಗುಜರಾತ್

ಬೆಂಗಳೂರು: ಆರ್‌ಸಿಬಿ ತಂಡದ ಪ್ರಮುಖ ಬ್ಯಾಟರ್ ವಿರಾಟ್ ಕೊಹ್ಲಿ ತಮಗಿರುವ ಚೇಸ್ ಮಾಸ್ಟರ್ ಹೆಗ್ಗಳಿಕೆ ತಕ್ಕಂತೆ ಬ್ಯಾಟಿಂಗ್ ಮಾಡಿದ್ದು, ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಆರ್‌ಸಿಬಿ 5 ವಿಕೆಟ್‌ಗಳಿಂದ ಜಯಿಸಿತು.

ಬೆಂಗಳೂರಲ್ಲಿ ನಡೆದ ಪಂದ್ಯದಲ್ಲಿ ಬ್ಯಾಟಿಂಗ್ ಗಿಳಿದ ಗುಜರಾತ್ 20 ಓವರ್‌ಗಳಲ್ಲಿ 205 ರನ್ ಗಳಿಸಿತು. ಸಾಯಿ ಸುದರ್ಶನ್ 100 ರನ್ ಬಾರಿಸಿದರು. ಗುರಿ ಬೆನ್ನತ್ತಿದ ಆರ್‌ಸಿಬಿ 18.5 ಓವರ್‌ಗಳಲ್ಲಿ 206 ರನ್‌ಗಳಿಸಿ ಗುರಿ ಪೇರಿಸಿತು. ಕೊಹ್ಲಿ(81), ಪಡಿಕ್ಕಲ್ (55) ಅಬ್ಬರಿಸಿದರು. ಕೃಣಾಲ್ ಜಯದ ಹಾದಿ ತೋರಿಸಿದರು.

ಸಾಯಿ ಸುದರ್ಶನ್ ಆಡಿದ್ದೇ ಆಟ: ಟಾಸ್ ಸೋತು ಬ್ಯಾಟಿಂಗ್‌ಗಿಳಿದ ಗುಜರಾತ್ ಟೈಟಾನ್ಸ್ ಸಾಯಿ ಸುದರ್ಶನ್ ಅವರ ಆಟದ ಆಸರೆ ಪಡೆಯಿತು. ಕಳೆದ ಪಂದ್ಯಗಳಲ್ಲಿ ಬೇಗನೇ ವಿಕೆಟ್ ಕೊಟ್ಟಿದ್ದ ಅವರು, ಈ ಬಾರಿ ಸ್ಪಷ್ಟ ಬ್ಯಾಟಿಂಗ್ ಮಾಡಿದರು. ಮೊದಲಿನ ಓವರ್‌ಗಳಲ್ಲೇ ತಮ್ಮ ಕರಾರುವಾಕ್ ಹೊಡೆತಗಳ ಮೂಲಕ ಆರ್‌ಸಿಬಿಯ ಬಲಿಷ್ಠ ಬೌಲಿಂಗ್ ಪಡೆಯನ್ನು ದಂಡಿಸಿದರು. ಅತ್ತ ಶುಭಮನ್ ಗಿಲ್ ಸಿಂಗಲ್‌ಗಳೊಂದಿಗೆ ಸುದರ್ಶನ್‌ಗೆ ಸಾಥ್ ಕೊಟ್ಟರು. ಪವರ್‌ಪ್ಲೇನಲ್ಲಿ ಪ್ರಮುಖ ಆಟಗಾರರನ್ನು ದಂಡಿಸಿದ ಗುಜರಾತ್ ಪವರ್‌ಪ್ಲೇನಲ್ಲಿ ಯಾವುದೇ ವಿಕೆಟ್ ಕಳೆದುಕೊಳ್ಳದೆ 57 ರನ್‌ಗಳಿಸಿತು. ಅದರಲ್ಲಿ ಸುದರ್ಶನ್ 40 ರನ್ ಗಳಿಸಿದ್ದರು.

ಸೆಟ್ ಆದ ಸುದರ್ಶನ್ ಮಧ್ಯಮ ಓವರ್ ಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 33 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದ ನಂತರ ಅವರ ಆಟ ಇನ್ನಷ್ಟು ತೀವ್ರತೆ ಪಡೆಯಿತು. ಇತ್ತ ಗಿಲ್ ಕೂಡ ಆಕರ್ಷಕ ಸಿಕ್ಸರ್‌ಗಳನ್ನು ಬಾರಿಸಿದರು. ಗಿಲ್ ಹಾಗೂ ಸುದರ್ಶನ್ 128 ರನ್‌ಗಳ ಜೊತೆಯಾಟ ನಿರ್ಮಿಸಿದರು. ಇದರಲ್ಲಿ 80 ರನ್ ಸುದರ್ಶನ್ ಅವರದ್ದೇ ಇತ್ತು. ಗಿಲ್ 24 ಬಾಲ್‌ಗಳಲ್ಲಿ 32 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಸುದರ್ಶನ್ ಶತಕ: ಸಾಯಿ ಸುದರ್ಶನ್ 57 ಬಾಲ್‌ಗಳಲ್ಲಿ ಶತಕ ಪೂರೈಸಿಕೊಂಡರು. ಇದು ಅವರ ನಾಲ್ಕನೇ ಶತಕವಾಗಿದೆ. 11 ಸ್ಫೋಟಕ ಬೌಂಡರಿಗಳನ್ನು ಬಾರಿಸಿದ ಅವರು, 5 ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಿದರು. ಇತ್ತ ಬರುತ್ತಲೇ ಬಟ್ಲರ್ ಅಬ್ಬರದ ಬ್ಯಾಟಿಂಗ್ ಮಾಡಿದರು. 26 ರನ್‌ಗೆ ಅವರು ವಿಕೆಟ್ ಒಪ್ಪಿಸಿದರು. 100 ರನ್ ಮಾಡಿದ್ದ ಸುದರ್ಶನ್ ಕೂಡ ಕ್ಯಾಚ್ ಆದರು. ಮಧ್ಯಮ ಓವರ್‌ಗಳಲ್ಲಿ ಗುಜರಾತ್ 113 ರನ್ ಗಳಿಸಿತು.

ಡೆತ್ ಓವರ್‌ನಲ್ಲಿ ಕಡಿವಾಣ: ಬೆಂಗಳೂರು ಅಂತಿಮ ಓವರ್‌ಗಳಲ್ಲಿ ಕಡಿವಾಣ ಹಾಕಿತು. ವಿಕೆಟ್ ಪಡೆಯದಿದ್ದರೂ ರನ್ ವೇಗಕ್ಕೆ ತಡೆಯೊಡ್ಡಿತು. ಹ್ಯಾಜೆಲ್ವುಡ್, ಭುವನೇಶ್ವರ್ ಮತ್ತು ರಸಿಖ್ ಈ ಓವರ್‌ಗಳಲ್ಲಿ ಹೆಚ್ಚಿನ ರನ್ ಬಿಟ್ಟುಕೊಟ್ಟಿರಲಿಲ್ಲ. ಆದರೆ ಅಂತಿಮ ಓವರ್‌ನಲ್ಲಿ ಹೋಲ್ಡರ್ ಸ್ಫೋಟಕ ಸಿಕ್ಸರ್‌ಗಳನ್ನು ಬಾರಿಸಿದರು. ಕೃಣಾಲ್ ಪಾಂಡ್ಯ ಮಾಡಿದ ಕೊನೆಯ ಓವರ್‌ನಲ್ಲಿ 2 ಸಿಕ್ಸರ್ ಹಾಗೂ ಬೌಂಡರಿ ಬಾರಿಸಿದ ಹೋಲ್ಡರ್ ತಂಡದ ಸ್ಕೋರ್ ಅನ್ನು 205 ಕ್ಕೆ ಕೊಂಡೊಯ್ದರು.

ಚಿತ್ರ: ಮೋಹನ್ ಕುಮಾರ್ ಬಿ.ಎನ್



ಸಂಕ್ಷಿಪ್ತ ಸ್ಕೋರ್

ಗುಜರಾತ್ ಟೈಟಾನ್ಸ್ 205/3(20): ಸುದರ್ಶನ್ 100(58), ಗಿಲ್ 32(24), ಬಟ್ಲರ್ 25(16), ಹೋಲ್ಡರ್ 23(10)★, ಸುಂದರ್ 19(12) ಭುವಿ 31ಕ್ಕೆ 1, ಹ್ಯಾಜೆಲ್ವುಡ್ 40ಕ್ಕೆ 1, ಸುಯಷ್ 36ಕ್ಕೆ 1.

ಆರ್‌ಸಿಬಿ 206/5(18.5): ಕೊಹ್ಲಿ 81(44), ಪಡಿಕ್ಕಲ್ 55(27), ಕೃಣಾಲ್ 23(12)★, ಡೇವಿಡ್ 10(9)★ ರಶೀದ್ 49ಕ್ಕೆ 2, ಮಾನವ್ 19ಕ್ಕೆ 1, ಸಿರಾಜ್ 25ಕ್ಕೆ 1, ಹೋಲ್ಡರ್ 35ಕ್ಕೆ 1.

ಕೊಹ್ಲಿ ಆರ್ಭಟ

ಗುರಿ ಬೆನ್ನತ್ತಿದ ಆರ್‌ಸಿಬಿಗೆ ಕೊಹ್ಲಿ ಆಸರೆ ಸಿಕ್ಕಿತು. ಗಾಯಾಳು ಸಾಲ್ಟ್ ಬದಲಿಗೆ ಬ್ಯಾಟಿಂಗ್‌ಗಿಳಿದ ಜಾಕೋಬ್ ಬ್ಯಾಥಲ್ 14 ರನ್ ಗಳಿಸಿ ಕ್ಯಾಚಿತ್ತರು. ಮೂರನೇ ಕ್ರಮಾಂಕದಲ್ಲಿ ಬಂದ ಪಡಿಕ್ಕಲ್ ಬರುತ್ತಿದ್ದಂತೆ ಆಕ್ರಮಣಕಾರಿ ಬ್ಯಾಟಿಂಗ್ ಶುರು ಮಾಡಿದರು. ಇತ್ತ ಕಿಂಗ್ ಕೊಹ್ಲಿ ಕೂಡ ಸೊಗಸಾದ ಬೌಂಡರಿ ಮತ್ತು ಅಬ್ಬರದ ಸಿಕ್ಸರ್‌ಗಳೊಂದಿಗೆ ಮಿಂಚಿದರು. ಪವರ್‌ಪ್ಲೇ ಮುಗಿಸುವಷ್ಟರಲ್ಲಿ ಪಡಿಕ್ಕಲ್ ಆಕ್ರಮಣಕಾರಿ ಬ್ಯಾಟಿಂಗ್ ನೊಂದಿಗೆ ಪಂದ್ಯದ ಗತಿ ಬದಲಾಯಿಸಿದರು. 6 ಓವರ್‌ಗಳಲ್ಲಿ ಆರ್‌ಸಿಬಿ 58 ರನ್ ಗಳಿಸಿದರು. ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡ ಕೊಹ್ಲಿ ಕೂಡ ಗುಜರಾತ್ ಪಡೆಯನ್ನು ದಂಡಿಸಲಾರಂಭಿಸಿದರು. 20 ಬಾಲ್‌ಗಳಲ್ಲಿ ಪಡಿಕ್ಕಲ್, 30 ಬಾಲ್‌ಗಳಲ್ಲಿ ಕೊಹ್ಲಿ ಅರ್ಧ ಶತಕ ಬಾರಿಸಿದರು. ಈಗ ಆರ್‌ಸಿಬಿಗೆ ಮುನ್ನಡೆ. 13ನೇ ಓವರ್‌ವರೆಗೂ ಅಬ್ಬರದ ಬ್ಯಾಟಿಂಗ್ ಮಾಡಿದ ಪಡಿಕ್ಕಲ್ 27 ಬಾಲ್‌ಗಳಲ್ಲಿ 55 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಇತ್ತ ಪಡಿಕ್ಕಲ್ ವಿಕೆಟ್ ಬಿದ್ದ ನಂತರ ಕೊಹ್ಲಿ ಇನ್ನಷ್ಟು ಆಕ್ರಮಣಕಾರಿ ಬ್ಯಾಟಿಂಗ್ ಮಾಡಿದರು. ಹೋಲ್ಡರ್ ಬಾಲಿಗೆ ಸತತ ಎರಡು ಸಿಕ್ಸರ್ ಬಾರಿಸಿದ ಅವರು, ಮುಂದಿನ ಬಾಲ್‌ನಲ್ಲಿ ಬೋಲ್ಡ್ ಆದರು. ಕೊಹ್ಲಿ 44 ಬಾಲ್‌ಗಳಲ್ಲಿ 81 ರನ್ ಗಳಿಸಿದರು. ಆರ್‌ಸಿಬಿಯತ್ತ ಸಾಗುತ್ತಿದ್ದ ಪಂದ್ಯ ಕೊಹ್ಲಿ ವಿಕೆಟ್ ಬಿದ್ದ ನಂತರ ತಿರುವು ಪಡೆಯಿತು. ಆದರೆ ನಾಯಕ ಪಾಟಿದಾರ್ ಹಾಗೂ ಜಿತೇಶ್ ಶರ್ಮ ಬರುತ್ತಿದ್ದಂತೆ ಯಾವುದೇ ಮುಲಾಜಿಗೆ ಬೀಳದೆ ಸಿಕ್ಸರ್‌ಗಳೊಂದಿಗೆ ಡೀಲ್ ಮಾಡತೊಡಗಿದರು. ಆದರೆ ಜಿತೇಶ್ ಔಟಾದರು. ಅವರ ಹಿಂದೆ ಪಾಟಿದಾರ್ ಕೂಡ ಔಟಾದರು. ಬೇಕಾದ ರನ್‌ಗಳನ್ನು ಕೃಣಾಲ್(23★) ಮತ್ತು ಡೇವಿಡ್ ಬಾರಿಸಿ ಗೆಲ್ಲಿಸಿದರು.

ಕಿರುಸುದ್ದಿ

ಇಂಡಿಯನ್ ಸೂಪರ್ ಲೀಗ್: ಬೆಂಗಳೂರು–ಮುಂಬೈ ಪಂದ್ಯ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ ಈಗ 10ನೇ ವಾರಕ್ಕೆ ಕಾಲಿಟ್ಟಿದ್ದು, ಬೆಂಗಳೂರು ಎಫ್‌ಸಿ ತಂಡವು ಈ ಸೀಸನ್‌ನ ತನ್ನ ಕೊನೆಯ ತವರಿನ ಪಂದ್ಯಕ್ಕೆ ಸಜ್ಜಾಗಿದೆ. ಶನಿವಾರ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯದಲ್ಲಿ ಪ್ರಬಲ ಮುಂಬೈ ಸಿಟಿ ಎಫ್‌ಸಿ ತಂಡವನ್ನು 'ಬ್ಲೂಸ್' ಎದುರಿಸಲಿದೆ. ಕಳೆದ ವಾರ ಕೋಲ್ಕತ್ತಾದಲ್ಲಿ ಈಸ್ಟ್ ಬೆಂಗಾಲ್ ವಿರುದ್ಧ ನಡೆದ ರೋಚಕ ಪಂದ್ಯದಲ್ಲಿ ಅಂಟನ್ ಸೋಜ್‌ಬರ್ಗ್ ಬಾರಿಸಿದ ಕೊನೆಯ ಕ್ಷಣದ ಗೋಲಿನಿಂದಾಗಿ ಬೆಂಗಳೂರು ತಂಡ 3–3 ಅಂತರದ ಡ್ರಾ ಸಾಧಿಸಿತ್ತು. ಇತ್ತ ಮುಂಬೈ ಸಿಟಿ ತಂಡದ ಎಂಟು ಪಂದ್ಯಗಳ ಅಜೇಯ ಓಟಕ್ಕೆ ಎಫ್‌ಸಿ ಗೋವಾ ಬ್ರೇಕ್ ಹಾಕಿದ್ದು, ಕಳೆದ ಪಂದ್ಯದಲ್ಲಿ ಮುಂಬೈ 0–2 ಅಂತರದ ಸೋಲು ಕಂಡಿದೆ. ಬೆಂಗಳೂರು ತಂಡದ ಹೊಸ ಕೋಚ್ ಪಿವ್ ಮುನೋಜ್ ಅವರಿಗೆ ಐಎಸ್‌ಎಲ್ ಆರಂಭವು ಅಂದುಕೊಂಡಷ್ಟು ಸುಲಭವಾಗಿಲ್ಲ. ಉಸ್ತುವಾರಿ ವಹಿಸಿದ ಎರಡು ಪಂದ್ಯಗಳಲ್ಲಿ ಒಂದು ಡ್ರಾ ಮತ್ತು ಒಂದು ಸೋಲು ಕಂಡಿರುವ ಅವರು, ಶನಿವಾರ ಪೀಟರ್ ಕ್ರಾಟ್ಕಿ ಅವರ ತಂಡದ ವಿರುದ್ಧ ಪೂರ್ಣ ಅಂಕಗಳನ್ನು ಗಳಿಸುವ ಗುರಿ ಹೊಂದಿದ್ದಾರೆ.



ನಾವು ಅಂಕಪಟ್ಟಿಯಲ್ಲಿ ನಮಗಿಂತ ಮೇಲಿರುವ ತಂಡದ ವಿರುದ್ಧ ಆಡುತ್ತಿದ್ದೇವೆ, ಹೀಗಾಗಿ ನಾಳೆಯ ಪಂದ್ಯ ಎರಡೂ ತಂಡಗಳಿಗೆ ಅತ್ಯಂತ ನಿರ್ಣಾಯಕವಾಗಿದೆ. ಶ್ರದ್ಧೆಯಿಂದ ಅಭ್ಯಾಸ ಮಾಡುತ್ತಿರುವ ನಮ್ಮ ಯುವ ಆಟಗಾರರು ತಮ್ಮ ಸಾಮರ್ಥ್ಯವನ್ನು ಮೈದಾನದಲ್ಲಿ ಪ್ರದರ್ಶಿಸುವುದನ್ನು ನೋಡಲು ಕಾಯುತ್ತಿದ್ದೇನೆ ಎಂದು ಮುನೋಜ್ ಹೇಳಿದ್ದಾರೆ. ಶನಿವಾರದ ಪಂದ್ಯದಲ್ಲಿ ಬೆಂಗಳೂರು ತಂಡ ಜಯಗಳಿಸಿದರೆ ಮತ್ತು ಇತರ ಫಲಿತಾಂಶಗಳು ಪೂರಕವಾಗಿದ್ದರೆ, ತಂಡವು ಅಂಕಪಟ್ಟಿಯಲ್ಲಿ ನೇರವಾಗಿ ಎರಡನೇ ಸ್ಥಾನಕ್ಕೆ ಏರಲಿದೆ.

ಸಾರಾ–ಹಾರ್ಬರ್ಟ್‌ಗೆ ಪ್ರಶಸ್ತಿ ವಿಶ್ವಾಸ

ಬೆಂಗಳೂರು: ಕಳೆದ ವರ್ಷಕ್ಕೆ ಹೋಲಿಸಿದರೆ ಸದೃಢನಾಗಿದ್ದೇನೆ. ಬೆನ್ನು ನೋವಿನ ಹೊರತಾಗಿಯೂ ನಾನು 10–ಕೆ ಬೆಂಗಳೂರು ಓಪನ್ ಗೆದ್ದಿದ್ದೇನೆ. ನಾನು ವೇಗವಾಗಿ ಚೇತರಿಸಿಕೊಂಡಿದ್ದೇನೆ ಮತ್ತು ನನ್ನ ಪ್ರಶಸ್ತಿಯನ್ನು ಉಳಿಸಿಕೊಳ್ಳಲು ಉತ್ತಮ ಸಮಯದಲ್ಲಿ ಪೂರ್ಣಗೊಳಿಸಲು ಸಿದ್ಧನಾಗಿದ್ದೇನೆ ಎಂದು ಹಾಲಿ ಚಾಂಪಿಯನ್ ಸಾರಾ ಚೆಲಂಗಟ್ ಸಾಂಪ್ರದಾಯಿಕ ಪೂರ್ವ–ರೇಸ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ರೋಡ್ ರೇಸ್ ಟಿಸಿಎಸ್ ವರ್ಲ್ಡ್ 10 ಕೆ ಯ ಮುಂಬರುವ ಆವೃತ್ತಿಯಲ್ಲಿ ಹಾಲಿ ಚಾಂಪಿಯನ್ ಸಾರಾ ಚೆಲಂಗಟ್ ಮತ್ತು ಅವರ ತಂಡದ ಸಹ ಓಟಗಾರ್ತಿ ಹಾರ್ಬರ್ಟ್ ಕಿಬೆಟ್ ಅವರು ಭಾನುವಾರ (ಏಪ್ರಿಲ್ 26) ಉಗಾಂಡಾದ ಡಬಲ್ ಪೋಡಿಯಂ ಸ್ಥಾನ ಪಡೆಯುವ ಬಗ್ಗೆ ಆಶಾವಾದಿಯಾಗಿದ್ದಾರೆ. ಹಾರ್ಬರ್ಟ್ ಕಿಬೆಟ್ ವರ್ಷದ ಆರಂಭದಲ್ಲಿ, ಕಿಬೆಟ್ ಸ್ಪ್ಯಾನಿಷ್ ಪಟ್ಟಣವಾದ ಕ್ಯಾಸ್ಟೆಲ್ಲನ್‌ನಲ್ಲಿ 26:39 ಸೆಕೆಂಡುಗಳಲ್ಲಿ 10ಕೆ ಕೂಟವನ್ನು ಜಯಿಸಿದ್ದಾರೆ. ಇದು ಪುರುಷರ ಬೆಂಗಳೂರು ವಿಶ್ವ 10 ಕೆ ಕೂಟದ ದಾಖಲೆಗಿಂತ ಸುಮಾರು ಒಂದು ನಿಮಿಷ ವೇಗವಾಗಿದೆ. ಕಿಬೆಟ್ ಈಗಾಗಲೇ ಲಿಮಾದಲ್ಲಿ ನಡೆದ 2024 ರ ವಿಶ್ವ ಅಂಡರ್ 20 ಚಾಂಪಿಯನ್ ಷಿಪ್ ಮತ್ತು ಕಳೆದ ವರ್ಷ ಟೋಕಿಯೊದಲ್ಲಿ ನಡೆದ ವಿಶ್ವ ಚಾಂಪಿಯನ್ ಷಿಪ್ ನಲ್ಲಿ ತಮ್ಮ ದೇಶವನ್ನು ಪ್ರತಿನಿಧಿಸಿದ್ದಾರೆ. ಇಂದಿನಿಂದ ಎರಡು ವರ್ಷಗಳ ನಂತರ ಈ ವರ್ಷದ ಕಾಮನ್ವೆಲ್ತ್ ಗೇಮ್ಸ್ ಮತ್ತು ಎಲ್ ಎ ಒಲಿಂಪಿಕ್ಸ್ ನಲ್ಲಿ ಮತ್ತೊಮ್ಮೆ ಉಗಾಂಡಾ ತಂಡವನ್ನು ಸೇರಿಸಲು ಅವರು ಉತ್ಸುಕರಾಗಿದ್ದಾರೆ. ಬೆಂಗಳೂರಿನಲ್ಲಿ ತನ್ನ ನೆರೆಯ ದೇಶಗಳಿಂದ ಹೆಚ್ಚು ಅನುಭವಿ ಓಟಗಾರರನ್ನು ಎದುರಿಸಲು ಯುವ ಉಗಾಂಡಾದ ಆಟಗಾರ ಸಜ್ಜಾಗಿದ್ದಾರೆ. ನಾನು ಉತ್ತಮ ಸ್ಥಿತಿಯಲ್ಲಿದ್ದೇನೆ ಮತ್ತು ಭಾನುವಾರ ರೇಸ್ ಗೆಲ್ಲಲು ಕುತೂಹಲದಿಂದ ಎದುರು ನೋಡುತ್ತಿದ್ದೇನೆ ಎಂದು ಕಿಬೆಟ್ ಹೇಳಿದರು.


ಮುಂಬೈ ತವರಲ್ಲಿ ಚೆನ್ನೈ ಜಯ

ಮುಂಬೈ: ಮುಂಬೈ ತಂಡವನ್ನು ಬರೋಬ್ಬರಿ 103 ರನ್‌ಗಳಿಂದ ಸೋಲಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಗೆಲುವನ್ನು ವೇಗಿ ಮುಕೇಶ್ ಚೌಧರಿ ತಾಯಿಗೆ ಸಮರ್ಪಿಸಿತು.

ಲಯ ಕಂಡುಕೊಳ್ಳುವಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಯಶಸ್ವಿಯಾಗಿದ್ದು ಸಂಜು ಸ್ಯಾಮ್ಸನ್ ಅವರ ಶತಕದ ನಂತರ ಅಕೀಲ್ ಹುಸೇನ್ ಅವರ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿದ ಮುಂಬೈ ಇಂಡಿಯನ್ಸ್ ತನ್ನ ಕ್ರಿಕೆಟ್ ಇತಿಹಾಸದಲ್ಲಿ ಅತಿ ದೊಡ್ಡ ಸೋಲನುಭವಿಸಿತು. ಶುಕ್ರವಾರದ ಎಲ್ ಕ್ಲಾಸಿಕೋ ಪಂದ್ಯದಲ್ಲಿ ಬ್ಯಾಟಿಂಗ್ ಮಾಡಿದ ಚೆನ್ನೈ 207 ರನ್ ಮಾಡಿತು. ಸಂಜು ಸ್ಯಾಮ್ಸನ್ (101★, 54ಎ, 10 ಬೌ, 6ಸಿ) ಮಿಂಚಿದರು. ಮುಂಬೈ ಪರ ಫಜನ್‌ಫರ್ ಹಾಗೂ ಅಶ್ವಿನಿ ಕುಮಾರ್ ತಲಾ 2 ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಮುಂಬೈ 103 ರನ್‌ಗಳಿಗೆ ಪತನಗೊಂಡಿತು. ತಿಲಕ್ ವರ್ಮಾ(37, 29ಎ, 5ಬೌ) ಹೋರಾಡಿದರು. ಇನ್ನುಳಿದ ಯಾವುದೇ ಬ್ಯಾಟರ್‌ಗಳು ಹೇಳುವ ಕೊಡುಗೆ ನೀಡಲಿಲ್ಲ. ಚೆನ್ನೈ ಪರ ಅಕೀಲ್ ಹುಸೇನ್ (4–1–17–4) ಮಿಂಚಿದರು.

12 ವರ್ಷಗಳಲ್ಲಿ ರಾಜಸ್ಥಾನ ಪರ ಎರಡೇ ಶತಕ ಬಾರಿಸಿದ ಸಂಜು, ಚೆನ್ನೈ ತಂಡಕ್ಕೆ ಬಂದ ಸೀಸನಿನಲ್ಲೇ ಎರಡನೇ ಶತಕ ಬಾರಿಸಿಬಿಟ್ಟರು. ಬೇಕಾದಾಗ ಬೌಂಡರಿ ಬಾರಿಸುತ್ತಾ, ವಿಕೆಟ್ ಉಳಿಸಬೇಕಾದಾಗ ಚಾಣಾಕ್ಷ ಬ್ಯಾಟಿಂಗ್ ಮಾಡಿದ ಅವರು, ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ಗೋ ಗ್ರೀನ್ ಡಾಟ್‌ಬಾಲ್ ಪ್ರಶಸ್ತಿ ಗೆದ್ದುಕೊಂಡ ಅಕೀಲ್ ಹುಸೇನ್ ಗೆಲುವಿನಲ್ಲಿ ಮಿಂಚಿದರು. ಮುಂದಿನ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಗುಜರಾತ್ ನೊಂದಿಗೆ ಭಾನುವಾರದಂದು ಆಡಲಿದೆ.

ಚೆನ್ನೈ ಮೇಲುಗೈ: ಎರಡನೇ ಇನ್ನಿಂಗ್ಸ್‌ನಲ್ಲಿ ಸೂಪರ್ ಕಿಂಗ್ಸ್ ತಂಡದ್ದೇ ಮೇಲುಗೈ. ಮೊದಲು ಬ್ಯಾಟಿಂಗ್ ಮಾಡಿದಾಗ ಭರ್ಜರಿ ಪ್ರದರ್ಶನ ನೀಡಿದ್ದ ಚೆನ್ನೈ, ಆರಂಭದಲ್ಲೇ ಮುಂಬೈ ತಂಡಕ್ಕೆ ಕಡಿವಾಣ ಹಾಕಿತು. ಮೊದಲ ಓವರ್‌ನ ಮೊದಲ ಬಾಲ್‌ನಲ್ಲೇ ಅಕೀಲ್ ಹೊಸ ಬ್ಯಾಟರ್ ಡ್ಯಾನಿಶ್ ವಿಕೆಟ್ ಪಡೆದರು. ಮುಂದಿನ ಓವರ್‌ನಲ್ಲಿ ಮುಕೇಶ್ ಚೌಧರಿ ಡಿಕಾಕ್ ವಿಕೆಟ್ ಪಡೆದರು. ಅಷ್ಟಕ್ಕೆ ನಿಲ್ಲದ ಚೆನ್ನೈ ನಮನ್‌ಗೂ ಪೆವಿಲಿಯನ್ ದಾರಿ ತೋರಿಸಿ ಅಟ್ಟಹಾಸ ಮೆರೆಯಿತು. ಪವರ್‌ಪ್ಲೇ ಮುಕ್ತಾಯಕ್ಕೆ ಮುಂಬೈ 29/3. ಮಧ್ಯಮ ಓವರ್‌ಗಳಲ್ಲಿ ಸ್ಪಿನ್ನರ್ ಗಳದ್ದೇ ಕಾರುಬಾರು. ಅಕೀಲ್ ಲಯ ಹಿಡಿದರು. ಒಂದು ಓವರ್ ಮೇಡನ್ ಕೂಡ ಮಾಡಿದ ಅವರು, ಪ್ರಮುಖ ಬ್ಯಾಟರ್‌ಗಳಿಗೆ ಪೆವಿಲಿಯನ್ ದಾರಿ ತೋರಿಸಿದರು. ಇತ್ತ ಅವರಿಗೆ ನೂರ್ ಅಹ್ಮದ್ ಅವರ ಸಾಥ್ ಸಿಕ್ಕಿತು. ಮಧ್ಯಮ ಓವರ್ ಮುಕ್ತಾಯಕ್ಕೆ ಚೆನ್ನೈ ಪಂದ್ಯವನ್ನು ಭಾಗಶಃ ಗೆದ್ದಿತು. ತಿಲಕ್ 37, ಸೂರ್ಯ 36 ರನ್‌ಗಳ ಬ್ಯಾಟಿಂಗ್ ಮುಕ್ತಾಯಗೊಂಡ ನಂತರ ಚೆನ್ನೈ ಗೆಲುವು ಖಾತರಿ ಮಾಡಿಕೊಂಡಿತು. ಮಧ್ಯಮ ಓವರ್ ಮುಕ್ತಾಯಕ್ಕೆ ಮುಂಬೈ 70 ರನ್‌ಗಳಿಸಿತು, ಚೆನ್ನೈ ಅಲ್ಲೂ 4 ವಿಕೆಟ್ ಪಡೆಯಿತು. ಡೆತ್ ಓವರ್‌ನಲ್ಲಿ ಬಂದ ಚೆನ್ನೈ ವೇಗಿಗಳು 5 ರನ್ ಬಿಟ್ಟುಕೊಡುವಷ್ಟರಲ್ಲಿ ಪಂದ್ಯವನ್ನು ಮುಗಿಸಿದರು. ಕೊನೆಯಲ್ಲಿ ಮುಂಬೈ 104 ರನ್‌ಗಳಿಗೆ ಆಲೌಟ್ ಆಯಿತು.



ಸಂಕ್ಷಿಪ್ತ ಸ್ಕೋರ್

ಚೆನ್ನೈ 20 ಓವರ್‌ಗಳಲ್ಲಿ 207/6: ಸಂಜು 101★, ಗಾಯಕ್ವಾಡ್ 22; ಫಜನ್‌ಫರ್ 25/2
ಮುಂಬೈ 19 ಓವರ್‌ಗಳಲ್ಲಿ 104/10: ತಿಲಕ್ 37, ಸೂರ್ಯ 36; ಅಕೀಲ್ 17/4

24ನೇ ರಾಷ್ಟ್ರೀಯ ಕಿರಿಯರ ಅಥ್ಲೆಟಿಕ್ಸ್

ತುಮಕೂರು: ಉದಯೋನ್ಮುಖ ತಾರೆಗಳಾದ ಅಭಯ್ ಸಿಂಗ್ ಮತ್ತು ನಿಪಮ್ 24ನೇ ರಾಷ್ಟ್ರೀಯ ಕಿರಿಯರ (20 ವಯೋಮಿತಿ) ಅಥ್ಲೆಟಿಕ್ಸ್ ಕ್ರೀಡಾಕೂಟದ ಪುರುಷ ಹಾಗೂ ಮಹಿಳೆಯ 100 ಮೀಟರ್ ವಿಭಾಗದಲ್ಲಿ ಸ್ವರ್ಣ ಪದಕ ಗೆದ್ದುಕೊಂಡಿದ್ದಾರೆ. ತುಮಕೂರು ಜಿಲ್ಲಾಡಳಿತ ಮತ್ತು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಹಾಗೂ ತುಮಕೂರು ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ ಸಹಯೋಗದೊಂದಿಗೆ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕ್ರೀಡಾಕೂಟದಲ್ಲಿ ಶುಕ್ರವಾರ ಜೂನಿಯರ್ ಪುರುಷರ 100 ಮೀಟರ್ ವಿಭಾಗದಲ್ಲಿ 10.41 ಸೆಕೆಂಡ್‌ನಲ್ಲಿ ಕ್ರಮಿಸಿದ ಅಭಯ್ ಸಿಂಗ್ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಯುವರಾಜ್ ಸಿಂಗ್ ಚಿಬ್ ಮತ್ತು ಅನ್ನ ರಚಾಕ್ ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಪಡೆದರು. ಜೂನಿಯರ್ ಮಹಿಳೆಯರ 100 ಮೀಟರ್ ವಿಭಾಗದಲ್ಲಿ ಉತ್ತರ ಪ್ರದೇಶದ ನಿಪಮ್ 11.53 ಸೆಕೆಂಡ್‌ನಲ್ಲಿ ಕ್ರಮಿಸಿ ಸ್ವರ್ಣ ಪದಕ ಗೆದ್ದುಕೊಂಡರು. ತಮಿಳುನಾಡಿದನ ಭಾವನ ಮತ್ತು ಗುಜರಾತ್ನ ಕಾಜಲ್ ಹೀರಾಭಾಯ್ ವಾಜಾ ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಮಹಿಳೆಯರ ಪೋಲ್ ವಾಲ್ಟ್ ನಲ್ಲಿ 3.60 ಮೀ. ಜಿಗಿದ ತಮಿಳುನಾಡಿನ ಬಿ.ಸೌಂದರ್ಯ ಏಷ್ಯನ್ ಗೇಮ್ಸ್ ಮತ್ತು ವಿಶ್ವ ಚಾಂಪಿಯನ್ ಶಿಪ್ ಗೆ ಅರ್ಹತೆ ಪಡೆದರು. ಮೊದಲ ದಿನ 6 ವಿಭಾಗದಲ್ಲಿ ಅಥ್ಲೀಟ್‌ಗಳು ಪದಕಗಳ ಬೇಟೆಯಾಡಿದರು.

ಅಭಯ್ ಸಿಂಗ್, ನಿಪಮ್‌ಗೆ ಚಿನ್ನದ ಪದಕ

ಇಂದು 2 ಪಂದ್ಯ: ಹೈದರಾಬಾದ್–ರಾಜಸ್ಥಾನ ಸೆಣಸು

ದಿಲ್ಲಿಗೆ ಇಂದು ಪಂಜಾಬ್ ಸವಾಲು

ಹೊಸದಿಲ್ಲಿ: ಗೆಲುವಿನ ಹಾದಿಯಲ್ಲಿ ನಾಗಾಲೋಟ ನಡೆಸುತ್ತಿರುವ ಪಂಜಾಬ್ ಕಿಂಗ್ಸ್ ದಿಲ್ಲಿ ಆವರಣದಲ್ಲಿ ಮಿಂಚಲು ಸಜ್ಜಾಗಿದೆ. ಶನಿವಾರದ ವೀಕೆಂಡ್ ರೈವಲ್ರಿಯ ಮೊದಲ ಪಂದ್ಯದಲ್ಲಿ ದಿಲ್ಲಿ ತಂಡವನ್ನು ಎದುರಿಸಲಿರುವ ಪಂಜಾಬ್ ತನ್ನ ಅಗ್ರಸ್ಥಾನ ಇನ್ನಷ್ಟು ಗಟ್ಟಿಗೊಳಿಸಲು ಸಜ್ಜಾಗಿದೆ. ಆರ್‌ಸಿಬಿ ವಿರುದ್ಧ ಗೆದ್ದಿದ್ದರೂ ಹೈದರಾಬಾದ್ ವಿರುದ್ಧ ಸೋತ ದಿಲ್ಲಿ ಕ್ಯಾಪಿಟಲ್ಸ್ ಸೋಲಿನಿಂದ ಹೊರಬರಲು ತವರಲ್ಲಿ ಅಣಿಯಾಗುತ್ತಿದೆ.

ಪಂಜಾಬ್ ಸಿದ್ಧ: ಹಾಲಿ ರನ್ನರ್–ಅಪ್ ಪಟ್ಟ ಕಟ್ಟಿಕೊಂಡಿರುವ ಪಂಜಾಬ್ ಅಸಲಿಗೆ ಚಾಂಪಿಯನ್ ತಂಡದಂತೆ ಆಡುತ್ತಿದೆ. ಒಂದೂ ಪಂದ್ಯದಲ್ಲಿ ಪರಾಭವ ಅನುಭವಿಸಿಲ್ಲ. ಸೋಲುವಂಥ ಪ್ರದರ್ಶನ ಯಾರೂ ಕೂಡ ನೀಡಿಲ್ಲ. ಶ್ರೇಯಸ್ ಅಯ್ಯರ್ ನಾಯಕರಾದ ಮೇಲೆ ತಂಡದ ದಿಕ್ಕೇ ಬದಲಾಗಿದೆ. ಈ ಆವೃತ್ತಿಯಲ್ಲಿ ಪಂಜಾಬ್ ಯಾವುದೇ ಪಂದ್ಯದಲ್ಲಿ ಸೋತಿಲ್ಲ. ಬಂದ ತಂಡಗಳನ್ನೆಲ್ಲಾ ಸೋಲಿಸುತ್ತಲೇ ಬಂದಿದೆ. ಯುವ ಬ್ಯಾಟರ್ಸ್ ಪ್ರಭಸಿಮ್ರನ್, ಪ್ರಿಯಾಂಶ್ ಅವರ ಬ್ಯಾಟಿಂಗ್ ಲಯ ತಂಡಕ್ಕೆ ದೊಡ್ಡ ಆರಂಭ ನೀಡುತ್ತದೆ. ಮೂರನೇ ಕ್ರಮಾಂಕದಲ್ಲಿ ಬರುವ ಕೂಪರ್ ಪಂದ್ಯಾವಳಿಯಲ್ಲಿ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದಾರೆ. ಇನ್ನು ಚೇಸಿಂಗ್ ವಿಚಾರದಲ್ಲಿ ಮಿಂಚಿರುವ ಶ್ರೇಯಸ್ ಅಯ್ಯರ್ ಕೂಡ ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಪ್ರತಿ ಪಂದ್ಯದಲ್ಲೂ ತಮ್ಮ ಆಕ್ರಮಣಕಾರಿ ಬ್ಯಾಟಿಂಗ್‌ನೊಂದಿಗೆ ಎದುರಾಳಿಗಳ ಮೇಲ ಒತ್ತಡ ಹೇರಿದ್ದಾರೆ. ಇನ್ನು ಬೌಲಿಂಗ್ ವಿಚಾರಕ್ಕೆ ಬಂದರೆ, ಅರ್ಷದೀಪ್, ಬಾರ್ಟ್‌ಲೆಟ್ ಸೇರಿದಂತೆ ಪ್ರಮುಖರು ಲಯದಲ್ಲಿ ಕಾಣಿಸಿಕೊಂಡಿದ್ದಾರೆ.

ದಿಲ್ಲಿಗೆ ಗೆಲುವಿನ ಹಂಬಲ: ಇತ್ತ ದಿಲ್ಲಿ ಕ್ಯಾಪಿಟಲ್ಸ್ ಬ್ಯಾಟಿಂಗ್ ಉತ್ತಮ ಮಾಡುತ್ತಿದ್ದರೂ, ಬೌಲಿಂಗ್ ವಿಚಾರದಲ್ಲಿ ಭಾರೀ ಹಿನ್ನಡೆ ಅನುಭವಿಸಿದೆ. ರಾಹುಲ್ ಲಯದಲ್ಲಿದ್ದಾರೆ. ಆದರೆ ಮತ್ತೋರ್ವ ಆರಂಭಿಕ ನಿಸ್ಸಂಕಾ ಹೇಳಿಕೊಳ್ಳುವ ಪ್ರದರ್ಶನ ನೀಡಿಲ್ಲ. ರಿಜ್ವಿ ಮಿಂಚುತ್ತಿದ್ದಾರೆ. ಆದರೆ ಮಧ್ಯಮ ಕ್ರಮಾಂಕದಲ್ಲಿ ತಂಡ ಭಾರೀ ಹಿನ್ನಡೆ ಅನುಭವಿಸುತ್ತಿದೆ. ಅಕ್ಷರ್ ಪಟೇಲ್, ಕರುಣ್ ನಾಯರ್ ಸೇರಿದಂತೆ ವಿವಿಧ ಬ್ಯಾಟರ್‌ಗಳು ಲಯದಲ್ಲಿಲ್ಲ. ಬೌಲಿಂಗ್‌ನಲ್ಲಿ ನಟರಾಜನ್ ಮತ್ತು ಲುಂಗಿ ಉತ್ತಮ ಪ್ರದರ್ಶನ ನೀಡಿದ್ದರೂ ಉಳಿದ ವೇಗಿಗಳು ದುಬಾರಿಯಾಗಿದ್ದಾರೆ.



ರಾಜಸ್ಥಾನ–ಹೈದರಾಬಾದ್

ಎರಡನೇ ಪಂದ್ಯದಲ್ಲೂ ಭರಪೂರ ಪೈಪೋಟಿಯಿದ್ದು, ರಾಜಸ್ಥಾನ ಹಾಗೂ ಹೈದರಾಬಾದ್ ತಂಡಗಳು ಮುಖಾ ಮುಖಿಯಾಗುತ್ತಿವೆ. 2 ತಂಡಗಳೂ ಲಯದಲ್ಲಿರುವುದು ಪಂದ್ಯಕ್ಕೆ ಹೆಚ್ಚಿನ ರೋಚಕತೆ ಹುಟ್ಟುಹಾಕಿದೆ. ಹಿಂದಿನ ಪಂದ್ಯಗಳಲ್ಲಿ ಉಭಯ ತಂಡಗಳು ಮಿಂಚಿವೆ. ಲಖನೌ ವಿರುದ್ಧ ರಾಜಸ್ಥಾನ, ದಿಲ್ಲಿ ವಿರುದ್ಧ ಹೈದರಾಬಾದ್ ಗೆಲುವು ಸಾಧಿಸಿವೆ. ರಾಜಸ್ಥಾನದ ತವರು ಜೈಪುರದಲ್ಲಿ ಈ ಪಂದ್ಯ ನಡೆಯಲಿದೆ.

ಪ್ಯಾಟ್ ಕಮ್ಮಿನ್ಸ್ ಬಲ

ಹೈದರಾಬಾದ್ ತಂಡಕ್ಕೆ ಪ್ಯಾಟ್ ಕಮ್ಮಿನ್ಸ್ ಸೇರಿಕೊಂಡಿದ್ದು ಬಲ ತಂದಿದೆ. ಇದರೊಂದಿಗೆ ಅವರು ನಾಯಕರಾಗಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಮತ್ತೆ ಅಸಲು ಲಯಕ್ಕೆ ಬಂದಿರುವ ಸನ್ ರೈಸರ್ಸ್ ಹೈದರಾಬಾದ್ ತಂಡವು ಆಡಿರುವ ಪಂದ್ಯಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದೆ. ಅಭಿಷೇಕ್ ಶರ್ಮ ಲಯಕ್ಕೆ ಮರಳಿರುವುದು ತಂಡದಲ್ಲಿ ಆನೆ ಬಲ ತಂದಿದೆ. ಇತ್ತ ಹೆಡ್ ಕೂಡ ರನ್ ಮಾಡುತ್ತಿದ್ದಾರೆ. ಇಶಾನ್ ಕಿಶನ್ ಲಯಕ್ಕೆ ಬರಬೇಕಿದೆ. ಮುಖ್ಯವಾಗಿ ತಂಡದ ಹೆನ್ರಿಕ್ ಕ್ಲಾಸೆನ್ ಭರ್ಜರಿ ಲಯದಲ್ಲಿದ್ದು ವಿಶ್ವಾಸ ಹಿಗ್ಗಿಸಿದ್ದಾರೆ. ಬೌಲಿಂಗ್ ವಿಚಾರಕ್ಕೆ ಬಂದರೆ ಯುವಕರ ದರ್ಬಾರ್. ಪ್ರಫುಲ್ ಹಿಂಗೆ, ಹುಸ್ಸೈನ್ ಉತ್ತಮ ಬೌಲಿಂಗ್ ಮಾಡಿದರೆ, ಸ್ಪಿನ್ನರ್ ಹರ್ಷ ದುಬೆ ಕೂಡ ಕರಾರುವಾಕ್ ದಾಳಿ ಸಂಘಟಿಸಿದ್ದಾರೆ.

ಸವಾಲಿಗೆ ರಾಜಸ್ಥಾನ ಸಿದ್ಧ

ಸೋಲುಗಳನ್ನು ಕಂಡರೂ ಕಳೆದ ಪಂದ್ಯದಲ್ಲಿ ಲಖನೌ ಸವಾರಿ ಮಾಡುವುದರೊಂದಿಗೆ ಕಂಬ್ಯಾಕ್ ಮಾಡಿರುವ ರಾಜಸ್ಥಾನ ರಾಯಲ್ಸ್ ಎರಡು ಪಂದ್ಯಗಳ ಹಿನ್ನಡೆಯ ನಂತರ ಮತ್ತೆ ಉತ್ತಮ ಸ್ಥಿತಿಯಲ್ಲಿ ಕಾಣಿಸಿಕೊಂಡಿದೆ. ಆರಂಭಿಕರಾದ ಜೈಸ್ವಾಲ್ ಮತ್ತು ವೈಭವ್ ಬೇಗನೇ ವಿಕೆಟ್ ಕೊಡುತ್ತಿದ್ದಾರೆ. ಜುರೇಲ್ ಕಳೆದ 2 ಪಂದ್ಯಗಳಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದಾರೆ. ಇತ್ತ ಮಧ್ಯಮ ಕ್ರಮಾಂಕದಲ್ಲಿ ಜಡೇಜಾ ಬಿಟ್ಟರೆ ಇನ್ನುಳಿದ ಯಾವುದೇ ಬ್ಯಾಟರ್‌ಗಳು ರನ್ ಮಾಡುತ್ತಿಲ್ಲ. ಆದರೆ ಬೌಲಿಂಗ್ ವಿಚಾರಕ್ಕೆ ಬಂದರೆ ತಂಡ ಮೇಲುಗೈ ಸಾಧಿಸಿದೆ. ಬ್ರಿಜೇಶ್ ಶರ್ಮ, ಆರ್ಚರ್ ಮತ್ತು ನಾಂದ್ರೆ ಕರಾರುವಾಕ್ ದಾಳಿಯೊಂದಿಗೆ ಗಮನ ಸೆಳೆದಿದ್ದಾರೆ. ಸ್ಪಿನ್ ವಿಭಾಗದಲ್ಲಿ ಬಿಷ್ಣೋಯ್ ಹಾಗೂ ಜಡೇಜಾ ಮಿಂಚಿದ್ದಾರೆ.

ಪಂದ್ಯಗಳ ವಿವರ

ದಿಲ್ಲಿ–ಪಂಜಾಬ್	ಹೈದರಾಬಾದ್–ರಾಜಸ್ಥಾನ
ಯಾವಾಗ: ಶನಿವಾರ	ಯಾವಾಗ: ಶನಿವಾರ
ಎಲ್ಲಿ: ಹೊಸದಿಲ್ಲಿ	ಎಲ್ಲಿ: ಜೈಪುರ
ಸಮಯ: ಮಧ್ಯಾಹ್ನ 3:30	ಸಮಯ: ಸಂಜೆ 7:30ಕ್ಕೆ

ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್


ಐಎಸ್‌ಎಸ್‌ಎಫ್ ಶೂಟಿಂಗ್: ಭಾರತ ಶೂಟರ್‌ಗಳ ಮೇಲುಗೈ


ಜೂನಿಯರ್ ವಿಶ್ವಕಪ್: ಪ್ರಾಚಿಗೆ ಚಿನ್ನ

ಹೊಸದಿಲ್ಲಿ: ಈಜಿಪ್ಟ್‌ನ ಕೈರೋನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನಲ್ಲಿ ಭಾರತದ ಶೂಟರ್‌ಗಳು ಪಾರುಪತ್ಯ ಮುಂದುವರಿಸಿದ್ದಾರೆ.

ಪ್ರಾಚಿ ಗೈಕ್ವಾಡ್ ಜೂನಿಯರ್ ಮಹಿಳೆಯರ 50 ಮೀ ರೈಫಲ್ 3 ಪೊಷಿಷನ್ (3ಪಿ) ಸ್ಪರ್ಧೆಯಲ್ಲಿ 354.6 ಅಂಕಗಳೊಂದಿಗೆ ಚಿನ್ನದ ಪದಕ ಗೆದ್ದರು. ಅವರು ಎಐಎನ್ ಆಟಗಾರ್ತಿ ದರಿಯಾ ಚುಪ್ರಿಸ್ (354.4) ಅವರನ್ನು ಕೇವಲ 0.2 ಅಂಕಗಳಿಂದ ಸೋಲಿಸಿ ಜಯ ಸಾಧಿಸಿದರು. ಮತ್ತೊಬ್ಬ ಎಐಎನ್ ಆಟಗಾರ್ತಿ ಎಲೆನಾ ಕ್ರೆಟಿನಿನಾ 343.3 ಅಂಕಗಳೊಂದಿಗೆ ಕಂಚು ಪಡೆದರು. ಪುರುಷರ ವಿಭಾಗದಲ್ಲಿ ನಾರೇನ್ ಪ್ರಣವ್ 10 ಮೀ ಏರ್ ರೈಫಲ್ ನಲ್ಲಿ 229.5 ಅಂಕಗಳೊಂದಿಗೆ ಕಂಚಿನ ಪದಕ ಗೆದ್ದರು.

ಭಾರತಕ್ಕೆ ಮತ್ತೊಂದು ಚಿನ್ನ ವಂಶಿಕಾ ಚೌಧರಿ ಮೂಲಕ ಲಭಿಸಿತು. ಅವರು ಜೂನಿಯರ್ ಮಹಿಳೆಯರ 10 ಮೀ ಏರ್ ಪಿಸ್ತೂಲ್‌ನಲ್ಲಿ 241.3 ಅಂಕಗಳೊಂದಿಗೆ ಚಿನ್ನ ಪಡೆದರು. ಅವರ ಸಹ ಆಟಗಾರ್ತಿ ಸೇಜಲ್ ಕಾಂಬಳೆ 239.6 ಅಂಕಗಳೊಂದಿಗೆ ಬೆಳ್ಳಿ ಪದಕ ಜಯಿಸಿದರು. ಚೈನೀಸ್ ತೈಪೆಯ ಲಿಯಾವೊ ಕೆ ರೋಂಗ್ ಕಂಚು ಪಡೆದರು.





ಭಾರತೀಯರ ಪದಕ ಮತ್ತು ಸ್ಪರ್ಧೆ


- ಪ್ರಾಚಿ ಗೈಕ್ವಾಡ್: 50 ಮೀ 3ಪಿ ಚಿನ್ನ
- ವಂಶಿಕಾ ಚೌಧರಿ: 10 ಮೀ ಪಿಸ್ತೂಲ್ ಚಿನ್ನ
- ಸೇಜಲ್ ಕಾಂಬಳೆ: 10 ಮೀ ಪಿಸ್ತೂಲ್ ಬೆಳ್ಳಿ
- ನಾರೇನ್ ಪ್ರಣವ್: 10 ಮೀ ರೈಫಲ್ ಕಂಚು

ಭಾರತದ ಪದಕಪಟ್ಟಿ (ಇಲ್ಲಿಯವರೆಗೆ)

ಚಿನ್ನ	ಬೆಳ್ಳಿ	ಕಂಚು
3	4	3

ಪದಬಂಧ

ರಾಜಾ ಸಂಗಮೇಶ ಹಿರೇಮಠ



5964

ಎಡದಿಂದ ಬಲಕ್ಕೆ
1.ಪ್ರಜ್ವಲಿಸು–ಪ್ರಕಾಶಿಸುವಿಕೆ (5)
3.ಕಾಣದಂತೆ ಅವಿತುಕೊಳ್ಳುವಿಕೆ (3)
5.ಅಂತರಂಗ–ಚಿತ್ತವಿದು (2)
7.ಈ ತರ ಕಳವು ಮಾಡಿದ ಚೋರ (3)
8.ಈ ಸಮಯವನ್ನು ಆಳಿಯೋರು ಯಾರೂ ಇಲ್ಲ (2)
9.ರಾಮಸುತನಿಗೆ ಕಂಡ ಜಾನುವಾರು (2)
10.ಸಾವಕಾಶದ ಸಮಾನಪದ (3)
12.ಅಂಧಕಾರ–ಕತ್ತಲೆಯಿದು (2)
14.ಕಠಿಣ ತಪಸ್ಸು ಮಾಡುವ ಸಾಧಕ ತಿರುಗಿದ್ದಾನೆ (3)
15.ಹದಗೆಡು–ಕೆಟ್ಟುಹೋಗು ಎಂಬರ್ಥದ ಶಬ್ದ (5)

ಮೇಲಿನಿಂದ ಕೆಳಕ್ಕೆ
1.ಲಾಭರಹಿತ ಉದ್ದೇಶಕ್ಕಾಗಿ ರಚಿಸಿದ ಸಂಸ್ಥೆ (3)
2.ಸುತನ ನಡುವೆ ಸರಳವಾದುದಿದೆ (4)
3.ಅಕಾರ ಒಳಗೊಂಡ ಮದ (4)
4.ಸಿಟ್ಟಿನಿಂದ ತೀವ್ರವಾಗಿ ನೋಡುವುದು (5)
6.ಮಾದ್ರಿಯ ಮಗನಾದ ಪಾಂಡವ (3)
8.ಒಂದು ಕ್ರಿಯೆ,ಮತ್ತೊಂದು ಕ್ರಿಯೆಗೆ ನಿಮಿತ್ತವಾಗುವುದು (5)
9.ರಾಧಾಳು ಅಂತ್ಯದಲ್ಲಿ ಮಾಡಿದ ರಂಪ (3)
10.ಹಣೆಗಣ್ಣ–ಶಿವನೀತ (4)
11.ಮನಬಿಚ್ಚಿ ಮಾತನಾಡದಿರುವಿಕೆ ತಲೆಕೆಳಗಾಗಿದೆ (4)
13.ಸೋಲಿಸು–ಬಗ್ಗುಬಡಿಯು (3)

5963 ಉತ್ತರ

ಎಡದಿಂದ ಬಲಕ್ಕೆ:
1.ನಾಯಿಬಾಳು
2.ನಾಮಾಂತರ 4.ಗಳಿಸು
6.ಚಂದ್ರಾತಪ 7.ಗಡಿಬಿಡಿ
8.ಮರುಕ 9.ಲೋಚನ
10.ಸತ್ಯಾಗ್ರಹಿ
11.ಕಾಮಗಾರಿ 12.ತರಂಗ
14.ಲಗಾಯಿಸು
15.ಮಾಟಗಾತಿ

ಮೇಲಿನಿಂದ ಕೆಳಕ್ಕೆ:
1.ನಾರಂಗ 3.ರಕ್ತಚಂದನ
5.ಸುಗಮ 6.ಪಡಿ
8.ಕನಕಾಚಲ 9.ಲೋಹಿತ
10.ಸರಿ 13.ಗಣತಿ

ಕಿರುಸುದ್ದಿ

ಕೇಂದ್ರ ಹಣಕಾಸು ಸಚಿವರ ದ.ಕ. ಪ್ರವಾಸ

ಮಂಗಳೂರು: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಏ.27 ಮತ್ತು 28ರಂದು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರವಾಸ ಕೈಗೊಳ್ಳಲಿದ್ದಾರೆ.



ಏ.27ರಂದು ರಾತ್ರಿ 7.15ಕ್ಕೆ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮನ, ಬಳಿಕ ಕೊಲ್ಲೂರಿಗೆ ತೆರಳಿ ವಾಸ್ತವ್ಯ. ಏ. 28ರಂದು ಬೆಳಗ್ಗೆ 11 ಗಂಟೆಗೆ ಉಡುಪಿ ಐಐಜಿಜೆ ಕ್ಯಾಂಪಸ್ ಭೇಟಿ, 2.45ಕ್ಕೆ ಮಂಗಳೂರಿಗೆ ಆಗಮಿಸಿ ಖಾಸಗಿ ಹೋಟೆಲ್‌ಗೆ ಭೇಟಿ, ಅಪರಾಹ್ನ 3.30ಕ್ಕೆ ನಗರದ ನಿಟ್ಟೆ ಡೀಮ್ಡ್ ವಿಶ್ವವಿದ್ಯಾನಿಲಯದಲ್ಲಿ ಎನ್. ವಿನಯ ಹೆಗ್ಡೆ ಸ್ಮಾರಕ ಉಪನ್ಯಾಸ, ಸಂಜೆ 5.40ಕ್ಕೆ ಮಂಗಳೂರು ವಿಮಾನ ನಿಲ್ದಾಣ ಮೂಲಕ ಬೆಂಗಳೂರಿಗೆ ನಿರ್ಗಮಿಸಲಿದ್ದಾರೆ.

ರೈಲಿನ ರಭಸಕ್ಕೆ ಸಿಲುಕಿ ಬಿದ್ದು ಗಾಯಗೊಂಡ ಬಾಲಕಿ ಮೃತ್ಯು

ಕಾಸರಗೋಡು: ರೈಲು ಸಂಚರಿಸುವ ವೇಳೆ ಬೀಸಿದ ಬಲವಾದ ಗಾಳಿಗೆ ಸಿಲುಕಿ ಬಿದ್ದು ಗಂಭೀರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಾಲಕಿ ಸಾವನ್ನಪ್ಪಿದ್ದಾಳೆ.

ಚೆಂಗಳ ನಾಲ್ಕನೇ ಮೈಲಿನ ತೈವಳಪ್ಪು ನಿವಾಸಿ ಗಲ್ಫ್ ಉದ್ಯೋಗಿ ತಾಹೀರ್ ನಜಾದ್ ಮತ್ತು ಆಸಿಯಾ ದಂಪತಿಯ ಪುತ್ರಿ ಮರಿಯಂ ನವಲ್ ತಾಹೀರ್ (5) ಮೃತಪಟ್ಟ ಬಾಲಕಿ. ಏಪ್ರಿಲ್ 18ರಂದು ಸಂಜೆ ಅಜ್ಜಿ ಆಡ್ಕತ್ತಬೈಲ್ ನಫೀಸಾ (52) ಅವರ ಜೊತೆ ಮೊಗ್ರಾಲ್ ನಾಂಗಿಯಲ್ಲಿ ರೈಲು ಹಳಿಯ ಸಮೀಪ ನಡೆದುಕೊಂಡು ಹೋಗುತ್ತಿದ್ದ ವೇಳೆ ಮಂಗಳೂರಿನಿಂದ ತಿರುನಂತಪುರಕ್ಕೆ ಸಂಚರಿಸುತ್ತಿದ್ದ ಮಾವೇಲಿ ಎಕ್ಸ್‌ಪ್ರೆಸ್ ರೈಲು ಸಂಚರಿಸಿತ್ತು. ಈ ವೇಳೆ ರೈಲು ಚಲಿಸಿದ ರಭಸಕ್ಕೆ ಸಿಲುಕಿ ಮರಿಯಂ ನವಾಲ್ ಮತ್ತು ನಫೀಸಾ ಬಿದ್ದು ಗಾಯಗೊಂಡಿದ್ದರು. ಬಿದ್ದ ಅವರನ್ನು ಕಂಡ ಪ್ರಸ್ತುತ ರೈಲಿನ ಲೋಕೋ ಪೈಲಟ್ ನೀಡಿದ ಮಾಹಿತಿಯಂತೆ ಕುಂಬಳೆ ಪೊಲೀಸರು ಮತ್ತು ಊರವರು ಆಗಮಿಸಿ ಹುಡುಕಾಟ ನಡೆಸಿದಾಗ ಇಬ್ಬರು ಪ್ರಜ್ಞಾಹೀನ ಸ್ಥಿತಿಯಲ್ಲಿ ಅಲ್ಲೇ ಪಕ್ಕದ ಪೊದೆಯಲ್ಲಿ ಬಿದ್ದಿರುವುದನ್ನು ಪತ್ತೆಹಚ್ಚಿದ್ದಾರೆ. ಕೂಡಲೇ ಚೆಂಗಳದ ಖಾಸಗಿ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ನೀಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಬಾಲಕಿ ಗುರುವಾರ ಸಾವನ್ನಪ್ಪಿದಳು. ನಫೀಸಾ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದಾರೆ.

ಮನೆಯಿಂದ ಮಾದಕ ವಸ್ತು ಪತ್ತೆ: ಓರ್ವ ಸೆರೆ

ಕುಂಬಳೆ: ಮನೆಯಲ್ಲಿ ಅಬಕಾರಿ ಅಧಿಕಾರಿಗಳು ದಾಳಿ ನಡೆಸಿದ ವೇಳೆ ಮಾದಕ ವಸ್ತು ಪತ್ತೆಯಾಗಿದ್ದು, ಈ ಸಂಬಂಧ ಓರ್ವನನ್ನು ಬಂಧಿಸಿ ಎನ್‌ಡಿಪಿಎಸ್ ಕೇಸು ದಾಖಲಿಸಲಾಗಿದೆ. ಮೊಗ್ರಾಲ್ ಸೈನುದ್ದೀನ್‌ನಗರದ ನೂರುನ್ನಿಸ ಹೌಸ್‌ನ ಮುಸಮ್ಮಿಲ್ (31) ಎಂಬಾತನನ್ನು ಕುಂಬಳೆ ಅಬಕಾರಿ ತಂಡ ಬಂಧಿಸಿದೆ. ಆತನ ಬಳಿಯಿಂದ 3.57 ಗ್ರಾಂ ಮೆಥಾಫಿಟಾಮಿನ್ ಹಾಗೂ 4.5 ಗ್ರಾಂ ಗಾಂಜಾವನ್ನು ವಶಪಡಿಸಲಾಗಿದೆ. ಅಬಕಾರಿ ಅಧಿಕಾರಿಗಳು ಆರೋಪಿಯ ಮನೆಯಲ್ಲಿ ನಡೆಸಿದ ಶೋಧ ವೇಳೆ ಮಾದಕ ವಸ್ತುಗಳು ಪತ್ತೆಯಾಗಿತ್ತು.

ಮಹಿಳೆ ನಾಪತ್ತೆ

ಕುಂದಾಪುರ: ಪಂಚಾಯತ್‌ನಲ್ಲಿ ಕೆಲಸ ಇರುವುದಾಗಿ ಇಬ್ಬರು ಮಕ್ಕಳನ್ನು ಕರೆದುಕೊಂಡು ಹೋಗಿದ್ದ ಕುಂದಾಪುರ ತಾಲೂಕು ಕಾಳಾವರ ನಿವಾಸಿ, ಪ್ರಸ್ತುತ ಕಟ್‌ಬೇಲ್ತೂರಿನ ಇಂದಿರಾ ನಗರ ನಿವಾಸಿ ರಾಘವೇಂದ್ರ ಅವರ ಪತ್ನಿ ಅನಿತಾ ಆರ್. (36) ಕಾಣೆಯಾಗಿದ್ದಾರೆ. ಕುಂದಾಪುರ ತಾಲೂಕು ಪಂಚಾಯತ್ ಕಚೇರಿಯಲ್ಲಿ ಅರೆಕಾಲಿಕವಾಗಿ ಕೂಲಿ ಕೆಲಸ ಮಾಡಿಕೊಂಡಿದ್ದ ಅನಿತಾ ಏ.22 ರಂದು ಪಂಚಾಯತ್‌ನಲ್ಲಿ ಕೆಲಸ ಇರುವುದಾಗಿ ಇಬ್ಬರೂ ಮಕ್ಕಳನ್ನು ಕರೆದುಕೊಂಡು ಮನೆಯಿಂದ ಕುಂದಾಪುರಕ್ಕೆ ಹೋಗಿದ್ದರು. ಬಳಿಕ ಇಬ್ಬರೂ ಮಕ್ಕಳನ್ನು ಕುಂದಾಪುರದಿಂದ ಕಾಳಾವರಕ್ಕೆ ಹೋಗುವ ಬಸ್ಸಿನಲ್ಲಿ ಕಳುಹಿಸಿಕೊಟ್ಟಿದ್ದಾರೆ. ಅನೇಕ ಬಾರಿ ಅನಿತಾ ಅವರಿಗೆ ಕರೆ ಮಾಡಿದಲ್ಲಿ ಫೋನ್ ಸ್ವಿಚ್ ಆಫ್ ಬಂದಿದ್ದು ಕುಂದಾಪುರ ತಾಲೂಕು ಕಚೇರಿಗೆ ಹೋಗಿ ವಿಚಾರಿಸಿದಲ್ಲಿ ಅನಿತಾ ಈ ದಿನ ಕೆಲಸಕ್ಕೆ ಬಂದಿರುವುದಿಲ್ಲವಾಗಿ ತಿಳಿಸಿದ್ದಾರೆ. ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೇಣು ಬಿಗಿದು ಆತ್ಮಹತ್ಯೆ

ಪುತ್ತೂರು: ಬಿಎಸ್‌ಎನ್‌ಎಲ್ ನಿವೃತ್ತ ಉದ್ಯೋಗಿ ಪಡ್ನೂರು ಅಜೇಯನಗರ ನಿವಾಸಿ ಚಂದ್ರಶೇಖರ (68) ಅವರು ಏ.23 ರಂದು ಮನೆಯ ಶೌಚಾಲಯದಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಚಂದ್ರಶೇಖರ್ ಅವರು ನಿವೃತ್ತರಾದ ಬಳಿಕ ಮನೆಯಲ್ಲೇ ಇದ್ದರು. ಏ.23ರಂದು ಪತ್ನಿ ಔಷಧಿಗೆಂದು ಪುತ್ತೂರಿಗೆ ತೆರಳಿದ ವೇಳೆ ಚಂದ್ರಶೇಖರ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತರು ಪತ್ನಿ ಪ್ರೇಮ, ಪುತ್ರ ಸಿವಿಲ್ ಇಂಜಿನಿಯರ್ ಗಣರಾಜ್ ಅವರನ್ನು ಅಗಲಿದ್ದಾರೆ.


ಏರಿಕೆಯಾಗುತ್ತಿದೆ ತಾಪಮಾನ | ಇಳಿಕೆಯಾಗಿದೆ ನೀರಿನ ಮಟ್ಟ | ಆತಂಕದಲ್ಲಿ ನಗರ

ಮುಂದಿನ ತಿಂಗಳು ನೀರಿನ ರೇಶನಿಂಗ್

ಮಂಗಳೂರು: ಕರಾವಳಿಯಲ್ಲೀಗ ಸುಡು ಬಿಸಿಲು. ಬಿಸಿಲ ಬೇಗೆಗೆ ಜಲಮೂಲಗಳು ಕೂಡ ಬತ್ತಲಾರಂಭಿಸಿವೆ. ಬೃಹತ್ ಕಟ್ಟಡಗಳಿಂದ ತುಂಬಿರುವ ಮಂಗಳೂರು ನಗರದಲ್ಲಂತೂ ಸೆಖೆ ವಿಪರೀತವಾಗಿದೆ. ದಿನೇ ದಿನೇ ಏರಿಕೆ ಕಾಣುತ್ತಿರುವ ತಾಪಮಾನದಿಂದಾಗಿ ಕುಡಿಯುವ ನೀರಿಗೂ ತತ್ವಾರ ಎದುರಾಗುತ್ತಿದೆ. ತುಂಬೆಯಲ್ಲಿರುವ ನೀರಿನ ಪ್ರಮಾಣವನ್ನು ಲೆಕ್ಕಾಚಾರ ಹಾಕಿರುವ ಜಿಲ್ಲಾಡಳಿತ ಮೇ 1ರಿಂದ ನಗರದ ಕೆಲವು ಪ್ರದೇಶಗಳಿಗೆ ರೇಶನಿಂಗ್ ಆಧಾರದಲ್ಲಿ ನೀರು ಪೂರೈಸಲು ನಿರ್ಧರಿಸಿದೆ.

ತುಂಬೆ ಕಿಂಡಿ ಅಣೆಕಟ್ಟು ಹಾಗೂ ಎಎಂಆರ್ ಸೇರಿದಂತೆ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಜೂ.10ರವರೆಗೆ ಸಾಕಾಗುವಷ್ಟು ನೀರಿನ ಸಂಗ್ರಹವಿದೆ. ಬೇಸಿಗೆಯಲ್ಲಿ ನೀರಿನ ಬೇಡಿಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಸುರತ್ಕಲ್ ಮೊದಲಾದ ಪ್ರದೇಶಗಳಿಗೂ ಸೂಕ್ತ ನೀರು ಪೂರೈಕೆಯ ದೃಷ್ಟಿಯಿಂದ ಮೇ 1ರಿಂದ ರೇಶನಿಂಗ್‌ಗೆ ನಿರ್ಧರಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಮನಪಾ ಆಡಳಿತಾಧಿಕಾರಿಯೂ ಆಗಿರುವ ದರ್ಶನ್ ಎಚ್.ವಿ. ತಿಳಿಸಿದ್ದಾರೆ.

ಮಂಗಳೂರು ಮಹಾನಗರ ಪಾಲಿಕೆ ಕಚೇರಿಯಲ್ಲಿ ಶುಕ್ರವಾರ ಫೋನ್ ಇನ್ ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತುಂಬೆಯಿಂದ ಪ್ರಸಕ್ತ 160 ಎಂಎಲ್‌ಡಿ ನೀರು ಪಂಪಿಂಗ್ ನಡೆಯುತ್ತಿದ್ದು, ಅದರಂತೆಯೇ ನೀರು ಪಂಪಿಂಗ್ ಪ್ರತಿನಿತ್ಯ ಮುಂದುವರಿಯಲಿದೆ. ಆದರೆ ಪೂರೈಕೆಯಲ್ಲಿ ಕೆಲವೊಂದು ಗಂಟೆಗಳ ಕಾಲ ಕೆಲವೊಂದು ಪ್ರದೇಶಗಳಿಗೆ ಸೀಮಿತವಾಗಿ ನೀರು ಪೂರೈಕೆಯಾಗಲಿದೆ. ಇದರಿಂದ ಕನಿಷ್ಠ ಎರಡು ದಿನಗಳಿಗೊಮ್ಮೆ ಪಾಲಿಕೆಯ 60 ವಾರ್ಡ್‌ಗಳಿಗೂ ಸಮರ್ಪಕವಾಗಿ ನೀರು ಪೂರೈಕೆಯಾಗಲಿದೆ ಎಂದರು.



ಫೋನ್ ಇನ್ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ದರ್ಶನ್

ತುಂಬೆ ಡ್ಯಾಂನಲ್ಲಿ 4.53 ಮೀ. ನೀರು

ಏ. 24ಕ್ಕೆ ತುಂಬೆ ಅಣೆಕಟ್ಟಿನಲ್ಲಿ 4.53 ಮೀಟರ್ ಹಾಗೂ ಎಎಂಆರ್ ಡ್ಯಾಂನಲ್ಲಿ 18.53 ಮೀಟರ್ ಎತ್ತರದಲ್ಲಿ ನೀರಿದೆ. ಈವರೆಗೂ ಎಎಂಆರ್ ಡ್ಯಾಂನಿಂದ ನೀರನ್ನು ತುಂಬೆಗೆ ಹರಿಸಿಲ್ಲ. ನಗರ ಮಾತ್ರವಲ್ಲದೆ ಪಶ್ಚಿಮ ಘಟ್ಟದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಳೆಯಾಗುತ್ತಿರುವುದರಿಂದ ಅಣೆಕಟ್ಟುಗಳಿಗೆ ಒಳಹರಿವು ಇದೆ ಎಂದು ಅವರು ಹೇಳಿದರು.

ನಗರಕ್ಕೆ ಪೂರೈಕೆಯಾಗುವ ನೀರಿನ ಸಂಪರ್ಕದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಅಲ್ಲಲ್ಲಿ ಅಕ್ರಮ ಸಂಪರ್ಕ ಪಡೆದಿರುವ ವಿಚಾರದಲ್ಲಿ ಈಗಾಗಲೇ ಸಭೆ ನಡೆದಿದೆ. ಸುಮಾರು 40ಕ್ಕೂ ಅಧಿಕ ಕಡೆಗಳಲ್ಲಿ ಅಕ್ರಮ ಸಂಪರ್ಕಗಳನ್ನು ಪತ್ತೆಹಚ್ಚಲಾಗಿದ್ದು, ಇನ್ನೂ ಹಲವೆಡೆ ಹೊಸ ಅಕ್ರಮ ಸಂಪರ್ಕಗಳನ್ನು ಪಡೆದಿರುವ ಆಕ್ಷೇಪಗಳಿದ್ದು, ಅವುಗಳ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಮಾನವೀಯತೆಯ ದೃಷ್ಟಿಯಿಂದ ಸದ್ಯ ಅಕ್ರಮ ಸಂಪರ್ಕಗಳನ್ನು ಕಡಿತಗೊಳಿಸಿಲ್ಲ. ಮುಂದೆ ಮೀಟರ್ ಅಳವಡಿಸಿ ಗ್ರಾಮಗಳಿಗೆ ನೀರು ಪೂರೈಕೆಗೆ ಕ್ರಮ ವಹಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಡಿಸೆಂಬರ್‌ನಲ್ಲಿ ಜಲಸಿರಿ ಪೂರ್ಣ

ಮಂಗಳೂರು ನಗರದಲ್ಲಿ ಪ್ರಸಕ್ತ ನಡೆಯುತ್ತಿರುವ ಜಲಸಿರಿ ಯೋಜನೆಯನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲು ಗಡುವು ನೀಡಲಾಗಿದೆ. ಅದಾಗ್ಯೂ ಮಳೆಗಾಲದ ಹಿನ್ನೆಲೆಯಲ್ಲಿ ಈಗಾಗಲೇ ಕಾಮಗಾರಿಗಾಗಿ ಅಗೆತ ಮಾಡಿರುವಲ್ಲಿ ಮೇ 20ರೊಳಗೆ ಮುಚ್ಚುವ ಕಾರ್ಯ ನಡೆಸುವಂತೆ ಸೂಚನೆ ನೀಡಲಾಗಿದೆ. ಸೋಮವಾರ ಮತ್ತೆ ಈ ಬಗ್ಗೆ ಸಭೆ ನಡೆಯಲಿದೆ. ಮಳೆಗಾಲದಲ್ಲಿ ಯಾವುದೇ ಅಗೆತಕ್ಕೆ ಅವಕಾಶವಿಲ್ಲ. ಹಾಗೂ ಅಗೆದಿರುವುದನ್ನು ಸಂಪೂರ್ಣವಾಗಿ ಮುಚ್ಚಲು ಕ್ರಮ ವಹಿಸಲು ನಿರ್ದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಹೂಳೆತ್ತುವ ಕಾರ್ಯ ಶುರು

ನಗರ ಪಾಲಿಕೆ ವ್ಯಾಪ್ತಿಯ ರಾಜಕಾಲುವೆ, ಮಳೆ ನೀರು ಹರಿಯುವ ಚರಂಡಿಗಳ ಹೂಳೆತ್ತುವ ಕಾಮಗಾರಿಯನ್ನು ಸುಮಾರು 4 ಕೋಟಿ ರೂ. ವೆಚ್ಚದಲ್ಲಿ 32 ಪ್ಯಾಕೇಜ್‌ಗಳ ಟೆಂಡರ್ ಕರೆಯಲಾಗಿದೆ. ಈಗಾಗಲೇ 27 ಪ್ಯಾಕೇಜ್ ಕಾಮಗಾರಿ ಆರಂಭವಾಗಿದ್ದು, ಉಳಿದ ಪ್ಯಾಕೇಜ್ ಇನ್ನೊಂದು ವಾರದಲ್ಲಿ ಆರಂಭಗೊಳ್ಳಲಿದೆ ಎಂದವರು ತಿಳಿಸಿದ್ದಾರೆ. ಪಾಲಿಕೆ ಆಯುಕ್ತ ರವಿಚಂದ್ರ ನಾಯಕ್ ಹಾಗೂ ವಿವಿಧ ವಿಭಾಗಗಳ ಹಿರಿಯ ಅಧಿಕಾರಿಗಳು ಈ ಸಂದರ್ಭ ಉಪಸ್ಥಿತರಿದ್ದರು.

ಮಂಗಳೂರಿನಲ್ಲಿ ವಿಶ್ವಹಿಂದೂ ಪರಿಷತ್, ಬಜರಂಗದಳ ಪ್ರತಿಭಟನೆ

ಹೆಚ್ಚುತ್ತಿರುವ ಲವ್ ಜಿಹಾದ್ ಪ್ರಕರಣ ಕಡಿವಾಣಕ್ಕೆ ಆಗ್ರಹ

ಮಂಗಳೂರು: ಭಾರತದ ವಿವಿಧ ರಾಜ್ಯಗಳಲ್ಲಿ ಹೆಚ್ಚುತ್ತಿರುವ ಲವ್ ಜಿಹಾದ್ ಪ್ರಕರಣಗಳು ಹಾಗೂ ಮಹಾರಾಷ್ಟ್ರದ ನಾಸಿಕ್‌ನ ಖಾಸಗಿ ಕಂಪನಿಯೊಂದರಲ್ಲಿ ಬೆಳಕಿಗೆ ಬಂದಿರುವ ಕಾರ್ಪೊರೇಟ್ ಜಿಹಾದ್ ಮತ್ತು ಮತಾಂತರದ ಸಂಚನ್ನು ಖಂಡಿಸಿ ವಿಶ್ವ ಹಿಂದೂ ಪರಿಷತ್ (ವಿಹಿಂಪ) ಮತ್ತು ಬಜರಂಗದಳ ಮಂಗಳೂರು ಘಟಕದ ವತಿಯಿಂದ ಶುಕ್ರವಾರ ಮಂಗಳೂರು ತಾಲೂಕು ಕಚೇರಿ ಮುಂಭಾಗ ಬೃಹತ್ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಸಂಘಟನೆಯ ಪ್ರಮುಖರಾದ ವಕೀಲ ಪ್ರತ್ಯುಷ್ ಧರ್ಮಸ್ಥಳ, ಲವ್ ಜಿಹಾದ್ ಅದೊಂದು ವ್ಯವಸ್ಥಿತ ಸಂಚು. ಈಗ ಅದು ಕಾರ್ಪೊರೇಟ್ ಕ್ಷೇತ್ರಕ್ಕೂ ಲಗ್ಗೆ ಇಟ್ಟಿರುವುದು ಆತಂಕಕಾರಿ. ನಾಸಿಕ್‌ನ ಖಾಸಗಿ ಕಂಪನಿಯಲ್ಲಿ ಉದ್ಯೋಗಿಗಳನ್ನು ಗುರಿಯಾಗಿಸಿ ಮತಾಂತರಕ್ಕೆ ಪ್ರೇರೇಪಿಸುತ್ತಿರುವುದು ಹಿಂದೂ ಸಮಾಜದ ವಿರುದ್ಧ ನಡೆಯುತ್ತಿರುವ ದೊಡ್ಡ ಮಟ್ಟದ ಪಿತೂರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಲವ್ ಜಿಹಾದ್ ತಡೆಗೆ ದೇಶಾದ್ಯಂತ ಕಠಿಣ ಕಾನೂನು ಜಾರಿಗೆ ಬರಬೇಕು. ಕಾರ್ಪೊರೇಟ್ ಸಂಸ್ಥೆಗಳಲ್ಲಿ ನಡೆಯುತ್ತಿರುವ ಮತಾಂ ತರ ಚಟುವಟಿಕೆಗಳ ಬಗ್ಗೆ ಸಮಗ್ರ ತನಿಖೆಯಾಗಬೇಕು. ಹಿಂದೂ ಯುವತಿಯರ ಮತ್ತು ಉದ್ಯೋಗಿಗಳ ಹಿತರಕ್ಷಣೆಗೆ ಸರ್ಕಾರ ಬದ್ಧವಾಗಿರಬೇಕು ಎಂದು ಪ್ರತಿಭಟನೆಯಲ್ಲಿ ನೂರಾರು ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಿ, ಘೋಷಣೆಗಳನ್ನು ಕೂಗುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ವಿಹಿಂಪ ಮುಖಂಡ ಗೋಪಾಲ್ ಕುತ್ತಾರ್, ಬಜರಂಗದಳ ಪ್ರಾಂತ ಸಂಯೋಜಕ ಭುಜಂಗ ಕುಲಾಲ್, ವಿಭಾಗ ಸಂಯೋಜಕ ಪುನೀತ್ ಅತ್ತಾವರ, ಜಿಲ್ಲಾ ಸಂಯೋಜಕ ನವೀನ್ ಮೂಡುಶೆಡ್ಡೆ, ಪ್ರಮುಖರಾದ ಪ್ರದೀಪ್ ಸರಿಪಲ್ಲ, ರವಿ ಅಸೈಗೋಳಿ, ಪ್ರೀತಂ ಕಾಟಿಪಳ್ಳ ಮುಂತಾದವರು ಉಪಸ್ಥಿತರಿದ್ದರು.

ಪ್ರತಿಭಟನೆಯ ಬಳಿಕ ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಲಾಯಿತು. ವಿವಿಧ ಹಿಂದೂ ಸಂಘಟನೆಗಳ ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಏ.27ರಿಂದ ಕರಾವಳಿಯಲ್ಲೂ ಗೋಮಾತೆಯ ಗೌರವ ಅಭಿಯಾನ

ಮಂಗಳೂರು: ಗೋಮಾತೆಗೆ ರಾಷ್ಟ್ರೀಯ ತಾಯಿ, ರಾಷ್ಟ್ರೀಯ ದೇವರು, ರಾಷ್ಟ್ರೀಯ ದೇವತೆ, ರಾಷ್ಟ್ರೀಯ ಪರಂಪರೆ ಅಥವಾ ರಾಷ್ಟ್ರೀಯ ಗುರುತಿನ ಸ್ಥಾನ ನೀಡಬೇಕು, ಗೋವಿನ ಸೇವೆಗಾಗಿ ಕೇಂದ್ರ ಕಾನೂನು ರೂಪಿಸಬೇಕು, ಭಾರತದಲ್ಲಿ ಗೋಹತ್ಯೆ ಸಂಪೂರ್ಣ ನಿಷೇಧವಾಗಬೇಕು ಎಂಬ ಬೇಡಿಕೆಯನ್ನು ಮುಂದಿರಿಸಿ ಏ.27ರಿಂದ ಗೋಮಾತೆಯ ಗೌರವ ಅಭಿಯಾನ ಆಯೋಜಿಸಲಾಗಿದೆ ಎಂದು ಅಭಿಯಾನದ ದ.ಕ.-ಉಡುಪಿ ಜಿಲ್ಲೆಯ ಉಸ್ತುವಾರಿ ಶ್ರೀ ಸಾಯಿ ಈಶ್ವರ್ ಗುರೂಜಿ ತಿಳಿಸಿದರು.

ದೇಶದ 8 ಸಾವಿರ ಕೇಂದ್ರಗಳಲ್ಲಿ ಏ.27 ರಂದು ಬೆಳಗ್ಗೆ 11 ಗಂಟೆಗೆ ಎಲ್ಲಾ ತಾಲೂಕು ಕೇಂದ್ರಗಳಲ್ಲಿ 'ಗೋಮಾತೆಯ ಗೌರವ ಅಭಿಯಾನ'ದ ಅಂಗವಾಗಿ ಸಹಿ ಅಭಿಯಾನ ನಡೆಯಲಿದ್ದು, ಬಳಿಕ ಅಲ್ಲಿನ ತಹಶೀಲ್ದಾರ್ ಮೂಲಕ ರಾಷ್ಟ್ರಪತಿ, ಪ್ರಧಾನಿ, ರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗುವುದು. ಜುಲೈ 10ರೊಳಗೆ ಈ ಬಗ್ಗೆ ಸರಕಾರದಿಂದ ಅನುಕೂಲಕರ ಪ್ರತಿಕ್ರಿಯೆ ಬಂದರೆ ಜುಲೈ 27ರಂದು ಸರಕಾರಕ್ಕೆ ಧನ್ಯವಾದ ಹೇಳುತ್ತೇವೆ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.



ಅನುಕೂಲಕರ ಫಲಿತಾಂಶ ಬರದಿದ್ದರೆ ಜು.27ರಂದು ಮತ್ತೆ ಜಿಲ್ಲಾಧಿಕಾರಿಗೆ ವಿನಂತಿ ಪತ್ರ ಸಲ್ಲಿಸಲಾಗುವುದು. ಅಕ್ಟೋಬರ್ 10ರೊಳಗೆ ಅನುಕೂಲಕರ ಪ್ರತಿಕ್ರಿಯೆ ಬಂದರೆ ಅ.27ರಂದು ಸರಕಾರಕ್ಕೆ ಧನ್ಯವಾದ ಹೇಳಲು ಎಲ್ಲ ರಾಜ್ಯದ ರಾಜಧಾನಿಗಳಿಗೆ ತೆರಳುತ್ತೇವೆ. ಸಕಾರಾತ್ಮಕ ಫಲಿತಾಂಶ ಬಾರದಿದ್ದರೆ ಅ.27ರಂದು ಮುಖ್ಯಮಂತ್ರಿ ಹಾಗೂ ರಾಜ್ಯಪಾಲರ ಮೂಲಕ ರಾಷ್ಟ್ರಪತಿ, ಪ್ರಧಾನಿಗೆ ವಿನಂತಿ ಪತ್ರ ನೀಡುತ್ತೇವೆ. 2027ರ ಜನವರಿ 26ರೊಳಗೆ ಸೂಕ್ತ ಫಲಿತಾಂಶ ಬಂದರೆ ಫೆ. 27ರಂದು ಎಲ್ಲ ರಾಜ್ಯಗಳ ಸಂತರು, ಗೋಭಕ್ತರು ಒಂದು ಕೋಟಿಗೂ ಹೆಚ್ಚು ಗೋಪ್ರೇಮಿಗಳೊಂದಿಗೆ ದೆಹಲಿಗೆ ಆಗಮಿಸುತ್ತಾರೆ. ಸಕರಾತ್ಮಕ ಕ್ರಮ ಆಗದಿದ್ದರೆ ಫೆ.27ರಂದು ಸಾಂಕೇತಿಕ ಪ್ರತಿಭಟನೆ, ಪತ್ರ ಬರೆಯಲಿದ್ದಾರೆ. ಆ.15ರಂದು ಅಭಿಯಾನಕ್ಕೆ ಫಲ ದೊರೆತರೆ ಸರಕಾರಕ್ಕೆ ಧನ್ಯವಾದ ಹೇಳುತ್ತೇವೆ. ಇಲ್ಲವಾದಲ್ಲಿ ಆ.16ರಿಂದ ಗೋಭಕ್ತರು ಹಾಗೂ ಸಂತರು ಆಮರಣಾಂತ ಉಪವಾಸ ನಡೆಸಲಿದ್ದಾರೆ. ಈಗಾಗಲೇ 108 ಮಂದಿ ಸಂತರು ಪ್ರಾಣತ್ಯಾಗಕ್ಕೆ ಸಿದ್ಧರಾಗಿದ್ದಾರೆ ಎಂದು ವಿವರಿಸಿದರು.

ಈ ಅಭಿಯಾನ ಯಾವುದೇ ಸಂಘಟನೆ ಹೆಸರಿನಲ್ಲಿ, ಯಾವುದೇ ವ್ಯಕ್ತಿಯ ನೇತೃತ್ವದಲ್ಲಿ ನಡೆಯುವುದಿಲ್ಲ. ಯಾವುದೇ ದೇಣಿಗೆ ಸಂಗ್ರಹಿಸುವುದಿಲ್ಲ. ಯಾವುದೇ ಭಾಷಣ ಇರುವುದಿಲ್ಲ ಎಂದರು.

ಪ್ರಮುಖರಾದ ಮಧುಸೂದನ್ ನಾಯಕ್, ಧನ್‌ರಾಜ್ ಶೆಟ್ಟಿ, ಸತೀಶ್ ಉಪಸ್ಥಿತರಿದ್ದರು.

ಆಜ್ರಿ ದೇವಸ್ಥಾನದಲ್ಲಿ ಕಾಣಿಕೆ ಹುಂಡಿ ಕಳವು ಪ್ರಕರಣ

ಇಬ್ಬರು ಆರೋಪಿಗಳ ಬಂಧನ

ಕುಂದಾಪುರ: ಕುಂದಾಪುರ ತಾಲೂಕಿನ ಆಜ್ರಿ ಗ್ರಾಮದ ಶ್ರೀ ಉಮಾಮಹೇಶ್ವರ ದೇವಸ್ಥಾನದಲ್ಲಿ ನಡೆದ ದೇವಸ್ಥಾನದ ಕಾಣಿಕೆ ಹುಂಡಿ ಕಳವು ಪ್ರಕರಣದ ಇಬ್ಬರು ಆರೋಪಿ ಗಳನ್ನು ಬಾಗಲಕೋಟೆ ಜಿಲ್ಲೆಯ ಇಳಕಲ್ ಎಂಬಲ್ಲಿ ಶಂಕರನಾರಾಯಣ ಪೊಲೀಸರು ಬಂಧಿಸಿದ್ದಾರೆ.

ಕಮಲಶಿಲೆ ಗ್ರಾಮದ ಎಳಬೇರು ಮಠದಮನೆ ನಿವಾಸಿ ಸಂದೀಪ ಆಚಾರಿ (28) ಮತ್ತು ಕುಷ್ಟಗಿ ತಾಲೂಕು ಬನಹಟ್ಟಿ ಗ್ರಾಮದ ಮುತ್ತಪ್ಪ ಶರಣಪ್ಪ ವಾಲಿಕರ್ (40) ಬಂಧಿತರು. ಬಂಧಿತರಿಂದ ಸುಮಾರು 1.5 ಲಕ್ಷ ರೂ. ಮೌಲ್ಯದ ಕೃತಕ್ಕೆ ಬಳಸಿದ ಬೈಕ್ ಹಾಗೂ 3 ಮೊಬೈಲ್ ಫೋನ್‌ಗಳನ್ನು ಹಾಗೂ ಕಳ್ಳತನ ಮಾಡಿದ ದೇವಸ್ಥಾನದ ಕಾಣಿಕೆ ಹುಂಡಿಯನ್ನು ವಶಪಡಿಸಿಕೊಂಡಿದ್ದಾರೆ.



ಆಜ್ರಿ ಗ್ರಾಮದ ಶ್ರೀ ಉಮಾಮಹೇಶ್ವರ ದೇವಸ್ಥಾನದಲ್ಲಿ ಏ. 20 ರಂದು ಬೆಳಿಗ್ಗೆ ಹೆಲ್ಮೆಟ್ ಧರಿಸಿದ ವ್ಯಕ್ತಿಯೋರ್ವ ದೇವಸ್ಥಾನದ ಹೊರ ಪೌಳಿಗೆ ಬಂದು ಕಾಣಿಕೆ ಹುಂಡಿಯನ್ನು ಕಳ್ಳತನ ಮಾಡಿಕೊಂಡು ಹೋಗಿದ್ದ. ಈ ಬಗ್ಗೆ ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.


ಪ್ರಕರಣ ತನಿಖೆ ಕೈಗೆತ್ತಿಕೊಂಡ ಶಂಕರನಾರಾಯಣ ಪೊಲೀಸರು ಕುಂದಾಪುರ ಡಿವೈಎಸ್‌ಪಿ ಎಚ್.ಡಿ. ಕುಲಕರ್ಣಿ ಹಾಗೂ ಕುಂದಾಪುರ ಪೊಲೀಸ್ ವೃತ್ತ ನಿರೀಕ್ಷಕ ಸಂತೋಷ್ ಎ. ಕಾಯ್ಕಿಣಿ ಮಾರ್ಗದರ್ಶನದಲ್ಲಿ ಶಂಕರನಾರಾಯಣ ಠಾಣಾ ಪಿಎಸ್‌ಐ ಐ. ಆರ್. ಗಡ್ಡೇಕರ್ ಮತ್ತು ಅಕ್ಷಯ ಕುಮಾರಿ ಎಸ್. ಎನ್. ಹಾಗೂ ಸಿಬ್ಬಂದಿಯವರಾದ ಸಚಿನ್ ಶೆಟ್ಟಿ, ಜಯರಾಮ ನಾಯ್ಕ್, ಚೇತನ್ ಕುಮಾರ್, ನವೀನ್ ನಾಯ್ಕ್, ಕುಂದಾಪುರ ಗ್ರಾಮಾಂತರ ಪೊಲೀಸ್ ಠಾಣಾ ಸಿಬ್ಬಂದಿ ಮೌನೇಶ್ ನಾಯ್ಕ್, ಜಿಲ್ಲಾ ತಾಂತ್ರಿಕ ವಿಭಾಗದ ದಿನೇಶ್ ಅವರು ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಜಾಗತಿಕ ಉದ್ವಿಗ್ನತೆಯ ನಡುವೆಯೂ ಘಮ ಹೆಚ್ಚಿಸಿಕೊಂಡ ಕಾಫಿ ಧಾರಣೆ!

ಮಡಿಕೇರಿ: ಜಾಗತಿಕ ಉದ್ವಿಗ್ನತೆ ನಡುವೆಯೂ ಕಾಫಿ ದರ ನಾಲ್ಕು ವಾರಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ.

ಅರೇಬಿಕಾ ಕಾಫಿ (ಕೆಸಿಎನ್26) ಗುರುವಾರ +11.20 (ಶೇ.3.87)ರಷ್ಟು ಏರಿಕೆಯಾಗಿದ್ದು, ರೋಬಸ್ಟಾ ಕಾಫಿ (ಆರ್‌ಎಂಕೆ26) +153 (ಶೇ.4.32) ಏರಿಕೆಯೊಂದಿಗೆ ದಿನದ ವಹಿವಾಟು ಮುಕ್ತಾಯ ಕಂಡಿದೆ.

ಪರಿಣಾಮವಾಗಿ ಶುಕ್ರವಾರ ಸ್ಥಳೀಯ ಮಾರುಕಟ್ಟೆಯಲ್ಲಿ ಪ್ರಸಕ್ತ 50 ಕೆಜಿ ಅರೇಬಿಕಾ ಪಾರ್ಚ್‌ಮೆಂಟ್‌ಗೆ 23,500-23,800 ರೂ., ಅರೇಬಿಕಾ ಚೆರಿಗೆ 12,000 ರೂ., ರೋಬಸ್ಟಾ ಪಾರ್ಚ್‌ಮೆಂಟ್‌ಗೆ 17,000, ರೋಬಸ್ಟಾ ಚೆರಿಗೆ 8500-9000 ರೂ.ಗಳಿಗೆ ಮಾರಾಟವಾಗಿದೆ.



ಇದರೊಂದಿಗೆ ಕಾಳುಮೆಣಸು ಕೆಜಿಗೆ 690 ರೂ.ಗಳಿಗೆ ಮಾರಾಟವಾಗುತ್ತಿದೆ.

ಕಾಫಿ ಬೆಲೆಗಳು ಗುರುವಾರ ತೀವ್ರ ವಾಗಿ ಏರಿಕೆ ಕಂಡು 4 ವಾರಗಳ ಗರಿಷ್ಠ ಮಟ್ಟಕ್ಕೆ ತಲುಪಿದ್ದು, ಅಮೆರಿಕಾ-ಇರಾನ್ ಯುದ್ಧವು ಮುಂದುವರಿದರೆ ಹಾರ್ಮುಜ್ ಸಮುದ್ರಸಂಧಿ ಮುಚ್ಚುವ ಸಾಧ್ಯತೆ ಇದೆ ಎಂಬ ಆತಂಕ ಕಾಫಿ ಬೆಲೆ ಏರಲು ಕಾರಣವಾಗಿದೆ ಎನ್ನಲಾಗಿದೆ.

ಈ ಸಮುದ್ರಸಂಧಿ ಮುಚ್ಚಿದರೆ ಜಾಗತಿಕ ಸಾಗಾಟ ದರಗಳು, ವಿಮಾ ವೆಚ್ಚ, ರಸಗೊಬ್ಬರ ಮತ್ತು ಇಂಧನದ ಖರ್ಚು ಹೆಚ್ಚಾಗಿ, ಕಾಫಿ ಆಮದುದಾರರು ಮತ್ತು ರೋಸ್ಟರ್‌ಗಳಿಗೆ ವೆಚ್ಚ ಹೆಚ್ಚಾಗುವ ಆತಂಕವಿದ್ದು, ಹಾರ್ಮುಜ್ ಸಮುದ್ರ ಸಂಧಿ ಮುಚ್ಚಿದರೆ ಕಾಫಿ ಪೂರೈಕೆ ಕಗ್ಗಂಟಾಗಲಿದೆ.

ವಿದೇಶಿ ಮಹಿಳೆ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣ ಎಚ್ಚರಿಕೆಯ ಗಂಟೆ | ಪ್ರವಾಸೋದ್ಯಮ ನಿಯಮಕ್ಕೆ ಕೂರ್ಗ್ ಹೋಂಸ್ಟೇ ಅಸೋಸಿಯೇಷನ್ ಆಗ್ರಹ

ಹೋಂಸ್ಟೇ ಪರವಾನಗಿ ರದ್ದು ಕ್ರಮ ಸರಿಯಲ್ಲ: ಮೋಂತಿ ಗಣೇಶ್ ಆಕ್ಷೇಪ

ಮಡಿಕೇರಿ: ದಕ್ಷಿಣ ಕೊಡಗಿನ ಕುಟ್ಟ ಗ್ರಾಮದ ಹೋಂಸ್ಟೇಯೊಂದರಲ್ಲಿ ವಿದೇಶಿ ಮಹಿಳೆಯ ಮೇಲೆ ನಡೆದಿದೆ ಎನ್ನಲಾಗಿರುವ ಲೈಂಗಿಕ ಕಿರುಕುಳ ಪ್ರಕರಣ ಅತ್ಯಂತ ವಿಷಾದಕರ. ಈ ಪ್ರಕರಣ ಎಚ್ಚರಿಕೆಯ ಗಂಟೆಯಾಗಿದ್ದು, ಸರಕಾರ ತಕ್ಷಣ ಪ್ರವಾಸೋದ್ಯಮ ನಿಯಮವನ್ನು ರೂಪಿಸಿ ಪ್ರವಾಸಿಗರ ಸುರಕ್ಷತೆಯ ಬಗ್ಗೆ ಆದ್ಯತೆ ನೀಡಬೇಕೆಂದು ಕೂರ್ಗ್ ಹೋಂಸ್ಟೇ ಅಸೋಸಿಯೇಷನ್ ಒತ್ತಾಯಿಸಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷೆ ಮೋಂತಿ ಗಣೇಶ್ ಅವರು, ಕುಟ್ಟ ಹೋಂಸ್ಟೇ ಪ್ರಕರಣಕ್ಕೆ ಸಂಬಂಧಿಸಿದಂತೆ ಹೋಂಸ್ಟೇಯ ಪರವಾನಗಿಯನ್ನು ಜಿಲ್ಲಾಧಿಕಾರಿಗಳು ರದ್ದು ಮಾಡಿರುವುದು ಸರಿಯಾದ ಕ್ರಮವಲ್ಲ. ಪ್ರಕರಣ ತನಿಖೆಯ ಹಂತದಲ್ಲಿದ್ದು, ಆರೋಪ ಸಾಬೀತಾಗುವವರೆಗೆ ಪರವಾನಗಿಯನ್ನು ಅಮಾನತಿನಲ್ಲಿಡಬಹುದಾಗಿತ್ತು ಎಂದು ಅಭಿಪ್ರಾಯಪಟ್ಟರು.

ಹೋಂಸ್ಟೇ ಮಾಲಕರು ಅಸೋಸಿಯೇಷನ್‌ನ ಸದಸ್ಯರಾಗಿದ್ದು, ಇವರ ವಿರುದ್ಧದ ಆರೋಪದ ಕುರಿತು ಸಮಗ್ರ ತನಿಖೆಯಾಗಲಿ. ಹೋಂಸ್ಟೇಯಲ್ಲಿರುವ ಸಿಸಿ ಕ್ಯಾಮರಾದ ದೃಶ್ಯಗಳನ್ನು ಮತ್ತು ವೈಫೈ ವ್ಯವಸ್ಥೆಗಳನ್ನು ತನಿಖೆಗೆ ಒಳಪಡಿಸಲಿ ಎಂದು ಒತ್ತಾಯಿಸಿದರು. ಹೋಂಸ್ಟೇ ಪರಿಕಲ್ಪನೆಯಿಂದ ಕೊಡಗಿನಲ್ಲಿ ಪ್ರವಾಸೋದ್ಯಮ ಹೆಚ್ಚು ಅಭಿವೃದ್ಧಿ ಹೊಂದುತ್ತಿದ್ದು, ಪ್ರತಿಯೊಂದು ಕ್ಷೇತ್ರದ ವ್ಯಕ್ತಿಗೂ ಇದರಿಂದ ಲಾಭವಾಗುತ್ತಿದೆ ಮತ್ತು ಉದ್ಯೋಗ ಸೃಷ್ಟಿಯಾಗುತ್ತಿದೆ. ಕೂರ್ಗ್ ಹೋಂಸ್ಟೇ ಅಸೋಸಿಯೇಷನ್ 2006ರಿಂದ ಕಾರ್ಯನಿರ್ವಹಿಸುತ್ತಿದ್ದು, ಕೊಡಗಿನ ಪ್ರವಾಸೋದ್ಯಮದ ಬೆಳವಣಿಗೆಗೆ ಪೂರಕವಾಗಿ ನಿಯಮಗಳನ್ನು ಪಾಲಿಸಿಕೊಂಡು ಬಂದಿದೆ ಎಂದು ನುಡಿದರು.

ಹೋಂಸ್ಟೇ ನಡೆಸುತ್ತಿರುವವರಿಗೆ ಸದಸ್ಯತ್ವವನ್ನು ಪಡೆದು ಪ್ರವಾಸೋದ್ಯಮದ ನಿಯಮ ಪಾಲಿಸುವಂತೆ ಮನವಿ ಮಾಡಿಕೊಳ್ಳುತ್ತಾ ಬಂದಿದ್ದೇವೆ. ಆದರೆ ಹಲವು ಹೋಂಸ್ಟೇಗಳು ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಅಕ್ರಮ ಹೋಂಸ್ಟೇಗಳಿಗೆ ಕಡಿವಾಣ ಹಾಕಿ ಹೋಂಸ್ಟೇಗಳ ವಿರುದ್ಧ ಕ್ರಮ ಕೈಗೊಳ್ಳಲು ಯಾವುದೇ ನಿಯಮ ರಚನೆಯಾಗದೇ ಇರುವುದರಿಂದ ಪೊಲೀಸರು ಕ್ರಮಕ್ಕೆ ಮುಂದಾಗುತ್ತಿಲ್ಲ. ಆದ್ದರಿಂದ ಸರಕಾರ ಅಕ್ರಮ ಹೋಂಸ್ಟೇಗಳಿಗೆ ಕಡಿವಾಣ ಹಾಕಲು ಸೂಕ್ತ ರೀತಿಯ ಹೋಂಸ್ಟೇ ನಿಯಮವನ್ನು ರೂಪಿಸಬೇಕೆಂದು ಮೋಂತಿ ಗಣೇಶ್ ಆಗ್ರಹಿಸಿದರು.



ಅಸೋಸಿಯೇಷನ್ ಮಾಜಿ ಅಧ್ಯಕ್ಷ ಕೆ.ಎಂ. ಕರುಂಬಯ್ಯ ಅವರು ಮಾತನಾಡಿ, ಜಿಲ್ಲೆಯಲ್ಲಿ 2478 ಹೋಂಸ್ಟೇಗಳು ಪರವಾನಗಿ ಪಡೆದುಕೊಂಡಿವೆ. ಆದರೆ 2 ರಿಂದ 3 ಸಾವಿರ ಹೋಂಸ್ಟೇಗಳು ಪರವಾನಗಿ ಇಲ್ಲದೆ ಕಾರ್ಯನಿರ್ವಹಿಸುತ್ತಿವೆ. ಇವುಗಳ ವಿರುದ್ಧ ಪ್ರವಾಸೋದ್ಯಮ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಲಿ ಎಂದರು.

- ಹೋಂಸ್ಟೇಯ ಪರವಾನಗಿಯನ್ನು ಜಿಲ್ಲಾಧಿಕಾರಿಗಳು ರದ್ದು ಮಾಡಿರುವುದು ಸರಿಯಾದ ಕ್ರಮವಲ್ಲ.
- ಸರಕಾರ ಅಕ್ರಮ ಹೋಂಸ್ಟೇಗಳಿಗೆ ಕಡಿವಾಣ ಹಾಕಲು ಸೂಕ್ತ ರೀತಿಯ ಹೋಂಸ್ಟೇ ನಿಯಮವನ್ನು ರೂಪಿಸಬೇಕು.

ಕೊಡಗಿನಲ್ಲಿ ಪ್ರವಾಸೋದ್ಯಮ ದೊಡ್ಡ ಮಟ್ಟದಲ್ಲಿ ಬೆಳೆದಿದ್ದು, ಸಮಸ್ಯೆಗಳ ನಿವಾರಣೆಗೆ ಪ್ರವಾಸೋದ್ಯಮ ಇಲಾಖೆಗೆ ಉಪ ನಿರ್ದೇಶಕರ ಅಗತ್ಯವಿದೆ. ಆದ್ದರಿಂದ ಸರಕಾರ ತಕ್ಷಣ ಉಪ ನಿರ್ದೇಶಕರನ್ನು ನೇಮಿಸಿ ಪ್ರವಾಸೋದ್ಯಮ ನಿಯಮ ರೂಪಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಮೀನಾ ಕಾರ್ಯಪ್ಪ ಅವರು ಮಾತನಾಡಿ, ಅಸೋಸಿಯೇಷನ್ ನಿರಂತರ ಸಭೆಗಳನ್ನು ನಡೆಸುತ್ತಾ ಹೋಂಸ್ಟೇ ಮಾಲಕರು ನಿಯಮ ಪಾಲಿಸುವಂತೆ ಜಾಗೃತಿ ಮೂಡಿಸಲಾಗುತ್ತಿದೆ. ಆದರೂ ಜಿಲ್ಲೆಯಲ್ಲಿ ಅನಧಿಕೃತ ಹೋಂಸ್ಟೇಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ವಿರುದ್ಧ ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಅಸೋಸಿಯೇಷನ್ ಉಪಾಧ್ಯಕ್ಷ ನವೀನ್ ಅಂಬೆಕಲ್ ಮಾತನಾಡಿ, ಕುಟ್ಟ ಹೋಂಸ್ಟೇ ಪ್ರಕರಣದ ತನಿಖೆ ಪ್ರಗತಿಯಲ್ಲಿದ್ದು, ಶೀಘ್ರ ಸತ್ಯಾಂಶ ಹೊರ ಬೀಳಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಅಧ್ಯಕ್ಷ ಮದನ್ ಸೋಮಣ್ಣ ಉಪಸ್ಥಿತರಿದ್ದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 25, ಏಪ್ರಿಲ್ 2026 | e-mail dinganthamlr@gmail.com | Website hosadigantha.com



ಬಾಂಧವ್ಯ ಬೆಸೆದ ಉದನೇಶ್ವರ ಬ್ರಹ್ಮಕಲಶ



ಬ್ರಹ್ಮಕಲಶೋತ್ಸವ ಸಂಭ್ರಮದಲ್ಲಿರುವ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನಕ್ಕೆ ಮುಸ್ಲಿಂ ಸಮುದಾಯದ ಗಣ್ಯರು ಶುಕ್ರವಾರ ಮಧ್ಯಾಹ್ನ ಹಸಿರುವಾಣಿ ಹೊರೆಕಾಣಿಕೆ ಸಹಿತ ಆಗಮಿಸಿ ಭೋಜನ ಪ್ರಸಾದ ಸ್ವೀಕರಿಸಿದರು. ಈ ಸಂದರ್ಭ ಸಮಿತಿ ವತಿಯಿಂದ ಅವರನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು.

ಸುತ್ತಮುತ್ತ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗರಿಷ್ಟ 38° ಸೆಲ್ಸಿಯಸ್ ದಾಟುತ್ತಿದೆ ತಾಪಮಾನ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ತಾಪಮಾನ ಈಗ 38 ಡಿಗ್ರಿ ಸೆಲ್ಸಿಯಸ್ ದಾಟಿದ್ದು, ಕೇಂದ್ರ ಹವಾಮಾನ ಇಲಾಖೆ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರಕನ್ನಡ ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಣೆ ಮಾಡಿದೆ.

ಇಂದು ಕೆಲವು ಭಾಗಗಳಲ್ಲಿ ಮಳೆ?

ಹವಾಮಾನ ಮುನ್ಸೂಚನೆ ಪ್ರಕಾರ ಇಂದು (ಏ.25) ಕರಾವಳಿಯ ಕೆಲವು ಭಾಗಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಹೇಳಿದೆ. ಈ ನಡುವೆ ಕಡಲು ಕೂಡಾ ಬಿಸಿಯೇರುತ್ತಿದ್ದು, ಮೀನುಗಳು ಆಳ ಸಮುದ್ರದತ್ತ ಸಾಗುತ್ತಿರುವ ಪರಿಣಾಮ ಕರಾವಳಿಯಲ್ಲಿ ಮೀನುಗಾರಿಕೆಗೆ ಕೂಡಾ ಈಗ 'ಬಿಸಿ' ತಟ್ಟುತ್ತಿದೆ.

ಎಲ್ಲೆಡೆ ಜಲಕ್ಷಾಮಕ್ಕೆ ಬಿಸಿಲ ಮುನ್ನುಡಿ?


ಕಷ್ಟ ಮಾತ್ರೆ ಕಷ್ಟ

ಖಾಲಿಯಾಗುತ್ತಿದೆ ಅಲ್ಲಲ್ಲಿ ಜಲಸಂಪತ್ತು

ಮಂಗಳೂರು: ರಣಬಿಸಿಲಿಗೆ ಎಲ್ಲೆಡೆ ಜಲಮೂಲಗಳು ಬತ್ತಲಾರಂಭಿಸಿದ್ದು, ಎಲ್ಲೆಡೆ ಈ ಬೇಸಿಗೆ ಹೊಸ ಆತಂಕವನ್ನು ತಂದಿಡುತ್ತಿದೆ.

ಮಂಗಳೂರು ನಗರಕ್ಕೆ ನೀರು ಪೂರೈಸುವ ತುಂಬೆ ಅಣೆಕಟ್ಟಿನಲ್ಲಿ ಶುಕ್ರವಾರ 4.53 ಮೀಟರ್ ನೀರಿನ ಮಟ್ಟ ದಾಖಲಾಗಿದ್ದರೆ, ಇನ್ನೊಂದು ಅಣೆಕಟ್ಟು ಎಎಂಆರ್‌ನಲ್ಲಿ 18.53 ಮೀಟರ್ ನೀರಿದೆ.

ನಗರದ ಸ್ಥಿತಿ ಹೀಗಿದ್ದರೆ ಗ್ರಾಮೀಣ ಭಾಗಗಳಲ್ಲಿ ತುಸು ಭಿನ್ನವಾಗಿದೆ. ಬಾವಿ ಬೋರ್‌ವೆಲ್ ನೀರಿನ ಮಟ್ಟ ಸತತವಾಗಿ ಕುಸಿತವಾಗುತ್ತಿದೆ. »» ಪುಟ 6



ಬಾ ಮಳೆಯೇ ಬಾ

ಸದ್ಯ ಕಾಡುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಬೇಸಗೆ ಮಳೆಯೇ ಪರಿಹಾರವಾಗಿದ್ದು, ಈಗ ಎಲ್ಲೆಡೆ ಅದರ ನಿರೀಕ್ಷೆಯಲ್ಲಿ ಜನರಿದ್ದಾರೆ.

ಸುತ್ತಮುತ್ತ

ಸುಣ್ಣಾರಿಯ ಎಕ್ಸಲೆಂಟ್ ಹೈಸ್ಕೂಲುಗೆ ಶೇ. 100 ಫಲಿತಾಂಶ

ಕುಂದಾಪುರ: 2025–2026 ರ ಸಾಲಿನ ಎಸೆಸ್ಸೆಲ್ಸಿ ಪರೀಕ್ಷೆ – 1 ರಲ್ಲಿ ಕುಂದಾಪುರ ಸುಣ್ಣಾರಿಯ ಎಕ್ಸಲೆಂಟ್ ಹೈಸ್ಕೂಲು ಶೇ. 100 ಫಲಿತಾಂಶ ದಾಖಲಿಸಿದೆ. ಪರೀಕ್ಷೆಗೆ ಹಾಜರಾದ ಒಟ್ಟು 28 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇಕಡಾ 100 ಫಲಿತಾಂಶವನ್ನು ಪಡೆದಿದೆ. ಈ ಪೈಕಿ 09 ವಿದ್ಯಾರ್ಥಿಗಳು ಉನ್ನತ ಶ್ರೇಣಿ ಹಾಗೂ 17 ಪ್ರಥಮ ಶ್ರೇಣಿ ಪಡೆಯುವುದರೊಂದಿಗೆ ಅತ್ಯುತ್ತಮ ಸಾಧನೆಯನ್ನು ಗಳಿಸಿದ್ದಾರೆ. ಉತ್ತಮ ಸಾಧನೆ ಗಳಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಎಕ್ಸಲೆಂಟ್ ಆಡಳಿತ ಮಂಡಳಿಯ ಅಧ್ಯಕ್ಷ ಎಂ. ಮಹೇಶ್ ಹೆಗ್ಡೆ ಪ್ರಾಂಶುಪಾಲ ನಾಗರಾಜ ಶೆಟ್ಟಿ ಎಕ್ಸಲೆಂಟ್ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿ ಸರೋಜಿನಿ ಪಿ. ಆಚಾರ್ಯ ಹಾಗೂ ಬೋಧಕ–ಬೋಧಕೇತರ ಸಿಬ್ಬಂದಿಯವರು ಅಭಿನಂದನೆ ಸಲ್ಲಿಸಿದ್ದಾರೆ.

ಪಡುಬಿದ್ರಿ: ಗಣಪತಿ ಪ್ರೌಢಶಾಲೆಗೆ ಶೇ.100



ಪಡುಬಿದ್ರಿ: 2025 26ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಪಡಬಿದ್ರಿ ಗಣಪತಿ ಪ್ರೌಢಶಾಲೆಯು 100 ಶೇ. ಫಲಿತಾಂಶವನ್ನು ದಾಖಲಿಸಿದೆ. 15 ವಿದ್ಯಾರ್ಥಿಗಳು ಪರೀಕ್ಷೆಗೆ ದಾಖಲಾಗಿದ್ದು ಮೂರು ವಿದ್ಯಾರ್ಥಿಗಳು ವಿಶಿಷ್ಟಶ್ರೇಣಿಯಲ್ಲಿ ಉತ್ತೀರ್ಣರಾಗಿದಾರೆ, 9 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯನ್ನು ಹೊಂದಿರುತ್ತಾರೆ. ನಿವೇದಿತಾ 580, ವಂಶಿ ವೈ ಕರ್ಕೇರ 581, ಗ್ರೀಷ್ಮ ಶೆಟ್ಟಿ 563 ಅಂಕ ಗಳಿದ್ದಾರೆ.

ಅಡ್ಡೂರಿನ ಸಹರಾ ಆಂಗ್ಲ ಮಾಧ್ಯಮ ಶಾಲೆಗೆ ಶೇ. 100 ಫಲಿತಾಂಶ




ಕೈಕಂಬ: ಅಡ್ಡೂರಿನ ಸಹರಾ ಆಂಗ್ಲ ಮಾಧ್ಯಮ ಶಾಲೆಯು 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 100 ಫಲಿತಾಂಶ ದಾಖಲಿಸಿದೆ. ಒಟ್ಟು 97 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇದರಲ್ಲಿ 19 ಹುಡುಗರು ಹಾಗೂ 16 ಹುಡುಗಿಯರು ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದಾರೆ. ಶ್ರುತಿ ಕೆ. ಕುಲಾಲ್ ಅವರು 605(ಶೇ. 96.8) ಅಂಕ ಪಡೆದು ಶಾಲೆಗೆ ಪ್ರಥಮ ಬಂದಿದ್ದಾರೆ. ಈಕೆ ಅಮ್ಮುಂಜೆಯ ಕೇಶವ ಕುಲಾಲ್ ಮತ್ತು ಶೀಲಾಮಣಿ ದಂಪತಿಯ ಪುತ್ರಿಯಾಗಿದ್ದಾಳೆ.

ಶ್ರೀ ರಾಮಕುಂಜೇಶ್ವರ ಆಂ.ಮಾ. ಪ್ರೌಢ ಶಾಲೆಗೆ ಶೇ.100



ಕಡಬ: ರಾಮಕುಂಜದ ಶ್ರೀ ರಾಮ ಕುಂಜೇಶ್ವರ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ ಎಲ್ಲಾ 146 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.100 ತೇರ್ಗಡೆ ಫಲಿತಾಂಶ ದಾಖಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಕೆ. ಸೇಸಪ್ಪ ರೈ , ಮುಖ್ಯ ಶಿಕ್ಷಕಿ ಗಾಯತ್ರಿ ಯು.ಎನ್. ತಿಳಿಸಿದ್ದಾರೆ. 84 ಮಂದಿ ವಿಶಿಷ್ಟಶ್ರೇಣಿಯಲ್ಲಿ ಹಾಗೂ 59 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಭೌತಿಕ್ ಎಸ್.–617, ಶರಣ್ಯ ಶೆಟ್ಟಿ–613, ಆದಿತ್ಯ ಎ.ಆರ್. ಭಟ್–610, ಅನಘ ರೈ ಎಂ.–607, ವಂಶಿ ಪಿ.–607, ರುಶಾಂಕ್ ವೈ.ಜೆ.–605, ವರ್ಣಿಕ್ ಎಚ್.ಎಚ್.–603, ಗಗನ್ ಎಸ್.ಎನ್.–601 ಅಂಕಗಳನ್ನು ಗಳಿಸಿದ್ದಾರೆ.

ಕೋಟ ವಿವೇಕ ಬಾಲಕಿಯರ ಪ್ರೌಢಶಾಲೆಗೆ 100 ಶೇ. ಫಲಿತಾಂಶ



ಕೋಟ: ಕೋಟದ ವಿವೇಕ ಬಾಲಕಿಯರ ಪ್ರೌಢಶಾಲೆ ಎಸ್ಸೆಸೆಲ್ಸಿಯಲ್ಲಿ ಶೇ. 100 ಫಲಿತಾಂಶ ದಾಖಲಿಸಿದ್ದು 105 ವಿದ್ಯಾರ್ಥಿಗಳಲ್ಲಿ 22 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ಉತೀರ್ಣರಾಗಿದ್ದಾರೆ. ಪ್ರಿಯಾ ಪ್ರಕಾಶ್ 599, ರಮ್ಯ ಜಿ. ದೇವಾಡಿಗ 597, ದ್ರವ್ಯ 596, ಧನ್ಯಶ್ರೀ ಜೋಗಿ 595, 592– ಲಾಸ್ಯ, ಜೆ ರಕ್ಷಾ 592, ರಕ್ಷಿತ ದೇವಾಡಿಗ 590, ಶ್ರಾವ್ಯ ಆರ್. ಪೂಜಾರಿ 582, ಧನ್ಯ 581, ಅಪೇಕ್ಷ ವಿ. ಪೂಜಾರಿ 578, ಉನ್ನತಿ 575, ಶ್ರೇಯಾ ಎಂ. ಆಚಾರ್ 563, ಪ್ರಾಥನಾ ಎಸ್. ಆಚಾರ್ 563, ಇಂಪನಾ ದೇವಾಡಿಗ 562, ಪ್ರಣಮ್ಯ 560, ವರ್ಷಿಣಿ 557, ಅಲಿಶಾ ಬಾಂಜಿ 554, ವೈಶ್ರವಿ ಪೂಜಾರಿ 552.

ಸುಳ್ಯ ಸೈಂಟ್ ಜೋಸೆಫ್‌ಗೆ ಶೇ.100



■ 71 ಮಂದಿ ವಿಶಿಷ್ಟ ಶ್ರೇಣಿ


ಸುಳ್ಯ: ಸೈಂಟ್ ಜೋಸೆಫ್ ಆಂಗ್ಲಮಾಧ್ಯಮ ಪ್ರೌಢ ಶಾಲೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ತೇರ್ಗಡೆ ದಾಖಲಾಗಿದೆ. ಒಟ್ಟು 102 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಎಲ್ಲಾ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. 71 ಮಂದಿ ವಿಶಿಷ್ಟ ಶ್ರೇಣಿಯಲ್ಲಿ, 28 ಮಂದಿ ಪ್ರಥಮ ಮತ್ತು ಇಬ್ಬರು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಸ್ನೇಹ ಆರ್.–614, ಎಸ್. ಸುಶಾಂತ್ ನಾಯಕ್ ಮತ್ತು ಅನಿಂದ್ರಿತಾ ಡಿ.ಎಸ್.–613, ಮರಿಯಮ್ಮ ರಿಫಾ–612, ರಕ್ಷಕ್ ಕೆ.–611, ದಿಯಾ–611, ಭುವಿ ಜಿ. ರೈ–610, ಸಾನ್ವಿ ಎಚ್.–610, ನಿಹಾರಿಕಾ ಕೆ.ಎಸ್.–605, ಧ್ವನಿ ಕೆ.–605, ಆಕಾಶ್ ಯು.–605, ತಂಜೀಲಾ ಜೆ.ಎಚ್ .–604, ಪ್ರತೀಕ್ಷಾ ಕೆ.ಜಿ.–604, ಫಾತಿಮತ್ ರಿಮ್ಶಾ–601, ಜೀವಿಕಾ ಎಂ.ಎಚ್.–601, ಎಶನ್ ಕೆ.–600 ಅಂಕಗಳನ್ನು ಗಳಿಸಿದ್ದಾರೆ.

ಎಸ್‌ಎಸ್ ಪಿಯು ಪ್ರೌಢ ಶಾಲೆಗೆ ಶೇ.99



ಸುಬ್ರಹ್ಮಣ್ಯ: ಎಸ್.ಎಸ್.ಪಿ.ಯು. ಕಾಲೇಜಿನ ಪ್ರೌಢ ಶಾಲಾ ವಿಭಾಗ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.99 ತೇರ್ಗಡೆ ದಾಖಲಿಸಿದೆ. ಒಟ್ಟು 77 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 76 ಮಂದಿ ತೇರ್ಗಡೆ ಆಗಿ ಶೇ .99 ಉತ್ತೀರ್ಣತೆ ದಾಖಲಿಸಿದೆ. ಪ್ರೌಢಶಾಲೆಯ ವಿದ್ಯಾರ್ಥಿನಿ ರಿತಿಕಾ–609 ಅಂಕಗಳನ್ನು ಗಳಿಸಿದ್ದಾರೆ.

ಸೈಂಟ್ ಜೋಕಿಮ್ಸ್ ಕನ್ನಡ ಶಾಲೆಗೆ ಶೇ.98



ಕಡಬ: ಸೈಂಟ್ ಜೋಕಿಮ್ಸ್ ಕನ್ನಡ ಮಾಧ್ಯಮ ಪ್ರೌಢ ಶಾಲೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ 50 ಮಂದಿ ವಿದ್ಯಾರ್ಥಿಗಳ ಪೈಕಿ 49ಮಂದಿ ಉತ್ತೀರ್ಣರಾಗಿ ಶೇ.98 ತೇರ್ಗಡೆ ದಾಖಲಾಗಿದೆ ಎಂದು ಸಂಸ್ಥೆಯ ಸಂಚಾಲಕ ಫಾ. ಪ್ರಕಾಶ್ ಪೌಲ್ ಡಿ'ಸೋಜ ಹಾಗೂ ಮುಖ್ಯ ಶಿಕ್ಷಕಿ ಶ್ರೀಲತಾ ಕೆ. ತಿಳಿಸಿದ್ದಾರೆ. 8 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 34 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣ ರಾಗಿದ್ದಾರೆ. ಚೈತನ್ಯ ಪಿ.–610, ವರ್ಷಿತಾ–600, ವಂಶಿ ಬಿ.ಎಂ.–581, ಎಸ್.ಎಂ. ಫಾತಿಮತ್ ನಾಝಿಯ–565 ಅಂಕಗಳನ್ನು ಗಳಿಸಿದ್ದಾರೆ.

ಕಡಬ ಸೈಂಟ್ ಆ್ಯನ್ಸ್ ಆಂಗ್ಲ ಪ್ರೌಢ ಶಾಲೆಗೆ ಶೇ.100





ಕಡಬ: ಸೈಂಟ್ ಆ್ಯನ್ಸ್ ಆಂಗ್ಲಪ್ರೌಢ ಶಾಲೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ ಎಲ್ಲಾ 62 ಮಂದಿ ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶೇ.100 ತೇರ್ಗಡೆ ದಾಖಲಾಗಿದೆ ಎಂದು ಸಂಚಾಲಕ, ಧರ್ಮಗುರು ಪ್ರಕಾಶ್ ಪೌಲ್ ಡಿ'ಸೋಜ, ಪ್ರಾಂಶುಪಾಲ ಧರ್ಮಗುರು ಸುನಿಲ್ ಪ್ರವೀಣ್ ಪಿಂಟೋ ತಿಳಿಸಿದ್ದಾರೆ. 22 ಮಂದಿಗೆ ವಿಶಿಷ್ಟ ಶ್ರೇಣಿ, 37 ಮಂದಿಗೆ ಪ್ರಥಮ ಶ್ರೇಣಿ ಲಭಿಸಿದೆ. ಜಿಯಾನ್ ಮರಿಯಾ ಅಬ್ರಹಾಂ 612, ಲವ್ಯಶ್ರೀ 606, ಅಮೃತಾ ಪಿ.ಎಸ್. 605, ಲಿಯೋನಾ ವರ್ಗೀಸ್ 603, ನಫೀಸತ್ ರುಹೀನಾ–599, ಸೋನು–572, ಅಂಜನಾ ಜೇಮ್ಸ್ 569 ಅಂಕ ಗಳಿಸಿದ್ದಾರೆ.

ಕೋಟ ವಿವೇಕ ಪದವಿಪೂರ್ವ ಕಾಲೇಜು ಪ್ರೌಢಶಾಲೆಯ ಸಾಧಕರು



ಕೋಟ: ವಿವೇಕ ವಿದ್ಯಾಸಂಸ್ಥೆಯ 2025–26ನೇ ಸಾಲಿನ ಎಸ್ಸೆಸೆಲ್ಸಿಯಲ್ಲಿ 123 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 121 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಅವರಲ್ಲಿ 25 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 81 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶ್ರೀಶಾ ಆರ್ ಪೂಜಾರಿ 594, ಶ್ರೇಯಸ್ ಎಸ್ ದೇವಾಡಿಗ–590, ಮನ್ವಿತಾ ಎಂ ಮೊಗವೀರ 592, ಶರನ್ – 585, ಪ್ರಥ್ವಿಶ್ ಆರ್ ಪೂಜಾರಿ–580, ಪ್ರಸಾದ ಎನ್ ದೇವಾಡಿಗ–574, ಹರೀಶ್ ದೇವಾಡಿಗ–574, ಶ್ರೀನಿಧಿ– 573, ಅಕ್ಷಯ್– 564, ಶ್ರೇಯಸ್ ಮಧ್ಯಸ್ಥ–563, ವಿಕಾಸ್ ಎಸ್ ಗೋಳಿ– 562, ಶ್ರಾವತ್ ಯು ಮೊಗವೀರ 560, ಸಮೃದ್ಧಿಜೀವನ್ – 557, ಧನುಷ್ ಸಿ– 553, ವಿವೇಕ್ ಪೂಜಾರಿ–553, ನೂತನ್ –553, ಮೊಹಮ್ಮದ್ ಸಿರಾಜ್ –551, ಶಯನ್ ಸುಧಾಕರ್ ಪೂಜಾರಿ–552.

ಬಿಳಿನೆಲೆ ಶ್ರೀ ಗೋಪಾಲಕೃಷ್ಣ ಕ.ಮಾ.ಪ್ರೌ. ಶಾಲೆ ಶೇ.100



ಕಡಬ: ಬಿಳಿನೆಲೆ ಶ್ರೀ ಗೋಪಾಲಕೃಷ್ಣ ಕನ್ನಡ ಮಾಧ್ಯಮ ಪ್ರೌಢ ಶಾಲೆಯಿಂದ ಎಸ್ಸೆಸ್ಸೆಲ್ಸಿಯಲ್ಲಿ ಎಲ್ಲ 35 ಉತ್ತೀರ್ಣರಾಗಿ ಶೇ.100 ತೇರ್ಗಡೆ ದಾಖಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಶ್ರೀಕೃಷ್ಣ ಶರ್ಮ ಹಾಗೂ ಮುಖ್ಯ ಶಿಕ್ಷಕ ಸತ್ಯಶಂಕರ ಭಟ್ ತಿಳಿಸಿದ್ದಾರೆ. 10 ಮಂದಿ ವಿಶಿಷ್ಟಶ್ರೇಣಿಯಲ್ಲಿ ಹಾಗೂ 21 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಸೌಜನ್ಯ ಕೆ.ಆರ್ .–583, ಪ್ರೀತಿ ಬಿ.–581, ಹರಿಣಿ–573 ಅಂಕಗಳನ್ನು ಗಳಿಸಿದ್ದಾರೆ.

ಶೇ. 100 ಫಲಿಂತಾಶ ದಾಖಲಿಸಿದ ದೇರಳಕಟ್ಟೆ ವಿದ್ಯಾರತ್ನ ಆಂಗ್ಲಮಾಧ್ಯಮ ಶಾಲೆ



ಮಂಗಳೂರು: ದೇರಳಕಟ್ಟೆ ವಿದ್ಯಾರತ್ನ ಆಂಗ್ಲಮಾಧ್ಯಮ ಶಾಲೆ ಶೇ. 100 ಫಲಿತಾಂಶ ದಾಖಲಿಸಿದೆ. 15 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ 43 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ 5 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ 3 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಜೀವನ್ 610, ಮೆಹಕ್ ಫಾತಿಮಾ 604, ರಿಹಾ ಝೈನಬಾ 598, ಯುಕ್ತಿ ಶೆಟ್ಟಿ 591 ಅಂಕ ಪಡೆದಿದ್ದಾರೆ. ವಿದ್ಯಾರ್ಥಿಗಳಿಗೆ ಸಂಸ್ಥೆಯ ಸಂಸ್ಥಾಪಕ ಕೆ. ರವೀಂದ್ರ ಶೆಟ್ಟಿ ಉಳಿದೊಟ್ಟು ಅಭಿನಂದನೆ ಸಲ್ಲಿಸಿದ್ದಾರೆ.

ಸುಬ್ರಹ್ಮಣ್ಯ: ಕುಮಾರಸ್ವಾಮಿಗೆ ಪ್ರೌಢ ಶಾಲೆ ಶೇ.100



ಸುಬ್ರಹ್ಮಣ್ಯ: ಕುಮಾರಸ್ವಾಮಿ ಪ್ರೌಢ ಶಾಲೆ ಎಸ್ಸೆಸ್ಸೆಲ್ಸಿ ಶೇ. 100 ಫಲಿತಾಂಶ ದಾಖಲಿಸಿದೆ. ಒಟ್ಟು 96 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 96 ಮಂದಿ ತೇರ್ಗಡೆ ಆಗಿ ಶೇ.100. ತೇರ್ಗಡೆ ದಾಖಲಿಸಿದೆ. 60 ಮಂದಿ ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದು ವಿಜಯಲಕ್ಷ್ಮೀ ಸುಬ್ರಹ್ಮಣ್ಯ–614, ಸುಸ್ಮಿತಾ ನಡುಗಲ್ಲು–613, ಆಶಿಕ್ ಕೆ.–609 ಅಂಕಗಳನ್ನು ಪಡೆದಿದ್ದಾರೆ.

ಅಡ್ಯನಡ್ಕ ಜನತಾ ಪ್ರೌಢ ಶಾಲೆ ಶೇ.100




ಅಡ್ಯನಡ್ಕ: ಜನತಾ ಪ್ರೌಢ ಶಾಲೆ ಅಡ್ಯನಡ್ಕ 2025–26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ–1ರಲ್ಲಿ ಶೇ.100 ತೇರ್ಗಡೆ ದಾಖಲಿಸಿದೆ. ಎಂ.ಎಸ್. ಅನನ್ಯ–574, ರಾಕೇಶ್ ಸಿ.ಎಚ್.–564, ಖದೀಜತ್ ಅಜ್ಮೀನ–547 ಅಂಕಗಳೊಂದಿಗೆ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಪರೀಕ್ಷೆಗೆ ಹಾಜರಾದ ಒಟ್ಟು 30 ವಿದ್ಯಾರ್ಥಿಗಳಲ್ಲಿ ಇಬ್ಬರು ಎ+, ಒಬ್ಬರು ಎ, 6 ಮಂದಿ ಬಿ+, 13 ಮಂದಿ ಬಿ, 5 ಮಂದಿ ಸಿ+, 3 ಮಂದಿ ಸಿ ಗ್ರೇಡ್ ಗಳಿಸಿದ್ದಾರೆ.


ಕುಂತೂರು ಪದವು ಸೈಂಟ್ ಜಾರ್ಜ್ ಕನಡ ಮಾಧ್ಯಮ ಪ್ರೌಢ ಶಾಲೆಗೆ ಶೇ. 100 ಫಲಿತಾಂಶ



ಕಡಬ: ಕುಂತೂರು ಪದವು ಸೈಂಟ್ ಜಾರ್ಜ್ ಕನ್ನಡ ಮಾಧ್ಯಮ ಪ್ರೌಢ ಶಾಲೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ 37 ಉತ್ತೀರ್ಣರಾಗಿ ಶೇ.100 ತೇರ್ಗಡೆ ದಾಖಲಾಗಿದೆ. 8 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 23 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ಸಂಸ್ಥೆಯ ಸಂಚಾಲಕ ತೋಮಸ್ ಕೆ.ಎಸ್. ಹಾಗೂ ಮುಖ್ಯ ಶಿಕ್ಷಕ ಹರಿಶ್ಚಂದ್ರ ಕೋಡ್ಲ ತಿಳಿಸಿದ್ದಾರೆ. ಫಾತಿಮತ್ ಕೌಠಿಯ–582, ಆಯಿಶತ್ ಅಸ್ನಾ–579, ಚರಿತ್–571, ರಚನಾ–563 ಅಂಕ ಗಳಿಸಿದ್ದಾರೆ.

ಕುಂದಾಪುರ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಶಾಲೆ ಸಾಧಕ ವಿದ್ಯಾರ್ಥಿಗಳು





ಕುಂದಾಪುರ: ಎಸೆಸ್ಸೆಲ್ಸಿಯಲ್ಲಿ 600ಕ್ಕೂ ಮಿಕ್ಕಿ ಅಂಕ ಪಡೆದು ಸಾಧನೆ ಮಾಡಿದ ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿಗಳು.

ವಂಶಿ ಮದ್ದೋಡಿ (619), ಪ್ರಣತಿ ಸಿ. (618), ರಿಧಿಮಾ ಬಿ. ಆರ್. (618), ಅದ್ವಿತಾ ಎಸ್. (617), ಪ್ರಮಥ ಉಳ್ಳೂರ ಕೆ. (616), ಸಮರ್ಥ್ ಎಸ್. (615), ಹರಿದಾಸ್ ಆರ್. ಮಲ್ಯ (614), ಧ್ವನಿ ಕೆ. (613), ನಿಮೇಶ್ ಜಿ. ದೇವಾಡಿಗ (613), ಅಶ್ವಿನ್ ಎಸ್. ಶೆಟ್ಟಿ (612), ಸಿಂಚನಾ (612), ಎಸ್. ವೈ. ಸೂರಜ್ ಆಚಾರ್ಯ (612), ತನ್ವಿ (611), ಅಮೋಘ್ ಜಿ. (611), ಜ್ಯೇಷ್ಠ ಸುರೇಶ್ ರಾವ್ (611), ಬಿ. ದೇವಿಕಾ ಭಟ್ (610), ರಜತ್ ಆರ್. ಪೂಜಾರಿ (609), ಪ್ರಾಣೇಶ್ ಎಂ. (609), ಅರ್ಪಿತಾ ವಿ. ಹೊನ್ನನ್ (608), ಪ್ರತೀಕ್ಷಾ (608), ಕಾರ್ತಿಕ್ ಯು. (608), ಅನುಷ್ (607), ನಿರ್ಮಿತ್ ಪುತ್ರನ್ (606), ಮೇಧಾ ಆರ್. ಜಿ. (606), ಪ್ರತೀಕ್ಷಾ ಎಂ. (606), ನಿಹಾಲ್ ಸೋಮಶೇಖರ್ ಮೇಸ್ತ (606), ಗೀತಾ ಶಾನುಭಾಗ್ ಎನ್. (605), ಕನ್ವಿತಾ ರವಿ ಪೂಜಾರಿ (605), ಮೇಘನಾ ರಾಜು ನಾಯ್ಕ್ (605), ಸಂಜನಾ ಎಸ್. ಪೂಜಾರಿ (605), ಬಿ. ದಿನೇಶ್ ಶೆಣೈ (605), ಶ್ರದ್ಧಾ (605), ಪವನ್ ಶೆಣೈ (605), ಶ್ರೀರಕ್ಷಾ ಎಚ್ ಕಾರಂತ್ (604), ವೃಂದಾ ಕೆ. (604), ಐಶ್ವರ್ಯ ಕೆ. ಐತಾಳ್ (604), ಮಾನ್ಯತಾ ಆರ್. ಸಾರಂಗ್ (604), ಸಮೀಕ್ಷಾ ಜಗದೀಶ್ ಪೂಜಾರಿ (604), ತನ್ವಿ ಪಿ. ಗಾಣಿಗ (604), ಸಾತ್ವಿಕ್ ಆರ್. ರಾವ್ (604), ಕೃಪಾ ಎಂ. ಪುತ್ರನ್ (603), ಶ್ರೀನಿಧಿ ಪ್ರಕಾಶ್ ಗೌಡ (603), ಪ್ರದ್ಯುಮ್ನ ಕಿರಣ್ ಗುಲ್ವಾಡಿ (603), ಇಂಚರಾ ಎ. ಭಂಡಾರಿ (602), ಅಕ್ಷರ ಕೆ. (601), ಶೀತಲ್ ಕೆ. (601)

ಕಡಬ ಸರಕಾರಿ ಪ್ರೌಢ ಶಾಲೆಗೆ ಶೇ.93.75



ಕಡಬ: ಇಲ್ಲಿನ ಸರಕಾರಿ ಕನ್ನಡ ಮಾಧ್ಯಮ ಪ್ರೌಢ ಶಾಲೆಯಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಹಾಜರಾದ 80 ಮಂದಿ ವಿದ್ಯಾರ್ಥಿಗಳ ಪೈಕಿ 75 ಮಂದಿ ಉತ್ತೀರ್ಣರಾಗಿ ಶೇ.93.75 ತೇರ್ಗಡೆ ಫಲಿತಾಂಶ ದಾಖಲಾಗಿದೆ ಎಂದು ಸಂಸ್ಥೆಯ ಉಪ ಪ್ರಾಂಶುಪಾಲೆ ಡಾ. ವೇದಾವತಿ ಬಿ. ತಿಳಿಸಿದ್ದಾರೆ. 6 ಮಂದಿ ವಿಶಿಷ್ಟ ಶ್ರೇಣಿಯಲ್ಲಿ ಹಾಗೂ 42 ಮಂದಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ವರ್ಷಿತಾ ಕೆ.– 581, ಕೆ.ಎಚ್. ಅದೀಬ– 569, ನೇಹಾ ಎ.ಎಸ್.– 568, ಕೆ.ಆರ್. ತೃಪ್ತಿ –562 ಅಂಕಗಳನ್ನು ಗಳಿಸಿದ್ದಾರೆ.

ಹರಿಹರ ಪಳ್ಳತ್ತಡ್ಕ ಪ್ರೌಢಶಾಲೆಗೆ ಶೇ. 100

ಸುಬ್ರಹ್ಮಣ್ಯ: ಹರಿಹರ ಪಳ್ಳತ್ತಡ್ಕದ ಸರ್ಕಾರಿ ಪ್ರೌಢಶಾಲೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ತೇರ್ಗಡೆ ದಾಖಲಿಸಿದೆ. ಒಟ್ಟು 2 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು ಇಬ್ಬರೂ ತೇರ್ಗಡೆ ಹೊಂದಿ ಶೇ.100 ಉತ್ತೀರ್ಣತೆ ದಾಖಲಿಸಿದೆ. ಧೀರಜ್ ಮತ್ತು ಶ್ರಾವಣಿ ಪರೀಕ್ಷೆ ಬರೆದವರಾಗಿದ್ದಾರೆ.

ಮುಲ್ಕಿ ಪ್ರಜಾಸೌಧದಲ್ಲಿ ಮುಲ್ಕಿ-ಮೂಡುಬಿದಿರೆ ಶಾಸಕ ಉಮಾನಾಥ ಕೋಟ್ಯಾನ್ ಅವರ ಸೇವಕ ಕಚೇರಿ ಕಾರ್ಯಾರಂಭ

ಶಾಸಕರ ಜನಮನ್ನಣೆ ಕಾರ್ಯಗಳಿಂದ ಪ್ರಜೆಗಳ ಪ್ರೀತಿ ಗಳಿಸಲಿ, ಜನರ ಬದುಕು ಹಸನಾಗಲಿ: ಆಸ್ರಣ್ಣ

ಮುಲ್ಕಿ: ಗೇರುಕಟ್ಟೆಯ ಮುಲ್ಕಿ ತಾಲೂಕಿನ ಆಡಳಿತ ಸೌಧ, ನೂತನ ಪ್ರಜಾಸೌಧದಲ್ಲಿ ಮುಲ್ಕಿ–ಮೂಡುಬಿದಿರೆ ಶಾಸಕ ಉಮಾನಾಥ ಕೋಟ್ಯಾನ್ ಅವರ ಸೇವಕ ಕಚೇರಿಯು ಶುಕ್ರವಾರ ಕಾರ್ಯಾರಂಭಗೊಂಡಿತು.



ಕಟೀಲು ಕ್ಷೇತ್ರದ ಅರ್ಚಕ ವೇದಮೂರ್ತಿ ಹರಿನಾರಾಯಣ ದಾಸ ಆಸ್ರಣ್ಣ ಉದ್ಘಾಟಿಸಿದರು. ಈ ವೇಳೆ ಆಶೀರ್ವಚನ ನೀಡಿದ ಅವರು, ಸೇವಾ ಕಚೇರಿಯ ಮೂಲಕ ಶಾಸಕರಿಂದ ಜನಮನ್ನಣೆಯ ಕಾರ್ಯಗಳು ನಡೆದು ಪ್ರಜೆಗಳ ಪ್ರೀತಿ ಗಳಿಸಲಿ, ಜನಸಾಮಾನ್ಯರ ಬದುಕು ಹಸನಾಗಲಿ ಎಂದು ಆಶೀರ್ವಚನ ನೀಡಿದರು

ಮುಲ್ಕಿ ಸೀಮೆಯ ದುಗ್ಗಣ್ಣ ಸಾವಂತ ಅರಸರು ಶುಭ ಹಾರೈಸಿದರು. ಮುಲ್ಕಿ ಮೂಡುಬಿದಿರೆ ಶಾಸಕ ಉಮಾನಾಥ ಕೋಟ್ಯಾನ್ ಮಾತನಾಡಿ, ಸೇವಕ ಕಚೇರಿಯಲ್ಲಿ ವಾರದ ಪ್ರತೀ ಶನಿವಾರ ತಾನು ಉಪಸ್ಥಿತನಿದ್ದು ಜನರ ಸೇವೆಗೆ ಸದಾ ಬದ್ಧನಾಗಿ ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ನ್ಯಾಯ ದೊರಕಿಸಿಕೊಡಲು ಪ್ರಯತ್ನಿಸುವುದಾಗಿ ಹೇಳಿದರು

ಅತಿಥಿಗಳಾಗಿ ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು, ಜ್ಯೋತಿಷಿ ವಿಶ್ವನಾಥ ಭಟ್, ಮುಲ್ಕಿ ತಾಲೂಕು ತಹಶೀಲ್ದಾರ್ ಶ್ರೀಧರ ಮುಂದಲಮನಿ, ಉಪತಹಶೀಲ್ದಾರ್ ದಿಲೀಪ್ ರೋಡ್ಕರ್, ಮಾಜಿ ಸಚಿವ ಕೃಷ್ಣ ಜೆ. ಪಾಲೆಮಾರ್, ಉದ್ಯಮಿ ಅರವಿಂದ ಪೂಂಜ ಕಾರ್ನಾಡ್, ಉದ್ಯಮಿ ಶರತ್ ಸಾಲ್ಯಾನ್ ಬೆಂಗಳೂರು, ಬಿಜೆಪಿ ನಾಯಕರಾದ ಮೇಘನಾಥ ಶೆಟ್ಟಿ ಬಾಹುಬಲಿ ಪ್ರಸಾದ್ ಮೂಡುಬಿದಿರೆ, ಮಂಡಲಾಧ್ಯಕ್ಷ ದಿನೇಶ್ ಪುತ್ರನ್, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ್ ಮಲ್ಲಿಗೆಯಂಗಡಿ, ವೆಂಕಟರಮಣ ದೇವಸ್ಥಾನದ ಮೊಕ್ತೇಸರ ಅತುಲ್ ಕುಡ್ವ ಭುವನಾಭಿರಾಮ ಉಡುಪ, ದೇವಪ್ರಸಾದ್ ಪುನರೂರು, ರಂಗನಾಥ ಶೆಟ್ಟಿ ವಿನೋದ್ ಸಾಲ್ಯಾನ್ ಬೆಳ್ಳಾಯರು, ಡಾ. ಹರಿಶ್ಚಂದ್ರ ಪಿ. ಸಾಲ್ಯಾನ್, ಹಳೆಯಂಗಡಿ ಪಿಸಿಎ ಬ್ಯಾಂಕ್ ಅಧ್ಯಕ್ಷ ಸತೀಶ್ ಭಟ್ ಕೊಳುವೈಲು, ಮುಲ್ಕಿ ನಗರ ಪಂಚಾಯತ್ ಮುಖ್ಯಾಧಿಕಾರಿ ಮಧುಕರ್, ಮಾಜಿ ಅಧ್ಯಕ್ಷ ಸತೀಶ್ ಅಂಚನ್, ಮಾಜಿ ಸದಸ್ಯ ಪುತ್ತು ಬಾವ, ರಾಮಚಂದ್ರ ನಾಯ್ಕ ಕೋಲ್ನಾಡ್ ಗುತ್ತು, ಪಾಂಡುರಂಗ ಭಟ್ ಎಸ್‌ವಿಟಿ, ಮುಲ್ಕಿ ಈಶ್ವರ ಕಟೀಲು, ಮುಲ್ಕಿ ಬಂಟರ ಸಂಘದ ಅಧ್ಯಕ್ಷ ಅಶೋಕ್ ಕುಮಾರ್ ಶೆಟ್ಟಿ, ಮುಲ್ಕಿ ಬಿಲ್ಲವ ಸಂಘದ ಗೌರವಾಧ್ಯಕ್ಷ ಗೋಪಿನಾಥ ಪಡಂಗ, ಜೀವನ್ ಶೆಟ್ಟಿ ಕಾರ್ನಾಡ್, ದೇವಿಪ್ರಸಾದ್ ಕೆಂಪುಗುಡ್ಡೆ, ಲಕ್ಷ್ಮಣ ಸಾಲ್ಯಾನ್ ಪುನರೂರು, ರಂಜಿತ್ ಪೂಜಾರಿ ತೊಡಾರ್, ಸಂಜೀವ ದೇವಾಡಿಗ ಬಪ್ಪನಾಡು, ಪುಷ್ಪರಾಜ ಶೆಟ್ಟಿ ಬೇಳಾಯರು, ಮನೋಹರ ಕೋಟ್ಯಾನ್, ಹರ್ಷರಾಜ ಶೆಟ್ಟಿ ಪುರುಷೋತ್ತಮ ಬಡಗುಹಿತ್ಲು, ಸ್ಟೇನಿ ಪಿಂಟೋ ಕಿನ್ನಿಗೋಳಿ, ನವೀನ್ ರಾಜ್ , ಜೀವನ್ ಶೆಟ್ಟಿ ಅಂಗರಗುಡ್ಡೆ ಮತ್ತಿತರರಿದ್ದರು. ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಸುನಿಲ್ ಆಳ್ವ ನಿರೂಪಿಸಿದರು.

ಶ್ರೀ ಚಂದ್ರಶೇಖರ ಸ್ವಾಮೀಜಿ ಶುಭಹಾರೈಕೆ

ಗೇರುಕಟ್ಟೆಯ ಮುಲ್ಕಿ ತಾಲೂಕಿನ ಆಡಳಿತ ಸೌಧ, ನೂತನ ಪ್ರಜಾಸೌಧದಲ್ಲಿ ಮುಲ್ಕಿ ಮೂಡಬಿದ್ರೆ ಶಾಸಕ ಉಮಾನಾಥ ಕೋಟ್ಯಾನ್ ಸೇವಕ ನೂತನ ಕಚೇರಿಯ ಉದ್ಘಾಟನೆ ಸಂದರ್ಭ ಬೆಂಗಳೂರಿನ ಆಧ್ಯಾತ್ಮಿಕ ವಿಶ್ವಗುರು ಶ್ರೀ ಚಂದ್ರಶೇಖರ ಸ್ವಾಮೀಜಿ ಶುಭಹಾರೈಸಿದರು. ಸ್ವಾಮೀಜಿಯವರು ಶಾಸಕ ಉಮಾನಾಥ ಕೋಟ್ಯಾನ್ ಅವರಿಗೆ ವಿಡಿಯೋ ಕಾಲ್ ಮೂಲಕ ಮಾತನಾಡಿ, ಕಚೇರಿಯಲ್ಲಿ ಶಾಸಕರು ಜನರ ಸೇವೆ ಮೂಲಕ ಉತ್ತಮ ಕಾರ್ಯ ನಡೆಸಲಿ ಹಾಗೂ ಜನರ ಸಮಸ್ಯೆಗಳು ಶಾಸಕರ ಮುಖಾಂತರ ಪರಿಹಾರವಾಗಿ ಕ್ಷೇತ್ರದ ಅಭಿವೃದ್ಧಿ ನಿರಂತರವಾಗಿ ನಡೆಯಲಿ ಎಂದು ಶುಭ ಹಾರೈಸಿದರು. ಈ ಸಂದರ್ಭ ಆಶ್ರಮದ ನಿರ್ದೇಶಕರಾದ ರಜನಿಸಿ ಭಟ್, ರಾಹುಲ್ ಚಂದ್ರಶೇಖರ್ ಸಂಚಾಲಕರದ

ಸುತ್ತಮುತ್ತ

ಅರ್ಜಿಗಳ ಆಹ್ವಾನ

ಕಾಸರಗೋಡು: ಕಾಞಂಗಾಡು ಬ್ಲಾಕ್ ವ್ಯಾಪ್ತಿಯಲ್ಲಿರುವ ಬಂಗಳಂ ಬಾಲಕರ ಮೆಟ್ರಿಕ್ ಪೂರ್ವ ಹಾಸ್ಟೆಲ್ ಮತ್ತು ಕಾಞಂಗಾಡು ನಗರಸಭೆ ಚೆಮ್ಮಟ್ಟಂವಯಲ್ ಬಾಲಕಿಯರ ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳಲ್ಲಿ ಖಾಲಿ ಇರುವ ಸೀಟುಗಳಿಗೆ ಪರಿಶಿಷ್ಟ ಜಾತಿ ಅಭಿವೃದ್ಧಿ ಇಲಾಖೆಯು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಎಸ್‌ಸಿ ವರ್ಗದ ವಿದ್ಯಾರ್ಥಿಗಳ ಅನುಪಸ್ಥಿತಿಯಲ್ಲಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಪರಿಗಣಿಸಲಾಗುತ್ತದೆ. ಹಾಸ್ಟೆಲ್‌ನಲ್ಲಿ ಶೇ.10 ರಷ್ಟು ಸೀಟುಗಳನ್ನು ಇತರ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಕಾಯ್ದಿರಿಸಲಾಗಿದೆ. 5ರಿಂದ 9ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿ ಗಳು ಅರ್ಜಿ ಸಲ್ಲಿಸಬಹುದು. ವಸತಿ, ಆಹಾರ – ಅಧ್ಯಯನ ಸಾಮಗ್ರಿಗಳು ಸೇರಿದಂತೆ ಸೌಲಭ್ಯಗಳು ಉಚಿತ. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನ ಮೇ 10 . ಅರ್ಜಿ ನಮೂನೆಯನ್ನು ಕಾಞಂಗಾಡು ಬ್ಲಾಕ್ ಪರಿಶಿಷ್ಟ ಜಾತಿ ಅಭಿವೃದ್ಧಿ ಕಚೇರಿಯಿಂದ ಪಡೆಯಬಹುದು. ಮಾಹಿತಿಗೆ 9446040629 ಕರೆ ಮಾಡಬಹುದು.

ಶ್ರೀ ಕೋಟೆ ಮಾರಿಯಮ್ಮ ದೇವಿ ಪ್ರತಿಷ್ಠಾಪನಾ ವಾರ್ಷಿಕೋತ್ಸವ

ಮಡಿಕೇರಿ: ಮಡಿಕೇರಿ ನಗರದ ನಾಲ್ಕು ಶಕ್ತಿ ದೇವತೆಗಳಲ್ಲಿ ಒಂದಾದ ಶ್ರೀ ಕೋಟೆ ಮಾರಿಯಮ್ಮ ದೇವಾಲಯದಲ್ಲಿ ಶ್ರೀ ಕೋಟೆ ಮಾರಿಯಮ್ಮ ದೇವಿಯ ಪ್ರತಿಷ್ಠಾಪನಾ ವಾರ್ಷಿಕೋತ್ಸವ, ನಾಗ ಪ್ರತಿಷ್ಠಾಪನಾ ಮಹೋತ್ಸವ, ನಾಗದರ್ಶನ, ಪಾಷಣಮೂರ್ತಿ ದೈವದ ಪ್ರತಿಷ್ಠಾಪನಾ ವಾರ್ಷಿಕೋತ್ಸವ, ಕೋಲ ಹಾಗೂ ಅಗೆಲು ಸೇವೆ ನಡೆಯಿತು. ಪಯ್ಯನೂರು ಹೆಸರಾಂತ ತಂತ್ರಿಗಳಾದ ಆಚಾರ್ಯ ಈಶ್ವರನ್ ನಂಬೂದರಿರವರ ನೇತೃತ್ವದಲ್ಲಿ ದೇವಿಯ ಸನ್ನಿಧಿಯಲ್ಲಿ ಧಾರ್ಮಿಕ ವಿಧಿವಿಧಾನಗಳು ನೆರವೇರಿತು. ಮಹಾಗಣಪತಿ ಹೋಮ, ನವಕ ಪಂಚಗವ್ಯ ಕಳಶ ಪೂಜೆ, ನವಕ ಪಂಚಗವ್ಯ ಕಳಶಾಭಿಷೇಕ, ಸರ್ವಾಲಂಕಾರ ಮಹಾಪೂಜೆ, ಪಾಣಮೂರ್ತಿ ದೈವದ ಕಳಶ ಪೂಜೆ ನಡೆಯಿತು. ನಾಗ ಪ್ರತಿಷ್ಠಾಪನೆ ವಾರ್ಷಿಕೋತ್ಸವ ಪ್ರಯುಕ್ತ ಬೆಳಿಗ್ಗೆ ಆಶ್ಲೇಷ ಬಲಿ, ನಾಗಪೂಜೆ, ಕ್ಷೀರಾಭಿಷೇಕ, ದೇವಿಯ ಸನ್ನಧಿಯಲ್ಲಿ ತುಲಾಭಾರ ಸೇವೆ, ಉಡುಪಿಯ ಪೆರ್ಲಂಬಾಡಿಯ ಖ್ಯಾತ ನಾಗ ಪಾತ್ರಿಗಳಾದ ಶ್ರೀ ರಮಾನಂದ ಭಟ್ ಅವರಿಂದ ನಾಗದರ್ಶನ ನಡೆಯಿತು.

ಇಂದು ಬಸ್ತಿಕೋಡಿ ಶ್ರೀ ದೈವಸ್ಥಾನದಲ್ಲಿ ಪುನ: ಪ್ರತಿಷ್ಠೆ ನೇಮ

ಬಂಟ್ವಾಳ: ತಾಲೂಕಿನ ಪಿಲಿಮೊಗರು ಗ್ರಾಮದ ಬಸ್ತಿಕೋಡಿ ಶ್ರೀ ಸತ್ಯ ಸಾರಮಾನಿ ಆಲೇರಿ ಪಂಜುರ್ಲಿ ದೈವಸ್ಥಾನ ಟ್ರಸ್ಟ್‌ನಿಂದ ಕಂಬಳದೋಡಿ ಸೀತಾರಾಮ ಭಟ್ ಅವರ ಪೌರೋಹಿತ್ಯದಲ್ಲಿ ಬೆಮ್ಮೆರ್, ಆಲೇರ ಪಂಜುರ್ಲಿ, ಸತ್ಯಸಾರಮಾನಿ,ಚಾವುಂಡಿ,ಚಾವುಂಡಿ ಗುಳಿಗ, ಕ್ಷೇತ್ರಪಾಲ, ಗುಳಿಗ ದೈವಗಳ ದೈವಸ್ಥಾನದಲ್ಲಿ ದೈವಗಳ ಪುನ: ಪ್ರತಿಷ್ಠಾ ಮಹೋತ್ಸವ, ನೇಮ ಏ.25 ರಂದು ನಡೆಯಲಿದೆ. ಏ.25ರಂದು ಬೆಳಗ್ಗೆ ಕಲಶ ಪೂಜೆ,ಶಿಖರ ಪ್ರತಿಷ್ಠೆ,ದೈವಗಳ ಪ್ರತಿಷ್ಠೆ, ಕಲಶಾಭಿಷೇಕ, ತಂಬಿಲ ಸೇವೆ, ಧಾರ್ಮಿಕ ಸಭೆ ನಡೆಯಲಿದ್ದು, ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಉಳಿಪ್ಪಾಡಿಗುತ್ತು ಅಧ್ಯಕ್ಷತೆ ವಹಿಸುವರು. ಮಾಜಿ ಸಚಿವ ಬಿ.ರಮಾನಾಥ ರೈ ಉದ್ಘಾಟಿಸುವರು. ಶ್ರೀ ಧಾಮ ಮಾಣಿಲದ ಮೋಹನದಾಸ ಸ್ವಾಮೀಜಿ ಆಶೀರ್ವಚನ ನೀಡುವರು. ಸಂಸದ ಕ್ಯಾ. ಬ್ರಿಜೇಶ್ ಚೌಟ ಮತ್ತಿತರ ಗಣ್ಯರು ಭಾಗವಹಿಸುವರು. ಮಧ್ಯಾಹ್ನ ಸಾಂಸ್ಕೃತಿಕ ಕಾರ್ಯಕ್ರಮ, ರಾತ್ರಿ ದೈವ ಪಾತ್ರಿಗಳ ಎಣ್ಣೆ ಬೂಳ್ಯ, ಪಾತ್ರಿ ದರ್ಶನ, ಗಗ್ಗರ ಸೇವೆ ನಡೆಯಲಿದೆ ಎಂದು ಪ್ರಕಟನೆ ತಿಳಿಸಿದೆ.

ಅಧ್ಯಕ್ಷರಾಗಿ ಬಾಲಕೃಷ್ಣ ಪೂಜಾರಿ ಆಯ್ಕೆ

ಕೈಕಂಬ: ಗುರುಪುರ ಬಿಲ್ಲವ ಸಮಾಜ ಸೇವಾ ಸಂಘ ಗುರುನಗರ ಇದರ 2026–27ನೇ



ಸಾಲಿನ ಅಧ್ಯಕ್ಷರಾಗಿ ಬಾಲಕೃಷ್ಣ ಕೋಟ್ಯಾನ್ ಬರಿಪಟ್ಲ ಗುರುಪುರ ಆಯ್ಕೆಯಾಗಿದ್ದಾರೆ. ಸಂಘದ ಗೌರವಾಧ್ಯಕ್ಷರಾಗಿ ಕೇಟರಿಂಗ್ ಉದ್ಯಮಿ ದೀಪಕ್ ಕೋಟ್ಯಾನ್ ಕೈಕಂಬ, ಉಪಾಧ್ಯಕ್ಷರಾಗಿ ದಿಲೀಪ್ ಅಮೀನ್ ಕೈಕಂಬ, ಕೋಶಾಧಿಕಾರಿಯಾಗಿ ಮಾಧವ ಸುವರ್ಣ ಸಾದೂರು, ಕಾರ್ಯದರ್ಶಿಯಾಗಿ ಶೋಭಾ ಡಿ. ನಡುಗುಡ್ಡೆ ಗುರುಪುರ, ಉಪಕಾರ್ಯದರ್ಶಿಯಾಗಿ ರವಿ ಸುವರ್ಣ ಕಲ್ಲಕಲೆಂಬಿ ಗುರುಪುರ ಆಯ್ಕೆಯಾಗಿದ್ದಾರೆ. ಏ. 19ರಂದು ಗುರುಪುರ ಬಿಲ್ಲವ ಸಮಾಜ ಸೇವಾ ಸಂಘದ ಬ್ರಹ್ಮಶ್ರೀ ಸಮುದಾಯ ಭವನದಲ್ಲಿ ನಡೆದ ಸಮಾರಂಭದಲ್ಲಿ ಸಂಘದ ನೂತನ ಪದಾಧಿಕಾರಿಗಳು ಅಧಿಕಾರ ಸ್ವೀಕರಿ ಸಿದರು. ಸಂಘದ ಪ್ರಧಾನ ಅರ್ಚಕ ಪ್ರಜ್ವಲ್ ಬರ್ಕೆ ನಿರೂಪಿಸಿದರು.

ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಿಂದ 'ಸಿಲಿಕಾನ್ ಬೀಚ್ ಸ್ಟೋರೀಸ್' ಬಿಡುಗಡೆ

ಕನಸುಗಳ ಸಾಧಿಸಲು ಕಠಿಣ ಪರಿಶ್ರಮ ಅಗತ್ಯ: ವಿವೇಕ ಆಳ್ವ

ಮೂಡುಬಿದಿರೆ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಳ್ವಾಸ್ ಟೆಕ್ನಾಲಜಿ ಸೆಂಟರ್‌ನ ಆಶ್ರಯದಲ್ಲಿ ಹೊರತರಲಾದ ನವೋದ್ಯಮಿಗಳ ಪ್ರೇರಣಾದಾಯಕ ಕಥೆಗಳ ವೀಡಿಯೋ ಪಾಡ್‌ಕಾಸ್ಟ ಸರಣಿ 'ಸಿಲಿಕಾನ್ ಬೀಚ್ ಸ್ಟೋರೀಸ್'ನ್ನು ಅಧಿಕೃತವಾಗಿ ಬಿಡುಗಡೆಗೊಳಿಸಲಾಯಿತು.

ಸೃಜನಾತ್ಮಕ ವೇದಿಕೆಯಾಗಿದೆ

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವ್ಯವಸ್ಥಾಪಕ ಟ್ರಸ್ಟಿ ವಿವೇಕ್ ಆಳ್ವ, ಕರಾವಳಿ ಕರ್ನಾಟಕವು ವ್ಯಾಪಾರ, ಶಿಕ್ಷಣ ಮತ್ತು ಉದ್ಯಮಶೀಲತೆಯ ಸಮೃದ್ಧ ಪರಂಪರೆಯನ್ನು ಹೊಂದಿದೆ. ಈ ಪರಂಪರೆಯನ್ನು ಹೊಸ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ರೂಪುಗೊಂಡಿರುವ ವಿಶಿಷ್ಟ ಉಪಕ್ರಮವೇ ಸಿಲಿಕಾನ್ ಬೀಚ್ ಸ್ಟೋರೀಸ್. ಇದು ಉದಯೋನ್ಮುಖ ಉದ್ಯಮಿಗಳ ಯಶೋಗಾಥೆಗಳನ್ನು ವಿಡಿಯೋ ಮತ್ತು ಪಾಡ್‌ಕಾಸ್ಟ್ ರೂಪದಲ್ಲಿ ದಾಖಲಿಸಿ ಹಂಚಿಕೊಳ್ಳುವ ಸೃಜನಾತ್ಮಕ ವೇದಿಕೆಯಾಗಿದೆ. ಈ ಯೋಜನೆಯನ್ನು





ಆಳ್ವಾಸ್ ಶಿಕ್ಷಣ ಸಂಸ್ಥೆಯ ಉದ್ಯಮಶೀಲತಾ ಅಭಿವೃದ್ಧಿ ಘಟಕದ ಮಾರ್ಗದರ್ಶನದಲ್ಲಿ ಆಳ್ವಾಸ್ ವಿದ್ಯಾರ್ಥಿಗಳು ನಿರ್ವಹಿಸುತ್ತಿದ್ದಾರೆ. ದೊಡ್ಡ ಕನಸುಗಳನ್ನು ಸಾಧಿಸಲು ಕಠಿಣ ಪರಿಶ್ರಮ, ತಾಳ್ಮೆ ಮತ್ತು ನಿರಂತರ ಪ್ರಯತ್ನ ಅಗತ್ಯ. ಯಾವ ಕೋರ್ಸ್ ಓದುತ್ತೀರಿ ಅಥವಾ ಎಲ್ಲಿ ಓದುತ್ತೀರಿ ಎಂಬುದಕ್ಕಿಂತ ನಿಮ್ಮ ಮನೋಭಾವ, ಶ್ರಮ ಮತ್ತು ಸ್ಥಿರತೆ ಮುಖ್ಯ ಎಂದರು.

ಆಳ್ವಾಸ್ ಶಿಕ್ಷಣ ಸಂಸ್ಥೆಯ ಉದ್ಯಮಶೀಲತಾ ಅಭಿವೃದ್ಧಿ ಘಟಕದ ಮುಖ್ಯಸ್ಥ ವೇಣುರಾವ್ ದೇವ್ ಮಾತನಾಡಿ, ಪ್ರತಿಯೊಬ್ಬರಿಗೂ ಕನಸುಗಳಿದ್ದರೂ, ಅವನ್ನು ವಾಸ್ತವಕ್ಕೆ ತರುವವರು ಕೆಲವರೇ. ಪರಿಪೂರ್ಣತೆಗೆ ಕಾಯದೆ ಕೆಲಸವನ್ನು ಪ್ರಾರಂಭಿಸುವುದೇ ಯಶಸ್ಸಿನ ಕೀಲಿಕೈ ಎಂದರು.

ಆಪಾವಾಣಿ ಎನ್ವಿರಾನ್‌ಮೆಂಟಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥಾಪಕ ಡಾ. ವಿಷ್ಣುಶರ್ಮ ಆಟಿಕುಕ್ಕೆ ತಮ್ಮ ಉದ್ಯಮಶೀಲಾ ಅನುಭವವನ್ನು ಹಂಚಿಕೊಂಡರು. ಸಂಸ್ಥೆಯನ್ನು ಸ್ಥಾಪಿಸುವ ವೇಳೆ ಹಲವು ಸವಾಲುಗಳನ್ನು ಎದುರಿಸಿದ್ದರೂ, ಉತ್ಸಾಹ, ತಾಳ್ಮೆ ಮತ್ತು ಕಠಿಣ ಪರಿಶ್ರಮದಿಂದ ಬೆಳೆಯುತ್ತಿರುವುದಾಗಿ ಹೇಳಿದರು. ಡಿಜಿಟಲ್ ಮತ್ತು ಸಾಮಾಜಿಕ ಮಾಧ್ಯಮಗಳನ್ನು ಜಾಣ್ಮೆಯಿಂದ ಬಳಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಸ್ಟೇಕಾನ್ ಎಲ್‌ಎಲ್‌ಪಿ ಸಂಸ್ಥಾಪಕ ಆಕಾಶ್ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸ್ಟೇಕಾನ್ ಎಲ್‌ಎಲ್‌ಪಿ ಸಂಸ್ಥಾಪಕ ರಾಮಪ್ರಸಾದ್ ಘಾಟೆ, ಆಪಾವಾಣಿ ಸಂಸ್ಥಾಪಕ ಚಿನ್ಮಯ ದೇಲಂಪಾಡಿ, ವಾಣಿಜ್ಯ ವಿಭಾಗದ ಪ್ರಾಧ್ಯಾಪಕ ರಾಮಾನಂದ್ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಸ್ನೇಹ ಚಿತ್ರಕರ್ ನಿರೂಪಿಸಿ, ರೋಲ್ಮ ಸ್ವಾಗತಿಸಿ, ನಂದನ ವಂದಿಸಿದರು.

> **ನಿರಂತರ ಪ್ರಯತ್ನ ಇಂದಿನ ಅತ್ಯಗತ್ಯ**
>
> ನಮ್ಮ ಪ್ರಯಾಣ ಕನಸುಗಳಲ್ಲೇ ನಿಂತಿಲ್ಲ; ಅದು ಕಠಿಣ ಪರಿಶ್ರಮದಿಂದ ನಿರ್ಮಿತವಾದ ಸಾಧನೆ. ಆರಂಭದಲ್ಲಿ ಅನಿಶ್ಚಿತತೆ ಇದ್ದರೂ, ನಿರಂತರ ಪ್ರಯತ್ನ ಮತ್ತು ಕಲಿಕೆಯ ಮನೋಭಾವದಿಂದ ಯಶಸ್ಸು ಸಾಧಿಸಬಹುದು.
>
> ● ಆಕಾಶ್ ಶೆಟ್ಟಿ

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 'ಅರಿವಿನ ಗಾನ ಯಾನ' ಕಾರ್ಯಕ್ರಮ



ಕೊಣಾಜೆ: ಅಸಮಾನತೆಗೆ ನಾನಾ ರೂಪ ಬಣ್ಣಗಳಿವೆ. ಇದನ್ನು ಸೂಕ್ಷ್ಮ ಮನಸಿನಿಂದ ಗ್ರಹಿಸಿ ಮಾನವತೆಯ ಪರವಿರುವ ಚಿಂತನೆಗಳಿಗೆ ನಮ್ಮ ಸಂವೇದನೆಗಳು ಮಿಡಿಯಬೇಕು. ಯಾವ ಸಿದ್ಧಾಂತ, ಒಲವುಗಳಿದ್ದರೂ ಸರಿ ಅದು ಜೀವವಿರೋಧಿಯಾದರೆ ವಿರೋಧಿಸುವ. ಅದಲ್ಲದೇ ಸಿದ್ಧಾಂತಗಳ ನಡುವೆ ಜಗಳ ಯಾಕೆ? ಸಂವಾದಿಸೋಣ. ಒಳಿತನ್ನು, ಅರಿವನ್ನು ಹೊಂದೋಣ ಎಂದು ಗಾಯಕ ನಾದ ಮಣಿನಾಲ್ಕೂರು ಹೇಳಿದ್ದಾರೆ.

ಅವರು ಮಂಗಳೂರು ವಿವಿ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಹಾಗೂ ಗಿಳಿವಿಂಡು ವತಿಯಿಂದ ಶುಕ್ರವಾರ ಪ್ರೊ. ವಿವೇಕ್ ರೈ ವಿಚಾರ ವೇದಿಕೆಯಲ್ಲಿ ನಡೆದ 'ಅರಿವಿನ ಗಾನ ಯಾನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಎಸ್ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಪ್ರೊ.ನಾಗಪ್ಪ ಗೌಡ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕಲಾನಿಕಾಯದ ಡೀನ್ ಪ್ರೊ.ಸೋಮಣ್ಣ, ಸಹಪ್ರಾಧ್ಯಾಪಕರಾದ ಡಾ.ಧನಂಜಯ ಕುಂಬ್ಳೆ, ಪ್ರಾಧ್ಯಾಪಕರಾದ ಪ್ರೊ.ಕೃಷ್ಣಮೂರ್ತಿ, ಉಪನ್ಯಾಸಕರಾದ ಡಾ.ಯಶುಕುಮಾರ್ ಮೊದಲಾದವರು ಉಪಸ್ಥಿತರಿದ್ದರು. ಸ್ನೇಹ ನಿರೂಪಿಸಿದರು.

> **ಸಹಕಾರಿ**
>
> ನಾದ ಮಣಿನಾಲ್ಕೂರು ಅವರು ಅರಿವಿನ ಗಾನಯಾನದ ಮೂಲಕ ಸತ್ಯವನ್ನು ಶೋಧಿಸುವ ಹಾದಿ ಯಲ್ಲಿ ಮುಂದುವರಿಯುತ್ತಿದ್ದಾರೆ. ಅವರ ಹಾಡುಗಳು ಬದುಕಿಗೆ, ಪ್ರೀತಿಗೆ, ಸತ್ಯಕ್ಕೆ ಸಂಬಂಧಪಟ್ಟದ್ದಾಗಿದೆ. ಈ ಕಾರ್ಯಕ್ರಮ ದಿಂದ ವಿದ್ಯಾರ್ಥಿಗಳು ಹೊಸ ರೀತಿಯ ಚಿಂತನೆ ಬೆಳೆಸಿಕೊಳ್ಳಲು ಸಹಕಾರಿಯಾಗಿದೆ.
>
> ● ಪ್ರೊ.ನಾಗಪ್ಪ ಗೌಡ

ಆತ್ಮಶಕ್ತಿ ಕೆ.ಸಿ.ರೋಡ್ ಶಾಖೆಯಿಂದ ನಾಳೆ ವೈದ್ಯಕೀಯ, ದಂತ, ನೇತ್ರ ತಪಾಸಣೆ ಶಿಬಿರ

- ಏ.26ರಂದು ಪೂರ್ವಾಹ್ನ 9.30 ರಿಂದ ಮಧ್ಯಾಹ್ನ 12.30ರವರೆಗೆ ನಡೆಯಲಿದೆ ಉಚಿತ ಶಿಬಿರ
- ನುರಿತ ವೈದ್ಯರ ತಂಡದಿಂದ ನಡೆಯಲಿದೆ ತಪಾಸಣೆ
- ಅಗತ್ಯವುಳ್ಳವರಿಗೆ ಉಚಿತ ಕನ್ನಡಕ ವಿತರಣೆ

ಮಂಗಳೂರು: ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ ಕೆ.ಸಿ ರೋಡ್ ಶಾಖೆಯ ತೃತೀಯ ವಾರ್ಷಿಕೋತ್ಸವದ ಪ್ರಯುಕ್ತ ಉಚಿತ ವೈದ್ಯಕೀಯ ತಪಾಸಣೆ, ಕಣ್ಣಿನ ತಪಾಸಣೆ ಮತ್ತು ದಂತ ಚಿಕಿತ್ಸಾ ಶಿಬಿರವನ್ನು ಏ.26ರಂದು ಪೂರ್ವಾಹ್ನ 9.30 ರಿಂದ ಅಪರಾಹ್ನ 12.30ರವರೆಗೆ 'ಉಚ್ಚಿಲಸ್ ಕಾಂಪ್ಲೆಕ್ಸ್', ಸುಜಾತ ಜ್ಯುವೆಲ್ಲರಿ ಹತ್ತಿರ, ಕೆ.ಸಿ.ರೋಡ್ (ಶಾಖೆಯ ಆವರಣ) ಇಲ್ಲಿ ಆಯೋಜಿಸಲಾಗಿದೆ.

ವೈದ್ಯಕೀಯ ಸಮಾಲೋಚನೆ

ಈ ವೈದ್ಯಕೀಯ ಶಿಬಿರದಲ್ಲಿ ಕೆ.ಎಂ.ಸಿ ಆಸ್ಪತ್ರೆ ಅತ್ತಾವರ ಮತ್ತು ಮಣಿಪಾಲ ಕಾಲೇಜ್ ಆಫ್ ಡೆಂಟಲ್ ಸಾಯನ್ಸಸ್ ಮಂಗಳೂರು ಇದರ ನುರಿತ ವೈದ್ಯರ ತಂಡದಿಂದ ಉಚಿತ ದಂತ ತಪಾಸಣೆ ಮತ್ತು ಸಲಹೆ, ಹಲ್ಲುಗಳ ಶುಚೀಕರಣ, ಹುಳುಕು ಹಲ್ಲುಗಳನ್ನು ಭರ್ತಿ ಮಾಡುವುದು, ಅನಾರೋಗ್ಯಕರ ಹಲ್ಲುಗಳನ್ನು ಕೀಳಿಸುವುದು, ಕಣ್ಣಿನ ತಪಾಸಣೆ, ಅಗತ್ಯವುಳ್ಳವರಿಗೆ ಕಣ್ಣಿನ ಪೊರೆಯ ಶಸ್ತ್ರ ಚಿಕಿತ್ಸೆ ಸಾಮಾನ್ಯ ವೈದ್ಯಕೀಯ ಸಮಾಲೋಚನೆ, ಬಿ.ಪಿ. ತಪಾಸಣೆ, ಮಧುಮೇಹ ತಪಾಸಣೆ, ಕಿವಿ ಮೂಗು ಮತ್ತು ಗಂಟಲು ತಪಾಸಣೆ, ಹೆಚ್ಚಿನ ಚಿಕಿತ್ಸೆಗೆ ಹಸಿರು ಕಾರ್ಡನ್ನು ನೀಡುವುದು ಹಾಗೂ ಇತರ ವೈದ್ಯಕೀಯ ಸೇವೆಗಳು ಲಭ್ಯವಿರುತ್ತದೆ. ಅಗತ್ಯವುಳ್ಳವರಿಗೆ ಉಚಿತ ಕನ್ನಡಕ ವಿತರಣೆಯನ್ನು ಮಾಡಲಾಗುವುದು.

ವೈದ್ಯಕೀಯ ಶಿಬಿರವನ್ನು ಎನ್.ಜಿ. ವರ್ಲ್ಡ್ ಚಾರಿಟೇಬಲ್ ಟ್ರಸ್ಟ್ ಮಂಗಳೂರು, ಶ್ರೀ ಕೃಷ್ಣ ಭಜನಾ ಮಂದಿರ ಕೆ.ಸಿ ರೋಡ್, ಕೃಷ್ಣ ನಗರ, ತಲಪಾಡಿ ಮತ್ತು ಶ್ರೀ ಲಕ್ಷ್ಮೀ ಶಾಮಿಯಾನ, ಪನೀರ್ ಬಾಳಿಕೆ ಇವರುಗಳ ಸಹಕಾರದೊಂದಿಗೆ ಆಯೋಜಿಸಲಾಗಿದೆ.

ಸಂಘದ ಸದಸ್ಯರು ಮತ್ತು ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆಯಬೇಕಾಗಿ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷರಾದ ಚಿತ್ತರಂಜನ್ ಬೋಳಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೌಸಿಯಾದಿಂದ ರಾಜ್ಯಮಟ್ಟದ ದಫ್ ಸ್ಪರ್ಧೆ: ಹಾಜಬ್ಬರಿಗೆ ಸನ್ಮಾನ



ಕೊಣಾಜೆ: ಗೌಸಿಯಾ ಅಸೋಸಿಯೇಷನ್ ಮಂಚಿ ಕೊಳ್ನಾಡು ಇದರ ಆಶ್ರಯದಲ್ಲಿ ಅಂತರ್ ರಾಜ್ಯ ಮಟ್ಟದ ದಫ್ ಸ್ಪರ್ಧೆ ಇತ್ತೀಚೆಗೆ ನಡೆಯಿತು. ಸ್ಪರ್ಧೆಯಲ್ಲಿ ಬೆಳ್ಮ ರೆಂಜಾಡಿ ಪ್ರಥಮ, ಕಟಪಾಡಿ ದ್ವಿತೀಯ, ಕಣ್ಣಂಗಾರ್ ತೃತೀಯ, ಉಳ್ಳಾಲ ಚತುರ್ಥ ಸ್ಥಾನ ಪಡೆದುಕೊಂಡಿತು.

ಶಿಹಾಬುದ್ದೀನ್ ಮದಕ ತಂಙಳ್ ಕಾರ್ಯಕ್ರಮ ಉದ್ಘಾಟಿಸಿದರು. ಸಯ್ಯದ್ ಬಾಅಲವಿ ತಂಙಳ್ ಕುಕ್ಕಾಜೆ ದುಆ ನೆರವೇರಿಸಿದರು. ಮಂಚಿ ಉಸ್ತಾದ್ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ರಾಜಕೀಯ ಧಾರ್ಮಿಕ, ಸಾಮಾಜಿಕ ಮುಖಂಡರು ಉಪಸ್ಥಿತರಿದ್ದರು. ಅತಿಥಿಗಳಾಗಿ ಮಾಜಿ ಸಚಿವ ರಮಾನಾಥ ರೈ, ಸಾಲೆತ್ತೂರು ಚರ್ಚ್‌ನ ಫಾದರ್ ಮನೋಜ್ ಫುರ್ತಾಡೊ, ಪ್ರಕಾಶ್ ಶೆಟ್ಟಿ, ಮೂನಿಶ್ ಅಲಿ, ಇಬ್ರಾಹಿಂ ನವಾಝ್, ಎಂ.ಡಿ. ಮಂಚಿ ಇವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.



ಈ ಸಂದರ್ಭ ಪದ್ಮಶ್ರೀ ಪುರಸ್ಕೃತ ಡಾ.ಹರೇಕಳ ಹಾಜಬ್ಬ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಯಶಸ್ಸಿಗೆ ಕಾರಣಕರ್ತರಾದ ನಿಸಾರ್ ಮಂಚಿ, ಎಂ. ಎಚ್. ಫ್ಯಾಮಿಲಿ, ದಾವೂದ್ ದುಬೈ ಅವರಿಗೆ ಕಾರ್ಯಕ್ರಮ ಆಯೋಜಕರು ಧನ್ಯವಾದ ಸಲ್ಲಿಸಿದರು. ಇಕ್ಬಾಲ್ ಮಂಚಿ ಸ್ವಾಗತಿಸಿ, ಮಹಮ್ಮದ್ ಮಂಚಿ ಪ್ರಸ್ತಾವನೆಗೈದರು. ಅಬೂಬಕ್ಕರ್ ಕಯ್ಯೂರು ವಂದಿಸಿದರು.

ಯಕ್ಷಗಾನಕ್ಕೆಂದೇ ಪ್ರಧಾನ ವೇದಿಕೆಗಳು ಸಿದ್ಧವಾಗಿರುವುದು ಸಂತೋಷದ ವಿಚಾರ





ಕಾಸರಗೋಡು: ಯುವ ತಲೆಮಾರಿನಲ್ಲಿ ಯಕ್ಷಗಾನದ ಅಭಿರುಚಿ ಹೆಚ್ಚಾಗಿರುವುದು ಒಂದು ಒಳ್ಳೆಯ ಬೆಳವಣಿಗೆ. ಕೇವಲ ದೇವಳ ಅಥವಾ ಇತರ ಉತ್ಸವಗಳಲ್ಲಿ ಮಾತ್ರ ಸೀಮಿತವಾಗಿದ್ದ ಯಕ್ಷಗಾನವು ಈಗ ಯಕ್ಷಗಾನಕ್ಕೆಂದೇ ಪ್ರಧಾನ ವೇದಿಕೆಗಳು ಸಿದ್ಧವಾಗಿರುವುದು ಸಂತೋಷದ ವಿಚಾರ. ಕೇರಳದ ರಾಜ್ಯ ಶಾಲಾ ಕಲೋತ್ಸವದಲ್ಲಿ ಭಾಗವಹಿಸಿ ಎ ಗ್ರೇಡ್ ಪಡೆದ ಎರಡು ತಂಡಗಳು ಭಾಗವಹಿಸುವುದು ಕಾರ್ಯಕ್ರಮದ ಮೆರುಗು ಹೆಚ್ಚಿಸಿದೆ ಎಂದು ಕೇಂದ್ರ ಗುರು ರಂಜಿತ್ ಮಲ್ಲ ಹೇಳಿದ್ದಾರೆ.

ಕೂಡ್ಲು ಪಾಯಿಚ್ಚಾಲು ಶ್ರೀಸ್ಕಂದ ಯಕ್ಷಗಾನ ಕೇಂದ್ರದ ನೇತೃತ್ವದಲ್ಲಿ ಜರಗಿದ 'ಶ್ರೀಸ್ಕಂದ ಒಡ್ಡೋಲಗ' ಎಂಬ ವಿನೂತನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ಭಾಗವತ ತಲ್ಪನಾಜೆ ವೆಂಕಟ್ರಮಣ ಭಟ್, ಧಾರ್ಮಿಕ ಮುಂದಾಳು ಡಾ.ಕೆ.ಎನ್. ವೆಂಕಟ್ರಮಣ ಹೊಳ್ಳ, ಯಕ್ಷಗಾನ ಕಲಾವಿದ, ಪತ್ರಕರ್ತ ವೀಜಿ ಕಾಸರಗೋಡು ಕಾರ್ಯಕ್ರಮಕ್ಕೆ ಶುಭಹಾರೈಸಿದರು. ಕೇಂದ್ರದ ಅಧ್ಯಕ್ಷ ಕಿರಣ್ ಪ್ರಸಾದ್ ಕೂಡ್ಲು ಸ್ವಾಗತಿಸಿ, ಸಂಚಾಲಕ ಮುರಳೀಧರ ಶೆಟ್ಟಿ ವಂದಿಸಿದರು. ಹರ್ಷಕುಮಾರ್ ಬೆಳಿಂಜ ನಿರೂಪಿಸಿದರು.

> **ಯಕ್ಷಗಾನ ಪ್ರದರ್ಶನ**
>
> ಕೂಡ್ಲು ಕುತ್ಯಾಳ ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ತರಬೇತಿ ಕೇಂದ್ರದ ಸದಸ್ಯರಿಂದ ವೇದೋದ್ಧರಣ, ಶ್ರೀ ವೆಂಕಟ್ರಮಣ ಸ್ವಾಮಿ ಕೃಪಾ ಶ್ರಿತ ಯಕ್ಷಗಾನ ಅಧ್ಯಯನ ಕೇಂದ್ರದವರಿಂದ ನರಕಾಸುರ ಮೋಕ್ಷ, ಕಲ್ಲಿಕೋಟೆ ಜಿಲ್ಲೆಯ ಪ್ರೊವಿಡೆನ್ಸ್ ಹೈಯರ್ ಸೆಕಂಡರಿ ಶಾಲೆಯ ಮಕ್ಕಳಿಂದ ಸುಧನ್ವಾರ್ಜುನ ಕಾಳಗ, ಕಣ್ಣೂರಿನ ಸೈಂಟ್ ತೇರೇಸಾಸ್ ಆಂಗ್ಲೋ ಇಂಡಿಯನ್ ಹೈಯರ್ ಸೆಕಂಡರಿ ಶಾಲೆ ಮಕ್ಕಳಿಂದ ತರಣಿಸೇನ ಕಾಳಗ, ಕೂಡ್ಲು ಪಾಯಿಚ್ಚಾಲು ಶ್ರೀಸ್ಕಂದ ಯಕ್ಷಗಾನ ಕೇಂದ್ರದವರಿಂದ ಮಹಿಷಮರ್ದಿನಿ ಯಕ್ಷಗಾನ ಪ್ರದರ್ಶನ ನಡೆಯಿತು.

ಇಂದು ಕಣಚೂರು ಸಮೂಹ ಶಿಕ್ಷಣ ಸಂಸ್ಥೆಗಳ ಪದವಿ ಪ್ರದಾನ ಸಮಾರಂಭ

ಉಳ್ಳಾಲ: ದೇರಳಕಟ್ಟೆ ಕಣಚೂರು ಸಮೂಹ ಶಿಕ್ಷಣ ಸಂಸ್ಥೆಗಳ 2026ನೇ ಸಾಲಿನ ಪದವಿ ಪ್ರದಾನ ಸಮಾರಂಭವು ಇಂದು (ಏ.25) ಬೆಳಿಗ್ಗೆ 10 ಗಂಟೆಗೆ ಸಂಸ್ಥೆಯ 'ಕಣಚೂರು ಕಾನ್ಫರೆನ್ಸ್ ಡೋಮ್'ನಲ್ಲಿ ನಡೆಯಲಿದೆ ಎಂದು ಕಣಚೂರು ಕಾಲೇಜಿನ ಫಿಸಿಯೋಥೆರಪಿ ವಿಭಾಗದ ಪ್ರಾಂಶುಪಾಲ ಮೊಹಮ್ಮದ್ ಸುಹೈಲ್ ತಿಳಿಸಿದರು.

ರಾಜ್ಯಕ್ಕೆ ಪ್ರಥಮ, ಚಿನ್ನದ ಪದಕ

ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ (ಆರ್ ಜಿಯುಹೆಚ್ ಎಸ್) ನಡೆಸಿದ ಅಂತಿಮ ವರ್ಷದ ಬಿ.ಎಸ್ಸಿ ನರ್ಸಿಂಗ್ ಪರೀಕ್ಷೆಯಲ್ಲಿ ಕಣಚೂರು ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿನಿ ರಂಜಿನಿ ವಿ. ಇಡೀ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿ ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ. ರಾಜ್ಯದ ಸುಮಾರು 680 ನರ್ಸಿಂಗ್ ಕಾಲೇಜುಗಳ ವಿದ್ಯಾರ್ಥಿಗಳ ಪೈಕಿ ಈ ಅತ್ಯುನ್ನತ ಸಾಧನೆ ಮಾಡಿರುವುದು ವಿಶೇಷ. ಇವರ ಜೊತೆಗೆ ನರ್ಸಿಂಗ್ ವಿಭಾಗದಲ್ಲಿ ಒಟ್ಟು 14 ರ್ಯಾಂಕ್‌ಗಳು ಲಭಿಸಿವೆ ಎಂದರು. ಫಿಸಿಯೋಥೆರಪಿ ವಿಭಾಗದಲ್ಲಿ ಎಂ.ಪಿ.ಟಿ ವಿದ್ಯಾರ್ಥಿನಿ ಡಾ. ಚಾಟಿ ಮಂಜುಷಾ ಸಂಜಯ್ ವಿಶ್ವವಿದ್ಯಾಲಯಕ್ಕೆ 1ನೇ ರ್ಯಾಂಕ್ ಪಡೆದರೆ, ಬಿ.ಪಿ.ಟಿ ವಿಭಾಗ 'ದಲ್ಲಿ ಡಾ. ಸರ್ವಾಂಕರ್ ವಿಘ್ನೇಶ್ ವಿಜಯ್ ಅವರು ಸಮಗ್ರವಾಗಿ 2ನೇ ರ್ಯಾಂಕ್ ಪಡೆದು



ಸಾಧನೆ ಮಾಡಿದ್ದಾರೆ. ಅಲ್ಲದೆ ಅಲೈಡ್ ಹೆಲ್ತ್ ಸೈನ್ಸ್‌ನ ವಿವಿಧ ವಿಭಾಗಗಳಲ್ಲಿ ಹಲವು ವಿದ್ಯಾರ್ಥಿಗಳು ಅಗ್ರ ಹತ್ತು ರ್ಯಾಂಕ್‌ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ ಎಂದರು.

ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕಿ ಡಾ.ಬಿ. ಎಲ್.ಸುಜಾತಾ ರಾಥೋಡ್ ಅತಿಥಿಗಳಾಗಿ ಭಾಗವಹಿಸಿ ಪದವಿ ಪ್ರದಾನ ಮಾಡಲಿದ್ದಾರೆ. ಗೌರವಾನ್ವಿತ ಅತಿಥಿಗಳಾಗಿ ಕರ್ನಾಟಕ ರಾಜ್ಯ ಮಿತ್ರ – ಆರೋಗ್ಯ ರಕ್ಷಣಾ ಮಂಡಳಿ ಅಧ್ಯಕ್ಷ ಡಾ.ಯು.ಟಿ. ಇಫ್ತಿಕಾರ್ ಫರೀದ್ ಪಾಲ್ಗೊಳ್ಳಲಿದ್ದಾರೆ. ಕಣಚೂರು ಇಸ್ಲಾಮಿಕ್ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷ ಡಾ.ಹಾಜಿ ಯು. ಕೆ.ಮೋನು ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

2016ರಲ್ಲಿ ಸ್ಥಾಪನೆಯಾದ ಕಣಚೂರು ನರ್ಸಿಂಗ್ ಸಂಸ್ಥೆ ಇದೀಗ ತನ್ನ 10ನೇ ಬ್ಯಾಚ್‌ನ 250 ವಿದ್ಯಾರ್ಥಿಗಳನ್ನು ವೃತ್ತಿ ಜೀವನಕ್ಕೆ ಕಳುಹಿಸಿಕೊಡುತ್ತಿದ್ದು, ದಶಮಾನೋತ್ಸವದ ಸಾರ್ಥಕತೆಯಲ್ಲಿದೆ. ಈ ವರ್ಷ ಸಂಸ್ಥೆಯ ವಿವಿಧ ವಿಭಾಗಗಳಿಂದ ಒಟ್ಟು 291 ಪದವೀಧರರು ಹೊರಹೊಮ್ಮುತ್ತಿದ್ದಾರೆ ಎಂದರು.

ಅಮೃತ ಭಾರತಿ ಎಸೆಸೆಲ್ಸಿ ಸಿಬಿಎಸ್‌ಇ ವಿದ್ಯಾರ್ಥಿನಿ ಧನ್ವಿ ಹೆಬ್ಬಾರ್‌ಗೆ ಸನ್ಮಾನ



ಹೆಬ್ರಿ: ಸಾಧನೆ ಮಾಡಲು ತಂದೆ, ತಾಯಿ, ಗುರುಹಿರಿಯರ ಮಾರ್ಗದರ್ಶನ ಅತ್ಯಂತ ಮುಖ್ಯವಾಗಿತ್ತು. ಮಗಳ ಸಾಧನೆಯ ಯಶಸ್ಸಿನಲ್ಲಿ ಹೆಚ್ಚು ಸಂಭ್ರಮ ಪಡುವವರು ಸಾಧಕಿಯ ತಾಯಿ ಆಗಿರುತ್ತಾರೆ. ಮಕ್ಕಳ ಲಾಲನೆ ಪಾಲನೆಯಲ್ಲಿ ತಾಯಿ ಪ್ರಮುಖ ಪಾತ್ರವಹಿಸುತ್ತಾಳೆ. ವಿದ್ಯಾರ್ಥಿನಿ ಶಾಲೆ–ಮನೆಯ ಕೀರ್ತಿಯನ್ನು ಹೆಚ್ಚಿಸಿದ್ದಾಳೆ ಎಂದು ಅಧ್ಯಕ್ಷ ಪಾಂಡುರಂಗ ಪೈ ಸಿದ್ದಾಪುರ ತಿಳಿಸಿದರು.

ಅವರು ಪಿಆರ್‌ಎನ್ ಅಮೃತ ಭಾರತಿ ವಿದ್ಯಾಕೇಂದ್ರ ಸಿಬಿಎಸ್‌ಇ ವಿಭಾಗದ ಹತ್ತನೇ ತರಗತಿಯ ವಿದ್ಯಾರ್ಥಿನಿ ಧನ್ವಿ ಹೆಬ್ಬಾರ್ ಇವರಿಗೆ ವಿದ್ಯಾಭಾರತಿ ಕರ್ನಾಟಕ ಉಡುಪಿ ಜಿಲ್ಲಾ ಸಮಿತಿಯ ವತಿಯಿಂದ ಸನ್ಮಾನಿಸಿ ಮಾತನಾಡಿದರು.

ಸಮಾರಂಭದ ವೇದಿಕೆಯಲ್ಲಿ ವಿದ್ಯಾಭಾರತಿ ಕರ್ನಾಟಕ ಪ್ರಾಂತ ಉಪಾಧ್ಯಕ್ಷ ಗುರುದಾಸ್ ಶೆಣೈ ಹೆಬ್ರಿ, ಸಾಧಕಿಯ ತಂದೆ ಬಾಲಚಂದ್ರ ಹೆಬ್ಬಾರ್, ತಾಯಿ ಸುಮಲತಾ ಹೆಬ್ಬಾರ್, ಸಾಧಕಿ ಧನ್ವಿ ಹೆಬ್ಬಾರ್, ವಿದ್ಯಾಭಾರತಿ ಕರ್ನಾಟಕ ಉಡುಪಿ ಜಿಲ್ಲಾ ಶಾರೀರಿಕ ಪ್ರಮುಖ್ ವಿಜಯ ಕುಮಾರ್ ಶೆಟ್ಟಿ, ಅಮೃತ ಭಾರತಿ ವಿದ್ಯಾ ಕೇಂದ್ರದ ಮುಖ್ಯೋಪಾಧ್ಯಾಯಿನಿ ಅನಿತಾ, ಅಮೃತ ಭಾರತಿ ವಿದ್ಯಾಲಯದ ಮುಖ್ಯೋಪಾಧ್ಯಾಯಿನಿ ಅಪರ್ಣಾ ಆಚಾರ್ ಉಪಸ್ಥಿತರಿದ್ದರು.

ವಿದ್ಯಾಭಾರತಿ ಕರ್ನಾಟಕ ಉಡುಪಿ ಜಿಲ್ಲಾ ಕಾರ್ಯದರ್ಶಿ ಮಹೇಶ್ ಹೈಕಾಡಿ ವಚಾರ ನಿರೂಪಿಸಿದರು.

ಉಜಿರೆ ಶ್ರೀ ಜನಾರ್ದನ ದೇವಳದಲ್ಲಿ ದೃಢ ಕಲಶಾಭಿಷೇಕ

ಬೆಳ್ತಂಗಡಿ: ಉಜಿರೆ ಶ್ರೀ ಜನಾರ್ದನ ದೇವಸ್ಥಾನದಲ್ಲಿ ಕಳೆದ ಮಾ 3 ರಿಂದ 11 ರವರೆಗೆ ನಡೆದ ಬ್ರಹ್ಮಕಲಶ, ವಿಜಯಗೋಪುರ ಲೋಕಾರ್ಪಣೆ ಹಾಗೂ ನೂತನ ಬ್ರಹ್ಮರಥ–ಪುಷ್ಪರಥ ಸಮರ್ಪಣಾ ಸಮಾರಂಭದ ಬಳಿಕ ಮುಂದುವರಿದ ಧಾರ್ಮಿಕ ವಿಧಿಯಂತೆ ದೃಢ ಕಲಶಾಭಿಷೇಕ ಮಹೋತ್ಸವ ಶುಕ್ರವಾರ ಬ್ರಹ್ಮಶ್ರೀ ನೀಲೇಶ್ವರ ಆಲಂಬಾಡಿ ಪದ್ಮನಾಭ ತಂತ್ರಿ ಮತ್ತು ದೇವಳ ಆನುವಂಶಿಕ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡುವೆಟ್ನಾಯರ ನೇತೃತ್ವದಲ್ಲಿ ಭಕ್ತಿ , ಸಂಭ್ರಮದಿಂದ ಸಂಪನ್ನಗೊಂಡಿತು.

ಬೆಳಿಗ್ಗೆ ವಾಸ್ತು ಹೋಮ, ವಾಸ್ತು ಬಲಿ , ಗಣಹೋಮ, ಶ್ರೀ ಜನಾರ್ದನ ಸ್ವಾಮಿ, ಮಂಜುಳೇಶ, ಮಹಾಗಣಪತಿ, ಅಮ್ಮನವರಿಗೆ ಕಲಶಾಭಿಷೇಕ ನಡೆದು ಮಧ್ಯಾಹ್ನ ಮಹಾಪೂಜೆ ನಡೆಯಿತು. ನೀಲೇಶ್ವರ ಆಲಂಬಾಡಿ ಪದ್ಮನಾಭ ತಂತ್ರಿಗಳ ವರು ಮತ್ತು ವೈದಿಕರ ಹಿರಿತನದಲ್ಲಿ ಮಂತ್ರಾಕ್ಷತೆ ನಡೆಯಿತು. ಅರ್ಚಕ ವೇದಮೂರ್ತಿ ರಾಮಚಂದ್ರ ಹೊಳ್ಳರಿಂದ ಶ್ರೀ ಕೃಷ್ಣಾನುಗ್ರಹ ಸಭಾಭವನದಲ್ಲಿ ಪಲ್ಲಪೂಜೆ ನಡೆದು ಸಹಸ್ರಾರು ಭಕ್ತಾದಿಗಳು ಸಾರ್ವಜನಿಕ ಅನ್ನಸಂತರ್ಪಣೆ ಪ್ರಸಾದ ಸ್ವೀಕರಿಸಿದರು. ನೀಲೇಶ್ವರ ಆಲಂಬಾಡಿ ವಾಸುದೇವ ತಂತ್ರಿಗಳು, ದೇವಸ್ಥಾನದ ಪವಿತ್ರಪಾಣಿ ಶಿವರಾಮ ಪಡುವೆಟ್ನಾಯ, ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಪ್ರತಾಪಸಿಂಹ ನಾಯಕ್, ಮೋಹನ ಶೆಟ್ಟಿಗಾರ್, ಕೆ.ಮೋಹನ್ ಕುಮಾರ್, ಅರುಣಕುಮಾರ್, ರವೀಂದ್ರ ಶೆಟ್ಟಿ ಭರತ್ ಕುಮಾರ್, ಡಾ.ಶ್ರೀಧರ ಭಟ್, ಪ್ರಭಾತ್ ಭಟ್, ಲಕ್ಷ್ಮಣ ಸಫಲ್ಯ, ರಾಘವೇಂದ್ರ ಬೈಪಾಡಿತ್ತಾಯ, ರಾಜಪ್ರಸಾದ್ ಪೋಲ್ನಾಯ, ಗಿರಿರಾಜ ಬಾರಿತ್ತಾಯ, ಜಯಾ ಅನಂತಕೃಷ್ಣ ಆರ್ಮುಡತ್ತಾಯ, ಪುಷ್ಪಾವತಿ ಆರ್. ಶೆಟ್ಟಿ, ನಿರಂಜನ ಶೆಟ್ಟಿ, ಶರತ್ ಕುಮಾರ್, ರಾಜೇಶ್ ಪೈ ಮತ್ತಿತರರಿದ್ದರು.





ಭಜನಾ ಸೇವೆ

ಮುಂಜಾನೆ ಮಂಜುನಾಥ ಶೆಟ್ಟಿ ನಿಡಿಗಲ್ ಹಾಗೂ ಸೌಮ್ಯ ರಾವ್ ನೇತೃತ್ವದಲ್ಲಿ ಭಜನಾ ಸಮಿತಿ, ವಾಸುದೇವ ರಾವ್ ಕಕ್ಕೇನೇಜಿ ನೇತೃತ್ವ ಕೊಲ್ಲಿ ಶ್ರೀ ದುರ್ಗಾದೇವಿ ಭಜನಾ ಮಂದಿರ, ಪುತ್ತೂರಿನ ಭಜನಾ ಮಂದಿರ , ಹಳೇಕೋಟೆ ಶ್ರೀ ಸತ್ಯ ಸಾಯಿ ಭಜನಾ ಮಂದಿರದ ಸದಸ್ಯರಿಂದ ಭಜನಾ ಸೇವೆ ನಡೆಯಿತು.

ಯಕ್ಷಗಾನ ತಾಳಮದ್ದಳೆ

ಸಂಜೆ ಕೊಯ್ಯೂರು ಶ್ರೀ ಪಂಚದುರ್ಗಾ ಪರಮೇಶ್ವರಿ ಯಕ್ಷಗಾನ ಕಲಾಸಂಘ– ಅತಿಥಿ ಕಲಾವಿದರ ಸಹಕಾರದೊಂದಿಗೆ ಶ್ರೀ ರಾಮಕೃಷ್ಣ ಸಭಾಮಂಟಪದಲ್ಲಿ ರಾಮಕೃಷ್ಣ ಭಟ್ ಉಜಿರೆ ಸಂಯೋಜನೆಯಲ್ಲಿ 'ಪಾರ್ಥ ಸಾರಥ್ಯ' ಪ್ರಸಂಗದ ಯಕ್ಷಗಾನ ತಾಳಮದ್ದಳೆ ನಡೆಯಿತು.



ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವದ 8ನೇ ದಿನ ಶುಕ್ರವಾರ ಶ್ರೀ ಶಾಸ್ತಾ ಫ್ರೆಂಡ್ಸ್ ಬಳ್ಳಂಬೆಟ್ಟು ದೇವಸ್ಥಾನ, ಶ್ರೀ ಬಿಲ್ಲಾರ ಬಿಲ್ಲಾಳಿ ದೈವಸ್ಥಾನ ಬಿಲ್ಲಾರಡ್ಕ, ಶ್ರೀ ಅಯ್ಯಪ್ಪ ಸ್ವಾಮಿ ಭಜನಾ ಮಂದಿರ ಭಕ್ತರು ಪಳ್ಳತ್ತಡ್ಕ ಇವರಿಂದ ಹಸಿರುವಾಣಿ ಹೊರೆಕಾಣಿಕೆ ಸಮರ್ಪಣೆ ನಡೆಯಿತು.

ಸುತ್ತಮುತ್ತ

ಏ.28ರಂದು ಮೂಡುಬಿದಿರೆಯಲ್ಲಿ ವಿದ್ಯುತ್ ವ್ಯತ್ಯಯ

ಮೂಡುಬಿದಿರೆ: ವಿದ್ಯುತ್ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ವಿವಿಧ ಪ್ರದೇಶಗಳಲ್ಲಿ ಏ. 28ರಂದು ಬೆಳಿಗ್ಗೆ 9.30ರಿಂದ ಸಂಜೆ 6 ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ನಾಳೆ ಕ್ರಿಕೆಟ್, ಮೇ 3ಕ್ಕೆ ವೈದ್ಯನಾಥ ಕ್ರಿಕೆಟರ್ಸ್ ರಜತ ಸಂಭ್ರಮ

ಬಂಟ್ವಾಳ: ವೈದ್ಯನಾಥ ಕ್ರಿಕೆಟರ್ಸ್ ದೇವರಪಾಲು ಸುಜೀರು ಇದರ ರಜತ ಮಹೋತ್ಸವ ಸಂಭ್ರಮದ ಪ್ರಯುಕ್ತ ಏ. 26ರಂದು ಆಹ್ವಾನಿತ 16 ತಂಡಗಳ ಕ್ರಿಕೆಟ್ ಪಂದ್ಯಾಟ 'ವೈದ್ಯನಾಥ ಟ್ರೋಫಿ' ಜಾಗೂ ಮೇ 3ರಂದು ಸುಜೀರು ಶ್ರೀ ಅರಸು ವೈದ್ಯನಾಥ ಧೂಮಾವತಿ ಬಂಟ ದೇವಸ್ಥಾನದ ಆವರಣದಲ್ಲಿ ರಜತ ಸಂಭ್ರಮ ಕಾರ್ಯ ಕ್ರಮ ನಡೆಯಲಿದೆ ಎಂದು ಗೌರವಾಧ್ಯಕ್ಷ ಕಿಶೋರ್ ಸುಜೀರು ತಿಳಿಸಿದ್ದಾರೆ. ಬಂಟ್ವಾಳ ಪ್ರೆಸ್ ಕ್ಲಬ್ ನಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಜತ ಸಂಭ್ರಮದ ಅಂಗವಾಗಿ ಮೇ 3 ರಂದು ಸಂಜೆ 4 ಗಂಟೆಗೆ ಶ್ರೀ ಲಕ್ಷ್ಮೀನಾರಾಯಣ ಪೂಜೆ, ಸಂಜೆ 6 ಗಂಟೆಗೆ ನೃತ್ಯ ಕಾರ್ಯಕ್ರಮ, ರಾತ್ರಿ 7ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ ಎಂದರು. ಈ ಸಂದರ್ಭ ಹಿರಿಯ ಆಟಗಾರರು ಹಾಗೂ ಊರಿನ ಹಿರಿಯ ಸಾಧಕರಿಗೆ ಗೌರವಾಭಿನಂದನೆ ಸಲ್ಲಿಸಲಾಗುವುದು. ರಾತ್ರಿ 8 ಗಂಟೆಗೆ ಸಂಗೀತ ಲಹರಿ ಹಾಗೂ ಅನ್ನಸಂತರ್ಪಣೆ ನಡೆಯಲಿದೆ. ರಾತ್ರಿ 9 ಗಂಟೆಯಿಂದ ಜೋಡು ಜೀಟಿಗೆ ಜಾನಪದ ನಾಟಕ ನಡೆಯಲಿದೆ. ಏ.26ರಂದು ಆಹ್ವಾನಿತ 16 ತಂಡಗಳ ಕ್ರಿಕೆಟ್ ಪಂದ್ಯಾಟವನ್ನು ಆಯೋಜಿಸಿದೆ. ಆಕರ್ಷಕ ಬಹುಮಾನ, ವೈಯಕ್ತಿಕ ಬಹುಮಾನವನ್ನು ನೀಡಲಾಗುವುದು ಎಂದರು. ತಂಡದ ಅಧ್ಯಕ್ಷ ಸತೀಶ್ ಮಜಪೆ ಅಧ್ಯಕ್ಷ ರವೀಂದ್ರ ಸುಜೀರು ಕಲ್ಲಾಜೆ, ಪ್ರಧಾನ ಕಾರ್ಯದರ್ಶಿ ರಾಜೇಶ್ ಮಜಪೆ, ಕೋಶಾಧಿಕಾರಿ ಸುಶಾಂತ್ ಸಜೀರು ಇದ್ದರು.

ಲೇಖನ,ಕವನ,ಚುಟುಕು ಬರಹಗಳ ಆಹ್ವಾನ

ನಾಪೋಕ್ಲು: ಕನ್ನಡ ಸಾಹಿತ್ಯ ಪರಿಷತ್ತಿನ ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕು ವತಿಯಿಂದ ನಡೆಯುವ 12ನೇ ಕನ್ನಡ ಸಾಹಿತ್ಯ ಸಮ್ಮೇಳನವು ಮೇ 20ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಡಂಗದಲ್ಲಿ ನಡೆಯಲಿದೆ. ಸಮ್ಮೇಳನದ ಸಾಕ್ಷ್ಯಚಿತ್ರವು ಸ್ಮರಣ ಸಂಚಿಕೆ ರೂಪದಲ್ಲಿ ಹೊರಬರಲಿದೆ. ಈ ಸ್ಮರಣ ಸಂಚಿಕೆಯಲ್ಲಿ ಉದಯೋನ್ಮುಖ ಕವಿಗಳಿಂದ ಹಾಗೂ ಬರಹಗಾರರಿಂದ ಲೇಖನ, ಕವನ, ಚುಟುಕುಗಳನ್ನು ಆಹ್ವಾನ ಮಾಡಲಾಗಿದೆ. ಕವನ ಹಾಗೂ ಚುಟುಕುಗಳು ಒಂದು ಪುಟ ಮೀರದಂತೆ, ಸಾಧಕರು, ವೈಚಾರಿಕ, ಸೈದ್ಧಾಂತಿಕ ಲೇಖನಗಳು ಸ್ವರಚಿತವಾಗಿದೆ. ಲೇಖನವನ್ನು ಮೇ 10.5.2026 ರೊಳಗೆ ಕಳುಹಿಸುವುದು.ಆಯ್ಕೆಯಾದ ಲೇಖನಗಳನ್ನು ಮಾತ್ರ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸ್ಮರಣ ಸಂಚಿಕೆ ಸಮಿತಿ ವಿಳಾಸ: ಎ.ಟಿ. ಬಾಲಕೃಷ್ಣ ಅರಪಟ್ಟು ಗ್ರಾಮ ಮತ್ತು ಅಂಚೆ, ಕೊಡಗು. ಬಾಲಕೃಷ್ಣ(ದೂ.ಸಂ. 9449118419), ಬಿದ್ದಂಡ ನಾಣಿ ದೇವಯ್ಯ (ದೂ.ಸಂ. 9449781423), ನಂಬಿಯಪಂಡ ರಂಜು ನಾಣಯ್ಯ (ದೂ.ಸಂ.9845578971) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕುಬೆವೂರು ಶ್ರೀ ಜಾರಂದಾಯ ದೈವಸ್ಥಾನದದಲ್ಲಿ ನೇಮ

ಮುಲ್ಕಿ: ಸೀಮೆಯ ಒಂಬತ್ತು ಮಾಗಣೆಯ ಇತಿಹಾಸ ಪ್ರಸಿದ್ಧ ಕುಬೆವೂರು ಶ್ರೀ ಜಾರಂದಾಯ ದೈವಸ್ಥಾನದಲ್ಲಿ ನೇಮೋತ್ಸವ ವಿಜೃಂಭಣೆಯಿಂದ ನಡೆಯಿತು. ಗುರುವಾರ ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ರಾತ್ರಿ ಶ್ರೀ ಜಾರಂದಾಯ ದೈವದ ನೇಮೋತ್ಸವ, ಬಂಡಿ ಉತ್ಸವ, ತೂಟೆದಾರ, ಬದಿಕರ ಬಲಿ, ಪ್ರಸಾದ ವಿತರಣೆ ನಡೆಯಿತು. ಈ ಸಂದರ್ಭ ವ್ಯಾಸರಾಯ ಶ್ರೀಮಂತ್ರಾಯ, ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಸತೀಶ್ ಶೆಟ್ಟಿ ಕೆಂಚನಕೆರೆ, ವಿಜಯಕುಮಾರ್ ಕುಬೆವೂರು, ಅಕ್ಷಿತ್ ಆಳ್ವ, ಶ್ರೀಕಾಂತ್ ಶೆಟ್ಟಿ, ಮೋಹನ್ ದಾಸ್ ಶೆಟ್ಟಿ ಜಯಕುಮಾರ್, ಚಂದ್ರಶೇಖರ ಶೆಟ್ಟಿ, ಕೃಷ್ಣ ಶೆಟ್ಟಿ, ವಿಕಾಸ್ ಶೆಟ್ಟಿ ದಿವಾಕರ ಶೆಟ್ಟಿ ಶರತ್ ಕುಬೆವೂರು, ನಾಗೇಂದ್ರ, ನಾಗರಾಜ ಕುಲಾಲ್, ರಾಜೇಶ್, ಪ್ರಕಾಶ್ ಶೆಟ್ಟಿ ನಾರಾಯಣ ರೈ ಮತ್ತಿತರರು ಉಪಸ್ಥಿತರಿದ್ದರು. ಶುಕ್ರವಾರ ಧ್ವಜಾವರೋಹಣ ಹಾಗೂ ಮಾಯಂದಾಲ ನೇಮೋತ್ಸವ ನಡೆಯಲಿದೆ.

ತೋಟಕ್ಕೆ ನೀರು ಬಳಸದಂತೆ ಸೂಚನೆ

ಬಂಟ್ವಾಳ: ಪುರಸಭಾ ವ್ಯಾಪ್ತಿಯ ಪಾಣೆಮಂಗಳೂರು ಗ್ರಾಮದ ಬೊಂಡಾಲ, ನರಹರಿ ಪರ್ವತ, ಬೋಗೋಡಿ ಪ್ರದೇಶ, ಬಿ.ಕಸ್ಬಾ ಗ್ರಾಮದ ನೇರಂಬೋಳು ಮತ್ತು ಬಿ.ಮೂಡ ಗ್ರಾಮದ ಕೈಕಂಬ ಎತ್ತರ ಪ್ರದೇಶದಲ್ಲಿ ನೀರು ಸರಬರಾಜು ವ್ಯತ್ಯಯ ಉಂಟಾಗಿ ಸಾರ್ವಜನಿಕರಿಗೆ ನೀರು ಪೂರೈಕೆಯಾಗದೆ ತೊಂದರೆ ಉಂಟಾಗುತ್ತಿದೆ. ಸಾರ್ವಜನಿಕರು ತೋಟಕ್ಕೆ ಸಹಿತ ಇನ್ನಿತರ ಉದ್ದೇಶಗಳಿಗೆ ಬಳಸದಂತೆ ಪುರಸಭೆಯಿಂದ ಸೂಚಿಸಲಾಗಿದೆ. ಅಂತಹ ಪ್ರದೇಶಗಳಿಗೆ ಕಂಡು ಬಂದಲ್ಲಿ ನೀರಿನ್ನು ಶಾಶ್ವತವಾಗಿ ರದ್ದುಪಡಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಪುರಸಭೆಯ ಮುಖ್ಯಾಧಿಕಾರಿಯವರ ಪ್ರಕಟಣೆ ತಿಳಿಸಿದೆ.

ನಾಳೆ ಸಭೆ

ಉಳ್ಳಾಲ: ಮಂಗಳಾದ್ರಿ ಪರಂಕಿಲ ಏಕಾಹ ಭಜನಾ ಮಂದಿರದ ಎರಡನೇ ಹಂತದ ಕಾಮಗಾರಿಯನ್ನು ಪ್ರಾರಂಭಿಸುವ ಹಿನ್ನೆಲೆಯಲ್ಲಿ ಮಹಾಸಭೆಯು ಏ.26ರಂದು ಅಪರಾಹ್ನ 3 ಗಂಟೆಗೆ ಮಂದಿರದಲ್ಲಿ ನಡೆಯಲಿದೆ.

ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸದ ಸರಕಾರ | ಬಿಜೆಪಿಯಿಂದ ಮಡಿಕೇರಿಯಲ್ಲಿ ಪ್ರತಿಭಟನೆ

ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯ ವಿರುದ್ಧ ನಡೆಗೆ ಖಂಡನೆ



ಮಡಿಕೇರಿ: ಕರ್ನಾಟಕದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರಕಾರ ಸ್ಥಳೀಯ ಸಂಸ್ಥೆಗಳಾದ ಜಿ.ಪಂ, ತಾ.ಪಂ ಮತ್ತು ಗ್ರಾ.ಪಂ ಚುನಾವಣೆಯನ್ನು ನಡೆಸದೆ ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ ಎಂದು ಆರೋಪಿಸಿ ಕೊಡಗು ಜಿಲ್ಲಾ ಬಿಜೆಪಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ಮಡಿಕೇರಿ ತಾ.ಪಂ ಕಚೇರಿ ಎದುರು ರಾಜ್ಯ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಬಿಜೆಪಿ ಪ್ರಮುಖರು ಹಾಗೂ ಕಾರ್ಯಕರ್ತರು ತಕ್ಷಣ ಚುನಾವಣೆ ನಡೆಸುವಂತೆ ಆಗ್ರಹಿಸಿದರು. ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಅವರು ಮಾತನಾಡಿ, ಚುನಾವಣೆ ನಡೆಸದ ಕಾಂಗ್ರೆಸ್ ಸರಕಾರ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವುದರಿಂದ ಜಿ.ಪಂ, ತಾ.ಪಂ., ಗ್ರಾ.ಪಂ ಕ್ಷೇತ್ರಗಳಿಗೆ ಅನುದಾನ ಸಮರ್ಪಕವಾಗಿ ಹಂಚಿಕೆಯಾಗದೆ ಯಾವುದೇ ಅಭಿವೃದ್ಧಿ ಕಾರ್ಯ ನಡೆಯುತ್ತಿಲ್ಲವೆಂದು ಆರೋಪಿಸಿದರು.

ಹೊರಗಿನಿಂದ ಬಂದ ಅಧಿಕಾರಿಗಳಿಗೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಮಾಹಿತಿ ಇರುವುದಿಲ್ಲ, ಸ್ಥಳೀಯ ಜನಪ್ರತಿನಿಧಿಗಳು ಅಧಿಕಾರದಲ್ಲಿದ್ದರೆ ಅಭಿವೃದ್ಧಿ ಕಾರ್ಯಗಳು ಸುಗಮವಾಗಿ ನಡೆಯುತ್ತವೆ. ಆದ್ದರಿಂದ ಸರಕಾರ ಶೀಘ್ರ ಚುನಾವಣೆಯನ್ನು ನಡೆಸಿ ಜನರಿಗೆ ಅಧಿಕಾರವನ್ನು ನೀಡಬೇಕೆಂದು ಒತ್ತಾಯಿಸಿದರು. ಜಿಲ್ಲಾ ಬಿಜೆಪಿ ವಕ್ತಾರ ತಳೂರು ಎ.ಕಿಶೋರ್ ಕುಮಾರ್, ಉಪಾಧ್ಯಕ್ಷ ಮುದ್ದಂಡ ಡೀನ್ ಬೋಪಣ್ಣ, ಮಾಜಿ ಅಧ್ಯಕ್ಷ ಶಾಂತೆಯಂಡ ರವಿ ಕುಶಾಲಪ್ಪ, ಮಡಿಕೇರಿ ಗ್ರಾಮಾಂತರ ಅಧ್ಯಕ್ಷ ನಾಗೇಶ್ ಕುಂದಲ್ಪಾಡಿ, ನಗರ ಉಪಾಧ್ಯಕ್ಷ ಬಿ.ಕೆ.ಜಗದೀಶ್, ಪ್ರಮುಖರಾದ ಬೊಳ್ಳಜಿರ ಬಿ.ಅಯ್ಯಪ್ಪ ಜಿ.ಪಂ ಮಾಜಿ ಅಧ್ಯಕ್ಷ ಬಿ.ಎ.ಹರೀಶ್ ಮತ್ತಿತರ ಪ್ರಮುಖರು ಹಾಗೂ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡು ತಾಲೂಕು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದರು.

ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ಖಂಡಿಸಿ ಪ್ರತಿಭಟನೆ



ಸುಂಟಿಕೊಪ್ಪ: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಭಯೋತ್ಪಾದಕ ಎಂದು ಕಾಂಗ್ರೆಸ್ ಪಕ್ಷದ ಎಐಸಿಸಿ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ನೀಡಿದ್ದು, ಖಂಡಿಸಿ ಗುರುವಾರ ಸಂಜೆ ಕನ್ನಡ ವೃತ್ತದಲ್ಲಿ ಸುಂಟಿಕೊಪ್ಪ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಯಿತು.

ಕನ್ನಡ ವೃತ್ತದಲ್ಲಿ ಪ್ರತಿಭಟನೆಯಲ್ಲಿ ಮಾತನಾಡಿದ ಗ್ರಾ.ಪಂ. ಮಾಜಿ ಅಧ್ಯಕ್ಷ ಪಿ. ಆರ್.ಸುನೀಲ್ ಕುಮಾರ್, ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆಯಿಂದ ದೇಶದ ಜನತೆ ತಲೆತಗ್ಗಿಸುವಂತಾಗಿದೆ ಎಂದರು.

ನಗರಾಧ್ಯಕ್ಷ ಎಂ.ಟಿ. ಧನುಕಾವೇರಪ್ಪ, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಬಿ.ಕೆ.ಪ್ರಶಾಂತ್, ಯುವ ಮೋರ್ಚಾ ಅಧ್ಯಕ್ಷ ವಿಘ್ನೇಶ್, ಕಾರ್ಯದರ್ಶಿ ನಿಖಿಲ್, ವಾಸುದೇವ, ಪುನೀತ್, ಓಡಿಯಪ್ಪನ ಸುದೀಶ್, ಬೂತ್ ಅಧ್ಯಕ್ಷ ಪಾಂಡ್ಯನ್, ಆಕಾಶ್, ಲೀಲಾ ಮೇದಪ್ಪ, ತ್ರಿಶಾಲ್ ಇದ್ದರು.

ಮುಡಿಪು ಉತ್ಸವಕ್ಕೆ ಚಾಲನೆ | ಸ್ಪೀಕರ್ ಯು.ಟಿ. ಖಾದರ್ ವಿಶ್ವಾಸ

ಮುಡಿಪು ಪ್ರವಾಸೋದ್ಯಮ ಕ್ಷೇತ್ರವಾಗಲಿದೆ



ಕೊಣಾಜೆ: ಮುಡಿಪು ಉತ್ಸವ ಸಮಿತಿ, ಕೃಷಿಕ ಸಮಾಜ ಉಳ್ಳಾಲ ಹಾಗೂ ಯು.ಟಿ.ಫರೀದ್ ಚಾರಿಟೇಬಲ್ ಫೌಂಡೇಶನ್ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ವಿವಿಧ ಸಂಘ ಸಂಸ್ಥೆಗಳು ಮತ್ತು ಸರ್ಕಾರಿ ಇಲಾಖೆಗಳ ಸಹಭಾಗಿತ್ವದಲ್ಲಿ ಮೂರು ದಿನಗ ಬೃಹತ್ ಕೃಷಿ ಮೇಳ ಹಾಗೂ ಮುಡಿಪು ಉತ್ಸವಕ್ಕೆ ವಿಧಾನಸಭಾ ಅಧ್ಯಕ್ಷರಾದ ಯು.ಟಿ.ಖಾದರ್ ಅವರು ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು ಯಾವುದೇ ಫಲಾಪೇಕ್ಷೆ ಇಲ್ಲದೆ ಹಿರಿಯರಾದ ಡಾ.ಮದನ್ ಮೋಹನ್ ನಾಯ್ಕ್ ಅವರು ಮುಡಿಪುವಿನಲ್ಲಿ ಶ್ರೀ ಕೃಷ್ಣ ಧ್ಯಾನ ಕೇಂದ್ರ ನಿರ್ಮಿಸುವ ಮೂಲಕ ಈ ಪರಿಸರವನ್ನು ಪ್ರವಾಸೋದ್ಯಮ ಕ್ಷೇತ್ರವನ್ನಾಗಿ ಮಾತ್ರವಲ್ಲ ಸೌಹಾರ್ದತೆಯ ಕೇಂದ್ರವನ್ನಾಗಿ ರೂಪಿಸಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಇಂತಹ ಉತ್ಸವಗಳು ಈ ನಾಡಿನ ಸಂಸ್ಕೃತಿ, ಸಂಪ್ರದಾಯ, ಪರಂಪರೆಯನ್ನು ಬಿಂಬಿಸುತ್ತವೆ. ಮುಂದಿನ ದಿನಗಳಲ್ಲಿ ಮುಡಿಪುವಿನ ಈ ಕ್ಷೇತ್ರವು ಬೃಹತ್ ಪ್ರವಾಸೋದ್ಯಮ ಕ್ಷೇತ್ರವಾಗಿ ರೂಪುಗೊಳ್ಳಲಿದೆ ಎಂದರು.

ವಿಧಾನಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಮಾತನಾಡಿ, ಮುಡಿಪು ಪ್ರದೇಶವು ಇಂದು ಹಂತ ಹಂತವಾಗಿ ಅಭಿವೃದ್ಧಿಗೊಳ್ಳುತ್ತಿದೆ ಎಂದರು.

ಶ್ರೀ ಕೃಷ್ಣ ಧ್ಯಾನ ಮಂದಿರದ ಸ್ಥಾಪಕ ಡಾ.ಮದನ್ ಮೋಹನ್ ನಾಯಕ್ ಅಡೇಕಳ ಇವರಿಗೆ 'ಸೇವಾ ಧುರಂಧರ' ಪ್ರಶಸ್ತಿ ಯನ್ನು ನೀಡಿ ಗೌರವಿಸಲಾಯಿತು. ಕರ್ನಾಟಕ ಅದಾನಿ ಗ್ರೂಪ್ ಅಧ್ಯಕ್ಷ ಕಿಶೋರ್ ಕುಮಾರ್ ಆಳ್ವ, ಮೂಡಾ ಅಧ್ಯಕ್ಷ ಸದಾಶಿವ ಉಳ್ಳಾಲ್, ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮಮತಾ ಗಟ್ಟಿ, ಪ್ರಶಾಂತ್ ಕಾಜವ, ಕೃಷಿ ಇಲಾಖೆಯ ವಿಜಯ ಕುಮಾರ್ ರೈ, ಗೌರವ ಸಲಹೆಗಾರ ರಮೇಶ್ ಶೇಣವ, ಲಯನ್ಸ್ ಗೌವರ್ನರ್ ಅರವಿಂದ್ ಶೆಣೈ, ಗಣೇಶ್ ನಾಯ್ಕ್ ಭರತ್ ನಾಯ್ಕ್ ನಚ್ಚಗುತ್ತು, ಅಬ್ದುಲ್ ಜಲೀಲ್ ಮೋಂಟುಗೋಳಿ, ಅಬ್ದುಲ್ ನಾಸೀರ್ ಎನ್ ಎಸ್, ಮುಖಂಡರಾದ ರಮೇಶ್ ಬೋಳಿಯರ್, ನವಾಝ್ ನರಿಂಗಾನ, ಚಂದ್ರಹಾಸ್ ಕರ್ಕೇರ, ಮುಡಿಪು ಕಾಲೇಜು ಪ್ರಾಂಶುಪಾಲರಾದ ಡಾ. ಸತೀಶ್ ಗಟ್ಟಿ ಪ್ರಾಧ್ಯಾಪಕ ಡಾ.ಶೇಷಪ್ಪ ಅಮೀನ್, ಮುಖಂಡರಾದ ರಾಧಾಕೃಷ್ಣ ಉಮಿಯ, ಕೃಷಿ ಇಲಾಖೆಯ ವೀಣಾ , ಶಿಕ್ಷಣಾಧಿಕಾರಿ ಈಶ್ವರ್, ಅರುಣ್ ಡಿಸೋಜ, ಜನಶಿಕ್ಷಣ ಟ್ರಸ್ಟ್ ನ ಶೀನ ಶೆಟ್ಟಿ ಕೃಷ್ಣ ಮೂಲ್ಯ, ಟಿ.ಆರ್.ಖಾದರ್, ನಾಸೀರ್ ಕೆ.ಕೆ.ಎಸ್, ಸೂಫಿಕುಂಞಿ, ಹೈದರ್ ಕೈರಂಗಳ, ತ್ಯಾಗಂ ಹರೇಕಳ, ಅಬ್ದುಲ್ ರಝಾಕ್ ಕುಕ್ಕಾಜೆ, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಗುರುದತ್ ಇದ್ದರು.

ಉತ್ಸವ ಸಮಿತಿಯ ಕಾರ್ಯಾಧ್ಯಕ್ಷ ಕಾರ್ಯಾಧ್ಯಕ್ಷ ದೇವದಾಸ್ ಭಂಡಾರಿ ಅವರು ಸ್ವಾಗತಿಸಿದರು.ಸೌಜನ್ಯ ಹೆಗ್ಡೆ ನಿರೂಪಿಸಿದರು.

ಕುಂದಾಪುರ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆ | ಹರಿಪ್ರಸಾದ್ ಶೆಟ್ಟಿ ಬಣ್ಣನೆ

ಬಡವರನ್ನು ಮೇಲೆತ್ತಲು 'ಗ್ಯಾರಂಟಿ' ಸಫಲ



ಕುಂದಾಪುರ: ಮುಖ್ಯಮಂತ್ರಿ ಮತ್ತು ಉಪಮುಖ್ಯ ಮಂತ್ರಿಗಳ ಘೋಷಣೆ ಮಾಡಿರುವ ಪಂಚ ಗ್ಯಾರಂಟಿಯನ್ನು ಯಥಾವತ್ತಾಗಿ ಜಾರಿಗೊಳಿಸಿದ್ದಾರೆ. ಯಾವುದೇ ವಿರೋಧವಿದ್ದರೂ ಯಾವುದೇ ಯೋಜನೆಯನ್ನು ಸ್ಥಗಿತ ಮಾಡದೆ ಇಡೀ ರಾಜ್ಯದಲ್ಲಿ ಅನುಷ್ಠಾನ ಮಾಡಿದ್ದಾರೆ. ಗ್ಯಾರಂಟಿ ಬಗ್ಗೆ ಬಹಳಷ್ಟು ವ್ಯವಸ್ಥಿತವಾಗಿ ಅಪಪ್ರಚಾರಗಳುನಡೆಯುತ್ತಿದ್ದು ಅಭಿವೃದ್ಧಿ ಆಗಿಲ್ಲ ಎನ್ನುವ ಗೊಂದಲ ಸೃಷ್ಟಿಸುತ್ತಿದ್ದಾರೆ. ಇಷ್ಟೊಂದು ಜನರಿಗೆ ಗ್ಯಾರಂಟಿಯಿಂದ ಅನುಕೂಲವಾಗಿರುವುದು ದೇಶದಲ್ಲಿ ಇದು ಪ್ರಥಮ. ಬಡವರು, ದೀನದಲಿತರನ್ನು ಮೇಲಕ್ಕೆತ್ತುವಲ್ಲಿ ಗ್ಯಾರಂಟಿ ಯೋಜನೆ ಸಫಲವಾಗಿದೆ. ಗ್ಯಾರಂಟಿ ಯೋಜನೆಗಳ ಬಗ್ಗೆ ವ್ಯಾಪಕ ಪ್ರಚಾರ ನಡೆಸಬೇಕಿದ್ದು, ಈ ಬಗ್ಗೆಕಾರ್ಯಕ್ರಮ ಹಾಕಿಕೊಳ್ಳಲಾಗುವುದು ಎಂದು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಕಾನ್ಯಕ್ಕಿ ಹೇಳಿದರು.

ಕುಂದಾಪುರದ ತಾಲೂಕು ಪಂಚಾಯತ್ ನಲ್ಲಿ ಗುರುವಾರ ನಡೆದ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಾಮಾನ್ಯ ಮಾರ್ಗಸೂಚಿಯಲ್ಲಿ ನಿಗದಿತ ನಿಲುಗಡೆ ಇದ್ದಲ್ಲಿ ನಿಲುಗಡೆ ನೀಡಲು ಚಾಲನಾ ಸಿಬ್ಬಂದಿಗಳಿಗೆ ಸೂಕ್ತ ತಿಳುವಳಿಕೆ ಮಾಹಿತಿ ನೀಡಲಾಗಿದೆ, ಗಂಗೊಳ್ಳಿ-ಬೈಂದೂರು ಬಸ್ ಸಂಚಾರ ಆರಂಭಿಸುವ ಬಗ್ಗೆ ಸಂಬಂಧಪಟ್ಟವರಿಗೆ ಮನವಿ ಸಲ್ಲಿಸಲಾಗಿದೆ, ಬೈಂದೂರು ಬಸ್ ನಿಲ್ದಾಣಕ್ಕೆ ಬಸ್ ಹೋಗಲು ರಾ.ಹೆ. ಡಿವಿಯೇಶನ್ ಆಗಬೇಕಾಗಿದ್ದು ಸಂಬಂಧಪಟ್ಟವರಿಗೆಮನವಿಮಾಡಲಾಗಿದೆ. ಚಾಲಕ, ನಿರ್ವಾಹಕ, ಮ್ಯಾಕಾನಿಕ್ ಹಾಗೂ ಬಸ್‌ಗಳ ಕೊರತೆಯಿಂದ ಹೊಸ ಮಾರ್ಗದಲ್ಲಿ ಬಸ್ ಓಡಾಟ ಪ್ರಾರಂಭಿಸುವುದು ಸಾಧ್ಯವಿಲ್ಲ ಎಂದು ಕೆಎಸ್‌ಆರ್‌ಟಿಸಿ ಡಿಪೋ ಮ್ಯಾನೇಜರ್ ಉದಯ ಶೆಟ್ಟಿ ಮಾಹಿತಿ ನೀಡಿದರು.

ಪಡಿತರ ಚೀಟಿ ಅರ್ಜಿ ತಿರಸ್ಕಾರ

ಪಡಿತರ ಚೀಟಿ ಇಲ್ಲದೆ ಗೃಹಲಕ್ಷ್ಮೀ ಯೋಜನೆಯಡಿ ನೊಂದಣಿ ಸಾಧ್ಯವಿಲ್ಲ. ಆದರೆ ಪಡಿತರ ಚೀಟಿ ಮಾಡಲು ಸಾಧ್ಯವಾಗುತ್ತಿಲ್ಲ, ಹೊಸ ಪಡಿತರ ಚೀಟಿಗೆ ಸಲ್ಲಿಸಿದ ಅರ್ಜಿ ತಿರಸ್ಕಾರವಾಗಿದೆ ಎಂದು ಸದಸ್ಯ ಗಣೇಶ ವಿ. ಹೇಳಿದರೆ, ಈವರೆಗೆ ಯಾವುದೇ ಅರ್ಜಿ ತಿರಸ್ಕಾರ ಮಾಡಿಲ್ಲ, ಈ ಬಗ್ಗೆ ಪರಿಶೀಲನೆ ನಡೆಸಿ ಕ್ರಮಕೈಗೊಳ್ಳಲಾಗುವುದು. ಹೊಸ ಪಡಿತರ ಚೀಟಿ ಪಡೆಯಲು ಸದ್ಯದಲ್ಲೇ ಅವಕಾಶ ದೊರೆಯಲಿದೆ ಎಂದು ಇಲಾಖೆ ಅಧಿಕಾರಿ ಸುರೇಶ ಹೇಳಿದರು.

ಮಳೆಗಾಲದ ಪೂರ್ವದಲ್ಲಿ ವಿದ್ಯುತ್ ತಂತಿಗಳ ಮೇಲಿರುವ ಮರಗಳನ್ನು ಕಡಿಯಲು ಗ್ರಾಪಂ. ಮೂಲಕ ಅರಣ್ಯ ಇಲಾಖೆ ಪತ್ರ ಬರೆದು ಕ್ರಮಕೈಗೊಳ್ಳುವಂತೆ ಅಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಸೂಚನೆ ನೀಡಿದರು. ಸದಸ್ಯರಾದ ಅಭಿಜಿತ್ ಪೂಜಾರಿ, ಆಶಾ ಕರ್ವಾಲೋ, ನಾರಾಯಣ ಆಚಾರ್, ತಾಲೂಕು ಪಂಚಾಯತ್ ಪ್ರಭಾರ ಇಒ ದೀಪಾ ಉಪಸ್ಥಿತರಿದ್ದರು.

ಭಂಡಾರ್ಕಾರ್ಸ್ ಕಾಲೇಜಿನಲ್ಲಿ ಅಂಗಾಂಗ ದಾನ, ಕ್ಯಾನ್ಸರ್ ಜಾಗೃತಿ



ಕುಂದಾಪುರ: ಬದುಕಿರುವಾಗ ಕೆಲವು ಅಂಗಾಂಗವನ್ನು ದಾನ ಮಾಡಬಹುದು. ದೇಹದಾನ ಶ್ರೇಷ್ಠ ದಾನ. ದೇಹ ದಾನ ಮಾಡುವುದರಿಂದ ಇನ್ನೋರ್ವರಿಗೆ ನೀವು ಬದುಕನ್ನು ನೀಡಿದಂತಹ ಪುಣ್ಯ ಸಲ್ಲುತ್ತದೆ. ಬೇರೆ ಬೇರೆ ಕಾರಣಕ್ಕೆ ಮರಣ ಹೊಂದಿದಾಗಲೂ ಅಂಗಾಂಗಳನ್ನು ದಾನ ಮಾಡಬಹುದು. ಆದರೆ ಬೇರೆ ಬೇರೆ ಅಂಗಾಂಗಗಳಿಗೆಸಮಯದಮಿತಿಇರುತ್ತದೆ. ಇವೆಲ್ಲವನ್ನೂ ಗಮನದಲ್ಲಿರಿಕೊಳ್ಳಬೇಕು ಎಂದು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆ ಅಂಗಾಂಗ ಕಸಿ ವಿಭಾಗದ ಸಂಯೋಜಕಿ ಪ್ರೀತಿ ಶೆಟ್ಟಿ ಹೇಳಿದರು.

ಭಂಡಾರ್ಕಾರ್ಸ್ ಕಾಲೇಜಿನಲ್ಲಿ ಶುಕ್ರವಾರ ನಡೆದ ಅಂಗಾಂಗ ದಾನ ಮತ್ತು ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮದಲ್ಲಿ ದೇಹದಾನದ ಮಹತ್ವ ದೇಹದಾನದ ಕುರಿತು ಕಾನೂನುಗಳನ್ನು ಮತ್ತು ಪ್ರಕ್ರಿಯೆಗಳ ಕುರಿತು ಅವರು ಮಾತನಾಡಿದರು.

ಕ್ಯಾನ್ಸರ್ ಜಾಗೃತಿ ಕುರಿತು ಮಾತನಾಡಿದ ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯ ಸರ್ಜಿಕಲ್ ಅಂಕೋಲಜಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಅಖಿಲ್ ಪಾಲೋಡ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಕ್ಯಾನ್ಸರ್ ಕಾಯಿಲೆ ಹೆಚ್ಚಾಗುತ್ತಿದೆ. ಹಾಗಾಗಿ ಜಾಗೃತಿ ಮೂಡಬೇಕು ಎಂದು ಹೇಳಿದರು.

ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ.ಶುಭಕರಾಚಾರಿ ವಹಿಸಿದ್ದರು. ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ಸತ್ಯನಾರಾಯಣ, ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕುಂದಾಪುರ ಘಟಕದ ಕಾರ್ಯದರ್ಶಿ ಸತ್ಯನಾರಾಯಣ ಪುರಾಣಿಕ್, ಭಂಡಾರ್ಕಾರ್ಸ್ ಕಾಲೇಜಿನ ಯೂತ್ ರೆಡ್ ಕ್ರಾಸ್ ಘಟಕದ ಸಂಯೋಜಕಿ ವಿದ್ಯಾರಾಣಿ ಉಪಸ್ಥಿತರಿದ್ದರು ವೈಷ್ಣವಿ ಸ್ವಾಗತಿಸಿದರು. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕುಂದಾಪುರ ಘಟಕದ ಚೇರ್‌ಮೆನ್ ಜಯಕರ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿನಿಯರಾದ ಅನಿಷಾ ಲೆವಿಟ್ ನಿರೂಪಿಸಿದರು. ಆದೀಬಾ ವಂದಿಸಿದರು.

ಎ.26 – ಮೇ 2: ಕೋರ್ಯಾರು ದೇಗುಲ ಪುನರ್ ಪ್ರತಿಷ್ಠೆ ಬ್ರಹ್ಮಕ

ಬಂಟ್ವಾಳ: ಕುಕ್ಕಿಪಾಡಿ ಗ್ರಾಮದ ಕೋರ್ಯಾರು ಶ್ರೀ ದುರ್ಗಾ ಮಹಮ್ಮಾಯೀ ದೇವಸ್ಥಾನದ ಪುನರ್ ಪ್ರತಿಷ್ಠೆ ಬ್ರಹ್ಮ ಕಲಶೋತ್ಸವ ಏ. 26ರಿಂದ ಮೇ 2ರವರೆಗೆ ನಡೆಯಲಿದೆ ಎಂದು ಬ್ರಹ್ಮ ಕಲಶೋತ್ಸವ ಸಮಿತಿ ಅಧ್ಯಕ್ಷ ಉಮೇಶ್ ಗೌಡ ಮಂಚಕಲ್ಲು ತಿಳಿಸಿದ್ದಾರೆ .

ಬಂಟ್ವಾಳ ಪ್ರೆಸ್‌ಕ್ಲಬ್‌ನಲ್ಲಿಶುಕ್ರವಾರ ಪತ್ರಿಕಾ ಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು ಎ.26 ರಂದು ಸಂಜೆ 3 ಗಂಟೆಗೆ ಸಿದ್ದಕಟ್ಟೆ ನಲ್ಲೂರಂಗಡಿ ಬಸದಿಯಿಂದ ಹಸಿರು ಹೊರೆಕಾಣಿಕೆ ಮೆರವಣಿಗೆ ಸಂಜೆ ಧಾರ್ಮಿಕ ಸಭೆ ನಡೆಯಲಿದೆ ಎಂದರು.

ಏ.27 ಮತ್ತು 28 ರಂದು ವೈಧಿಕ ವಿಧಿ,ವಿಧಾನ ವಿಧಿವಿಧಾನಗಳು ನಡೆಯಲಿದೆ. ಏ. 29ರಂದು ಬೆಳಿಗ್ಗೆ ಗಂಟೆ 10.27 ಕ್ಕೆ ಮಿಥುನ ಲಗ್ನದಲ್ಲಿ ಪಂಚಲೋಹದ ಶ್ರೀ ದೇವಿಯ ಬಿಂಬ ಪ್ರತಿಷ್ಠೆ ನೆರವೇರಲಿದೆ ಎಂದರು.

ಮಧ್ಯಾಹ್ನ 3 ಗಂಟೆಗೆ ನಡೆಯುವ ಧಾರ್ಮಿಕಸಭೆಯಲ್ಲಿ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಆರ್ಶೀವಚನ ನೀಡಲಿದ್ದಾರೆ. ಸಂಜೆ ಗಂಟೆ 6 ರಿಂದ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ಯಕ್ಷ ಕದಂಬ ಯಕ್ಷಗಾನ , ರಾತ್ರಿ 8 ಗಂಟೆಗೆ 'ಗಾನ ನೃತ್ಯ ವೈಭವ' ಜರುಗಲಿದೆ ಎಂದು ತಿಳಿಸಿದರು.

ಎ. 30 ರಂದು ಸಂಜೆ ವಿವಿಧ ಭಜನಾ ಮಂಡಳಿಗಳಿಂದ "ಭಜನಾ ಸಂಗಮೋತ್ಸವ, ಸಂಜೆ6 ರಿಂದ ಧಾರ್ಮಿಕ ಸಭೆ ಜರಗಲಿದೆ , ರಾತ್ರಿ 8.00 ರಿಂದ ತಾಂಬೂಲ ಕಲಾವಿದೆರ್ ಪುಂಜಾಲಕಟ್ಟೆ ಇವರಿಂದ "ಎಲ್ಲೆ ದಾದ ,ಏರೆಗ್ ಗೊತ್ತು " ಹಾಸ್ಯಮಯ ನಾಟಕ ಜರಗಲಿದೆ ಎಂದರು.

ಮೇ 1ರಂದು ಬೆಳಿಗ್ಗೆ 10.45ರ ಸುಮುಹೂರ್ತದಲ್ಲಿ 'ಬ್ರಹ್ಮ ಕಲಶಾಭಿಷೇಕ' ನೆರವೇರಲಿದೆ, 11.30 ಕ್ಕೆ ಧಾರ್ಮಿಕ ಸಭಾ ಕಾರ್ಯಕ್ರಮ, ಸಂಜೆ 5ರಿಂದ ಕಟೀಲು ಶ್ರೀ ದುರ್ಗಾಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿ ಇವರಿಂದ 'ಶ್ರೀ ದೇವಿ ಮಹಾತ್ಮೆ' ನಯಕ್ಷಗಾನ ನಡೆಯಲಿದೆ ಎಂದರು.

ಮೇ 2ರಂದು ಸಂಜೆ ಗಂಟೆ 4ರಿಂದ ಕಲ್ಲುರ್ಟಿ ಪಂಜುರ್ಲಿ ದೈವಗಳಿಗೆ ನೇಮ ಜರುಗಲಿದೆ ಎಂದು ಅವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಪ್ರಭಾಕರ ಪ್ರಭು, ದುರ್ಗಾದಾಸ್ ಶೆಟ್ಟಿ ಕರೆಂಕಿಜೆ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಗಂಗಾಧರ ಗೌಡ ಕುಕ್ಕೇಡಿ, ಗುರಿಕಾರರಾದ ಗೋಪಾಲ ಗೌಡ, ಬ್ರಹ್ಮಕಲಶೋತ್ಸವ ಸಮಿತಿ ಗೌರವಾಧ್ಯಕ್ಷ ಹೇಮಚಂದ್ರ ಗೌಡ ಸಿದ್ದಕಟ್ಟೆ, ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಉಮೇಶ್ ಗೌಡ ಮಂಚಕಲ್ಲು ಉಪಸ್ಥಿತರಿದ್ದರು.

ಮಣೂರಿನಲ್ಲಿ ಎಳೆಬಿಸಿಲು ಬೇಸಿಗೆ ಶಿಬಿರ ಸಮಾರೋಪ



ಕೋಟ: ಗೀತಾನಂದ ಫೌಂಡೇಶನ್ ವತಿಯಿಂದ ಆನಂದ ಸಿ ಕುಂದರ್ ಅವರ ಮಾರ್ಗದರ್ಶನದಲ್ಲಿ ಕೋಟ ಮಣೂರಿನಲ್ಲಿ ಆಯೋಜಿಸಲಾದ ಒಂದು ವಾರದ ಬೇಸಿಗೆ ಶಿಬಿರವು ಸಂಪನ್ನಗೊಂಡಿತು.


ಮುಖ್ಯ ಅತಿಥಿಗಳಾಗಿ ವಾಹಿನಿ ಯುವಕ ಮಂಡಲದ ರಮೇಶ್ ಕುಂದರ್, ಗೀತನಾದ ಫೌಂಡೇಶನ್ ವಿಶ್ವಸ್ಥರಾದ ದಿವ್ಯಲಕ್ಷ್ಮಿ ಪ್ರಶಾಂತ್ ಕುಂದರ್, ವೈಷ್ಣವಿ ರಕ್ಷಿತ್ ಕುಂದರ್ ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶಿಬಿರಾರ್ಥಿಗಳಾದ ಕೃತಿ ನಿರೂಪಿಸಿ, ರತ್ವಿಕ್ ಸ್ವಾಗತಿಸಿ, ಸಮರ್ಥ್ ವಂದಿಸಿದರು. ಒಂದು ವಾರದ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಯೋಗಾಭ್ಯಾಸ, ತಂಡ ನಿರ್ಮಾಣ ಚಟುವಟಿಕೆಗಳು, ಸೇನಾ ಜೀವನದ ಅನುಭವ, ಸಮುದ್ರ ಸಂರಕ್ಷಣೆಯ ಅರಿವು, ನಾಯಕತ್ವ ತರಬೇತಿ, ಪ್ಲಾನಟೋರಿಯಂ ವೀಕ್ಷಣೆ, ನಾಟಕ ಹಾಗೂ ಕ್ರಿಯಾತ್ಮಕ ಗೀತೆಗಳಂತಹ ವಿವಿಧ ಚಟುವಟಿಕೆಗಳನ್ನು ಮಾಡಲಾಯಿತು.


ಸಮಾರೋಪ ಸಮಾರಂಭದಲ್ಲಿ ವಿದ್ಯಾರ್ಥಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡು, ಕ್ಯಾಂಪ್‌ನಲ್ಲಿ ಕಲಿತ ಕೌಶಲ್ಯಗಳನ್ನು ಪ್ರದರ್ಶಿಸಿದರು. ಸಾರ್ವಜನಿಕ ಭಾಷಣದ ಮೂಲಕ ತಮ್ಮ ಅಭಿವ್ಯಕ್ತಿಯನ್ನು ತೋರಿದ ವಿದ್ಯಾರ್ಥಿಗಳು ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಕಾರ್ಯಕ್ರಮವನ್ನು ಗೀತಾನಂದ ಫೌಂಡೇಶನ್ ಸಂಯೋಜಕರಾದ ರವಿಕಿರಣ್ ಕೋಟ ಮತ್ತು ದೀಕ್ಷಿತ ಸಂಯೋಜಿಸಿದರು.

ವಿನಾಶಗೊಳ್ಳುತ್ತಿದೆ ಕೃಷಿ ವಲಯ, ಸಂಕಷ್ಟದಲ್ಲಿ ರೈತಾಪಿ ವರ್ಗ | ಫಲಪ್ರದವಾಗದ ಅರಣ್ಯ ಇಲಾಖೆಯ ನಿಯಂತ್ರಣ ಪ್ರಕ್ರಿಯೆಗಳು

ಕಾಸರಗೋಡು ಜಿಲ್ಲೆಯಲ್ಲಿ ಹೆಚ್ಚುತ್ತಿದೆ ಕೃಷಿ ಬೆಳೆಗಳಿಗೆ ಕಾಡುಹಂದಿಗಳ ಉಪಟಳ





ಕಾಸರಗೋಡು: ಜಿಲ್ಲೆಯಲ್ಲಿ ಕಾಡು ಹಂದಿಗಳ ಉಪಟಳ ದಿನ ಕಳೆದಂತೆ ತೀವ್ರಗೊಳ್ಳುತ್ತಿದೆ. ಇದರಿಂದಾಗಿ ಕೃಷಿ ವಲಯವು ವಿನಾಶಗೊಳ್ಳುತ್ತಿದ್ದು, ಕೃಷಿಕರು ಸಂಕಷ್ಟದಲ್ಲಿ ದಿನ ಕಳೆಯುವಂತಾಗಿದೆ.

ಕೃಷಿ ವಿಸ್ತರಣೆ ಹಾಗೂ ಪ್ರೋತ್ಸಾಹಕ್ಕಾಗಿ ಕೋಟ್ಯಂತರ ರೂಪಾಯಿ ವಿನಿಯೋಗಿಸುವ ಕೇರಳ ಸರಕಾರವು ಕಾಡುಹಂದಿಗಳ ಉಪಟಳವನ್ನು ಎದುರಿಸುತ್ತಿರುವ ಕೃಷಿಕರ ಸಮಸ್ಯೆಗಳಿಗೆಪರಿಹಾರಒದಗಿಸದಿರುವುದು ಆಕ್ರೋಶಕ್ಕೂ ಕಾರಣವಾಗಿದೆ.

ಕೃಷಿ ಬೆಳೆಗಳನ್ನು ನಾಶ ಮಾಡುತ್ತಿರುವ ಕಾಡುಹಂದಿ ನಿಯಂತ್ರಿಸಲಿರುವ ಅರಣ್ಯ ಇಲಾಖೆ ಪ್ರಕ್ರಿಯೆಗಳು ಫಲಪ್ರದವಾಗುತ್ತಿಲ್ಲ. ರಾತ್ರಿ ವೇಳೆಯಲ್ಲಿ ಹಿಂಡು ಹಿಂಡಾಗಿ ಲಗ್ಗೆಯಿಡುವ ಕಾಡುಹಂದಿಗಳು ಕೃಷಿ ಫಸಲನ್ನು ವ್ಯಾಪಕವಾಗಿ ಹಾನಿಗೊಳಿಸುತ್ತಿವೆ. ಇದೇ ವೇಳೆ ಕಾಡುಹಂದಿಗಳ ಗುಂಪು ಕೃಷಿ ಪ್ರದೇಶಗಳಿಗೆ ಪ್ರವೇಶಿಸುವುದನ್ನು ತಡೆಯಲು ಹಲವುರೀತಿಯವಿಧಾನಗಳನ್ನು ಕೃಷಿಕರು ಅಳವಡಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಕೃಷಿ ಪ್ರದೇಶಗಳಿಗೆ ಸುತ್ತಲೂ ಕೆಲವೆಡೆ ಹಳೆಯ ಸೀರೆಗಳನ್ನು ಕಟ್ಟಲಾಗುತ್ತಿದೆ. ಆದರೂ ಕಾಡುಹಂದಿಗಳ ಉಪಟಳವನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ ಎಂದು ಕೃಷಿಕರು ನೋವು ತೋಡಿಕೊಂಡಿದ್ದಾರೆ.

ಕಾಡುಪ್ರಾಣಿಗಳ ಉಪಟಳವನ್ನು ತಡೆಗಟ್ಟಲು ಹಗಲು ರಾತ್ರಿ ಕೃಷಿ ಪ್ರದೇಶಗಳಲ್ಲಿ ಕಾವಲು ಕಾಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಈ ಮಧ್ಯೆ ಜಿಲ್ಲೆಯ ಅರಣ್ಯ ಭಾಗಕ್ಕೆ ಹೊಂದಿಕೊಂಡಿರುವ ಅಡಿಕೆ, ತೆಂಗು, ಬಾಳೆ, ಕರಿಮೆಣಸು, ತರಕಾರಿ, ಹಣ್ಣುಹಂಪಲು ಮೊದಲಾದ ಕೃಷಿ ಬೆಳೆಗಳನ್ನು ಸಂಪೂರ್ಣವಾಗಿ ನಾಶಪಡಿಸುತಿ ರುವ ಕಾಡುಹಂದಿಗಳು ದಿನಂಪ್ರತಿ ಗುಂಪುಗಳಾಗಿ ಲಗ್ಗೆಯಿಡುತ್ತಿವೆ. ಆದರೂ ಸಂಬಂಧಪಟ್ಟ ಇಲಾಖೆಗಳಿಂದ ಶಾಶ್ವತ ಕ್ರಮಗಳು ಜಾರಿಯಾಗದಿರುವುದು ವಿಪರ್ಯಾಸವಾಗಿದೆ. ಮಂಜೇಶ್ವರ, ಕಾಸರಗೋಡು, ಹೊಸದುರ್ಗ ಮತ್ತು ವೆಳ್ಳರಿಕುಂಡು ತಾಲೂಕುಗಳ ಕೃಷಿ ಪ್ರದೇಶಗಳಿಗೆ ದಾಳಿಯಿಟ್ಟು ಫಸಲುಗಳನ್ನು ಹಾಳುಮಾಡುವ ಕಾಡುಹಂದಿಗಳು ರಾತ್ರಿ ವೇಳೆಯಲ್ಲಿ ನಡೆದಾಡುವ ಪಾದಚಾರಿಗಳ ಮೇಲೂ ಆಕ್ರಮಣ ಮಾಡುತ್ತಿರುವುದು ವರದಿಯಾಗುತ್ತಿದೆ. ದ್ವಿಚಕ್ರ ವಾಹನಗಳಿಗೆ ಅಡ್ಡವಾಗಿಓಡುವಕಾಡುಹಂದಿಗಳುಅನೇಕ ಅಪಘಾತಗಳಿಗೂ ಕಾರಣವಾಗುತ್ತಿವೆ.

ಇಲಾಖೆಗಳಿಂದ ಸೂಕ್ತ ಕ್ರಮದ ಅಗತ್ಯವಿದೆ

ಕಾಸರಗೋಡು ಜಿಲ್ಲೆಯ ಕೃಷಿ ಭಾಗ ನಾಶಗೊಳಿಸುತ್ತಿರುವ ಕಾಡುಹಂದಿಗಳ ಉಪಟಳವನ್ನು ಒಂದು ಹಂತದ ವರೆಗಾದರೂ ನಿಗ್ರಹಿಸಲು ಸಂಬಂಧಪಟ್ಟ ಇಲಾಖೆಗಳು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಇಲ್ಲದಿದ್ದಲ್ಲಿ ಕೃಷಿಕರು ತಮ್ಮ ಕೃಷಿ ಕ್ಷೇತ್ರದಿಂದ ವಿಮುಖರಾಗುವ ದಿನಗಳು ದೂರವಿಲ್ಲ. ಅರಣ್ಯ, ಕೃಷಿ, ಸ್ಥಳೀಯಾಡಳಿತ ಸೇರಿದಂತೆ ವಿವಿಧ ಇಲಾಖೆಗಳು ಸಮನ್ವಯದಿಂದ ಕೆಲಸಗಳನ್ನು ನಿರ್ವಹಿಸಿ ಕಾಡುಹಂದಿಗಳು ಸಹಿತ ಕಾಡುಪ್ರಾಣಿಗಳಿಂದ ಕೃಷಿಗೆ ಯಾವುದೇ ರೀತಿಯ ತೊಡಕು ಸಂಭವಿಸದಂತೆ ಗಮನಹರಿಸಬೇಕಾಗಿದೆ.

ಸುತ್ತಮುತ್ತ

ಪೆರಡಾಲ ಶ್ರೀ ದೇವಳ ಇಂದಿನ ಕಾರ್ಯಕ್ರಮ

ಕಾಸರಗೋಡು: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶದ ಕಾರ್ಯಕ್ರಮ ನಡೆಯುತ್ತಿದ್ದು, ಏ.25ರಂದು ಬೆಳಿಗ್ಗೆ 6ರಿಂದ ಗಣಪತಿಹೋಮ, ಶಾಂತಿ ಹೋಮ, ಪ್ರಾಯಶ್ಚಿತ್ತ ಹೋಮ, ತತ್ವಹೋಮ, ತತ್ವಕಲಶಾಭಿಷೇಕ, ಕುಂಭೇಶ ಕರ್ಕರಿ ಪೂಜೆ, ಅಂಕುರ ಪೂಜೆ,ಸೋಪಾನ ಪೂಜೆ, ಬ್ರಹ್ಮಕಲಶ ಪೂಜೆ, ಮಧ್ಯಾಹ್ನ ಸೋಪಾನ ಪೂಜೆ, ಅಂಕುರ ಪೂಜೆ, ಮಹಾಪೂಜೆ, ಸಂಜೆ 6ರಿಂದ ಪರಿಕಲಶ ಪೂಜೆ, ಅಧಿವಾಸ ಹೋಮ, ಅಧಿವಾಸ ಬಲಿ, ಕಲಶಾಧಿವಾಸ, ಸೋಪಾನಪೂಜೆ, ಮಹಾಬಲಿಪೀಠಾವಾಸ ಜರಗಲಿದೆ.

ಇಂದು ಕ್ಯಾನ್ಸರ್ ಚಿಕಿತ್ಸಾ ಶಿಬಿರ

ಕಾಸರಗೋಡು: ಅಣಂಗೂರು ಸರಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಏ.25 ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆಯ ವರೆಗೆ ಕ್ಯಾನ್ಸರ್ ಚಿಕಿತ್ಸಾ ತಜ್ಞೆ ಡಾ.ಲೀಮಾ ಮ್ಯಾಥ್ಯೂ ನೇತೃತ್ವದಲ್ಲಿ ಮಾಸಿಕ ಕ್ಯಾನ್ಸರ್ ಚಿಕಿತ್ಸಾ ಶಿಬಿರ ನಡೆಯಲಿದೆ. ಕ್ಯಾನ್ಸರ್ ತಡೆಗಟ್ಟುವಿಕೆ, ರೋಗನಿರ್ಣಯ, ಚಿಕಿತ್ಸೆ, ಸಂಬಂಧಿತ ಕಾಯಿಲೆಗಳಿಗೆ ಆರೈಕೆ ಮತ್ತು ಉಪಶಮನ ಚಿಕಿತ್ಸಾ ಸೌಲಭ್ಯ ಲಭ್ಯವಿದೆ. ವಿವರಗಳಿಗೆ 9447380457 ಮೊಬೈಲ್ ನಂಬರ್‌ಗೆ ಕರೆ ಮಾಡಬಹುದು.

ಮೇ 1: ಕಯ್ಯಾರು ಶ್ರೀ ವಿಶ್ವಬ್ರಾಹ್ಮಣ ಸಮಾಜ ಭವನದ ಉದ್ಘಾಟನೆ

ಉಪ್ಪಳ: ಶ್ರೀ ವಿಶ್ವಕರ್ಮ ಸೇವಾ ಸಮಿತಿ ಕಯ್ಯಾರು ಇದರ ವತಿಯಿಂದ ನೂತನವಾಗಿ ನಿರ್ಮಿಸಿದ ಶ್ರೀ ವಿಶ್ವಬ್ರಾಹ್ಮಣ ಸಮಾಜ ಭವನ ಉದ್ಘಾಟನಾ ಸಮಾರಂಭ ಮೇ 1ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಇದರಂಗವಾಗಿ ಏ.30ರಂದು ಸಂಜೆ 5.30ಕ್ಕೆ ಶಿಲ್ಪಿಪೂಜೆ, ಸಾಮೂಹಿಕ ಪ್ರಾರ್ಥನೆ, ಶ್ರೀ ಶಿವಸುಜ್ಞಾನ ತೀರ್ಥ ಮಹಾಸ್ವಾಮೀಜಿ ಆರೆಮಾದನಹಲ್ಲಿ ಅವರ ಸಾನಿಧ್ಯದಲ್ಲಿ ಗುರುಪಾದುಕ ಪೂಜೆ, ಗುರುಗಳ ಆಶೀರ್ವಚನ, ವಿವಿಧ ಹೋಮಗಳು ನಡೆಯಲಿವೆ. ಮೇ 1ರಂದು ಬೆಳಿಗ್ಗೆ 7.30ಕ್ಕೆ ಆರೆಮಾದನಹಳ್ಳೀ ಶ್ರೀಗಳಿಂದ ದೀಪ ಪ್ರಜ್ವಲನೆಯೊಂದಿಗೆ ಭವನ ಉದ್ಘಾಟನೆ, ಗಣಪತಿಹೋಮ, ಸತ್ಯನಾರಾಯಣ ಪೂಜೆ, ಮಧ್ಯಾಹ್ನ 12.30ಕ್ಕೆ ಸಭಾ ಕಾರ್ಯಕ್ರಮ, ಭೋಜನ, ಮಧ್ಯಾಹ್ನ 2 ರಿಂದ ಬಾಯಾರು ನಾರಾಯಣ ಆಚಾರ್ಯರಿಂದ ಮಿಮಿಕ್ರಿ, ಬಳಿಕ ಶರಸೇತು ಬಂಧನ ಯಕ್ಷಗಾನ ತಾಳಮದ್ದಳೆ ಜರಗಲಿದ್ದು, ಭಾಗವತರಾಗಿ ಚಿನ್ನಯ್ ಭಟ್ ಕಲ್ಲಡ್ಕ, ಚೆಂಡೆಯಲ್ಲಿ ಶ್ರೀಧರ ವಿಟ್ಲ, ಮದ್ದಳೆಯಲ್ಲಿ ಲವಕುಮಾರ್ ಐಲ, ಚಕ್ರತಾಳದಲ್ಲಿ ನಿಶ್ಚಿತ್ ಜೋಡುಕಲ್ಲು, ಅರ್ಥದಾರಿಗಳಾಗಿ ಜಬ್ಬಾರ್ ಸಮೋ ಸಂಪಾಜೆ, ಜಯಪ್ರಕಾಶ್ ಶೆಟ್ಟಿ ಪೆರ್ಮುದೆ, ಹರೀಶ್ ಬೋಲಂತಿಮೊಗೇರು ಭಾಗವಹಿಸುವರು. ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.


ಸ್ಥಳೀಯಾಡಳಿತ ಇಲಾಖೆ ತುರ್ತು ಯೋಜನೆಗಳ ಅನುಷ್ಠಾನಕ್ಕೆ ಅನುಮತಿ

ಕಾಸರಗೋಡು: ಜಿಲ್ಲೆಯಲ್ಲಿ ವಿಧಾನಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿದ್ದರೂ ಸ್ಥಳೀಯಾಡಳಿತ ಇಲಾಖೆಯ ತುರ್ತು ಯೋಜನೆಗಳ ಅನುಷ್ಠಾನಕ್ಕೆ ಅನುಮತಿ ನೀಡಿ ಆದೇಶ ಹೊರಡಿಸಲಾಗಿದೆ. ಆದರಂತೆ ಸ್ಥಳೀಯಾಡಳಿತ ಇಲಾಖೆಯ ಯೋಜನೆಗಳ ಭಾಗವಾಗಿ ವೇತನ ಪಾವತಿ, ಬೇಸಿಗೆ ರಜೆಯ ನಂತರ ಶಾಲೆಗಳು ತೆರೆಯುವ ಮೊದಲು ಶಾಲೆಗಳು ಮತ್ತು ಅಂಗನವಾಡಿಗಳಲ್ಲಿ ತುರ್ತು ದುರಸ್ತಿ, ಆರೋಗ್ಯ ಮತ್ತು ಪಶು ವೈದ್ಯಕೀಯ ಸಂಸ್ಥೆಗಳಿಗೆ ಅಗತ್ಯವಿರುವ ಔಷಧಿಗಳ ಖರೀದಿ, ಅಂಗನವಾಡಿ ಪೌಷ್ಟಿಕಾಂಶ ವಿತರಣಾ ಯೋಜನೆಗಳು, ಉಪಶಮನ ಆರೈಕೆ ಯೋಜನೆಗಳು, ಪೂರ್ವ ಮಳೆಗಾಲ ಶುಚಿಗೊಳಿಸುವ ಕಾರ್ಯಗಳು ಇತ್ಯಾದಿಗಳನ್ನು ಅಡೆತಡೆಯಿಲ್ಲದೆ ಕಾರ್ಯಗತಗೊಳಿಸಬೇಕಾದ ಯೋಜನೆಗಳ ತುರ್ತು ಸ್ವರೂಪವನ್ನು ಪರಿಗಣಿಸಿ ಸಂಪೂರ್ಣ ಒಪ್ಪಿಗೆ ಸೂಚಿಸಲಾಗಿದೆ.

ಬಿಎಂಎಸ್: ನೂತನ ಪದಾಧಿಕಾರಿಗಳ ಆಯ್ಕೆ

ಕಾಸರಗೋಡು: ಟ್ಯಾಕ್ಸಿ ಆ್ಯಂಡ್ ಲೈಟ್





ಮೋಟಾರ್ ವೆಹಿಕಲ್ ಯೂನಿಯನ್ (ಬಿಎಂಎಸ್)ನ ಕಾಸರಗೋಡು ಜಿಲ್ಲಾ ಸಮಿತಿಯ ನೂತನ ಅಧ್ಯಕ್ಷರಾಗಿ ಸುನೀಲ್ ವಾಳಕ್ಕೋಡ್ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ರಾಜೇಶ್ ಪೊಳ್ಳಕ್ಕಡ ಅವರನ್ನು ಆಯ್ಕೆ ಮಾಡಲಾಗಿದೆ.

ಪೆರಡಾಲ ಉದನೇಶ್ವರ ದೇವಳ ಬ್ರಹ್ಮಕಲಶ ಧಾರ್ಮಿಕ ಸಭೆ | ರಾಜೇಶ್ ಪದ್ಮಾರು ಅಭಿಪ್ರಾಯ

ಧಾರ್ಮಿಕ ಶಿಕ್ಷಣ ನೀಡುವ ದೇವಳ ಸಮಾಜದ ಏಕತೆ ಕೇಂದ್ರ

ಬದಿಯಡ್ಕ: ಧರ್ಮದ ಆಧಾರದಲ್ಲಿ ಭಾರತವು ಉಳಿದುಕೊಂಡಿದೆ. ಬಹುರೂಪದ ಸಮಾಜದಲ್ಲಿ ಏಕತೆ ಕಾಣಬೇಕಾಗಿದೆ. ಸತ್ಯದ ಆಧಾರದಲ್ಲಿ ಭಯ ಪಡದೆ ಜೀವನಮಾಡುವ ಗುಣ ನಮ್ಮದಾಗ ಬೇಕು. ಅಂತರ್ ಬಾಹ್ಯ ಶುದ್ಧತೆಯನ್ನು ನಾವು ಹೊಂದಿರಬೇಕು. ಹಿಂದಿನ ಕಾಲದಲ್ಲಿದ್ದ ಪದ್ಧತಿ ಈಗ ಬದಲಾವಣೆಗೊಂಡಿದೆ. ನಾಗರಿಕತೆ ಬದಲಾದರೂ ಸನಾತನ ಸಂಸ್ಕೃತಿ ಶಾಶ್ವತವಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತ ಪ್ರಚಾರ ಪ್ರಮುಖ್ ರಾಜೇಶ್ ಪದ್ಮಾರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶದ 8ನೇ ದಿನವಾದ ಶುಕ್ರವಾರ ಸಂಜೆ ನಡೆದ ಧಾರ್ಮಿಕ ಸಭೆಯಲ್ಲಿ ಭಾಗವಹಿಸಿ ಅವರು ಮುಖ್ಯ ಭಾಷಣ ಮಾಡಿದರು. ಧರ್ಮ, ಸಂಸ್ಕೃತಿ ಉಳಿಸಿಕೊಳ್ಳುವಲ್ಲಿ ಹೆಗಲಿಗೆ ಹೆಗಲು ಕೊಡೋಣ. ಹಿಂದು ಜೀವನಶೈಲಿಗಳನ್ನು ನೆಲೆಗೊಳಿಸುವ ಕೇಂದ್ರ ದೇವಸ್ಥಾನವಾಗಿದೆ. ಅನ್ನದ ಜೊತೆಗೆ ಧಾರ್ಮಿಕ ಶಿಕ್ಷಣವನ್ನೂ ನೀಡುವ ದೇಗುಲಗಳು ಸಮಾಜದ



ಏಕತೆಯ ಕೇಂದ್ರವಾಗಿವೆ. ಕಟ್ಟಡಗಳು ಜೀರ್ಣೋದ್ಧಾರಗೊಳ್ಳುವುದರೊಂದಿಗೆ ವ್ಯವಸ್ಥೆಗಳೂ ಪ್ರಗತಿಯಾಗಬೇಕು. ದೇವಾಲಯಗಳ ಮೂಲಕ ಹಿಂದು ಧಾರ್ಮಿಕ ಶಿಕ್ಷಣ ಕಲಿಸುವಂತಾ ಗಬೇಕು ಎಂದರು.

ಶ್ರೀ ಕ್ಷೇತ್ರ ಕೇಮಾರು ಸಾಂದೀಪನಿ ಸಾಧನಾಶ್ರಮದ ಶ್ರೀ ಈಶ ವಿಠಲದಾಸ ಸ್ವಾಮೀಜಿ ಆಶೀರ್ವಚನ ನೀಡಿ, ದೇವಸ್ಥಾನಗಳು ಆತ್ಮಶಕ್ತಿಯನ್ನು ತುಂಬುವ ಕೇಂದ್ರಗಳಾಗಬೇಕು. ಕೇವಲ ಅಂಕ ಗಳಿಕೆಯಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ, ಎಲ್ಲಾ ಸ್ತರಗಳಲ್ಲಿಯೂ ನಮ್ಮ ಮಕ್ಕಳು ಬೆಳಗಬೇಕು. ಭ್ರಷ್ಟಾಚಾರ ಮುಕ್ತ ಸಮಾಜದ ನಿರ್ಮಾಣ ನಮ್ಮ ಗುರಿಯಾಗಿದೆ. ಸಮಾಜದ ಕಟ್ಟಕಡೆಯ ಜನರಿಗೂ ಶಿಕ್ಷಣ ಲಭಿಸಬೇಕು. ಬಡವನ ಕಣ್ಣೀರೊರೆಸುವ ಕಾರ್ಯ ದೇಗುಲಗಳಲ್ಲಿ ನಡೆಯಬೇಕು ಎಂದರು.

ಬ್ರಹ್ಮಕಲಶ ಸಮಿತಿ ಗೌರವಾಧ್ಯಕ್ಷ, ಕೊಡುಗೈದಾನಿ, ಉದ್ಯಮಿ ಮಹಾಬಲೇಶ್ವರ ಭಟ್ ಎಡಕ್ಕಾನ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಉದುಮ ಶಾಸಕ ಸಿ.ಎಚ್. ಕುಞಂಬು ಘನ ಉಪಸ್ಥಿತರಿದ್ದು ಮಾತನಾಡಿದರು. ಬೆಂಗಳೂರಿನ ಉದ್ಯಮಿ ಆರ್.ಕೆ.ಭಟ್ ಬೆಳ್ಳಾರೆ, ಬ್ರಹ್ಮಕಲಶ ಸಮಿತಿ ರಕ್ಷಾಧಿಕಾರಿ ಗೋಪಾಲಕೃಷ್ಣ

> **ಊರು ಬೆಳಗುತ್ತದೆ**
> ದೇವಸ್ಥಾನವು ಸಮಾಜದ ಶಕ್ತಿಕೇಂದ್ರಗಳಾಗ ಬೇಕು. ಜೀರ್ಣೋದ್ಧಾರದಿಂದ ದೇವಾಲಯ ಬೆಳಗಿದ ಹಾಗೆ ಊರೂ ಬೆಳಕನ್ನು ಕಾಣುತ್ತದೆ.
> ● ಮಹಾಬಲೇಶ್ವರ ಭಟ್

ಪೈ ಬದಿಯಡ್ಕ, ಏತಡ್ಕ ಶ್ರೀ ಸದಾಶಿವ ದೇವಸ್ಥಾನದ ಆಡಳಿತ ಮೊಕ್ತೇಸರ ಶ್ಯಾಮ ಭಟ್ ಏತಡ್ಕ, ಖ್ಯಾತ ವಕೀಲ ಎಂ.ನಾರಾಯಣ ಭಟ್, ಡಾ.ಕಿಶೋರ್ ಕುಮಾರ್ ಉಬ್ರಂಗಳ, ಶ್ರೀ ಕ್ಷೇತ್ರ ಕೊಲ್ಲಂಗಾನದ ತಂತ್ರಿ ಗಣಾಧಿರಾಜ ಉಪಾಧ್ಯಾಯ, ಉದ್ಯಮಿ ರಾಜೇಶ್ ಭಟ್ ಉಬರಡ್ಕ, ಗಣ್ಯರಾದ ವಿಷ್ಣು ಶರ್ಮ ಪಟ್ಟಾಜೆ, ತಿರುಪತಿ ಕುಮಾರ ಪೆರ್ಮುಖ, ಗಣೇಶ್‌ಕೃಷ್ಣ ಭಟ್ ಅಳಕ್ಕೆ, ವೆಂಕಟಗಿರೀಶ ಪಟ್ಟಾಜೆ, ಕುಂಞಣ್ಣ, ಶ್ರೀನಿವಾಸ ನಾಯ್ಕ್ ಪಿ., ಉದಯಕುಮಾರ್ ಬದಿಯಡ್ಕ, ವೆಂಕಟೇಶ್ವರ ಭಟ್ ಪಟ್ಟಾಜೆ, ಉದಯಕೇಶವ ಭಟ್ ಕೋರಿಕ್ಕಾರು, ಪ್ರತೀಕ್ ಆಳ್ವ ಪೆರಡಾಲ, ಸುಬ್ಬ ನಾಯ್ಕ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಬ್ರಹ್ಮಕಲಶ ಸಮಿತಿ ಸದಸ್ಯ ರಾಜೇಶ್ ಚಂಬಲ್ತಿಮಾರು ನಿರೂಪಿಸಿದರು. ಸ್ಮರಣ ಸಂಚಿಕೆ ಸಮಿತಿ ಅಧ್ಯಕ್ಷ ಡಾ. ಬೇ.ಸೀ. ಗೋಪಾಲ ಕೃಷ್ಣ ಭಟ್ ಸ್ವಾಗತಿಸಿ, ಪ್ರಚಾರ ಸಮಿತಿ ಪ್ರಧಾನ ಸಂಚಾಲಕ ಶ್ಯಾಮಪ್ರಸಾದ ಸರಳಿ ವಂದಿಸಿದರು.



ಪೆರಡಾಲ ಶ್ರೀ ಉದನೇಶ್ವರ ದೇವಳದಲ್ಲಿ ಶುಕ್ರವಾರ ಕ್ಷೇತ್ರಾಚಾರ್ಯ ಬ್ರಹ್ಮಶ್ರೀ ಕುಂಟಾರು ರವೀಶ ತಂತ್ರಿ ನೇತೃತ್ವದಲ್ಲಿ ವಿವಿಧ ತಾಂತ್ರಿಕ ಕಾರ್ಯಕ್ರಮಗಳು ಜರಗಿತು. ಗಣಪತಿ ಹೋಮ, ಇಂದ್ರಾದಿ ದಿಕ್ಪಾಲ ಪ್ರತಿಷ್ಠೆ, ಸಪ್ತಮಾತೃಕಾ ಪ್ರತಿಷ್ಠೆ, ನಿರ್ಮಾಲ್ಯಧಾರಿ ಪ್ರತಿಷ್ಠೆ, ಅಂಕುರ ಪೂಜೆ, ನಡೆಯಿತು.

ದೈಗೋಳಿ ಶ್ರೀ ಸಾಯಿನಿಕೇತನ ಸೇವಾಶ್ರಮ: ನೂತನ ಕಟ್ಟಡ 'ಸಾಕೇತ' ಲೋಕಾರ್ಪಣೆ



ಮಂಜೇಶ್ವರ: ದೈಗೋಳಿ ಶ್ರೀ ಸಾಯಿ ಸೇವಾ ಪ್ರತಿಷ್ಠಾನಮ್ ಆಶ್ರಯದಲ್ಲಿ ಭಗವಾನ್ ಶ್ರೀ ಸತ್ಯಸಾಯಿ ಬಾಬಾರವರ ಜನ್ಮಶತಾಬ್ದಿ ಸಂದರ್ಭದಲ್ಲಿ ದೈಗೋಳಿ ಶ್ರೀ ಸಾಯಿ ನಿಕೇತನ ಸೇವಾಶ್ರಮದ ನೂತನ ಕಟ್ಟಡವಾದ ಸಾಕೇತವನ್ನು ಜಗದ್ಗುರು ಶಂಕರಾಚಾರ್ಯ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಶುಕ್ರವಾರ ಬೆಳಿಗ್ಗೆ ಶುಭಮುಹೂರ್ತದಲ್ಲಿ ಲೋಕಾರ್ಪಣೆಗೊಳಿಸಿದರು.

ಬಳಿಕ ಹಮ್ಮಿಕೊಳ್ಳಲಾಗದ್ದ ಸಭಾ ಕಾರ್ಯಕ್ರಮದಲ್ಲಿ ರಾಘವೇಶ್ವರ ಶ್ರೀಗಳು ಆಶೀರ್ವಚನ ನೀಡಿದರು.

ಭಟ್ ಬಯೋಟೆಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಮತ್ತು ಪುತ್ತೂರು ನವಚೇತನ ಹಿರಿಯರ ಬಡಾವಣೆಯ ಸ್ಥಾಪಕರು ಹಾಗೂ ಅಧ್ಯಕ್ಷರಾದ ಡಾ.ಶ್ಯಾಮ ಭಟ್ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ವಿಶೇಷ ಆಹ್ವಾನಿತರಾಗಿ ಡಾ.ಶಶಿಧರ ಬೈಕುಂಜೆ, ಡಾ.ವಿದ್ಯಾ ಉಪಾಧ್ಯಾಯ, ವೇ.ಮೂ. ಬೋಳಂತಕೋಡಿ ರಾಮ ಭಟ್, ಬಿ.ಎಸ್.ರಾಜ, ಡಾ.ಟಿ.ಶ್ಯಾಮ ಭಟ್, ಡಾ.ಸದಾಶಿವ ಶೆಟ್ಟಿ ಕುಳೂರು ಕನ್ಯಾನ, ಕೃಷ್ಣರಾಜ್ ಶರ್ಮಾ, ಗಿಳಿಯಾಲು ಜಯರಾಮ ಭಟ್, ಡಾ.ಎಂ.ಆರ್. ಮೋಹನ್ ಕುಮಾರ್ ಭಾಗವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕೊಡುಗೈದಾನಿ, ಉದ್ಯಮಿ ಮಹಾಬಲೇಶ್ವರ ಭಟ್ ಎಡಕ್ಕಾನ, ರೆ.ಫಾ.ಬೇಸಿಲ್ ವಾಸ್ ವರ್ಕಾಡಿ, ಡಾ.ವಿಕ್ರಮ್ ಶೆಟ್ಟಿ, ಸಹಕಾರ ರತ್ನ ಟಿ.ಜಿ.ರಾಜಾರಾಮ ಭಟ್, ನರಸಿಂಗ ರಾವ್ ಕಾಸರಗೋಡು, ಉಮ್ಮರ್ ಬೋರ್ಕಳ, ಎನ್.ಅಲಿ ಅಬ್ದುಲ್ಲ ಮುಂತಾದವರು ಪಾಲ್ಗೊಂಡಿದ್ದರು. ದೈಗೋಳಿ ಆಶ್ರಮದ ಸಂಸ್ಥಾಪಕರಾದ ಡಾ.ಉದಯಕುಮಾರ್ ನೂಜಿ ದಂಪತಿ ಮತ್ತಿತರರಿದ್ದರು.

ಯಕ್ಷಗಾನ ಪ್ರದರ್ಶನ

ಕಾರ್ಯಕ್ರಮದ ಅಂಗವಾಗಿ ಬೆಳಗ್ಗೆ ದೀಪ ಪ್ರಜ್ವಲನ, ಭಕ್ತಿಭಾವರಾಗಸಂಗಮ, ಅಪರಾಹ್ನ ಭರತನಾಟ್ಯ ಪ್ರದರ್ಶನ, ಪುಣ್ಯಕೋಟಿ ಯಕ್ಷಗಾನ ಪ್ರದರ್ಶನಗೊಂಡಿತು.

ವಿದ್ಯಾನಗರದಲ್ಲಿ ಇಂದು, ನಾಳೆ ಎಜ್ಯುಕೇಶನ್ ಕರಿಯರ್ ಎಕ್ಸ್‌ಪೋ - ಉದ್ಯೋಗ ಮೇಳ

ಕಾಸರಗೋಡು: ವಿಸ್ಡಮ್ ಎಜ್ಯುಕೇಶನ್ ಫೌಂಡೇಶನ್ ಆಫ್ ಇಂಡಿಯಾ ನೇತೃತ್ವದಲ್ಲಿ ಆಯೋಜಿಸಲಾಗಿರುವ ಎಜ್ಯುಕೇಶನ್ ಕರಿಯರ್ ಎಕ್ಸ್‌ಪೋ ಮತ್ತು ಉದ್ಯೋಗ ಮೇಳವು ಏ.25 ಮತ್ತು 26ರಂದು ವಿದ್ಯಾನಗರದಲ್ಲಿ ನಡೆಯಲಿದೆ.

ಈ ಎಕ್ಸ್‌ಪೋದಲ್ಲಿ ಉದ್ಯೋಗ ಮೇಳ, ಕರಿಯರ್ ಕೌನ್ಸಿಲಿಂಗ್, ಅನುಭವದ ಕಲಿಕೆ, ಕೌಶಲ್ಯ ಶಿಕ್ಷಣ, ವೈಯಕ್ತಿಕ ಕೌನ್ಸಿಲಿಂಗ್, ಶೈಕ್ಷಣಿಕ ತರಗತಿಗಳು, ಚರ್ಚೆಗಳು, ವಿಚಾರಗೋಷ್ಠಿಗಳು ಮತ್ತು ಸಂವಾದಗಳಂತಹ ವಿವಿಧ ಹಂತ ಒಳಗೊಂಡಿವೆ.

ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 200ಕ್ಕೂ ಹೆಚ್ಚು ಕರಿಯರ್ ಕೌನ್ಸಿಲರ್‌ಗಳ ಸೇವೆ ಬಳಸಿಕೊಂಡು ಪ್ರತಿಯೊಬ್ಬ ವಿದ್ಯಾರ್ಥಿ ತನ್ನ ಭವಿಷ್ಯದ ವೃತ್ತಿ ಜೀವನ ಯೋಜಿಸಲು ವೈಯಕ್ತಿಕ ಮೆಂಟರಿಂಗ್ ಸೌಲಭ್ಯ ಇಲ್ಲಿ ಪಡೆಯಬಹುದು. ಕರಿಯರ್ ಕೌನ್ಸೆಲಿಂಗ್ ಕೋರ್ಸ್ ಪೂರ್ತಿಗೊಳಿಸಿದ ತಜ್ಞರು ಈ ಮಾರ್ಗದರ್ಶನದ ನೇತೃತ್ವ ವಹಿಸಲಿದ್ದಾರೆ.

ಇದರೊಂದಿಗೆ ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ಕಲೆ, ಕಾನೂನು ಮತ್ತು ವಾಣಿಜ್ಯ ಕ್ಷೇತ್ರಗಳ ವಿವಿಧ ಕೋರ್ಸ್‌ಗಳು, ದೇಶದ ಪ್ರಮುಖ ಶಿಕ್ಷಣ ಸಂಸ್ಥೆಗಳು, ತಾಂತ್ರಿಕ ಶಿಕ್ಷಣ, ಉದ್ಯಮಶೀಲತೆ, ಭಾಷಾ ಕಲಿಕೆ, ಮೀಡಿಯಾ ಸ್ಟಡೀಸ್, ಆನ್‌ಲೈನ್ ಕೋರ್ಸ್‌ಗಳು, ವಿದ್ಯಾರ್ಥಿ ವೇತನಗಳು, ಫೆಲೋಶಿಪ್‌ಗಳು, ವಿದೇಶಿ ವಿಶ್ವವಿದ್ಯಾಲಯಗಳು, ಸರ್ಟಿಫಿಕೇಟ್ ಕೋರ್ಸ್‌ಗಳು ಮತ್ತು ಅಪ್ ಸ್ಕಿಲ್ಲಿಂಗ್ ಕುರಿತು ಮಾಹಿತಿ ನೀಡುವ ಸ್ಟಾಲ್‌ಗಳು ಇಲ್ಲಿರಲಿವೆ. ಪ್ರತಿಯೊಂದು ಸ್ಟಾಲ್‌ನಲ್ಲಿಯೂ ಸಂಬಂಧಪಟ್ಟ ಕ್ಷೇತ್ರದ ತಜ್ಞರೊಂದಿಗೆ ನೇರವಾಗಿ ಸಂವಹನ ನಡೆಸಲು ಅವಕಾಶ ಕಲ್ಪಿಸಲಾಗಿದೆ.

> **ವಿದ್ಯಾರ್ಥಿಗಳಿಗೆ ಅವಕಾಶ**
> ವಿದೇಶಿ ವಿಶ್ವವಿದ್ಯಾಲಯಗಳ ಪ್ರತಿನಿಧಿಗಳು, ಕೇಂದ್ರೀಯ ವಿಶ್ವವಿದ್ಯಾಲಯಗಳ ಅಧ್ಯಾಪಕರು ಮತ್ತು ಶಿಕ್ಷಣ ತಜ್ಞರು ಈ ಎಕ್ಸ್‌ಪೋದಲ್ಲಿ ಭಾಗವಹಿಸಲಿದ್ದಾರೆ. ವಿವಿಧ ಬಹುರಾಷ್ಟ್ರೀಯ ಕಂಪೆನಿಗಳ ಪ್ರತಿನಿಧಿಗಳೊಂದಿಗೆ ಸಂವಹನ ನಡೆಸಲು ವಿದ್ಯಾರ್ಥಿಗಳಿಗೆ ಅವಕಾಶ ದೊರಕಲಿದೆ.

ಎಳವೆಯಲ್ಲಿಯೇ ಮಕ್ಕಳಿಗೆ ಸಂಸ್ಕೃತಿ-ಸಂಸ್ಕಾರ ಕಲಿಸಬೇಕು: ಎಡನೀರು ಶ್ರೀ



ಕಾಸರಗೋಡು: ಭಜನೆಯ ಮೂಲಕ ಭಾರತೀಯ ಸಂಸ್ಕೃತಿಯನ್ನು ಉಳಿಸಲು ಸಾಧ್ಯ. ಅದಕ್ಕಾಗಿ ತಮ್ಮ ಮಕ್ಕಳಿಗೆ ಚಿಕ್ಕಂದಿನಿಂದಲೇ ಭಾರತೀಯ ಸಂಸ್ಕೃತಿ, ಸಂಸ್ಕಾರಗಳನ್ನು ಕಲಿಸಬೇಕು. ಇಂದಿನ ದಿನಗಳಲ್ಲಿ ನಮ್ಮ ಮಕ್ಕಳು ದುಶ್ಚಟಗಳಿಗೆ ಒಳಗಾಗಿ ಅಡ್ಡದಾರಿಗೆ ತೆರಳುತ್ತಿರುವುದು ವಿಷಾದನೀಯ ಎಂದು ಎಡನೀರು ಮಠಾಧೀಶ ಶ್ರೀಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಹೇಳಿದ್ದಾರೆ.

ಕಾಸರಗೋಡು ಅಮ್ಮೆ ಶ್ರೀಕೃಷ್ಣ ಭಜನಾ ಮಂದಿರದ ರಜತ ಮಹೋತ್ಸವದ ಮೊದಲ ದಿನವಾದ ಬುಧವಾರ ಸಂಜೆ ನಡೆದ ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಈ ಸಂದರ್ಭ ತಂತ್ರಿವರ್ಯ ಬ್ರಹ್ಮಶ್ರೀ ಉಳಿಯತ್ತಾಯವಿಷ್ಣುಆಸ್ರ, ಧಾರ್ಮಿಕ ಭಾಷಣಗೈದರು. ಕೇರಳ ರಾಜ್ಯ ಹಿಂದೂ ಐಕ್ಯವೇದಿ ಇದರ ಕಾರ್ಯಾಧ್ಯಕ್ಷ ವಲ್ಸನ್ ತಿಲ್ಲಂಗೇರಿ, ಸಭೆಯಲ್ಲಿ ರಜತ ಮಹೋತ್ಸವ ಸಮಿತಿ ಅಧ್ಯಕ್ಷ ಕೆ. ಸದಾಶಿವ ಮಲ್ಯ ಅಧ್ಯಕ್ಷತೆ ವಹಿಸಿದ್ದರು. ರಜತ ಮಹೋತ್ಸವ ವೈದಿಕ ಸಮಿತಿ ಅಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ರಜತ ಮಹೋತ್ಸವದ ಗೌರವಾಧ್ಯಕ್ಷ ಜಗನ್ನಾಥ್ ವಿಟ್ಲ, ರಜತ ಮಹೋತ್ಸವ ಮಹಿಳಾ ಸಮಿತಿ ಅಧ್ಯಕ್ಷೆ ಶ್ರೀಲತಾ ಟೀಚರ್ ಎಸ್‌ವಿಟಿ ಉಪಸ್ಥಿತರಿದ್ದರು.

ಆರುಶ್, ಆರಾಧ್ಯ, ಆರುಹಿ, ಶ್ರೀನಂದು ಪ್ರಾರ್ಥಿಸಿ,ರಜತ ಮಹೋತ್ಸವ ಪ್ರಧಾನ ಕಾರ್ಯದರ್ಶಿ ಗುಣಪಾಲ ಅಮ್ಮೆ ಸ್ವಾಗತಿಸಿ, ಮಂದಿರದ ಕಾರ್ಯದರ್ಶಿ ರಾಮಚಂದ್ರ ಅಮ್ಮೆ ವಂದಿಸಿದರು. ಸಾಂಸ್ಕೃತಿಕ ಸಮಿತಿ ಸಂಚಾಲಕ ರಾಜೇಶ್ ಅಮ್ಮೆ ನಿರೂಪಿಸಿದರು.

> **ಶ್ಲಾಘನೀಯ**
> ಭಜನೆಯಲ್ಲಿ ತೊಡಗಿಸಿಕೊಳ್ಳಲು ತಮ್ಮ ಮಕ್ಕಳನ್ನು ಪ್ರೇರೇಪಿಸಬೇಕು. ಇದರಿಂದ ಮುಂದೆ ಮಕ್ಕಳು ಉತ್ತಮ ಸಂಸ್ಕಾರಯುತ ಪ್ರಜೆ ಯಾಗಿ ಬೆಳೆಯಲು ಸಾಧ್ಯ. ಕಾಸರ ಗೋಡು ಪೇಟೆಯ ಅಮ್ಮೆ ಪ್ರದೇಶದಲ್ಲಿ ಶ್ರೀಕೃಷ್ಣ ಭಜನಾ ಮಂದಿರ ಕಳೆದ 25ನೇ ವರ್ಷಗಳಿಂದ ಭಜನಾ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿರುವುದು ನಿಜಕ್ಕೂ ಶ್ಲಾಘನೀಯ.
> ● ಎಡನೀರು ಶ್ರೀ

ಜ್ಯೋತಿಷಿ ಬೇಳ ಪದ್ಮನಾಭ ಶರ್ಮರಿಂದ ಪೆರಡಾಲ ಕ್ಷೇತ್ರಕ್ಕೆ ಭದ್ರದೀಪ ಸಮರ್ಪಣೆ



ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶದ 8ನೇ ದಿನ ಪ್ರಸಿದ್ಧ ಜ್ಯೋತಿಷಿ ಬೇಳ ಪದ್ಮನಾಭ ಶರ್ಮ ಇರಿಂಞಾಲಕ್ಕುಡ ಅವರು ಭದ್ರದೀಪವನ್ನು ಶ್ರೀ ದೇವರಿಗೆ ಸೇವಾರೂಪದಲ್ಲಿ ಅರ್ಪಿಸಿದರು. ಪ್ರಧಾನ ಅರ್ಚಕ ಶಿವರಾಮ ಭಟ್ ಪೆರಡಾಲ ಶ್ರೀ ದೇವರಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿದರು.

ಈ ಸಂದರ್ಭ ಪದ್ಮನಾಭ ಶರ್ಮ ಮಾತನಾಡಿ, ಮಧೂರು ಹಾಗೂ ಪೆರಡಾಲ ದೇವಸ್ಥಾನದೊಂದಿಗೆ ನೀರ್ಚಾಲಿನ ಮಹಾಜನ ವಿದ್ಯಾಸಂಸ್ಥೆಗೂ ಅವಿನಾಭಾವ ಸಂಬಂಧವಿದೆ. ಶಾಲಾ ಜೀವನದಲ್ಲಿ ವರ್ಷಕ್ಕೊಂದು ಬಾರಿ ಶಾಲೆಯಿಂದ ಅಧ್ಯಾಪಕರು ವಿದ್ಯಾರ್ಥಿ ಗಳನ್ನು ಕೂಡಿಕೊಂಡು ಪೆರಡಾಲ ಹಾಗೂ ಮಧೂರು ದೇಗುಲಕ್ಕೆ ಭೇಟಿ ನೀಡುವ ಪರಿಪಾಠವಿತ್ತು. ಅದು ಇಂದಿಗೂ ಮುಂದುವರಿದುಕೊಂಡು ಬಂದಿದೆ. ಪ್ರಸ್ತುತ ಜೀರ್ಣೋದ್ಧಾರಗೊಂಡು ಶ್ರೀ ಕ್ಷೇತ್ರವು ಅತ್ಯಂತ ವೈಭವದಿಂದ ಕಂಗೊಳಿಸುತ್ತಿದೆ. ಉದನೇಶ್ವರನ ಸಾನ್ನಿಧ್ಯ ಇನ್ನಷ್ಟು ವೃದ್ಧಿಯಾಗಿ ನಾಡು ಸಂಪದ್ಭರಿತವಾಗಲಿ ಎಂದು ಅವರು ಶುಭಕೋರಿದರು.

ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಬಿ.ವಸಂತ ಪೈ ಬದಿಯಡ್ಕ, ಗೌರವಾಧ್ಯಕ್ಷ ಜಯದೇವ ಖಂಡಿಗೆ, ಹೊರೆಕಾಣಿಕೆ ಸಮಿತಿ ಅಧ್ಯಕ್ಷ ಜ್ಯೋತಿಷಿ ಕೃಷ್ಣಮೂರ್ತಿ ಪುದುಕೋಳಿ, ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ, ಚಪ್ಪರ ಸಮಿತಿ ಅಧ್ಯಕ್ಷ ಭಾಸ್ಕರ ಪಂಜಿತ್ತಡ್ಕ ಮತ್ತಿತರರಿದ್ದರು.

ಕನ್ನಡ ಭವನ ಪ್ರಕಾಶನದ ವಾರ್ಷಿಕೋತ್ಸವ, ಎರಡು ಕೃತಿ ಬಿಡುಗಡೆ, ಪ್ರಶಸ್ತಿ ಪ್ರದಾನ



ಕಾಸರಗೋಡು: ಡಾ.ವಾಮನ್ ರಾವ್ ಬೇಕಲ್ ಮತ್ತು ಸಂಧ್ಯಾರಾಣಿ ಟೀಚರ್ ಸಾರಥ್ಯದ ಗಡಿನಾಡಿನ ಹೆಮ್ಮೆಯ ಕನ್ನಡ ಸಂಸ್ಥೆಯಾದ ಕನ್ನಡ ಭವನದ ಅಂಗ ಸಂಸ್ಥೆಯಾದ ಕನ್ನಡ ಭವನ ಪ್ರಕಾಶನದ 3ನೇ ವಾರ್ಷಿಕೋತ್ಸವ ಸಂಭ್ರಮ ಮಂಗಳವಾರ ಸಂಜೆ ಕನ್ನಡ ಭವನ ಗ್ರಂಥಾಲಯ ವೇದಿಕೆಯಲ್ಲಿ ನಡೆಯಿತು.

ಧಾರ್ಮಿಕ ರತ್ನ, ಕನ್ನಡ ಭವನ ನಿರ್ದೇಶಕ ಡಾ.ವೆಂಕಟ್ರಮಣ ಹೊಳ್ಳ ಕಾರ್ಯಕ್ರಮ ಉದ್ಘಾಟಿಸಿದರು. ರಾಮರಾಜಕ್ಷತ್ರಿಯ ಯಾನೆ ಕೋಟೆಯಾರ್ ಸೇವಾಸಂಘ ಜಿಲ್ಲಾಧ್ಯಕ್ಷ ಪತ್ರಕರ್ತ ಪ್ರದೀಪ್ ಬೇಕಲ್ ಅಧ್ಯಕ್ಷತೆಯಲ್ಲಿ ಪುಸ್ತಕ ಬಿಡುಗಡೆ, ಭರವಸೆ ಭಾರತ ರತ್ನ ಪ್ರಶಸ್ತಿ ಪ್ರದಾನ, ಕವಿತಾ ವಾಚನ –ಗಾಯನ ಕಾರ್ಯಕ್ರಮ ಸಂಭ್ರಮ ನಡೆಯಿತು.

ಖ್ಯಾತ ಲೇಖಕಿ, ಕವಯತ್ರಿ ರೇಖಾ ಸುದೇಶ್ ರಾವ್ ಅವರ ಯಾತ್ರಾ ವಿವರಣೆ ಕೃತಿ 'ಶರದಿಯಾಚೆ ಪ್ರ ಪ್ರಥಮ ಹೆಜ್ಜೆ' ಕೃತಿ ಕನ್ನಡ ಭವನ ಗೌರವ ಅಧ್ಯಕ್ಷರಾದ ಲೇಖಕ ಪ್ರದೀಪ್ ಬೇಕಲ್ ಬಿಡುಗಡೆಗೊಳಿಸಿದರು. ಬೆಂಗಳೂರಿನ ಕವಯತ್ರಿ ಲಕ್ಷ್ಮಿ ಎಸ್. ಅವರ ಕವನ ಸಂಕಲನ 'ಅಂತರ್ಧ್ವನಿ' ಸಾಹಿತಿ ರೇಖಾ ಸುದೇಶ್ ರಾವ್ ಮಂಗಳೂರು ಬಿಡುಗಡೆಗೊಳಿಸಿದರು.

ಅತಿಥಿಗಳಾಗಿ ಕಾಸರಗೋಡು ನಗರ ಸಭಾ ಸದಸ್ಯೆ ಸುಧಾರಾಣಿ ಅಣಂ ಗೂರು, ದಿವ್ಯಾ ಸಂದೀಪ್ ನಾಗರಕಟ್ಟೆ, ಕೆ.ಕಮಲಾಕ್ಷ ಅಣಂಗೂರು, ರಾ.ರಾ.ಕ್ಷತ್ರೀಯ ಕಾಸರಗೋಡು ಅಧ್ಯಕ್ಷ ವಿದ್ಯಾನಂದ ಹೂಡೆ, ರಾ.ರಾ.ಕ್ಷತ್ರಿಯ ಜಿಲ್ಲಾ ಮಹಿಳಾ ಸಂಘ ಗೌರವಾಧ್ಯಕ್ಷೆ ಆಶಾ ರಾಧಾಕೃಷ್ಣ ಕಾರ್ಯದರ್ಶಿ ಉಷಾ ಕಿರಣ್, ಯುವಸಂಘ ಅಧ್ಯಕ್ಷ ಮುರಳಿ ಪಾರೆಕಟ್ಟೆ ಪಾಂಗೋಡು ನವೀನ್ ನಾಯ್ಕ್ ಭಾಗವಹಿಸಿದ್ದರು. ಕವಿಗೋಷ್ಠಿ ಗಾಯನದಲ್ಲಿ ರೇಖಾ ರೋಶನ್, ಸಾಕ್ಷಿ, ಮೋಕ್ಷ, ರೇಖಾ ಸುದೇಶ್ ರಾವ್, ದಿವ್ಯ ಕೆರೆಮನೆ, ಚೈತಾಲಿ, ವಸಂತ್ ಕೆರೆಮನೆ , ರಾಜೇಶ್ ಕೋಟೆಕಣಿ ಇದ್ದರು.

> **ಪ್ರಶಸ್ತಿ ಪ್ರದಾನ**
> ವೈದ್ಯಕೀಯ ಶಿಕ್ಷಣದಲ್ಲಿ ಅಪ್ರತಿಮ ಸಾಧನೆಗೈಯುತ್ತಿರುವ ಡಾ.ಸಚಿನ್ ಬೇಕಲ್ ಅಣಂಗೂರು, ಬ್ಯಾಂಕಿಂಗ್ ಕ್ಷೇತ್ರದಲ್ಲಿ ಶೈಕ್ಷಣಿಕ, ಔದ್ಯೋಗಿಕ ಸಾಧನೆ ಮಾಡುತ್ತಿರುವ ದಯಾವತಿ ಮಂಗಳೂರುಗೆ 'ಭರವಸೆಯ ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಿದರು.

ಕನಿಲ ಶ್ರೀ ಭಗವತೀ ಕ್ಷೇತ್ರ: ಪ್ರತಿಷ್ಠಾ ಬ್ರಹ್ಮಕಲಶ ಕಾರ್ಯಕ್ರಮ ಸಮಾಪ್ತಿ



ಮಂಜೇಶ್ವರ: ಕನಿಲ ಶ್ರೀ ಭಗವತೀ ಕ್ಷೇತ್ರದಲ್ಲಿ ನೂತನ ಶಿಲಾಮಯ ಗರ್ಭ ಗುಡಿಯಲ್ಲಿ ಶ್ರೀ ಭಗವತೀ ಮಾತೆಯರ ಮತ್ತು ಪರಿವಾರ ದೈವಗಳ ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಬ್ರಹ್ಮಶ್ರೀ ಬಡಾಜೆ ಗೋಪಾಲಕೃಷ್ಣ ತಂತ್ರಿಗಳ ವರ ದಿವ್ಯಹಸ್ತದಿಂದ ವಿವಿಧ ಕಾರ್ಯಕ್ರಮಗಳೊಂದಿಗೆ ನಡೆದು ಗುರುವಾರ ಸಮಾಪ್ತಿಗೊಂಡಿತು.

ಇದರಂಗ ನಡೆದ ಧಾರ್ಮಿಕ ಸಭೆಯನ್ನು ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ದೀಪ ಪ್ರಜ್ವಲನೆಗೊಳಿಸಿ ಆಶೀರ್ವಚನ ನೀಡಿದರು. ಏ.26ರಿಂದ ಮೇ 3ರ ತನಕ ಶ್ರೀ ಕ್ಷೇತ್ರದಲ್ಲಿ ಭರಣಿ ಮಹೋತ್ಸವ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.



ಸೇತುವೆ ಕುಸಿದು ಬಿದ್ದು ಸಂದಿತು ವರುಷ ಹಲವು | ನಾಗರಿಕರಿಗೆ ಸಂಕಷ್ಟ

ದೇರಂಬಳ ಕಾಲು ಸೇತುವೆ ನಿರ್ಮಾಣಕ್ಕೆ ಮೀನಮೇಷ

ಉಪ್ಪಳ: ದೇರಂಬಳದಲ್ಲಿ ಕಾಲು ಸೇತುವೆಯು ಕುಸಿದು ಬಿದ್ದು ಹಲವು ವರ್ಷಗಳು ಕಳೆದರೂ ಮರು ನಿರ್ಮಾಣಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದರಿಂದ ಊರವರಿಗೆ ಅಪಾರ ಸಮಸ್ಯೆ ಎದುರಾಗಿದೆ. ಮಂಗಲ್ಪಾಡಿ ಮತ್ತು ಮೀಂಜ ಗ್ರಾ. ಪಂ.ಗಳ ಮಧ್ಯೆ ಸಂಪರ್ಕ ಕಲ್ಪಿಸುವ ಕಾಲು ಸೇತುವೆ ಇದಾಗಿದ್ದು ಪ್ರಸ್ತುತ ಸಂಚಾರ ಸಂಪೂರ್ಣ ದುಸ್ತರವಾಗಿದೆ.

ದೇರಂಬಳ, ಚಿಗುರುಪಾದೆ, ಬುಡ್ರಿಯ, ಕಲ್ಲಗದ್ದೆ, ತೊಟ್ಟೆತ್ತೋಡಿ, ಬೇಕೂರು, ಪೈವಳಿಕೆ, ಜೋಡುಕಲ್ಲು, ಮಡಂದೂರು ಮೊದಲಾದ ಪ್ರದೇಶಗಳ ಜನರಿಗೆ ಅತ್ತಿತ್ತ ಸಂಚರಿಸುವ ನಿಟ್ಟಿನಲ್ಲಿ ಸಂಪರ್ಕ ಸೇತುವೆ ಇದಾಗಿದೆ.



ಆದರೆ ಇದೀಗ ಈ ಪ್ರದೇಶಗಳಿಗೆ ಹಲವಾರು ಕಿಲೋ ಮೀಟರ್ ಸುತ್ತುವರಿದು ಬಾಯಿಕಟ್ಟೆ, ಕಳಾಯಿ ರಸ್ತೆ ಮೂಲಕ ಸಾಗಬೇಕಿದೆ.

ಮುರಿದು ಬಿದ್ದ ಕಾಲು ಸೇತುವೆಯನ್ನು ಮರು ನಿರ್ಮಾಣ ಮಾಡಿಕೊಡಬೇಕೆಂದು ಊರವರು ಅನೇಕ ಬಾರಿ ಬೇಡಿಕೆಯಿರಿಸಿದರೂ ಇನ್ನೂ ಈಡೇರದೇ ಇರುವುದು ದುರಂತವಾಗಿದೆ. ದೇರಂಬಳ ಹೊಳೆಗೆ ಅಡ್ಡವಾಗಿ ನಿರ್ಮಿಸಿದ ಈ ಕಾಲು ಸೇತುವೆ ಕುಸಿದು ವರ್ಷಗಳು ಸಂದರೂ ಆಡಳಿತಾಧಿಕಾರಿಗಳು ಪರಿಸ್ಥಿತಿಯನ್ನು ಖುದ್ದಾಗಿ ಅವಲೋಕಿಸಿದರೂ ಯಾವುದೇ ಯೋಜನೆಗಳು ಕಾರ್ಯರೂಪಕ್ಕೆ ಬರಲಿಲ್ಲ ಎಂದು ಸ್ಥಳೀಯರು ನೋವನ್ನು ವ್ಯಕ್ತಪಡಿಸಿದ್ದಾರೆ.

> **ಸಮಸ್ಯೆ ಪರಿಹರಿಸಿ**
> ಶಾಲಾ ಕಾಲೇಜು ವಿದ್ಯಾರ್ಥಿಗಳು, ದಿನನಿತ್ಯ ವಿವಿಧ ಕೆಲಸಗಳಿಗೆ ತೆರಳುವವರಿಗೆ ಈ ಸೇತುವ ಸುಗಮ ಸಂಚಾರದ ಕೊಂಡಿಯಾಗಿತ್ತು. ಆದರೆ ಈ ಭಾಗದ ಜನರ ಸಂಚಾರ ಸ್ಥಗಿತಗೊಂಡು ಕಷ್ಟಪಡುವಂತಾಗಿದೆ. ಊರಿನ ಸ್ಥಳೀಯ ಯುವಕರು ಸೇರಿ ತಾತ್ಕಾಲಿಕ ಪರಿಹಾರಕ್ಕೆ ಎರಡು ಬಾರಿ ಕಂಗಿನ ಸಂಕ ನಿರ್ಮಿಸಿದ್ದು, ಆದರೆ ಅದು ಕಳೆದ ಮಳೆಗಾಲದಲ್ಲಿ ನೀರಿನ ರಭಸಕ್ಕೆ ಕೊಚ್ಚಿಹೋಗಿದೆ. ಇನ್ನಾದರೂ ದೇರಂಬಳ ಹೊಳೆಗೆ ಶಾಶ್ವತ ಸೇತುವೆ ನಿರ್ಮಿಸಿ ಸಂಬಂಧಪಟ್ಟ ಅಧಿಕಾರಿಗಳು ಊರಿನ ಸಂಚಾರ ಸಮಸ್ಯೆ ಪರಿಹರಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಬಂಗ್ರಮಂಜೇಶ್ವರ ರಸ್ತೆ ಬದಿಯಲ್ಲೇ ಅಳವಡಿಸಿದ ಆಧಾರ ತಂತಿ

ತಂತಿ ತೆರವಿಗೆ ಸಾರ್ವಜನಿಕರ ಆಗ್ರಹ

ಮಂಜೇಶ್ವರ: ಹೊಸಂಗಡಿ ಬಳಿಯ ಬಂಗ್ರಮಂಜೇಶ್ವರ ರಸ್ತೆಯ ತಿರುವಿನಲ್ಲಿ ವಿದ್ಯುತ್ ಕಂಬಕ್ಕೆ ಅಳವಡಿಸಿದ ಆಧಾರ ತಂತಿಯು ವಾಹನ ಚಾಲಕರಿಗೆ ಆತಂಕವನ್ನುಂಟು ಮಾಡಿದೆ. ಈ ತಂತಿಯನ್ನು ರಸ್ತೆ ಬದಿಯಲ್ಲೇ ಅಳವಡಿಸಲಾಗಿದ್ದು, ಹೊಸಂಗಡಿ ಭಾಗಕ್ಕೆ ಬರುವ ವಾಹನ ಸವಾರರಿಗೆ ಗಮನಕ್ಕೆ ಬಾರದೆ ಹಾಗೂ ಎದುರಿನಿಂದ ಬರುವ ವಾಹನಕ್ಕೆ ಸೈಡ್ ನೀಡುವ ವೇಳೆ ತಂತಿಗೆ ಬಡಿದು ಅಪಘಾತ ಉಂಟಾಗುವ ಭೀತಿ ಹೆಚ್ಚಿದೆ.

ಬಂಗ್ರಮಂಜೇಶ್ವರದ ಈ ದಾರಿಯಾಗಿ ಕಟ್ಟೆಬಜಾರ್, ಹೊಸಬೆಟ್ಟು, ತಲಪಾಡಿ ಮೊದಲಾದ ಭಾಗಗಳಿಂದ ಹೊಸಂಗಡಿ ಪೇಟೆಗೆ ದಿನನಿತ್ಯ ನೂರಾರು ವಾಹನಗಳು ಸಂಚರಿಸುತ್ತಿವೆ.



ಅಪಘಾತ ನಡೆದಿತ್ತು

ಈ ಮಧ್ಯೆ ಕಳೆದ ಕೆಲವು ದಿನಗಳ ಹಿಂದೆ ವಾಹನವೊಂದು ಈ ಆಧಾರ ತಂತಿಗೆ ಡಿಕ್ಕಿ ಹೊಡೆದು ಸ್ವಲ್ಪದರಲ್ಲೇ ಅಪಾಯ ತಪ್ಪಿ ಹೋಗಿದೆ. ಸಂಬಂಧಪಟ್ಟ ವಿದ್ಯುತ್ ಇಲಾಖೆ ಅಧಿಕಾರಿಗಳು ಈ ತಂತಿ ತೆರವುಗೊಳಿಸಿ ಇನ್ನೊಂದು ಭಾಗದಲ್ಲಿ ಅಳವಡಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮೊದಲನೇ ಪುಟದಿಂದ

ಜಲಕ್ಷಾಮ

ಇದು ನಾಗರಿಕರನ್ನು ಕಂಗೆಡಿಸುತ್ತಿದ್ದರೆ, ಕೃಷಿ ವಲಯ ಬೆಳೆಗಳಿಗೆ ನೀರುಹರಿಸಲಾಗದ ಸ್ಥಿತಿಯಲ್ಲಿದೆ. ಈ ನಡುವೆ ಬೇಸಗೆ ಮಳೆ ಕಣ್ಣಾಮುಚ್ಚಾಲೆ ಆಡುತ್ತಿದ್ದು ಜಲಕ್ಷಾಮಕ್ಕೆ ಮುನ್ನುಡಿ ಬರೆಯುತ್ತಿದೆಯೇ ಎಂಬ ಆತಂಕ ನಾಗರಿಕರನ್ನು ಕಾಡುತ್ತಿದೆ.
ಕೆಲವೆಡೆ ಈಗಾಗಲೇ ಬೋರ್‌ವೆಲ್‌ಗಳ ದುರಸ್ತಿ ಕಾರ್ಯ ಆರಂಭವಾಗಿದ್ದರೆ ಇನ್ನು ಕೆಲವೆಡೆ ಬಾವಿಯನ್ನು ಇನ್ನಷ್ಟು ಆಳಗೊಳಿಸುವ ಕಾರ್ಯ ಕಂಡುಬರುತ್ತಿದೆ. ಗ್ರಾಮೀಣ ಭಾಗಗಳಿಗೆ ವಿವಿಧ ಯೋಜನೆಗಳಲ್ಲಿ ಕುಡಿಯುವ ನೀರು ಪೂರೈಕೆಯಾಗುತ್ತಿದ್ದರೂ ಸುಡು ಬಿಸಿಲಿಗೆ ಕೈಕೊಡುವ ವಿದ್ಯುತ್ ನೀರು ಪೂರೈಕೆಯಲ್ಲಿ ವ್ಯತ್ಯಯಕ್ಕೆ ಕಾರಣವಾಗುತ್ತಿದೆ. ಸದ್ಯಕ್ಕೆ ಬೇಸಗೆ ಮಳೆಯೇ ಎಲ್ಲಾ ಸಮಸ್ಯೆಗಳಿಗೆ ಪರಿಹಾರವಾಗಿದ್ದು, ಅದರ ನಿರೀಕ್ಷೆಯಲ್ಲಿ ಜನರಿದ್ದಾರೆ.
ಈ ನಡುವೆ ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ಕೆಲವು ಪ್ರದೇಶಗಳಲ್ಲಿ ಒಂದೆರಡು ಮಳೆಯಾಗುತ್ತಿದ್ದು, ಇದರಿಂದ ಅಣೆಕಟ್ಟಿನಲ್ಲಿ ನೀರಿನ ಒಳಹರಿವಿನ ಪ್ರಮಾಣ ಹೆಚ್ಚಳವಾಗಿದೆ.

ಮಲ್ಪೆ ಬೀಚ್‌ನಲ್ಲಿ ಮಲ್ಪೆ ಪರ್ಸಿನ್ ಮೀನುಗಾರರ ಸಂಘದ ರಜತ ಮಹೋತ್ಸವ | ಡಾ. ಜಿ.ಶಂಕರ್ ಸಲಹೆ

ಹೆಚ್ಚು ಆದಾಯವಿದ್ದರೆ ಮೀನುಗಾರರಿಗೆ ಹೆಚ್ಚುವರಿ ಮೊತ್ತ ಸಿಗಲಿ

ಉಡುಪಿ: ಮೀನುಗಾರರಿಗೆ ಪ್ರತೀವರ್ಷ ಒಂದೇ ರೀತಿಯಾದ ಆದಾಯ ಇರುತ್ತದೆ ಎಂದು ನೀರೀಕ್ಷಿಸಲು ಸಾಧ್ಯವಿಲ್ಲ, ಹಾಗಿದ್ದಾಗ ಉತ್ತಮ ಆದಾಯವಿರುವ ಸಂದರ್ಭದಲ್ಲಿ ಒಂದಷ್ಟು ಹಣವನ್ನು ಕೂಡಿಡುವ ಕಾರ್ಯ ಮಾಡಬೇಕು ಎಂದು ಜಿ.ಶಂಕರ್ ಫ್ಯಾಮಿಲಿ ಟ್ರಸ್ಟ್‌ನ ಅಧ್ಯಕ್ಷ ನಾಡೋಜ ಡಾ. ಜಿ. ಶಂಕರ್ ಅಭಿಪ್ರಾಯಪಟ್ಟರು.
ಮಲ್ಪೆ ಬೀಚ್ ನಲ್ಲಿ ಮಲ್ಪೆ ಪರ್ಸಿನ್ ಮೀನುಗಾರರ ಸಂಘದ ರಜತ ಮಹೋತ್ಸವ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.
ಶಾಸಕ ಯಶ್‌ಪಾಲ್ ಸುವರ್ಣ ಮಾತನಾಡಿ, ಮೀನುಗಾರಿಕೆ ಎಂಬುದು ದೇಶದ ಆರ್ಥಿಕತೆಗೆ ಉತ್ತಮವಾದ ಕೊಡುಗೆ ನೀಡಿದೆ. ಇಡೀ ಭಾರತದ ಮೀನುಗಾರಿಕೆಯ ರಾಜಧಾನಿ ಎಂದು ಮಲ್ಪೆಯನ್ನು ಕರೆಯುವಷ್ಟರ ಮಟ್ಟಿಗೆ ಮಲ್ಪೆಯಲ್ಲಿ ಮೀನುಗಾರಿಕೆ ಚಟುವಟಿಕೆಗಳು ನಡೆಯುತ್ತವೆ ಎಂದರು.
ಕೇಂದ್ರ ಸರ್ಕಾರದ ನೆರವಿನೊಂದಿಗೆ 1,500 ಕೋಟಿ ರೂ. ವೆಚ್ಚದ ಔಟರ್ ಹಾರ್ಬರ್ (ಬಂದರು ಹೊರ



ವಲಯ) ಸ್ಥಾಪನೆಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಪರ್ಸಿನ್ ಮೀನುಗಾರರಿಗೆ ಜಾಗ ನೀಡುವ ಪ್ರಸ್ತಾವನೆ ಇದ್ದು ಅದನ್ನು ಕೂಡ ಮಾಡಿಕೊಡಲು ಕ್ರಮಕೈಗೊಳ್ಳಲಾಗುವುದು ಎಂದರು.
ಪರ್ಸಿನ್ ಮೀನುಗಾರರ ಸಂಘದ ಅಧ್ಯಕ್ಷ ನಾಗರಾಜ್ ಸುವರ್ಣ ಅಧ್ಯಕ್ಷತೆ ವಹಿಸಿದ್ದರು.
ಈ ಸಂದರ್ಭದಲ್ಲಿ ಎಣ್ಣೆಹುದ್ರು ದೇವಸ್ಥಾನದ ಮೊಕ್ತೇಸರರಾದ ಆನಂದ್ ಸಿ ಕುಂದರ್ ಕೋಟ, ಮಾಜಿ ಸಚಿವ ಕೆ. ಜಯಪ್ರಕಾಶ್ ಹೆಗ್ಡೆ ಶಾಸಕ ಯಶ್ ಪಾಲ್ ಸುವರ್ಣ, ಉಚ್ಚಿಲ ಮಹಾಜನ ಸಂಘದ ಅಧ್ಯಕ್ಷ ಜಯ ಸಿ ಕೋಟ್ಯಾನ್, ಮಹಿಳಾ ಹಸಿಮೀನು ಸಂಘದ ಅಧ್ಯಕ್ಷೆ ಬೇಬಿ ಎಚ್ ಸಾಲ್ಯಾನ್, ಕಾರ್ತಿಕ್ ಬ್ಯೂರೋ ಸಂಸ್ಥೆಯ ಹರಿಯಪ್ಪ ಕೋಟ್ಯಾನ್, ಮೀನುಗಾರಿಕಾ ನಿರ್ದೇಶಕ ದಿನೇಶ್ ಕಲ್ಲೇರ, ಒಣಮೀನು ಮಹಿಳಾ ಸಂಘದ ಅಧ್ಯಕ್ಷೆ ಗೀತಾ ಕರ್ಕೇರ, ಸಮಾಜ ಸೇವಕ ಕಷ್ಣಮೂರ್ತಿ ಆಚಾರ್ಯ, ಉದ್ಯಮಿ ಆನಂದ ಬಿ ಸುವರ್ಣ, ಭುವನೇಂದ್ರ ಕಿದಿಯೂರು, ಸಾಧು ಸಾಲ್ಯಾನ್, ರಾಮಚಂದ್ರ ಕುಂದರ್, ಅಖಿಲ ಭಾರತೀಯ ಪರ್ಸಿನ್ ಮೀನುಗಾರರ ಸಂಘದ ಗೌರವಾಧ್ಯಕ್ಷ ಬಾಬು, ಭಾರತೀಯ ಪರ್ಸಿನ್ ಮೀನುಗಾರರ ಸಂಘದ ಅಧ್ಯಕ್ಷ ಗುರುದಾಸ್ ಬಂಗೇರ, ಪರ್ಸಿನ್ ಮೀನುಗಾರರ ಸಂಘದ ಮಾಜಿ ಅಧ್ಯಕ್ಷ ಯಶೋಧರ ಅಮೀನ್, ಪರ್ಸಿನ್ ಮೀನುಗಾರರ ಸಂಘದ ಉಪಾಧ್ಯಕ್ಷ ನವೀನ್ ಬಂಗೇರ, ಪರ್ಸಿನ್ ಮೀನುಗಾರರ ಸಂಘದ ಅಧ್ಯಕ್ಷ ಅನೀಲ್ ಕುಮಾರ್ ಇದ್ದರು.

ಕ್ರೀಡೋತ್ಸವ

ಪರ್ಸಿನ್ ಮೀನುಗಾರರ ಸಂಘದ ಆವರಣದಲ್ಲಿ ಭಕ್ತಿ ಮತ್ತು ಶ್ರದ್ದೆಯಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಮುಂಜಾನೆ ಕ್ರೀಡೋತ್ಸವದ ಉದ್ಘಾಟನೆಯನ್ನು ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ನೆರವೇರಿಸಿಕೊಟ್ಟರು. ಈ ಸಂದರ್ಭದಲ್ಲಿ ಶಾಸಕ ಯಶ್ ಪಾಲ್ ಸುವರ್ಣ ಉಪಸ್ಥಿತರಿದ್ದರು.

ಕಾರ್ಯಕ್ರಮ ವಿವರ

ಏ.25ರಂದು ಬೆಳಗ್ಗೆ 9ರಿಂದ ಸತ್ಯನಾರಾಯಣ ಪೂಜೆ, ಮಧ್ಯಾಹ್ನ ಮಹಾ ಅನ್ನಸಂತ ರ್ಪಣೆ, ಸಂಜೆ 6.30 ರಿಂದ ನೃತ್ಯ ಕಾರ್ಯಕ್ರಮ, ಸಂಘದ ಮೀನುಗಾರ ವೃತ್ತಿಯ ನಿವೃತ್ತ ಪರ್ಸಿನ್ ತಂಡೇಲರನ್ನು ಗೌರವಿಸಲಾಗುವುದು. ಏ. 26ರಂದು ಸಂಜೆ 6ರಿಂದ ನಡೆ ಯುವ ಸಮಾರೋಪದಲ್ಲಿ ನಾಡೋಜ ಡಾ. ಜಿ. ಶಂಕರ್, ಶಾಸಕ ಯಶ್ ಪಾಲ್ ಸುವರ್ಣ, ಶಾಸಕ ಸುರೇಶ್ ಶೆಟ್ಟಿ ಗುರ್ಮೆ ಮತ್ತು ಪ್ರಸಾದರಾಜ್ ಕಾಂಚನ್ ಮತ್ತಿತರರು ಪಾಲ್ಗೊಳ್ಳುವರು. ವಿವಿಧ ಸಾಧಕರಿಗೆ ಸಮ್ಮಾನ, ಪ್ರತಿಭಾ ಪುರಸ್ಕಾರ, ಸಹಾಯಧನ, ಬಹುಮಾನ ವಿತರಣೆ ನಡೆಯಲಿದೆ. ಎಲ್ಲ ಪರ್ಸಿನ್ ಮೀನುಗಾರಿಕೆ ಬೋಟುಗಳಿಗೆ ತ್ಯಾಜ್ಯ ಸಂಗ್ರಹ ಕಿಟ್, ಕೊಳಲಗಿರಿಯ ಸ್ಪಂದನಾ ಮತ್ತು ಮಲ್ಪೆ ಪಡುಕರೆಯ ಕಾರುಣ್ಯ ವಿಶೇಷ ಚೇತನರ ಶಾಲೆಗೆ ಸಮವಸ್ತ್ರವಿತರಣೆ, ರಾತ್ರಿ 7.30ರಿಂದ ರಾಜ್ಯಮಟ್ಟದ ಗುಂಪು ನೃತ್ಯ ಸ್ಪರ್ಧೆ ಕರಾವಳಿ ನೃತ್ಯೋತ್ಸವ -2026 ನಡೆಯಲಿದೆ

ಎಲೈಸಿ ನೇಮಿಸಿದ್ದ ಮಧ್ಯವರ್ತಿಗಳಿಂದ ವಂಚನೆ: ಪಾಲಿಸಿದಾರರಿಗೆ ವಿಮಾ ಪರಿಹಾರಕ್ಕೆ ಕೋರ್ಟ್ ಆದೇಶ



ಉಡುಪಿ: ಭಾರತೀಯ ಜೀವವಿಮಾ ನಿಗಮ(ಎಲೈಸಿ)ದ ಚಿಕ್ಕಮಗಳೂರು ಜಿಲ್ಲೆಗೆ ಸೇರಿದ 57 ಸಾವಿರಕ್ಕೂ ಹೆಚ್ಚಿನ ಜೀವನ ಮಧುರ ಪಾಲಿಸಿದಾರರು ಪಾವತಿಸಿದ್ದ ಕೋಟ್ಯಾಂತರ ರೂ. ಹಣವನ್ನು ಎಲೈಸಿಯೇ ನೇಮಿಸಿದ್ದ ಮಧ್ಯವರ್ತಿಗಳು ವಂಚಿಸಿದ್ದು, ಈ ಪ್ರಕರಣದಲ್ಲಿ ನ್ಯಾಯಾಲಯದ ಆದೇಶದಂತೆ ಪಾಲಿಸಿದಾರರು ಪ್ರೀಮಿಯಂ ಮೊತ್ತ, ದಾವೆಯ ಖರ್ಚು ಹಾಗೂ ಪರಿಹಾರ ಹಣವನ್ನು ಪಡೆದುಕೊಂಡಿದ್ದಾರೆಂದು ಉಡುಪಿ ಮಾನವ ಹಕ್ಕುಗಳ ರಕ್ಷಣಾ ಪ್ರತಿಷ್ಠಾನದ ಅಧ್ಯಕ್ಷ ಡಾ.ರವೀಂದ್ರನಾಥ ಶ್ಯಾನುಭಾಗ್ ತಿಳಿಸಿದ್ದಾರೆ.
ಉಡುಪಿಯ ವೈಕುಂಠ ಬಾಳಿಗಾ ಕಾನೂನು ಕಾಲೇಜಿನಲ್ಲಿನ ಪ್ರತಿಷಾನದ ಕಚೇರಿಯಲ್ಲಿಂದು ಕರೆದ ಸುದ್ದಿಗೋಷ್ಠಿಯಲ್ಲಿ ಅವರು ಈ ಪ್ರಕರಣದ ಕುರಿತು ಮಾಹಿತಿ ನೀಡಿದರು.
ಪಾಲಿಸಿದಾರರಿಂದ ಸಂಗ್ರಹಿಸಿದ ಕೋಟ್ಯಾಂತರ ರೂ. ಪ್ರೀಮಿಯಂ ಹಣವನ್ನು ಅಂಗನವಾಡಿ ಕಾರ್ಯಕರ್ತೆಯರು ಎಲೈಸಿಯೇ ನೇಮಿಸಿದ್ದ ಪ್ರತಿನಿಧಿ ಸಂಸ್ಥೆಗಳಿಗೆ ಹಸ್ತಾಂತರಿಸಿದ್ದರು. ಆದುದರಿಂದ ವಂಚನೆಗೆ ಒಳಗಾದ ಸಂದರ್ಭ ಜನರು ಅಂಗನವಾಡಿ ಕಾರ್ಯಕರ್ತೆಯರನ್ನೇ ಗುರಿಯಾಗಿರಿಸಿ ದಾಳಿ ಮಾಡಿದ್ದರು. ಇದರಿಂದ ಈ ಸಮಸ್ಯೆಯಲ್ಲಿ ಸಬ್ ಏಜೆಂಟ್‌ಗಳಾಗಿ ಸಿಲುಕಿಕೊಂಡಿದ್ದ ಅಮಾಯಕ ಅಂಗನವಾಡಿ ಕಾರ್ಯ ಕರ್ತರು ಕೋರ್ಟ್ ಆದೇಶದಿಂದ ಕೊನೆಗೂ ನಿಟ್ಟುಸಿರು ಬಿಡುವಂತಾಗಿದೆ ಎಂದು ಅವರು ಹೇಳಿದರು.

ಪ್ರಕರಣದ ಹಿನ್ನಲೆ

2005ರಲ್ಲಿ ಎಲ್‌ಐಸಿ ಮೈಕ್ರೋ ಇನ್ಸೂರೆನ್ಸ್ ಯೋಜನೆಯೊಂದನ್ನು ಜಾರಿಗೊಳಿಸಿದ್ದು, 2009-10ನೇ ಸಾಲಿನಲ್ಲಿ ಪ್ರಾರಂಭಿಸಿದ ಈ ಯೋಜನೆಯಲ್ಲಿ ಉಡುಪಿ ವಿಭಾಗಕ್ಕೆ ಸೇರಿದ ಕಡೂರು, ಚಿಕ್ಕಮಗಳೂರು, ಅರಸಿಕೆರೆ, ತರೀಕೆರೆ, ಮೂಡಿಗೆರೆ ಎನ್‌ಆರ್.ಪುರ ಮುಂತಾದ ತಾಲೂಕುಗಳ 200ಕ್ಕೂ ಹೆಚ್ಚು ಗ್ರಾಮಗಳಿಂದ 58000ಕ್ಕೂ ಹೆಚ್ಚಿನ ಜನರು ಈ ವಿಮಾ ಯೋಜನೆಗೆ ಸೇರಿ ಪಾಲಿಸಿ ಖರೀದಿಸಿದ್ದರು.
ಪ್ರತೀ ತಿಂಗಳು ಪಾಲಿಸಿದಾರರಿಂದ ಸಂಗ್ರಹಿಸಿದ್ದ ಪ್ರೀಮಿಯಂ ಹಣವನ್ನು ಆಯಾ ಗ್ರಾಮದ ಅಂಗನವಾಡಿಕಾರ್ಯಕರ್ತೆಯರುನಿಯಮಿತವಾಗಿ ಎಲ್‌ಐಸಿಯಿಂದ ನೇಮಿಸಲಾದ ಸಮನ್ವಯ ಗ್ರಾಮಿಣ ಅಭಿವೃದ್ಧಿ ಸಂಸ್ಥೆ, ಶುಭೋದಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಹಾಗೂ ಮುಕ್ಕಣ್ಣೇಶ್ವರಿ ಯುವತಿಮಂಡಲಗಳಿಗೆ ಹಸ್ತಾಂತರಿಸುತ್ತಿದ್ದರು. 2013ರಲ್ಲಿ ಮೃತಪಟ್ಟ ಪಾಲಿಸಿದಾರರೊಬ್ಬರ ಕ್ಲೈಮ್ ಅರ್ಜಿಯಿಂದ ಪಾಲಿಸಿದಾರರು ಕಟ್ಟಿದ್ದ ಹಣವನ್ನು ಎಲ್‌ಐಸಿ ಪ್ರತಿನಿಧಿ ಸಂಸ್ಥೆ ಲಪಟಾಯಿಸಿರುವುದು ಬೆಳಕಿಗೆ ಬಂತು ಎಂದು ಅವರು ಮಾಹಿತಿ ನೀಡಿದರು.

■ **ವಂಚನೆಗೆ ಒಳಗಾದ ಸಂದರ್ಭ ಅರಿವಿಲ್ಲದೆ ಅಂಗನವಾಡಿ ಕಾರ್ಯಕರ್ತೆಯರನ್ನೇ ಗುರಿಯಾಗಿರಿಸಿ ದಾಳಿ ಮಾಡಿದ್ದ ಸಂತ್ರಸ್ತರು**

ಕಾರ್ಯಕರ್ತೆಯರೇ ಗುರಿ

ಮೋಸ ಹೋದ ಪಾಲಿಸಿದಾರರು, ನಿಜ ತಿಳಿದುಕೊಳ್ಳದೇ ಹಣ ಸಂಗ್ರಹಿಸಿದ ಅಂಗನವಾಡಿ ಕಾರ್ಯಕರ್ತೆಯರನ್ನೇ ಜವಾಬ್ದಾರರನ್ನಾಗಿಸಿ ಅವರ ಮನೆಗಳಿಗೆ ನುಗ್ಗಿ ಗಲಾಟೆ ಎಬ್ಬಿಸಿದರು. ಇದು ನಡೆದ ಸುಮಾರು ಒಂದು ವರ್ಷದ ನಂತರ ತರೀಕೆರೆ ಹಾಗೂ ಕಡೂರು ಪೊಲೀಸ್ ಠಾಣೆಗಳಲ್ಲಿ ಹಣ ವಂಚಿಸಿದ ಸಮನ್ವಯಂ ಸಂಸ್ಥೆಯ ವಿರುದ್ಧ ದೂರುಗಳು ದಾಖಲಾದವು.
ಸುಮಾರು 2 ವರ್ಷಗಳ ನಂತರ 2016ರಲ್ಲಿ ಮಾನವ ಹಕ್ಕುಗಳ ರಕ್ಷಣಾ ಪ್ರತಿಷ್ಠಾನ ಈ ಕುರಿತು ಸಲ್ಲಿಸಿದ ದೂರಿನ ತನಿಖೆ ಪ್ರಾರಂಭವಾದ ಮೇಲೆ ಜೀವವಿಮಾ ನಿಗಮದ ಅಧಿಕಾರಿಗಳು ಚಿಕ್ಕಮಗಳೂರಿನ ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ಶುಭೋದಯ ಗ್ರಾಮೀಣ ಸಂಸ್ಥೆಯ ವಿರುದ್ಧ ದೂರು ನೀಡಿದ್ದರು.

ಕೋರ್ಟ್ ಆದೇಶ

ಈ ಪ್ರಕರಣದಲ್ಲಿ ಸುಮಾರು 60 ಗ್ರಾಹಕರು ಚಿಕ್ಕಮಗಳೂರಿನ ಜಿಲ್ಲಾ ಬಳಕೆದಾರರ ಆಯೋಗದಲ್ಲಿ ದಾವೆ ಹೂಡಿದ್ದರು. ವಿಚಾರಣೆ ನಡೆಸಿದ ಆಯೋಗವು ಈ ಪ್ರಕರಣದಲ್ಲಿ ಎಲೈಸಿಯ ನಿರ್ಲಕ್ಷ್ಯತೆಯನ್ನು ಎತ್ತಿ ಹಿಡಿದು ಗ್ರಾಹಕರೆಲ್ಲರಿಗೂ ಅವರು ಕಟ್ಟಿದ್ದ ಪ್ರೀಮಿಯಂ ಹಣವನ್ನು ದಂಡ ಸಹಿತ ಹಿಂತಿರುಗಿಸಲು ಮತ್ತು ದಾವೆಯ ಖರ್ಚನ್ನೂ ನೀಡವಂತೆ ಆದೇಶ ನೀಡಿತು. ಅದರಂತೆ ಎಲೈಸಿಯು ದಾವೆ ಹೂಡಿದ ಎಲ್ಲಾ ಪಾಲಿಸಿದಾರರಿಗೆ ಹಣ ಹಿಂದಿರುಗಿಸಿತು.
ಉಳಿದ ಪಾಲಿಸಿದಾರರ ಪರವಾಗಿ ಪ್ರತಿಷ್ಠಾನವು ರಾಜ್ಯ ಬಳಕೆದಾರರ ಆಯೋಗದಲ್ಲಿ ದಾವೆ ಹೂಡಿತು.
ಇದೀಗ 10 ವರ್ಷಗಳ ನಂತರ ತನ್ನ ತಪ್ಪನ್ನು ಒಪ್ಪಿಕೊಂಡ ಜೀವವಿಮಾ ನಿಗಮವು ಪಾಲಿಸಿದಾರರಿಗೆ ಪರಿಹಾರ ನೀಡಲು ಒಪ್ಪಿ ಕೊಂಡಿತು. ಈಗಾಗಲೇ, ಪಾಲಿಸಿದಾರರು ತಾವು ಕಟ್ಟಿದ ಹಣದೊಂದಿಗೆ ದಾವೆಯ ಖರ್ಚು ಹಾಗೂ ಪರಿಹಾರವಾಗಿ ತಲಾ 3000ರೂಪಾಯಿಗಳನ್ನು ಪಡೆದಿದ್ದಾರೆ ಎಂದು ಅವರು ತಿಳಿಸಿದರು.
ಸುದ್ದಿಗೋಷ್ಠಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಾದ ಅನ್ನಪೂರ್ಣ, ಆಶಾ, ಪೂರ್ಣಿಮಾ, ಸುಮಿತ್ರಾ, ಕವಿತಾ, ಆಶಾ, ಪವಿತ್ರಾ ದೇವನೂರು, ರಘು ಆನೆಗೆರೆ ಮೊದಲಾದವರು ಉಪಸ್ಥಿತರಿದ್ದರು.

ಎಸ್ಸೆಸ್ಸೆಲ್ಸಿಯಲ್ಲಿ ಜಿಲ್ಲೆಗೆ ಕಾರ್ಕಳ ಪ್ರಥಮ: ಶ್ಲಾಘನೆ

ಕಾರ್ಕಳ: ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಸತತ ಮೂರು ವರ್ಷಗಳಿಂದ ಉಡುಪಿ ಜಿಲ್ಲೆಯಲ್ಲೇ ಕಾರ್ಕಳ ವಲಯ ಪ್ರಥಮ ಸ್ಥಾನವನ್ನು ದಾಖಲಿಸುತ್ತಿರುವುದು ಅಪಾರ ಹೆಮ್ಮೆ ಮತ್ತು ಸಂತೋಷವನ್ನುಂಟು ಮಾಡಿದೆ ಎಂದು ಕಾರ್ಕಳ ಶಾಸಕ ವಿ ಸುನಿಲ್ ಕುಮಾರ್ ತಿಳಿಸಿದ್ದಾರೆ.



ಈ ವರ್ಷವೂ 99.02% ಫಲಿತಾಂಶ ಸಾಧಿಸಿ ಹೊಸ ದಾಖಲೆಯನ್ನು ನಿರ್ಮಿಸಿರುವುದು ನಮ್ಮೆಲ್ಲರ ಸಂಯುಕ್ತ ಪರಿಶ್ರಮದ ಫಲ. ಕಾರ್ಕಳವನ್ನು ಸ್ವರ್ಣ ಕಾರ್ಕಳವನ್ನಾಗಿಸುವ ನಿರಂತರ ಪ್ರಯತ್ನದ ಫಲಗಳಲ್ಲಿ ಇದು ಒಂದು. ಕಾರ್ಕಳದಲ್ಲಿ ಎಸ್.ಎಸ್.ಎಲ್.ಸಿ ಫಲಿತಾಂಶ ಶೇ.100ರಷ್ಟು ಸಾಧನೆಯಾಗಬೇಕೆಂದು ಕಳೆದ ಐದು ವರ್ಷದಿಂದ "ಮಿಷನ್ 100" ಕಾರ್ಯಕ್ರಮದ ಮೂಲಕ ಪ್ರಯತ್ನಿಸಲಾಗುತ್ತಿದೆ. ಈ ಅಭಿಯಾನ ಕೇವಲ ಒಂದು ಯೋಜನೆಯಲ್ಲ, ಅದು ನಿರಂತರವಾಗಿ ಸಾಗುತ್ತಿರುವ ಒಂದು ಶೈಕ್ಷಣಿಕ ಚಳುವಳಿ. ಪ್ರತಿಯೊಬ್ಬ ವಿದ್ಯಾರ್ಥಿಯೂ ಶೇ.100 ಯಶಸ್ಸಿನತ್ತ ಸಾಗಬೇಕು ಎಂಬ ಸಂಕಲ್ಪದಿಂದ ಆರಂಭವಾದ ಈ ಪ್ರಯತ್ನ ಇಂದು ಉತ್ತಮ ಫಲಿತಾಂಶಗಳನ್ನು ನೀಡುತ್ತಿರುವುದು ಹರ್ಷದ ಸಂಗತಿ.
ಈ ವರ್ಷ ಪರೀಕ್ಷೆ ಬರೆದ ಒಟ್ಟು 2651 ವಿದ್ಯಾರ್ಥಿಗಳ ಪೈಕಿ 2625 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿರುತ್ತಾರೆ. ಒಟ್ಟು 57 ಶಾಲೆಯಲ್ಲಿ 42 ಶಾಲೆ 100% ಫಲಿತಾಂಶ ಗಳಿಸಿದೆ. 03 ವಿದ್ಯಾರ್ಥಿಗಳು 624 ಅಂಕ ಪಡೆದು ಸಾಧನೆ ಮೆರೆದಿರುವುದು ಅತ್ಯಂತ ಸಂತೋಷದ ವಿಚಾರ. ಕಾರ್ಕಳ ವಲಯದಲ್ಲಿ ಒಟ್ಟು 19 ಸರ್ಕಾರಿ ಶಾಲೆ 100% ಫಲಿತಾಂಶ ಗಳಿಸಿಕೊಂಡಿರುವುದು ಗಮನಾರ್ಹವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಕಾರ್ಕಳ ವಲಯ ಗಳಿಸಿದ ಫಲಿತಾಂಶ ಗಮನಾರ್ಹ ಸಾಧನೆಯ ಹಿಂದೆ ವಿದ್ಯಾರ್ಥಿಗಳ ಅಸಾಧಾರಣ ಪರಿಶ್ರಮ, ಶಿಕ್ಷಕರ ಸಮರ್ಪಿತ ಸೇವೆ ಮತ್ತು ಪೋಷಕರ ನಿಸ್ವಾರ್ಥ ಬೆಂಬಲ ಇದೆ. ನಿಮ್ಮೆಲ್ಲರ ಸಹಕಾರದಿಂದ ಕಾರ್ಕಳ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲುಗಳನ್ನು ನಿರ್ಮಿಸುತ್ತಿದೆ. ಈ ಸಾಧನೆ ಇಲ್ಲಿಗೆ ನಿಲ್ಲಬಾರದು. ಇನ್ನಷ್ಟು ಉನ್ನತ ಗುರಿಗಳತ್ತ ಸಾಗುವ ಪ್ರೇರಣೆಯಾಗಬೇಕು ಎಂದು ತಿಳಿಸಿದ್ದಾರೆ.

ಏ.27: ಅಗ್ರಿ ಡೀಲರ್ಸ್ ಪ್ರತಿಭಟನೆ

ಬೈಂದೂರು: ಆಲ್ ಇಂಡಿಯಾ ಅಗ್ರಿ ಡೀಲರ್ಸ್ ಅಸೋಸಿಯೇಷನ್ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಏ.27ರಂದು ಒಂದು ದಿನದ ಭಾರತ್ ಬಂದ್‌ಗೆ ಕರೆ ಕೊಟ್ಟಿದ್ದು, ಇದಕ್ಕೆ ಬೆಂಬಲವಾಗಿ ಕರ್ನಾಟಕ ರಾಜ್ಯ ಕೃಷಿ ಪರಿಕರ ಮಾರಾಟಗಾರರ ಸಂಘವು ಕರ್ನಾಟಕ ರಾಜ್ಯಾದ್ಯಂತ ಏ.27ರಂದು ಬಂದ ಮಾಡಲು ತೀರ್ಮಾನಿಸಿದೆ. ಈ ನಿಟ್ಟಿನಲ್ಲಿ ಬಂದ್‌ಗೆ ಸಂಪೂರ್ಣ ಬೆಂಬಲವಾಗಿ, ಉಡುಪಿ ಜಿಲ್ಲೆಯ ಎಲ್ಲಾ ತಾಲೂಕಿನ ಕೃಷಿ ಪರಿಕರ ಮಾರಾಟಗಾರರು ಏ..27ರಂದು ಅಂಗಡಿಗಳನ್ನು ಸಂಪೂರ್ಣ ಬಂದ ಮಾಡುವ ಮೂಲಕ ನಮ್ಮ ಬಹು ದಿನಗಳ ಬೇಡಿಕೆಗಳ ಈಡೇರಿಕೆಗಾಗಿ ಶಾಂತಿಯುತ ಪ್ರತಿಭಟನೆಯಲ್ಲಿ ಭಾಗವಹಿಸಲು ನಿರ್ಧರಿಸಿದ್ದಾರೆ. ಈ ಬಗ್ಗೆ ಉಡುಪಿ ಜಿಲ್ಲಾ ಕೃಷಿ ಪರಿಕರ ಮಾರಾಟಗಾರರ ಸಂಘದ ವತಿಯಿಂದ ಶುಕ್ರವಾರ ಕೃಷಿ ಪರಿಕರ ಮಾರಾಟಗಾರ ಸಂಘದ ಜಿಲ್ಲಾಧ್ಯಕ್ಷ ಯು. ಶಿವಾನಂದ ಪ್ರಭು ನೇತೃತ್ವದಲ್ಲಿ ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ. ಇವರನ್ನು ಭೇಟಿಮಾಡಿ ಮನವಿ ಸಲ್ಲಿಸಿದರು. ಆದರ್ಶ ರಾವ್, ದಿನೇಶ್ ಉಪಾಧ್ಯಾಯ, ಶರತ್, ರಾಜೀವ ಶೆಟ್ಟಿ ಯು. ಕೇದಾರ ಪ್ರಭು, ಮಹೇಶ್ ನಾಯಕ್, ಹರ್ಷಿತ್ ಪಾಟೀಲ್, ಪ್ರತಾಪ್ ಕುಮಾರ್ ಶೆಟ್ಟಿ ನಿತಿನ್ ನಾಯಕ್ ಮತ್ತಿತರರು ನಿಯೋಗದಲ್ಲಿದ್ದರು. ಏ.27ರಂದು ದೇಶಾದ್ಯಂತ ನಡೆಯುವ ಒಂದು ದಿನದ ಸಾಂಕೇತಿಕ ಮುಷ್ಕರದಲ್ಲಿ ಸುಮಾರು 85,000 ವಿತರಕರು ಈ ಭಾಗಿಯಾಗುತ್ತಿರುವುದರಿಂದ ಬಿತ್ತನೆ ಹಂಗಾಮಿನಲ್ಲಿ ರೈತರಿಗೆ ಕೃಷಿ ಪರಿಕರಗಳ ಪೂರೈಕೆಯಲ್ಲಿ ಸ್ವಲ್ಪ ವ್ಯತ್ಯಯ ಉಂಟಾಗಲಿದೆ ಎಂದು ತಿಳಿಸಿದರು.



ಸಾಧಕ ಕೃಷಿಕರಾಗಿ ಸವಿತಾ ಯಡಬೆಟ್ಟು ಆಯ್ಕೆ

ಕೋಟ: ಪಂಚ ವರ್ಣ ಯುವಕ ಮಂಡಲ ಕೋಟ ಇದರ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲ ನೇತೃತ್ವದಲ್ಲಿ ಗೀತಾನಂದ ಫೌಂಡೇ ಶನ್ ಮಣೂರು, ರೈತ ಧ್ವನಿ ಸಂಘ ಕೋಟ, ಗೆಳೆಯರ ಬಳಗ ಕಾರ್ಕಡ, ರೋಟರಿ ಕ್ಲಬ್ ಕೋಟ ಸಾಲಿಗ್ರಾಮ, ಸ್ನೇಹಕೂಟ ಮಣೂರು



ಇವರುಗಳ ಸಂಯುಕ್ತ ಸಹಯೋಗದೊಂದಿಗೆ ಪ್ರತಿ ತಿಂಗಳು ಸಾಧಕ ಕೃಷಿಕನನ್ನು ಗುರುತಿಸುವ ಸರಣಿ ಕಾರ್ಯ ಕ್ರಮ ರೈತರೆಡೆಗೆ ನಮ್ಮ ನಡಿಗೆ ಮಾಲಿಕೆಗೆ ಇದೀಗ 53ರ ಸರಣಿಯ ಕಾರ್ಯಕ್ರಮದ ಅಂಗವಾಗಿ ಸಾಧಕ ಕೃಷಿಕರ ಮನೆಯಂಗಳಕ್ಕೆ ತೆರಳಿ ಕೃಷಿ ಪರಿಕರವನ್ನು ನೀಡಿ ಗೌರವಿಸುವ ಕಾರ್ಯ ಇದೇ ಏ.29ರಂದು ಸಂಜೆ 4.45ಕ್ಕೆ ನಡೆಯಲಿದೆ. ಮಲ್ಲಿಗೆ ಕೃಷಿ ಕ್ಷೇತ್ರದ ಸಾಧಕಿ ಸವಿತಾ ಪೂಜಾರಿ ಯಡಬೆಟ್ಟು ಇವರಿಗೆ ಕೃಷಿ ಪುರಸ್ಕಾರ ನೀಡಿ ಗೌರವಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.